₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 14.01.2025 ಸಂಪುಟ: 67 ಸಂಚಿಕೆ: 249 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪುಟ ತೆರೆದಂತೆ...

ಚುನಾವಣಾ ಫಲಿತಾಂಶವೇ ನಿರ್ಣಾಯಕ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಸೋಲು ಗೆಲುವಿನ ಸೋಪಾನ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ

ಸಂ.ಗಮ | 7

ವಿಶ್ವವಾಣಿ ಸಂಕ್ರಾಂತಿ ಸಂಭ್ರಮ

2025ರ ಕ್ಯಾಲೆಂಡರ್ ವರ್ಷದ ಮೊದಲ ಹಬ್ಬವಾಗಿ ಸಂಕ್ರಾಂತಿ ಹಬ್ಬ ನಮ್ಮ ಮುಂದಿದೆ. ಸೂರ್ಯನ ಪಥ ಬದಲಾವಣೆ ಜತೆ ಸುಗ್ಗಿಯ ಸಂಭ್ರಮವನ್ನು ಸಾರುವ ಈ ಹಬ್ಬ ನಮ್ಮ ಕೃಷಿ ಸಂಸ್ಕೃತಿಯ ಪ್ರತೀಕ. ಮನೆಯ ಹೆಣ್ಣು ಮಕ್ಕಳು ಹೊಸ ಬಟ್ಟೆ ಉಟ್ಟು ಎಳ್ಳು ಬೆಲ್ಲ ಹಂಚುವುದು ಹಬ್ಬದ ವೈಶಿಷ್ಟ್ಯ. ಈ ಹಬ್ಬದ ಸಂಭ್ರಮ ಹೆಚ್ಚಿಸಿಕೊಳ್ಳಲು ವಿಶ್ವವಾಣಿ ವೇದಿಕೆ ಕಲ್ಪಿಸುತ್ತಿದೆ. ನಿಮ್ಮ ಮನೆಯ ಲಕ್ಷ್ಮಿಯರು ಎಳ್ಳು ಬೆಲ್ಲ ಬೀರುವ ಆಕರ್ಷಕ ಫೋಟೋವನ್ನು ಕ್ಲಿಕ್ಕಿಸಿ ನಮಗೆ ಕಳುಹಿಸಿ. ಆಯ್ದ ಫೋಟೋಗಳನ್ನು ಪ್ರಕಟಿಸುತ್ತೇವೆ.

ನಿಬಂಧನೆಗಳು

1. ಗುಣಮಟ್ಟದ ಒಂದು ಫೋಟೋ ಸಾಕು
2. ಒಬ್ಬರು ಅಥವಾ ಹೆಚ್ಚು ಸದಸ್ಯರಿರುವ ಫೋಟೋ ಕಳುಹಿಸಬಹುದು
3. ನಿಮ್ಮ ಫೋಟೋ ಜನವರಿ 15ರ ಅಪರಾಹ್ನ 2 ಗಂಟೆ ಒಳಗೆ ನಮಗೆ ತಲುಪಲಿ.

ವಾಟ್ಸ್‌ಆ್ಯಪ್ ನಂಬರ್
63623 93988

ಮಾತಂದ್ರೆ ಮಾತು

ಟ್ರಂಪ್ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ಸೇವಕನನ್ನು (ಜೈಶಂಕರ್) ಆಹ್ವಾನಿಸಲಾಗಿದೆಯೇ ಹೊರತು ಪ್ರಧಾನಿಯ ವರನ್ನಲ್ಲ (ಮೋದಿ). ಇದು ದೊಡ್ಡ ಅವಮಾನವಲ್ಲವೇ? ಆಹ್ವಾನ ಸ್ವೀಕರಿಸಿದ್ದಕ್ಕಾಗಿ ಸೇವಕನನ್ನು ವಜಾಗೊಳಿಸಿ.

- ಸುಬ್ರಮಣಿಯನ್ ಸ್ವಾಮಿ
ಬಿಜೆಪಿ ನಾಯಕ

ದಾರಿದೀಪೋಕ್ತಿ

ನೀವು ಯಾವುದಾದರೂ ಮುಖ್ಯ ಕೆಲಸ ಮಾಡುವಾಗ ದಣಿದರೆ, ವಿಶ್ರಾಂತಿ ತೆಗೆದುಕೊಳ್ಳಬೇಕೇ ಹೊರತು ಮಾಡುತ್ತಿರುವ ಕೆಲಸವನ್ನೇ ಬಿಡಬಾರದು. ನಿಮ್ಮ ಸಾಧನೆಯ ಪಥದಲ್ಲಿ ಅಡ್ಡಿ-ಆತಂಕಗಳು ಬಂದಾಗ ಅವನ್ನು ನಿವಾರಿಸಬೇಕೇ ಹೊರತು, ಕೈಚೆಲ್ಲಬಾರದು.

ವಕ್ರತುಂಡೋಕ್ತಿ

ಕೆಲವು ಹೆಂಗಸರ ದೇಹದ ತೂಕ ಹೆಚ್ಚಲು ಕೆಲವೊಮ್ಮೆ ಮೇಕಪ್ ಕೂಡ ಕಾರಣವಾಗಿರುತ್ತದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಹೆಲ್ಮೆಟ್ ಹಾಕದಿದ್ರೆ ಪೆಟ್ರೋಲ್ ಇಲ್ಲ, ಯು.ಪಿ ಸರ್ಕಾರದಿಂದ ಹೊಸ ರೂಲ್ಸ್
ಸುದ್ದಿ



ಕೈಪಡೆ ನೋವಿಗೆ ಹೈ ಮುಲಾಮು

ಸರಕಾರಕ್ಕಿಂತ ಪಕ್ಷ ಮುಖ್ಯ: ಸುರ್ಜೇವಾಲ ಎಚ್ಚರಿಕೆ
ತ್ಯಾಗಮಂತ್ರ ಪಠಿಸಿದ ಸಿದ್ದರಾಮಯ್ಯ, ಶಿವಕುಮಾರ್



ಕೆಪಿಸಿಸಿ ಕಚೇರಿಯಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರಿಗೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸಚಿವರ ಕಾರ್ಯವೈಖರಿ ಕುರಿತು ವರದಿ ಸಲ್ಲಿಸಿದರು.

ಬೆಂಗಳೂರು: ಕೆಲ ದಿನಗಳಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಎದ್ದಿದ್ದ ಭಿನ್ನ ಮಾತಿಗೆ ಪಕ್ಷದ ಹೈಕಮಾಂಡ್ ತಾತ್ಕಾಲಿಕ ಬ್ರೇಕ್ ಹಾಕಿದ್ದು, ದೆಹಲಿಯಲ್ಲಿ ಮತ್ತೊಂದು ಸುತ್ತಿನ ಸಭೆಯ ಬಳಿಕ ಈ ಎಲ್ಲ ಗೊಂದಲಗಳಿಗೆ ಪೂರ್ಣವಿರಾಮ ಬೀಳಲಿದೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಪಕ್ಷದ ಹೈಕಮಾಂಡ್ ನೀಡಿ ರುವ ಎಚ್ಚರಿಕೆಯನ್ನು ರಾಜ್ಯ ನಾಯಕರಿಗೆ ರವಾನಿಸಿದರು.

ಯಾವುದೇ ಕಾರಣಕ್ಕೂ ಪಕ್ಷ ಹಾಗೂ ಸರಕಾರಕ್ಕೆ ಡ್ಯಾಮೇಜ್ ಆಗುವ ರೀತಿಯಲ್ಲಿ ಹೇಳಿಕೆಗಳನ್ನು ನೀಡಬಾರದು. ಮುಖ್ಯಮಂತ್ರಿ ಬಗ್ಗೆಯಾಗಲಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆಯಾಗಲಿ ಯಾವೊಬ್ಬ ನಾಯಕರೂ ಹೇಳಿಕೆ ನೀಡಬಾರದು. ಈ ವಿಷಯದಲ್ಲಿ ಪಕ್ಷದ ಹೈಕಮಾಂಡ್ ತೀರ್ಮಾನವೇ ಅಂತಿಮ ಎನ್ನುವ ಎಚ್ಚರಿಕೆ ನೀಡಿದ್ದಾರೆ.

ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವ ಈ ಅವಧಿಯಲ್ಲಿಯೂ, ಅನಗತ್ಯ ಗೊಂದಲ ಗಳನ್ನು ಸೃಷ್ಟಿಸಬೇಡಿ. ಯಾವುದೇ ಬದಲಾವಣೆ ಯಿದ್ದರೂ, ಪಕ್ಷದ ಹೈಕಮಾಂಡ್ ತೀರ್ಮಾನಿಸಲಿದೆ. ಆದ್ದರಿಂದ ಆ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೇ, ಪಕ್ಷದ ಹಾಗೂ ಸರಕಾರದ ಒಳಿತಿಗೆ ಶ್ರಮಿಸುವಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಬ್ಯಾಟ್ ಮಾಡುತ್ತಿರುವ ಕೆಲ ಸಚಿವರಿಗೆ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರ ಬ್ಯಾಟ್ ಬೀಸುತ್ತಿರುವ ಕೆಲ ನಾಯಕರಿಗೆ ಸುರ್ಜೇವಾಲ ಕ್ಲಾಸ್ ತೆಗೆದುಕೊಂಡಿ ದ್ದಾರೆ ಎನ್ನಲಾಗಿದೆ. ಪಕ್ಷ ನಿಮಗೆ ವಹಿಸಿರುವ ಕೆಲಸವನ್ನು ನೀವು ನಿಭಾಯಿಸಿ ಎನ್ನುವ ಸ್ಪಷ್ಟ ಸಂದೇಶ ರವಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸರಕಾರ ಅಧಿಕಾರಕ್ಕೆ ಬಂದ ಬಳಿಕ ಈ ರೀತಿಯ ಎಚ್ಚರಿಕೆಯನ್ನು ಮೂರನೇ ಬಾರಿ ನೀಡಲಾಗುತ್ತಿದೆ. ಆದರೆ ಎಚ್ಚರಿಕೆ ನೀಡಿದ ಕೆಲ ತಿಂಗಳು ಮೌನವಾಗಿರುವ ನಾಯಕರು, ಬಳಿಕ ಮತ್ತೆ ಗೊಂದಲ ಹೇಳಿಕೆ ನೀಡುತ್ತಿದ್ದಾರೆ. ಆದ್ದರಿಂದ ಈ ಬಾರಿ ಇದನ್ನು ಯಾವ ರೀತಿ ನಿಭಾಯಿಸಲಿದ್ದಾರೆ ಎನ್ನುವುದನ್ನು ಕಾದು ನೋಡಬೇಕಿದೆ.

ದೆಹಲಿಯಲ್ಲಿ ಮತ್ತೊಂದು ಸಭೆ: ಸುರ್ಜೇವಾಲ ಅವರು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಜತೆ ಪ್ರತ್ಯೇಕ ಸಭೆ ನಡೆಸಿ, ಮಹತ್ವದ ಚರ್ಚೆ ನಡೆಸಿದ್ದಾರೆ. ಆದರೆ ಎಐಸಿಸಿ ಕಟ್ಟಡ ಉದ್ಘಾಟನೆಗೆಂದು ದೆಹಲಿಗೆ ತೆರಳಲಿರುವ ಸಿಎಂ ಹಾಗೂ ಡಿಸಿಎಂ ಜತೆಗೂ ಮತ್ತೊಂದು ಸುತ್ತಿನ ಸಭೆ ನಡೆಯಲಿದೆ. ಈ ಸಭೆಯಲ್ಲಿ ಇಬ್ಬರೂ ನಾಯಕರಿಗೆ ಸ್ಪಷ್ಟ ಎಚ್ಚರಿಕೆ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಈ ಸಭೆಯಲ್ಲಿ ಬೆಳಗಾವಿ ಯಲ್ಲಿ ನಡೆಯಲಿರುವ ಜೈ ಭೀಮ್-ಜೈ ಸಂವಿಧಾನ ಸಮಾವೇಶದ ಬಗ್ಗೆಯೂ ಚರ್ಚೆ ನಡೆಸಲಾಯಿತು.

→ 4

ಸುರ್ಜೇವಾಲ ಹೇಳಿದ್ದೇನು?

- ಸಿಎಂ ಬದಲಾವಣೆ, ಅಧಿಕಾರ ಹಂಚಿಕೆ ಬಗ್ಗೆ ಚಿಂತೆ ಬೇಡ; ಹೈಕಮಾಂಡ್ ತೀರ್ಮಾನ ಮಾಡಲಿದೆ
- ಪಕ್ಷಕ್ಕೆ, ಸರಕಾರಕ್ಕೆ ಡ್ಯಾಮೇಜ್ ಆಗುವಂತಹ ಯಾವುದೇ ಸಭೆಗಳನ್ನು ನಾಯಕರು ನಡೆಸಬಾರದು
- ಸಂಪುಟದಲ್ಲಿ ಅವಕಾಶ ಪಡೆದಿರುವವರು ಕೊಟ್ಟಿರುವ ಖಾತೆಗಳನ್ನು ಸರಿಯಾಗಿ ನಿರ್ವಹಿಸಿ
- ಸಂಪುಟದಲ್ಲಿರುವ ಎಲ್ಲ ಸಚಿವರು ಇನ್ನಾದರೂ ಎಚ್ಚೆತ್ತುಕೊಂಡು, ಪಕ್ಷ, ಸರಕಾರಕ್ಕೆ ಒಳ್ಳೆಯ ಹೆಸರು ತರುವಂತೆ ಕೆಲಸ ಮಾಡಿ

ಕಾರ್ಯಕರ್ತರಿಗೆ ಅಧಿಕಾರದ ಅವಕಾಶ ನೀಡುವ ಹಿನ್ನೆಲೆಯಲ್ಲಿ ಪರಮೇಶ್ವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಲಾಗಿತ್ತು. ಈ ಸಮಿತಿ ಪಕ್ಷದ ಕಾರ್ಯಕರ್ತರಿಗೆ ನಿಗಮ ಮಂಡಳಿಗಳಲ್ಲಿ ನಿರ್ದೇಶಕ ಸ್ಥಾನ ನೀಡುವ ಬಗ್ಗೆ ವರದಿ ನೀಡಿದೆ. ಅಲ್ಲದೆ, ಬಾಕಿ ಇರುವ ನಿಗಮ-ಮಂಡಳಿಗಳ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ವಿವಾದಾತ್ಮಕ ಹೇಳಿಕೆಗಳಿಗೆ ಸಂಬಂಧಿಸಿದಂತೆ ಸಿಎಂ ಹಾಗೂ ರಾಜ್ಯದ ಉಸ್ತುವಾರಿಗಳು ನೋಡಿಕೊಳ್ಳುತ್ತಾರೆ. ಸಚಿವರುಗಳ ಕಾರ್ಯಗಳ ವಿಚಾರವಾಗಿ ಸಿಎಂ ಹೈಕಮಾಂಡ್‌ಗೆ ವರದಿ ಸಲ್ಲಿಸಿದ್ದಾರೆ. ಈ ವರದಿಯನ್ನು ಎಐಸಿಸಿ ಪರಿಶೀಲನೆ ನಡೆಸಿ ಮುಂದಿನ ಕ್ರಮವಹಿಸಲಿದೆ. ನಮ್ಮಲ್ಲಿ ಯಾವುದೇ ಗೊಂದಲಗಳಿಲ್ಲ.
- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಲಕ್ಷಾಂತರ ಸಾಧು ಸಂತರು, ಭಕ್ತರಿಂದ ಪುಣ್ಯಸ್ನಾನ
ಇಂದು ಏಳು ಕೋಟಿ ಭಕ್ತರಿಂದ ಸಂಕ್ರಾಂತಿ ಸ್ನಾನ

ಮಹಾಕುಂಭ ಮೇಳ ಆರಂಭ

ಪ್ರಯಾಗರಾಜ್‌ನತ್ತ ಸಾಧು-ಸಂತರ ಮಹಾಪೂರ
ಈ ಸಲ 144 ವರ್ಷಗಳ ನಂತರದ ಮಹಾಮೇಳ

ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಲ್ಲಿ ಮಹಾಕುಂಭ ಮೇಳದ ಪ್ರಯುಕ್ತ ಭಕ್ತರು ಪುಣ್ಯಸ್ನಾನ ಮಾಡಿದರು.

ದೆಹಲಿ: ಉತ್ತರ ಪ್ರದೇಶದ ಪ್ರಯಾಗರಾಜ್‌ನ ಗಂಗಾನದಿ ತಟದಲ್ಲಿ ಜಗತ್ತಿನ ಅತ್ಯಂತ ದೊಡ್ಡ ಧಾರ್ಮಿಕ ಉತ್ಸವ ಮಹಾಕುಂಭ ಮೇಳವು ಆರಂಭಗೊಂಡಿದ್ದು, ಸಾಧು-ಸಂತರು ಸೇರಿ ದೇಶ-ವಿದೇಶಗಳಿಂದ ಭಕ್ತರ ಮಹಾಪೂರವೇ ಹರಿದು ಬರುತ್ತಿದೆ.

ಪುಷ್ಯ ಪೂರ್ಣಿಮಾ ದಿನವಾದ ಸೋಮವಾರ ಸಂಗಮದಲ್ಲಿ (ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳು ಕೂಡುವ ಸ್ಥಳ) ಮೊದಲ ಸ್ನಾನ ಮಾಡುವುದರೊಂದಿಗೆ ಮಹಾಕುಂಭಕ್ಕೆ ಚಾಲನೆ ಸಿಕ್ಕಿದೆ. ಮೊದಲ 'ಶಾಹೀ ಸ್ನಾನ' ಮಂಗಳವಾರ (ಜ.14) ಮಕರ ಸಂಕ್ರಾಂತಿಯಂದು ನಡೆಯಲಿದೆ. ಆ ದಿನ ಸಂಗಮದ ನೀರಿನಲ್ಲಿ ಏಳು ಕೋಟಿಯಷ್ಟು ಜನರು ಪವಿತ್ರ ಸ್ನಾನ ಮಾಡುವ ನಿರೀಕ್ಷೆ ಇದೆ. ಇದೇ 29ಕ್ಕೆ ಮೌನಿ ಅಮಾವಾಸ್ಯೆ ಮತ್ತು ಫೆ.3ರಂದು ವಸಂತ ಪಂಚಮಿ ದಿನಗಳಂದೂ 'ಶಾಹೀ ಸ್ನಾನ' ನೆರವೇರಲಿದೆ. ಫೆ.26ರಂದು ಮಹಾಶಿವರಾತ್ರಿಯಂದು ಉತ್ಸವಕ್ಕೆ ತೆರೆ ಬೀಳಲಿದೆ. 144 ವರ್ಷಗಳ ಬಳಿಕ ಆಕಾಶಕಾಯಗಳು (ಗ್ರಹ, ನಕ್ಷತ್ರಗಳು) ಒಂದೇ ರೇಖೆಯಲ್ಲಿ ಬರುತ್ತಿರುವುದರಿಂದ ಈ ಬಾರಿಯ ಮಹಾಕುಂಭ ಮೇಳ ಹೆಚ್ಚು ವಿಶಿಷ್ಟವಾದುದು ಎಂದು ಜ್ಯೋತಿಷಿಗಳು ಅಭಿಪ್ರಾಯಪಟ್ಟಿದ್ದಾರೆ.

7000 ಕೋಟಿ ರು. ಖರ್ಚು

ಸುಗಮವಾಗಿ ನಡೆಯುವುದಕ್ಕಾಗಿ ರಾಜ್ಯ ಸರಕಾರ, ಸ್ಥಳೀಯ ಆಡಳಿತವು ಪ್ರಯಾಗರಾಜ್ ಮತ್ತು ಸುತ್ತಲಿನ ಸ್ಥಳಗಳಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಮಹಾಕುಂಭ ಮೇಳಕ್ಕಾಗಿ ರಾಜ್ಯ ಸರಕಾರ ₹7,000 ಕೋಟಿ ವೆಚ್ಚ ಮಾಡುತ್ತಿದೆ.

ಪ್ರಯಾಗರಾಜ್‌ನಲ್ಲಿ ಮಹಾಕುಂಭ ಮೇಳ ಆರಂಭವಾಗಿದೆ. ನಂಬಿಕೆ, ಭಕ್ತಿ ಮತ್ತು ಸಂಸ್ಕೃತಿಯ ಪವಿತ್ರ ಸಂಗಮದಲ್ಲಿ ಅಸಂಖ್ಯಾತ ಜನರು ಒಟ್ಟಾಗಿ ಸೇರಲಿದ್ದಾರೆ. ಮಹಾಕುಂಭವು ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಸಾಕಾರಗೊಳಿಸುವುದರ ಜತೆಗೆ ನಂಬಿಕೆ ಮತ್ತು ಸಾಮರಸ್ಯವನ್ನು ಹೆಚ್ಚಿಸುತ್ತದೆ. ಭಾರತೀಯ ಮೌಲ್ಯಗಳು ಮತ್ತು ಸಂಸ್ಕೃತಿಯನ್ನು ಪಾಲಿಸುವ ಕೋಟ್ಯಂತರ ಜನರಿಗೆ ಇದು ಅತ್ಯಂತ ವಿಶೇಷವಾದ ದಿನವಾಗಿದೆ.
- ನರೇಂದ್ರ ಮೋದಿ ಪ್ರಧಾನಿ

ಆಲಮಟ್ಟಿ ಕಾಲುವೆಗೆ ಹಾರಿದ ಮಹಿಳೆಯ ರಕ್ಷಣೆ

ನಾಲ್ಕು ಮಕ್ಕಳ ಕೊಂದು ತಾಯಿ ಆತ್ಮಹತ್ಯೆ ಯತ್ನ

ವಿಜಯಪುರ: ಜಿಲ್ಲೆಯ ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆಗೆ ಮಹಿಳೆಯೊಬ್ಬಳು ಸೋಮವಾರ ತನ್ನ ನಾಲ್ವರು ಮಕ್ಕಳೊಂದಿಗೆ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದು, ಘಟನೆಯಲ್ಲಿ ನಾಲ್ವರು ಮಕ್ಕಳು ಸಾವಿಗೀಡಾಗಿದ್ದಾರೆ. ಮಹಿಳೆಯನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಸಾವಿಗೀಡಾದವರನ್ನು ಕೊಲ್ಹಾರ ತಾಲೂಕಿನ ತೆಲಗಿ ಗ್ರಾಮದ ತನು ನಿಂಗರಾಜ ಭಜಂತ್ರಿ (5), ರಕ್ಷಾ ನಿಂಗರಾಜ ಭಜಂತ್ರಿ (3) ಹಾಗೂ ಅವಳಿ ಮಕ್ಕಳಾದ ಹಸೇನ ನಿಂಗರಾಜ ಭಜಂತ್ರಿ, ಹುಸೇನ ನಿಂಗರಾಜ ಭಜಂತ್ರಿ (13 ತಿಂಗಳು) ಎಂದು ಗುರುತಿಸಲಾಗಿದೆ.

ಕಾಲುವೆಗೆ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದ ಮೃತ ಮಕ್ಕಳ ತಾಯಿ ಭಾಗ್ಯಳನ್ನು ಮೀನುಗಾರರು ಕಾಲುವೆಯಿಂದ ಎತ್ತಿ ಬದುಕಿಸಿದ್ದಾರೆ. ಕೌಟುಂಬಿಕ ಕಲಹದಿಂದ ನೊಂದ ಮಹಿಳೆ ತನ್ನ ನಾಲ್ವರು ಮಕ್ಕಳೊಂದಿಗೆ ಕಾಲುವೆಗೆ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ್ದರು ಎಂದು ತಿಳಿದುಬಂದಿದೆ. ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಭವಿಸಿದೆ.

ಜನವರಿ 15ರ ನೆಟ್ ಪರೀಕ್ಷೆ ಮುಂದೂಡಿಕೆ

ದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಜ.15ರಂದು ನಿಗದಿಯಾಗಿದ್ದ ಯುಜಿಸಿ-ನೆಟ್ ಪರೀಕ್ಷೆಯನ್ನು ಮುಂದೂಡಿದೆ. ಅಂದು ಪೊಂಗಲ್, ಮಕರ ಸಂಕ್ರಾಂತಿ ಮತ್ತು ಇತರ ಹಬ್ಬಗಳಿರುವ ಕಾರಣ ಪರೀಕ್ಷೆ ಮುಂದೂಡುವಂತೆ ಎನ್‌ಟಿಎಗೆ ಪತ್ರ ಬಂದಿತ್ತು. ಈ ಹಿನ್ನೆಲೆಯಲ್ಲಿ ಜ.15ರಂದು ನಿಗದಿಯಾಗಿದ್ದ ಯುಜಿಸಿ-ನೆಟ್ ಪರೀಕ್ಷೆ ಮುಂದೂಡಲು ನಿರ್ಧರಿಸಿದೆ. ಹೊಸ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ತಿರುಮಲ ದೇವಾಲಯದ ಕೌಂಟರ್‌ನಲ್ಲಿ ಅಗ್ನಿ ಅವಘಡ

ತಿರುಪತಿ: ತಿರುಪತಿ ತಿರುಮಲ ದೇವಾಲಯದ ಲಡ್ಡು ಪ್ರಸಾದ ನೀಡುತ್ತಿದ್ದ ಕೌಂಟರ್‌ನಲ್ಲಿ ಸೋಮವಾರ ಅಗ್ನಿ ಅವಘಡ ಸಂಭವಿಸಿದೆ. ಕಂಪ್ಯೂಟರ್ ಯುಪಿಎಸ್‌ನಲ್ಲಿ ಶಾರ್ಟ್ ಸರ್ಕೀಟ್ ಉಂಟಾದ ಕಾರಣ 47ನೇ ಕೌಂಟರ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಪ್ರಸಾದ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದ ಜನ ಓಡಿ ಹೋಗಿದ್ದಾರೆ. ತಕ್ಷಣವೇ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ.

ಮೀಸಲು ಪಟ್ಟಿ ದೊರೆತ ಕೂಡಲೇ ವೇಳಾಪಟ್ಟಿ ಪ್ರಕಟ | ಈ ಬಾರಿ ಬ್ಯಾಲೇಟ್ ಪೇಪರ್ ಬಳಕೆ

ಏಪ್ರಿಲ್-ಮೇನಲ್ಲಿ ಜಿಪಂ, ತಾಪಂ ಚುನಾವಣೆ

ಬೆಳಗಾವಿ: ಬಹುತೇಕ ಏಪ್ರಿಲ್-ಮೇ ತಿಂಗಳಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ನಡೆಸಲಾಗುವುದು. ಈ ಬಾರಿ ಬ್ಯಾಲೇಟ್ ಪೇಪರ್‌ಗಳನ್ನು ಬಳಸಲಾಗುತ್ತದೆ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್.ಸಂಗ್ರೇಶಿ ಮಾಹಿತಿ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲಾ ಪುನರ್ ವಿಂಗಡಣಾ ಆಯೋಗದ ವರದಿ ದೊರೆಯುವುದು ಹಾಗೂ ಇನ್ನಿತರ ಕಾರಣಗಳಿಂದಾಗಿ ಚುನಾವಣೆಗೆ ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಹಾಗಾಗಿ, ಶೀಘ್ರವೇ ಚುನಾವಣೆ ನಡೆಸಲಾಗುವುದು. ಸಂಬಂಧಪಟ್ಟ ಇಲಾಖೆಗಳಿಗೆ ಮೀಸಲು ಪಟ್ಟಿಗಳನ್ನು ಕೊಡಲು ತಿಳಿಸಲಾಗಿದೆ. ಅವು ಸಿಕ್ಕ ಕೂಡಲೇ ಚುನಾವಣಾ ವೇಳಾ ಪಟ್ಟಿ ಪ್ರಕಟಿಸಲಿದ್ದೇವೆ ಎಂದರು.

ಇವಿಎಂ ಯಂತ್ರದ ಮೇಲೆ ಕೇವಲ ರಾಜಕೀಯ ಪಕ್ಷಗಳು ಅಷ್ಟೇ ಅಲ್ಲ, ಜನಸಾಮಾನ್ಯರು ಕೂಡ ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಅಲ್ಲದೇ ಸುಪ್ರೀಂ ಕೋರ್ಟ್‌ನಲ್ಲೂ ಈ ಬಗ್ಗೆ ಸತ್ವ ಪರೀಕ್ಷೆ ಆಗಿದೆ. ಹಾಗಾಗಿ, ಇವಿಎಂ ಯಂತ್ರಗಳನ್ನು ಹ್ಯಾಕ್ ಮಾಡುವ ಬಗ್ಗೆ ಪ್ರಾತ್ಯಕ್ಷಿಕವಾಗಿ ಪರೀಕ್ಷೆ ಆಗಬೇಕು. ಜನರಲ್ಲಿರುವ ಸಂಶಯ ನಿವಾರಿಸುವ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಮನವೊಲಿಸಿ, ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಬ್ಯಾಲೇಟ್ ಪೇಪರಗಳನ್ನೇ ಬಳಸಲಾಗುವುದು. ಮುಂಜಾಗ್ರತವಾಗಿ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿ ಮತ್ತು ಸಾಧ್ಯವಾದರೆ ಎಲ್ಲ ತಹಸೀಲ್ದಾರ್‌ರನ್ನು ಭೇಟಿಯಾಗಿ ಚುನಾವಣೆ ಸುಗಮವಾಗಿ ನಡೆಯುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುವುದು ಎಂದರು.

ಭ್ರಷ್ಟಾಚಾರ ಮತ್ತು ಆಮಿಷ ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲು ಎಲ್ಲರೂ ಸಹಕರಿಸಬೇಕು. ಆ ನಿಟ್ಟಿನಲ್ಲಿ ಆಯೋಗವೂ ಕಟ್ಟುನಿಟ್ಟಿನ ಸಿದ್ಧತೆಗಳನ್ನು ಮಾಡಿಕೊಳ್ಳಲಿದೆ. ರಾಜ್ಯ ಚುನಾವಣಾ ಆಯೋಗ ಸ್ವತಂತ್ರವಾಗಿದ್ದು, ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಆಶಯಗಳಂತೆ ಚುನಾವಣೆ ನಡೆಸುತ್ತೇವೆ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್. ಸಂಗ್ರೇಶಿ ವಿಶ್ವಾಸ ವ್ಯಕ್ತಪಡಿಸಿದರು.

- ಇವಿಎಂ ಯಂತ್ರಗಳನ್ನು ಹ್ಯಾಕ್ ಮಾಡುವ ಬಗ್ಗೆ ಪ್ರಾತ್ಯಕ್ಷಿಕವಾಗಿ ಪರೀಕ್ಷೆ ಆಗಬೇಕು.
- ಚುನಾವಣೆ ಸುಗಮವಾಗಿ ನಡೆಯುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾ ಗುವುದು.
- ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಆಶಯಗಳಂತೆ ಚುನಾವಣೆ ನಡೆಸುತ್ತೇವೆ.

ಕ್ಷೇತ್ರಗಳ ಪುನರ್ ವಿಂಗಡಣೆ ಮತ್ತು ಮೀಸಲು ಪಟ್ಟಿಯಲ್ಲಿ ಯಾರಿಗೂ ಅನ್ಯಾಯ ಆಗದಂತೆ ರಚನೆ ಮಾಡಿ ಚುನಾವಣೆ ಮಾಡಲಾಗುವುದು. ಇನ್ನು ನಾಮಪತ್ರ ಹಿಂಪಡೆಯುವ ದಿನಾಂಕದವರೆಗೆ 18 ವರ್ಷ ತುಂಬಿದ ಹೊಸ ಮತದಾರರನ್ನು ಪಟ್ಟಿಯಲ್ಲಿ ಸೇರಿಸಲು ಸಮಯಾವಕಾಶ ನೀಡಲಾಗುವುದು.
- ಜಿ.ಎಸ್.ಸಂಗ್ರೇಶಿ
ರಾಜ್ಯ ಚುನಾವಣಾ ಆಯೋಗದ ಆಯುಕ್ತ

ಸಮಾಚಾರ ಸಣ್ಣದಲ್ಲ

ರಾಣಿ ಚೆನ್ನಮ್ಮ ವಸತಿ ಶಾಲೆಗೆ ಅರ್ಜಿ ಆಹ್ವಾನ

ಕಾರವಾರ: ಕುಮಟಾ ತಾಲೂಕಿನ ಗೋಕರ್ಣ ಹೋಬಳಿಯ ಗಂಗೆಕೊಳ್ಳದ ಕಿತ್ತೂರು ರಾಣಿ ಚೆನ್ನಮ್ಮ ವಸತಿ (ಆಂಗ್ಲ ಮಾಧ್ಯಮ) ಶಾಲೆಗೆ 2025-26ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ 6 ನೇ ತರಗತಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 5 ನೇ ತರಗತಿಯಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು 6 ನೇ ತರಗತಿಗೆ ವಸತಿ ಶಾಲೆಗಳಿಗೆ ದಾಖಲಿಸಲು ಜ.25 ರೊಳಗಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಫೆ. 15 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರವೇಶಾತಿ ಪರೀಕ್ಷೆಯನ್ನು ನಡೆಸಲಿದೆ. ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ನಲ್ಲಿ ಅರ್ಜಿಯನ್ನು ಭರ್ತಿ ಮಾಡಲು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಗಂಗೆಕೊಳ್ಳ ಮಜರೆ, ಗೋಕರ್ಣ ಹೋಬಳಿ ವಸತಿ ಶಾಲೆಗೆ ಸಂಪರ್ಕಿಸಬಹುದು. ಅರ್ಜಿ ಸಲ್ಲಿಸುವ ವಿಧಾನ, ಹಾಗೂ ''ಮಾಹಿತಿ ಪುಸ್ತಕ-2025'' ವನ್ನು ಪ್ರಾಧಿಕಾರದ ವೆಬ್ ಸೈಟ್ https://kea.kar.nic.in ನಲ್ಲಿ ಮತ್ತು ವಸತಿ ಶಿಕ್ಷಣ ಸಂಸ್ಥೆಗಳ ವೆಬ್‌ಸೈಟ್: https://kreis.kar.nic.in ನಲ್ಲಿ ಪ್ರಚುರ ಪಡಿಸಲಾಗಿದೆ. ಪರೀಕ್ಷೆಗೆ ಪ್ರವೇಶ ಪತ್ರಗಳನ್ನು ಫೆ.6 ರಿಂದ ವಸತಿ ಶಾಲೆಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಗಂಗೆಕೊಳ್ಳ ಮಜರೆ, ಹೋಬಳಿ: ಗೋಕರ್ಣ ದೂರವಾಣಿ ಸಂಖ್ಯೆ: 9480143053 ಗೆ ಸಂಪರ್ಕಿಸುವಂತೆ ಗೋಕರ್ಣದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಭ್ರಮದ ಮಕರ ಸಂಕ್ರಾಂತಿ ಉತ್ಸವ

ಯಲ್ಲಾಪುರ: ತಾಲೂಕಿನ ಅಣಲಗಾರ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮಕರ ಸಂಕ್ರಾಂತಿ ಉತ್ಸವ ವಿವಿಧ ಕಾರ್ಯಕ್ರಮಗಳೊಂದಿಗೆ ಜ.14 ರಂದು ನಡೆಯಲಿದೆ. ಬೆಳಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಲಿದೆ. ರಾತ್ರಿ ಪಲ್ಲಕ್ಕಿ ಉತ್ಸವ, ಅಷ್ಟಾವಧಾನ ಸೇವೆ ನಡೆಯಲಿದೆ. ನಂತರ ಸ್ಥಳೀಯ ಕಲಾವಿದರಿಂದ ಸುಭದ್ರಾ ಕಲ್ಯಾಣ ತಾಳಮದ್ದಲೆ ನಡೆಯಲಿದೆ. ಹಿಮ್ಮೇಳದಲ್ಲಿ ಭಾಗವತರಾಗಿ ಮಹಾಬಲೇಶ್ವರ ಭಟ್ಟ ಬೆಳಸೇರು, ನಾಗೇಂದ್ರ ಭಾಗ್ವತ ಶೇಡಿಜಡ್ಡಿ, ಮದ್ದಲೆವಾದಕರಾಗಿ ಶಿವರಾಮ ಕೋಮಾರ ತಾರಗಾರ, ವಿನಾಯಕ ಹೆಗಡೆ ಕುಳಿಮಾಗೋಡ ಭಾಗವಹಿಸಲಿದ್ದಾರೆ. ಸುಬ್ರಾಯ ಭಟ್ಟ ಇಡಗುಂದಿ, ಮಂಜುನಾಥ ಗಾಂವ್ಕರ ಮೂಲೆಮನೆ, ಗೋಪಾಲಕೃಷ್ಣ ಭಟ್ಟ ಕಬ್ಬಿನಕುಂಬ್ರಿ, ಶ್ರೀಧರ ಅಣಲಗಾರ, ರಾಮಕೃಷ್ಣ ಭಟ್ಟ ಕಂಚನಗದ್ದೆ, ಮಂಜುನಾಥ ಹೆಬ್ಬಾತ ನಡುತೋಟ, ದಿನೇಶ ಗೌಡ ಮಾವಿನಮನೆ ಅರ್ಥಧಾರಿಗಳಾಗಿ ಭಾಗವಹಿಸಲಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

ಸಾಮಾಜಿಕ ಹೋರಾಟಗಾರ ಅನಂತಮೂರ್ತಿ ಹೆಗಡೆ ನೇತೃತ್ವ | ಸಂಸದ ವಿಶ್ವೇಶ್ವರ ಹೆಗಡೆ ಘೋಷಣೆ

ಉಪವಾಸ ಸತ್ಯಾಗ್ರಹಕ್ಕೆ ನನ್ನ ಸಂಪೂರ್ಣ ಬೆಂಬಲ

ಶಿರಸಿ: ಹೈಟೆಕ್ ಆಸ್ಪತ್ರೆಗೆ ಸಂಬಂಧಿಸಿ ಅನಂತಮೂರ್ತಿ ಹೆಗಡೆ ನಡೆಸುತ್ತಿರುವ ಎಲ್ಲ ಹೋರಾಟಕ್ಕೆ, ಉಪವಾಸ ಸತ್ಯಾಗ್ರಹಕ್ಕೆ ನನ್ನ ಸಂಪೂರ್ಣ ಬೆಂಬಲವಿದ್ದು, ಸಮಾಜಕ್ಕೆ ಒಳ್ಳೆಯದಾಗುವ ಯಾವುದೇ ನಿರ್ಣಯ ಅವರು ಕೈಗೊಂಡರೂ ನಾನು ಬೆಂಬಲಿಸುತ್ತೇನೆ ಮತ್ತು ಸಮಸ್ತ ಜಿಲ್ಲಾ ಬಿಜೆಪಿ ಅವರನ್ನು ಈ ನಿಟ್ಟಿನಲ್ಲಿ ಸದಾ ಅವರ ಬೆನ್ನಿಗೆ ನಿಲ್ಲುತ್ತದೆ ಎಂದು ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

> ಹೈಟೆಕ್ ಆಸ್ಪತ್ರೆಗೆ ಸಂಬಂಧಿಸಿ ಅನಂತಮೂರ್ತಿ ಹೆಗಡೆ ನಡೆಸುತ್ತಿರುವ ಎಲ್ಲ ಹೋರಾಟಕ್ಕೆ, ಉಪವಾಸ ಸತ್ಯಾಗ್ರಹಕ್ಕೆ ನನ್ನ ಸಂಪೂರ್ಣ ಬೆಂಬಲವಿದ್ದು, ಅವರ ಬೆಂಬಲಕ್ಕೆ ನಾನು ಸದಾ ಇರುತ್ತೇನೆ.
> - ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದರು



ಸಾಮಾಜಿಕ ಹೋರಾಟಗಾರ ಅನಂತಮೂರ್ತಿ ಹೆಗಡೆ ನೇತೃತ್ವದಲ್ಲಿ ನಡೆಯುತ್ತಿದ್ದ ಉಪವಾಸ ಸತ್ಯಾಗ್ರಹ ಸ್ಥಳಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಗಮಿಸಿ ತಹಸೀಲ್ದಾರಗೆ ಮನವಿ ಸಲ್ಲಿಸಿದ್ದರು.

ನಗರದ ತಹಸೀಲ್ದಾರ ಕಚೇರಿಯಲ್ಲಿ ಸಾಮಾಜಿಕ ಹೋರಾಟಗಾರ ಅನಂತಮೂರ್ತಿ ಹೆಗಡೆ ನೇತೃತ್ವದಲ್ಲಿ ನಡೆಯುತ್ತಿದ್ದ ಉಪವಾಸ ಸತ್ಯಾಗ್ರಹ ಸ್ಥಳಕ್ಕೆ ಬಿಜೆಪಿ ಮುಖಂಡರ ಜತೆಗೆ ಆಗಮಿಸಿ ಮಾತನಾಡಿದರು.

ಅನಂತಮೂರ್ತಿ ಹೆಗಡೆ ಅವರು ಪ್ರಾರಂಭಿಸಿದ ಈ ಉಪವಾಸ ಸತ್ಯಾಗ್ರಹಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ. ಈ ಮುಂದಿನ ಹೋರಾಟದ ಕುರಿತು ನೀವು ನಿಮ್ಮ ಸಮಿತಿಯೊಡನೆ ಚರ್ಚಿಸಿ ರೂಪುರೇಷೆ ರೂಪಿಸಿಕೊಳ್ಳಿ. ನೀವು ಯಾವುದೇ ನಿರ್ಣಯ ಕೈಗೊಂಡರೂ ನನ್ನ ಬೆಂಬಲ ಸದಾ ಇರುತ್ತದೆ. ಒಟ್ಟಿನಲ್ಲಿ ಶಿರಸಿಯಲ್ಲಿ ಒಂದು ಹೈಟೆಕ್ ಆಸ್ಪತ್ರೆ ನಿರ್ಮಾಣ ಆಗಲೇಬೇಕು. ಭಾರತೀಯ ಜನತಾ ಪಾರ್ಟಿ ಈ ಸತ್ಯಾಗ್ರಹವನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ.

> ನಾವು ಕಳೆದ ಸಾಕಷ್ಟು ದಿನದ ಹಿಂದೆಯೇ ಉಪವಾಸ ಸತ್ಯಾಗ್ರಹದ ಕುರಿತಾಗಿ ಮಾಹಿತೊಯನ್ನು ನೀಡಿದರೂ ಸಹ ಕ್ಷೇತ್ರದ ಶಾಸಕರು ತೋರುತ್ತಿರುವ ಮೌನ ಸರಿಯಲ್ಲ. ಆಸ್ಪತ್ರೆ ವಿಚಾರದಲ್ಲಿ ಶಾಸಕರು ಸತ್ಯವನ್ನು ಹೇಳಬೇಕು. ಅವರು ವಿದೇಶಕ್ಕೆ ಹೋಗಿದ್ದಾರಂತೆ. ಅವರು ನಮಗೆ ಕನಿಷ್ಟಪಕ್ಷ ಮಾಹಿತಿ ತಿಳಿಸಬಹುದಾಗಿತ್ತು.
> -ಅನಂತಮೂರ್ತಿ ಹೆಗಡೆ, ಹೋರಾಟಗಾರ

ಪ್ರಮುಖವಾಗಿ ನಾವು ಇಂದು ಮೂರು ಬೇಡಿಕೆಗಳನ್ನು ಸರಕಾರಕ್ಕೆ ಆಗ್ರಹಿಸುತ್ತಿದ್ದೇವೆ. ಮೊದಲಬೇದಾಗಿ ಪಂಡಿತ್ ಸಾರ್ವಜನಿಕ ಅಸ್ಪತ್ರೆ ಕುರಿತಾಗಿ ಸರಕಾರ ಮತ್ತು ಶಾಸಕರು ಸತ್ಯ ಹೇಳಬೇಕು. ಹಿಂದೆ ನಿಗದಿಯಾಗಿದ್ದ 30 ಕೋಟಿ ರು. ಹಣದ ಸಲಕರಣೆಗಳು ಅಂದರೆ ಎಂ.ಆರ್.ಐ ಸ್ಕ್ಯಾನ್, ಸಿಟಿ ಸ್ಕ್ಯಾನ್, ಕ್ಯಾತಲ್ಯಾಬ್, ಹಾರ್ಟ್ ಅಪರೇಷನ್ ಸೌಲಭ್ಯ, ತುರ್ತು ಚಿಕಿತ್ಸೆಯ ಟ್ರಾಮಾ ಸೆಂಟರ್, ಎಲ್ಲಾ ಸೌಲಭ್ಯ ಕೂಡಾ ತಪ್ಪದೇ ಬರಬೇಕು. ಈಗಾಗಲೆ 80% ಕೆಲಸ ಆಗಿರುವುದರಿಂದ ಸಲಕರಣೆ ಟೆಂಡರ್, ಸ್ಪೆಷಲಿಸ್ಟ್ ವೈದ್ಯರ ನೇಮಕ ತಕ್ಷಣ ಮಾಡಬೇಕು. ಎರಡನೇದಾಗಿ ಈಗಿರುವ ಪಂಡಿತ್ ಸಾರ್ವಜನಿಕ ಆಸ್ಪತ್ರೆಯಲ್ಲಿ 2 ವರ್ಷಗಳಿಂದ ಜನರಲ್ ಫಿಜೀಷಿಯನ್ ಇಲ್ಲ ಎಂದರು.

ರಾಜ್ಯ ಬಿಜೆಪಿ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಮಾತನಾಡಿ, ಆರೋಗ್ಯದ ವಿಷಯದಲ್ಲಿ ರಾಜ್ಯ ಸರಕಾರ ಅನಾಸಕ್ತಿ ತೋರುವುದು ಸರಿಯಲ್ಲ. ಆರೋಗ್ಯ ಎಲ್ಲ ಜನರ ಹಕ್ಕು. ಜನರಿಗೆ ಅತ್ಯಾವಶ್ಯಕ ಇರುವ ಹೈಟೆಕ್ ಆಸ್ಪತ್ರೆಯನ್ನು ರಾಜ್ಯ ಸರಕಾರ ಈ ಕೂಡಲೇ ಮಂಜೂರು ಮಾಡಬೇಕು. ಅನಂತಮೂರ್ತಿ ಹೆಗಡೆ ಅವರು ನಡೆಸುತ್ತಿರುವ ಈ ಹೋರಾಟಕ್ಕೆ ನಮ್ಮೆಲ್ಲರ ಬೆಂಬಲ ಸದಾ ಇದೆ ಎಂದರು.

ಸಾಮಾಜಿಕ ಕಾರ್ಯಕರ್ತ ಗಂಗಾಧರ ಹೆಗಡೆ, ಹುಳಸೇಮಕ್ಕಿ ಮಾತನಾಡಿದರು. ನಗರ ಸಭೆ ಅಧ್ಯಕ್ಷೆ ಶರ್ಮಿಳಾ ಮಾದನಗೇರಿ ಮಾತನಾಡಿದರು.

ಶಿರಸಿ ನಗರದ ಬಿಡ್ಕಿಬೈಲಿನಲ್ಲಿರುವ ಮಹಾತ್ಮ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಮೆರವಣಿಗೆಯಲ್ಲಿ ಸಿದ್ದಾಪುರ, ಬನವಾಸಿ, ಯಲ್ಲಾಪುರ, ಮುಂಡಗೋಡು ಸೇರಿದಂತೆ ಸಾಕಷ್ಟು ಹಳ್ಳಿಗಳಿಂದಲೂ ಸಹ ಸಾರ್ವಜನಿಕರು ಪಕ್ಷಾತೀತವಾಗಿ ಭಾಗಿಯಾಗಿ, ಆಸ್ಪತ್ರೆ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಪ್ರಮುಖರಾದ ಜಯಶೀಲ ಗೌಡ, ಹಾಲಪ್ಪ ಜಕ್ಕಣ್ಣನವರ್, ಮಂಜುನಾಥ ಪಾಟೀಲ್, ರೇಖಾ ಹೆಗಡೆ, ಶಿವಾನಂದ ದೇಶಳ್ಳಿ, ಚಿದಾನಂದ ಹರಿಜನ, ಅನಿಲ ನಾಯಕ್, ಹರೀಶ ಕರ್ಕಿ, ಅಮಿತ್ ಶೇಟ್, ಶ್ರೀಪಾದ ರಾಯ್ಸದ್, ಗಣಪತಿ ನಾಯ್ಕ, ಶೋಭಾ ನಾಯ್ಕ, ಮಹೇಶ ಕಡೆಮನೆ, ಗುರುಪ್ರಸಾದ ಅಂಬ್ಲಿಹೊಂಡ, ಆದಿತ್ಯ, ಕಾರ್ತೀಕ ಅಂಬ್ಲಿಹೊಂಡ ಇದ್ದರು.

ಅನಂತಮೂರ್ತಿ ಹೋರಾಟಕ್ಕೆ ಸಾಥ್ ನೀಡಿದ ಬಿಜೆಪಿ ಧುರೀಣರು

ಅನಂತಮೂರ್ತಿ ಹೆಗಡೆ ನಡೆಸುತ್ತಿದ್ದ ಉಪವಾಸ ಸತ್ಯಾಗ್ರಹಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ರಾಜ್ಯ ಬಿಜೆಪಿ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ರಾಜ್ಯ ವಕ್ತಾರ ಹರಿಪ್ರಕಾಶ ಕೋಣೆಮನೆ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ ಕರ್ಕಿ, ಮಾಜಿ ಶಾಸಕರುಗಳಾದ ಶಿವಾನಂದ ನಾಯ್ಕ, ವಿವೇಕಾನಂದ ವೈದ್ಯ, ಕೆಡಿಸಿಸಿ ಮಾಜಿ ಅಧ್ಯಕ್ಷ ಎಸ್.ಎಲ್. ಘೋಟ್ನೇಕರ್, ಬಿಜೆಪಿ ಯಲ್ಲಾಪುರ ಮಂಡಲಾಧ್ಯಕ್ಷ ಪ್ರಸಾದ ಹೆಗಡೆ, ಶಿರಸಿ ನಗರಾಧ್ಯಕ್ಷ ಆನಂದ ಸಾಲೇರ್, ಸಿದ್ದಾಪುರ ತಾಲೂಕು ಅಧ್ಯಕ್ಷ ತಿಮ್ಮಪ್ಪ ಮಡಿವಾಳ, ಕುಮಟಾ ಮಂಡಲಾಧ್ಯಕ್ಷ ಜಿ.ಐ.ಹೆಗಡೆ, ಅಂಕೋಲಾ ತಾಲೂಕು ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ, ಶಿರಸಿ ಗ್ರಾಮೀಣ ಮಂಡಲ ಅಧ್ಯಕ್ಷೆ ಉಷಾ ಹೆಗಡೆ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ರಮೇಶ ನಾಯ್ಕ ಕುಪ್ಪಳ್ಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ ಹೆಗಡೆ ಹರ್ತೆಬೈಲ್, ನಗರ ಪ್ರಧಾನ ಕಾರ್ಯದರ್ಶಿ ನಾಗರಾಜ ನಾಯ್ಕ ಸೇರಿದಂತೆ ಸಮಸ್ತ ಬಿಜೆಪಿ ತಂಡವೇ ಉಪವಾಸ ಸತ್ಯಾಗ್ರಹದಲ್ಲಿ ಬೆಂಬಲ ನೀಡಿತು.

ರೈತರ ಬೆಳೆವಿಮೆ ಅನ್ಯಾಯ ಖಂಡಿಸಿ ಪ್ರತಿಭಟನೆ

ಶಿರಸಿ: ಉತ್ತರಕನ್ನಡ ಜಿಲ್ಲೆಯಲ್ಲಿ ಮಳೆ ಮಾಪನ ಸರಿಯಾಗಿ ಆಗದೇ ಇರುವ ಕಾರಣ ಬೆಳೆವಿಮೆ ಜಮೆಯಾಗಿಲ್ಲದ್ದರಿಂದ ವಿಮೆಯಿಂದ ಅನ್ಯಾಯಕ್ಕೊಳಗಾದ ಜಿಲ್ಲೆಯ ರೈತ ಸಮುದಾಯ ನಗರದ ತೋಟಗಾರಿಕಾ ಇಲಾಖೆ ಎದುರು ಪ್ರತಿಭಟನೆ ನಡೆಸಿದರು.

> ವಿಮಾ ಹಣ ತುಂಬಿಸಿಕೊಂಡು ಪರಿಹಾರ ನೀಡುವಲ್ಲಿ ಅನ್ಯಾಯ ಮಾಡಲಾಗುತ್ತಿದೆ. ರಾಜ್ಯದ 10 ಜಿಲ್ಲೆಯ ರೈತರಿಗೆ ವಿಮಾ ಹಣ ಅವರವರ ಖಾತೆಗೆ ಜಮಾ ಆಗಿದೆ. ಉತ್ತರ ಕನ್ನಡದಲ್ಲಿ ಮಾತ್ರ ಜನವರಿ ತಿಂಗಳು ಅರ್ಧ ಕಳೆದರೂ ಇನ್ನೂ ಜಮಾ ವಿಷಯವೇ ಮುನ್ನೆಲೆಗೆ ಬರುತ್ತಿಲ್ಲ. ಇಂಥ ಸನ್ನಿವೇಶದಲ್ಲಿ ರೈತರಿಗೆ ನ್ಯಾಯ ಒದಗಿಸಿಕೊಡುವ ಅಗತ್ಯತೆಯಿದೆ.
> -ರಾಘುವೇಂದ್ರ ನಾಯ್ಕ ಕಿರವತ್ತಿ, ರೈತ ಸಂಘದ ಕಾರ್ಯದರ್ಶಿ

ರೈತರಿಗೆ ಬೆಳೆವಿಮೆ ಹಣ ಮಂಜೂರಿಯಲ್ಲಿ ವಿಳಂಬ ಪ್ರಕ್ರಿಯೆ ವಿರೋಧಿಸಿದ ರಾಜ್ಯ ರೈತ ಸಂಘ, ಹಸಿರು ಸೇನೆ ಕಾರ್ಯಕರ್ತರು ಹಾಗೂ ರೈತರು ತೋಟಗಾರಿಕಾ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ನಗರದ ತೋಟಗಾರಿಕಾ ಇಲಾಖೆ ಜಿಲ್ಲಾ ಕಚೇರಿ ಎದುರು ಜಮಾಯಿಸಿದ ರೈತರು ವಿಮಶ ಕಂಪನಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಇದೇ ವೇಳೆ ವಿಮಾ ಕಂಪನಿ ಪ್ರತಿನಿಧಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡ ಘಟನೆ ಜರುಗಿತು.

ಪ್ರತಿಭಟನೆ ನೇತೃತ್ವ ವಹಿಸಿದ್ದ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯ್ಕ ಕಿರವತ್ತಿ ಮಾತನಾಡಿ, ಬೆಳೆವಿಮೆ ಪ್ರೀಮಿಯಂ ತುಂಬಲು ಗಡುವಿದೆ. ಆದರೆ ವಿತರಣೆಗೆ ಸಮಯವಿಲ್ಲ. ಇದರಿಂದ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಪರಿಹಾರ ನೀಡಲು ವಿಳಂಬವಾದರೆ ಬಡ್ಡಿ ಹಣವನ್ನು ರೈತರಿಗೆ ನೀಡುತ್ತಾರೆಯೇ? ಎಂದು ಪ್ರಶ್ನಿಸಿದರು. ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಬಿ.ಪಿ.ಸತೀಶ ಮಾತನಾಡಿ, ಜ.15ರಂದು ವಿಮೆ ಹಣ ವಿತರಣೆ ಸಂಬಂಧ ಬೆಂಗಳೂರಲ್ಲಿ ಸಭೆ ನಡೆಯಲಿದ್ದು, ಅಲ್ಲಿ ತ್ವರಿತವಾಗಿ ಹಣ ಬಿಡುಗಡೆಗೆ ಕ್ರಮಕೈಗೊಳ್ಳಲಾಗುತ್ತದೆ' ಎಂದರು. ಇದರಿಂದ ಪ್ರತಿಭಟನೆ ಹಿಂಪಡೆಯಲಾಯಿತು. ರೈತ ಪ್ರಮುಖರಾದ ದ್ಯಾಮಣ್ಣ ದೊಡ್ಮನಿ, ಪ್ರಶಾಂತ ಗೌಡ, ವೀರಭದ್ರ ನಾಯ್ಕ, ಅಲ್ಲಾಭಕ್ಷ, ಜಿ.ಆರ್.ಹೆಗಡೆ, ಅಕ್ಷಯ ಜಕಲಣ್ಣನವರ್, ಸುರೇಶ ನಾಯ್ಕ, ರಾಜೇಶ ನಾಯ್ಕ ಇತರರಿದ್ದರು.

ರಾಜ್ಯ ರೈತ ಸಂಘ, ಹಸಿರು ಸೇನೆ ಕಾರ್ಯಕರ್ತರು ಹಾಗೂ ರೈತರು ತೋಟಗಾರಿಕಾ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

> ರೈತರು ಮನೆಯವರ ಬಂಗಾರವನ್ನು ಅಡ ಇಟ್ಟು ಪ್ರಿಮಿಯಂ ಕಟ್ಟುತ್ತಿದ್ದೇವೆ. ಅದನ್ನು ನೀವು ಅರ್ಥ ಮಾಡಿಕೊಳ್ಳಿ. ನಮಗೆ ಗಡುವು ನೀಡುತ್ತೀರಿ ನಿಮ್ಮದ್ಯಾಕೆ ಗಡುವಿಲ್ಲ ನಮ್ಮ ಬೆಳೆ ವಿಮೆ ನೀಡೋದಿಲ್ಲ.
> - ದ್ಯಾಮಣ್ಣ ರೈತ

ಶ್ರೀಚಿತ್ರಾಪುರ, ಶ್ರೀಪರ್ತಗಾಳಿ, ಶ್ರೀರಾಮ ಕ್ಷೇತ್ರ ಶ್ರೀಗಳ ಉಪಸ್ಥಿತಿ

ಅಳ್ವೆಕೋಡಿ ಜಾತ್ರೆ ಇಂದಿನಿಂದ



ಭಟ್ಕಳ: ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ತಾಲೂಕಿನ ಅಳ್ವೆಕೋಡಿಯ ಪುರಾತನ ಜಾಗೃತ ದೇವತೆ ಶ್ರೀದುರ್ಗಾಪರಮೇಶ್ವರಿಯ ಮಾರಿ ಜಾತ್ರಾ ಮಹೋತ್ಸವವು ಜ.14 ಮಂಗಳವಾರ ಹಾಗೂ 15 ಬುಧವಾರದಂದು ನಡೆಯಲಿದೆ



ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಆಶೀರ್ವಾದದೊಂದಿಗೆ ಜಾತ್ರೆ ನಡೆಯಲಿದೆ.

ಜ.14ರಂದು ಬೆಳಗ್ಗೆ 8 ಗಂಟೆಗೆ ಶ್ರೀ ಮಾರಿಕಾಂಬಾ ಮೂರ್ತಿ ಪ್ರತಿಷ್ಠಾಪನೆ, ಪೂರ್ವಾಹ್ನ 11 ಗಂಟೆಗೆ ಶ್ರೀ ಚಿತ್ರಾಪುರ ಸಂಸ್ಥಾನ ಮಠಾಧೀಶ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ಧಾರ್ಮಿಕ ಸಭೆ ನಡೆಯಲಿದೆ.

ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಉದ್ಘಾಟಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಾರಿಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ರಾಮ ಎಂ. ಮೊಗೇರ ವಹಿಸುವರು. ಮುಖ್ಯ ಅತಿಥಿಗಳಾಗಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ತಿಮ್ಮಪ್ಪ ನಾರಾಯಣ ಹೊನ್ನಿಮನೆ, ಹಳೆಕೋಟೆ ಹನುಮಂತ ದೇವಸ್ಥಾನದ ಅಧ್ಯಕ್ಷ ಆರ್.ಕೆ. ನಾಯ್ಕ, ಮೀನುಗಾರಿಕಾ ಸಹಕಾರಿ ಸಂಘ, ಅಳ್ವೆಕೋಡಿಯ ಅಧ್ಯಕ್ಷ ವಿಠಲ ಎಸ್. ದೈಮನೆ, ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಮಾಜಿ ಅಧ್ಯಕ್ಷ ಗೋವಿಂದ ನಾಯ್ಕ, ಶ್ರೀ ಮಾರುತಿ ಸಹಕಾರಿ ಪತ್ತಿನ ಸಂಘದ ಅಧ್ಯಕ್ಷರು ಹಾಗೂ ಜಿ.ಎಸ್.ಬಿ. ಸಮಾಜದ ಮುಖಂಡ ಅಶೋಕ ಪೈ, ಶ್ರೀದುರ್ಗಾ ಮೊಗೇರ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಅಳ್ವೆಕೋಡಿಯ ಅಧ್ಯಕ್ಷ ಯಾದವ ವಿ. ಮೊಗೇರ, ಗುತ್ತಿಗೆದಾರ ಬಾಬು ಎಸ್. ಅಳುಕುಸನಮನೆ, ಜಿ.ಪಂ. ಮಾಜಿ ಸದಸ್ಯ ಅಲ್ಬರ್ಟ್ ಡಿಕೋಸ್ಟಾ, ಪ್ರಧಾನ ಅರ್ಚಕ ಗಜಾನನ ಪುರಾಣಿಕ ಮುಂತಾದವರು ಉಪಸ್ಥಿತರಿರುವರು ಎಂದೂ ತಿಳಿಸಲಾಗಿದೆ. ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ ಹಾಗೂ ಮಹಾ ಅನ್ನ ಸಂತರ್ಪಣೆ ನಡೆಯಲಿದೆ.

ಸಂಜೆ 6 ಗಂಟೆಗೆ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ತೀರ್ಥ ಸ್ವಾಮೀಜಿ ಇವರ ದಿವ್ಯ ಉಪಸ್ಥಿತಿಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮವನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಶ್ರೀ ಮಾರಿಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ರಾಮ ಎಂ. ಮೊಗೇರ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಸುನೀಲ ಬಿ. ನಾಯ್ಕ, ಅತಿಥಿಗಳಾಗಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಧರ್ಮದರ್ಶಿ ನಾರಾಯಣ ಜಿ. ದೈಮನೆ, ಶಿರಾಲಿ ಗ್ರಾಮ ಪಂಚಾಯತ ಅಧ್ಯಕ್ಷ ಭಾಸ್ಕರ ದೈಮನೆ, ನಿಚ್ಚಲಮಕ್ಕಿ ಶ್ರೀ ತಿರುಮಲ ದೇವಸ್ಥಾನದ ಅಧ್ಯಕ್ಷ ಅರುಣ ನಾಯ್ಕ, ಶ್ರೀ ಮಾರಿಜಾತ್ರಾ ಮಹೋತ್ಸವ ಸಮಿತಿಯ ಉಪಾಧ್ಯಕ್ಷ ಬಿಳಿಯಾ ಕೆ. ನಾಯ್ಕ, ಶ್ರೀ ಕಾಳಿಕಾಂಬಾ ದೇವಸ್ಥಾನ ಚೌಥನಿಯ ಅಧ್ಯಕ್ಷ ಗಜಾನನ ನಾಗಪ್ಪಯ್ಯ ಆಚಾರಿ, ಪರ್ಶಿನ್ ಬೋಟ್ ಯುನಿಯನ್ ಅಧ್ಯಕ್ಷ ಜಟ್ಕಾ ಮೊಗೇರ, ಅರ್ಚಕ ನರಸಿಂಹ ಪುರಾಣಿಕ, ಮೊಗೇರ ಸಮಾಜದ ಪ್ರಮುಖ ಎಫ್.ಕೆ. ಮೊಗೇರ, ನಾಮಧಾರಿ ಸಮಾಜದ ಪ್ರಮುಖ ಸುಬ್ರಾಯ ನಾಯ್ಕ ಮುಂತಾದವರು ಉಪಸ್ಥಿತರಿರುವರು ಎಂದೂ ತಿಳಿಸಲಾಗಿದೆ. ರಾತ್ರಿ 8.30 ಗಂಟೆಗೆ ಮಹಾಮಂಗಳಾರತಿ, 9.30 ಗಂಟೆಗೆ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರೀ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿ, ಸುಂಕದಕಟ್ಟೆ ಇವರಿಂದ ಯಕ್ಷಗಾನ ಬಯಲಾಟ 'ಸಂಪೂರ್ಣ ದೇವಿ ಮಹಾತ್ಮೆ' ನಡೆಯಲಿದೆ.

ಜ.15ರಂದು ಬುಧವಾರ ಬೆಳಿಗ್ಗೆ 10 ಗಂಟೆಗೆ ಶ್ರೀ ರಾಮ ಕ್ಷೇತ್ರ ಧರ್ಮಸ್ಥಳದ ಪೀಠಾಧೀಶ ಶ್ರೀ ಬ್ರಹ್ಮಾನಂದ ಸರಸ್ವತೀ ಸ್ವಾಮಿಜಿಯವರ ದಿವ್ಯ ಉಪಸ್ಥಿತಿಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ನೆರವೇರಿಸುವರು. ಅಧ್ಯಕ್ಷತೆಯನ್ನು ಶ್ರೀ ಮಾರಿಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ರಾಮ ಎಮ್. ಮೊಗೇರ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಜೆ.ಡಿ. ನಾಯ್ಕ, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಧರ್ಮದರ್ಶಿ ಹನುಮಂತ ಎಮ್. ನಾಯ್ಕ, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಧರ್ಮದರ್ಶಿ ಅರವಿಂದ ಆರ್. ಪೈ, ಮೊಗೇರ ಸಮಾಜದ ಅಧ್ಯಕ್ಷ ಅಣ್ಣಪ್ಪ ಮೊಗೇರ, ಶ್ರೀದುರ್ಗಾಪರಮೇಶ್ವರಿ ದೇವಸ್ಥಾನದ ಮಾಜಿ ಅಧ್ಯಕ್ಷ ನಾರಾಯಣ ಬೆರ್ಮಾ ಮೊಗೇರ, ಅರ್ಚಕ ಮುಕುಂದ ಪುರಾಣಿಕ, ತಂಜೀಮ್ ಸಂಸ್ಥೆಯ ಅಧ್ಯಕ್ಷ ಇನಾಯಿತ್‌ವುಲ್ಲಾ ಶಾಬಂದ್ರಿ, ಕಂಚಿನ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅಧ್ಯಕ್ಷ ನಾಗೇಶ ನಾರಾಯಣ ನಾಯ್ಕ ಮುಂತಾದವರು ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಲಾಗಿದೆ. ಜ.15ರಂದು ಸಾಯಂಕಾಲ 5 ಗಂಟೆಗೆ ಶ್ರೀ ಮಾರಿಕಾಂಬಾ ಮೂರ್ತಿಯ ವಿಸರ್ಜನಾ ಮೆರವಣಿಗೆ ಅಳ್ವೆಕೋಡಿಯಿಂದ ಸಣಬಾವಿ, ಯಕ್ಷೆಮನೆ ಮಾರ್ಗವಾಗಿ ಮಾವಿನಕಟ್ಟೆ ರಾಷ್ಟ್ರೀಯ ಹೆದ್ದಾರಿ ಮೂಲಕ ಶಿರಾಲಿ ಗುಡಿಹಿತ್ತಲ್ ಕಂಚಿನ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದವರೆಗೆ ಸಾಗಿ ಮಾರಿಕಾಂಬಾ ಮೂರ್ತಿಯ ವಿಸರ್ಜನೆ ಭಿಮಾ ನದಿಯಲ್ಲಿ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ. 365/2024
ಅರ್ಜಿದಾರರು : 1. ಶ್ರೀ ದೇವೆಂದ್ರಪ್ಪ ಸಾಸ್ವಿಹಳ್ಳಿ ತಂದೆ ಹನುಮಪ್ಪ ಚಿಗಟೇರಿ , ವಯಸ್ಸು: 58 ,ವರ್ಷ, ಇಬ್ಬರು ವೃತ್ತಿ: ವ್ಯವಸಾಯ, ವಾಸ: ಚಿಗಟೇರಿ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು :.ಮಾನ್ಯ ತಹಶಿಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು,ತಾಲೂಕು ಕಛೇರಿ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಅರ್ಜಿದಾರನ ತಂದೆಯಾದ ಸಾಸ್ವಿಹಳ್ಳಿ ಹನುಮಪ್ಪ ತಂದೆ ಲೇಟ್ ರಾಮಪ್ಪ ಇವರು ದಿನಾಂಕ: 03.04.2001 ರಂದು ಹರಪನಹಳ್ಳಿ ತಾಲೂಕು ಚಿಗಟೇರಿ ಗ್ರಾಮದಲ್ಲಿ ಅರ್ಜಿದಾರರ ತಮ್ಮ ಸ್ವ-ಗೃಹದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 01.02.2025 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಹಿರಿಯ ಶಿರಸ್ತೆದಾರರು
ಮಾನ್ಯ ,ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಪನಹಳ್ಳಿ,
ಅರ್ಜಿದಾರರ ಪರ ವಕೀಲರು
ಶ್ರೀ. ಮಂಜುನಾಥ್ ಎಸ್.ಬಾಗಳಿ
ಸ್ಥಳ: ಹರಪನಹಳ್ಳಿ ದಿನಾಂಕ: 29/11/2024

ವಿರಾಮ
ಪ್ರತಿ ಭಾನುವಾರ

CHANGE OF NAME
I, **MANOJ KAKATEEKAR P** (Old Name) have changed my name and shall hereafter be known as **MANOJ P KAKATEEKAR** (New Name) R/o Desai Oni, Kalghatgi, Dist: Dharwad Karnataka, Vide affidavit sworn before notary at Kalghatagi on 13/01/2025

CHANGE OF NAME
I, **DILSHADBANU HALIYAL** (Old Name) have changed my name and shall hereafter be known as **DILSHADBANU HAKIM** (New Name) R/o Shirastedar Galli, Madihal, Dharwad Karnataka, Vide affidavit sworn before notary Kanoganavar.I.G at Dharwad on 08/01/2025

CHANGE OF NAME
I, **DADAPEER HUSSAINSAB MAHALDAR S/O HUSSAINSAB MAHALDAR** (Old Name) have changed my name and shall hereafter be known as **DADAPEER MAHALDAR S/O HUSSAINSAB MAHALDAR** (New Name) R/o Malapur Last Bus Stop, Hashmi Nagar, 7th Cross, Near AFS Hall, Karnataka, Vide affidavit sworn before notary Venkatesh S Naik, at Dharwad on 13/01/2025

CHANGE OF NAME
I, **TASANIMBANU SHAIKH** (Old Name) have changed my name and shall hereafter be known as **TASNEEM NADAF** (New Name) R/o Taj Villa Kamalapur Double Road, Near Shanti Colony, 1st Right Cross, Dharwad Karnataka, Vide affidavit sworn before notary Kanoganavar.I.G at Dharwad on 08/01/2025

CHANGE OF NAME
I, **ZOYA DEVALAPUR D/O ANSAR DEVALAPUR** (Old Name) have changed my name and shall hereafter be known as **ZOYA ANSAR DEVALAPUR D/O ANSAR** (New Name) R/o Plot No.02, Yattinguda Road, AFS Marriage Hall, Malapur Last Bus Stop, Dharwad Karnataka, Vide affidavit sworn before notary Kanoganavar.I.G at Dharwad on 13/01/2025

ಗೋಸ್ವರ್ಗದಲ್ಲಿ ಇಂದು ಗೋ ದಿನ, ಸಂಕ್ರಾಂತಿ ಉತ್ಸವ

ಸಿದ್ದಾಪುರ: ತಾಲೂಕಿನ ಭಾನ್ಕುಳಿಯ ಶ್ರೀ ರಾಮದೇವಮಠ ಆವಾರದ ಗೋಸ್ವರ್ಗದಲ್ಲಿ ಜ.14 ರಂದು ಗೋ ದಿನ ಆಚರಣೆ-ಗೋ ಸಂಕ್ರಾಂತಿ ಉತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಗೋಮಾತೆಗೆ ಹೋಳಿಗೆ, ಕಡಬು, ರಸಮೇವನ್ನೊಳಗೊಂಡ ವಿಶೇಷ ಗೋಗ್ರಾಸವನ್ನು ನೀಡಲಾಗುತ್ತಿದೆ. ಸಾಲಂಕೃತ ಗೋದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಬೆಳಿಗ್ಗೆ 10.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ಗೋಸೇವೆಗಳು ನಡೆಯಲಿವೆ. ಸಂಜೆ 6.30 ರಿಂದ ಸುಷಿರ ಸಂಗೀತ ಪರಿವಾರ ಭುವನಗಿರಿ, ಕಲ್ಲಾರೆಮನೆ ಅವರ ಸಂಘಟನೆಯಲ್ಲಿ ಸಹಸ್ರಾಧಿಕ ದೀಪ ಕಾಂತಿಯಲಿ ದೈವಿಕ ಸ್ವರನಾದ ಹಣತೆಯ ಹಾಡು ಕಾರ್ಯಕ್ರಮ ಆಯೋಜಿಸಲಾಗಿದೆ. ಗಾಯಕರಾದ ಜಯರಾಮ ಭಟ್ಟ ಹೆಗ್ಗಾರಳ್ಳಿ, ಸಂಜಯ ಭಟ್ಟ ಬಿಳಗಿ, ಪರಮೇಶ್ವರ ಭಾನ್ಕುಳಿ, ನಾಗವೇಣಿ ಭಟ್ಟ, ಶೋಭಾ ಭಟ್ಟ, ಭಾರತಿ ಭಟ್ಟ, ರಾಜೇಶ್ವರಿ ಭಟ್ಟ, ವಿನುತಾ ಹೆಗಡೆ, ಶ್ರೀನಿಧಿ ರವೀಂದ್ರ ಗಾಯನ ಮಾಡಲಿದ್ದಾರೆ. ನಿತಿನ್ ಕಲಗದ್ದೆ ತಬಲಾದಲ್ಲಿ, ರವೀಂದ್ರ ಕೆರೆಕೋಣ ಕೊಳಲಿನಲ್ಲಿ ಸಹಕರಿಸಲಿದ್ದಾರೆ. ರಾತ್ರಿ ಭಾರತ-ಗೋವು-ದೀಪದ ಅನ್ಯೋನ್ಯತೆಯನ್ನು ವರ್ಣಿಸುವ ಗೋದೀಪ ಭಾರತ ಕಾರ್ಯಕ್ರಮ ಜರುಗಲಿದೆ. ಯಾವತ್ತೂ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳು, ಸಂಗೀತಾಸಕ್ತರು ಪಾಲ್ಗೊಂಡು ಯಶಸ್ವಿಗೊಳಿಸುವಂತೆ ಸಂಘಟಕರು ಕೋರಿದ್ದಾರೆ.

ಕುಮಟಾ, ಹೊನ್ನಾವರ: ವಿದ್ಯುತ್ ವ್ಯತ್ಯಯ ನಾಳೆ

ಕಾರವಾರ: ಕುಮಟಾ ಕೆ.ಪಿ.ಟಿ.ಸಿ.ಎಲ್ 110 ಕೆ.ವಿ ಉಪ ಕೇಂದ್ರದಲ್ಲಿ ಶಕ್ತಿ ಪರಿವರ್ತಕ-1 ರ ನಿರ್ವಹಣೆ ಕಾಮಗಾರಿ ಇರುವುದರಿಂದ ಜ.15 ರಂದು ಕುಮಟಾ ಹಾಗೂ ಹೊನ್ನಾವರದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಕುಮಟಾ ಉಪವಿಭಾಗದ ನಗರ ಶಾಖೆಯ ಇಂಡಸ್ಟ್ರೀಯಲ್ ಫೀಡರ, ಗ್ರಾಮೀಣ ಶಾಖೆಯ ಹೆಗಡೆ, ಮಿರ್ಜಾನ್, ಕತಗಾಲ, ವಾಲ್ಗಳ್ಳಿ ಫೀಡರಿನ ಭಾಗಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತ್ತು ಕುಮಟಾ ನಗರ ಶಾಖೆಯ ಕುಮಟಾ ಟೌನ್, ಚಿತ್ರಗಿ, ಮತ್ತು ಗ್ರಾಮೀಣ ಶಾಖೆಯ ಧಾರೇಶ್ವರ ಫೀಡರಿನ ಭಾಗಗಳಲ್ಲಿ ಮತ್ತು 33/11 ಕೆ.ವಿ ಗೋಕರ್ಣ ಉಪ ಕೇಂದ್ರದ 11 ಕೆ.ವಿ ಮಾರ್ಗದಲ್ಲಿ ಗೋಕರ್ಣ, ಮಾದನಗೇರಿ, ತದಡಿ, ಬಂಕಿ ಕೊಡ್ಲ, ಬಿಜ್ಜೂರು, ಓಂ ಬೀಚ್, ಗಂಗಾವಳಿ ಫೀಡರಿನ ಎಲ್ಲಾ ಭಾಗಗಳಲ್ಲಿ ಹಾಗೂ ಮರಾಕಲ ಉಪಕೇಂದ್ರದ 11 ಕೆ.ವಿ ಮಾರ್ಗದಲ್ಲಿ ಸಂತೆ ಗುಳಿ, ಕಲ್ಲಬ್ಬೆ, ಹೊದ್ಕೆ-ಶಿರೂರು, ಸಂತೇಗುಳಿ, ಎಲ್ಲಾ ಭಾಗದಲ್ಲಿ ಜ.15 ರಂದು ಬೆಳಗ್ಗೆ 9.45 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ವಾಗಲಿದೆ ಗ್ರಾಹಕರು ಸಹಕರಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರು(ವಿ), ಹೆಸ್ಕಾಂ ಹಾಗೂ ಕೆಪಿಟಿಸಿಎಲ್, ಕುಮಟಾ ಇವರು ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ. ಹೊನ್ನಾವರದಲ್ಲಿ ವಿದ್ಯುತ್ ವ್ಯತ್ಯಯ: ಹೊನ್ನಾ ವಾರ ಉಪ-ವಿಭಾಗ ವ್ಯಾಪ್ತಿಯಲ್ಲಿ 110 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದ ವಿದ್ಯುತ್ ಪರಿವರ್ತಕ-1 ಇದರ ತುರ್ತುನಿರ್ವಹಣಾ ಕೆಲಸ ನಿಮ್ಮಿತ್ತ ಮಾವಿನ ಕುರ್ವಾ, ಸಾಲ್ಕೋಡ, ಕಡ್ಲೆ, ಹಡಿನಬಾಳ ಮತ್ತು ಸುಬ್ರಹ್ಮಣ್ಯ ಫೀಡರುಗಳು ವ್ಯಾಪ್ತಿಗಳಲ್ಲಿ ಹಾಗೂ 33 ಕೆ.ವಿ ವಿದ್ಯುತ್ ವಿತರಣಾ ಉಪ-ಕೇಂದ್ರ, ಗೇರುಸೊಪ್ಪ ವಿದ್ಯುತ್ ವಿತರಣಾ ಕೇಂದ್ರದ ನಿರ್ವಹಣೆಯ ಜ.15 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಭೂ ಸಂರಕ್ಷಣಾ ಯೋಜನೆಗೆ ಚಾಲನೆ

ಭಟ್ಕಳ: ರಾಜ್ಯ ಸರ್ಕಾರ ಜಾರಿಗೆ ತಂದ ಭೂ ಸಂರಕ್ಷಣಾ ಯೋಜನೆಗೆ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಭಟ್ಕಳ ತಹಸೀಲ್ದಾರ ಕಚೇರಿಯಲ್ಲಿ ದಾಖಲಾತಿಯನ್ನು ಸ್ಕ್ಯಾನ್ ಮಾಡುವುದರ ಮೂಲಕ ಚಾಲನೆ ನೀಡಿದರು.

ಅನಂತರ ಮಾತನಾಡಿದ ಅವರು ಭೂ ದಾಖಲೆಗಳಿಗಾಗಿ ಸಾರ್ವಜನಿಕರ ಕಚೇರಿ ಅಲೆದಾಟ ತಪ್ಪಿಸುವ ಸಲುವಾಗಿ ನಮ್ಮ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ. ಸಾರ್ವಜನಿಕರಿಗೆ ಅವರ ಭೂಮಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ಒಂದೇ ಕಿಟಕಿಯಲ್ಲಿ ಕ್ಷಣ ಮಾತ್ರದಲ್ಲಿ ಕೈಗೆ ಸಿಗಬೇಕು. ಮತ್ತು ಅವರು ಭೂ ದಾಖಲೆಗಾಗಿ ವ್ಯಥಾ ಅಲೆದಾಟ ಮಾಡದೇ, ಏಜೆಂಟರ್ ಮೋರೆ ಹೋಗದೆ ಸುಲಭದಲ್ಲಿ ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಈ ಯೋಜನೆ ಆರಂಭಿಸಲಾಗಿದೆ ಎಂದರು. ಭಟ್ಕಳದಲ್ಲಿ ಭೂ ಸಂರಕ್ಷಣಾ ದಾಖಲಾತಿ ಸ್ಕ್ಯಾನಿಂಗ್ ಈಗಾಲೇ ಆರಂಭಗೊಂಡಿದ್ದು, ಜೂನ್ ಅಂತ್ಯದ ವೇಳೆಗೆ ಎಲ್ಲಾ ದಾಖಲಾತಿಗಳು ಕಂಪ್ಯೂಟರೀಕೃತಗೊಂಡು ಸಾರ್ವಜನಿಕರಿಗೆ ಸಿಗಲಿದೆ ಎಂದರು.

ಈ ಸಂದರ್ಭದಲ್ಲಿ ಭಟ್ಕಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ ನಾಯ್ಕ, ಭಟ್ಕಳ ತಹಸೀಲ್ದಾರ ನಾಗೇಂದ್ರ ಶೆಟ್ಟಿ, ಭಟ್ಕಳ ಡಿವೈಎಸ್ಪಿ ಮಹೇಶ, ಶಿರಸ್ತೆದಾರ ಪ್ರವೀಣ ಸೇರಿದಂತೆ ಕಂದಾಯ ಸಿಬ್ಬಂದಿಘಳೂ ಇದ್ದರು.

ಲಂಚ ಪಡೆದ ಅರಣ್ಯ ಅಧಿಕಾರಿಗೆ ಶಿಕ್ಷೆ ಪ್ರಕಟ

ಕಾರವಾರ: ಕಾಡಿನಿಂದ ಕಟ್ಟಿಗೆಗಳನ್ನು ತಂದಿರುವುದಕ್ಕೆ ಪ್ರಕರಣ ದಾಖಲಿಸುವ ಕುರಿತು ಬೆದರಿಸಿ ಲಂಚಕ್ಕೆ ಬೇಟಿಕೆ ಇಟ್ಟ ದಾಂಡೇಲಿ ವಲಯದ ಉಪ ಅರಣ್ಯಾಧಿಕಾರಿ ಹಾಗೂ ಅರಣ್ಯ ರಕ್ಷಕನಿಗೆ ಭ್ರಷ್ಟಚಾರ ಪ್ರತಿಬಂಧಕ ಕಾಯಿದೆ 2 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 5000 ರು ದಂಡ ಹಾಗೂ ದಂಡ ಪಾವತಿಸಲು ವಿಫಲವಾದಲ್ಲಿ ಹೆಚ್ಚುವರಿ 3 ತಿಂಗಳ ಕಾರಾವಾಸ ಶಿಕ್ಷೆ. 2 ವರ್ಷಗಳ ಕಠಿಣ ಕಾರಾಗೃಹ ವಾಸ ಹಾಗೂ 5,000 ರು. ದಂಡ ವಿಧಿಸಿ ಹಾಗೂ ದಂಡ ಪಾವತಿಸಲು ವಿಫಲವಾದಲ್ಲಿ ಹೆಚ್ಚುವರಿ 3 ತಿಂಗಳ ಕಾರಾ ವಾಸ ಶಿಕ್ಷೆ ವಿಧಿಸಿ, ವಿಶೇಷ ಮತ್ತು ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾಧೀಶ ಡಿ.ಎಸ್.ವಿಜಯ ಕುಮಾರ್ ತೀರ್ಪು ನೀಡಿದ್ದಾರೆ.

ಪ್ರಕರಣ ಹಿನ್ನಲೆ: ಹೊಸಕೊಣಪ ಗ್ರಾಮದ ಸುನೀಲ ತಂದೆ ತಾತಪ್ಪ ಕಾಂಬಳೆ ಅವರು ತಮ್ಮ ಮನೆಗೆ ರಿಪೇರಿ ಮಾಡುವ ಸಲುವಾಗಿ ಇಟ್ಟಂಗಿ ಸುಡಲು ತಮ್ಮ ಮನೆ ಬಳಿಯ ಅರಣ್ಯದಲ್ಲಿ ತುಂಡಾಗಿ ಬಿದ್ದ ಕರಮಳ್ ಮರದ ಸೊಂಟೆ ಗಳನ್ನು ತಂದಿದ್ದು ಈ ಬಗ್ಗೆ ಅಪಾಧಿತರಾದ ದಾಂಡೇಲಿಯ ಉಪ ವಲಯ ಅರಣ್ಯಾಧಿಕಾರಿ ಯಲ್ಲಪ್ಪ ತುಳಸಿಗೇರಿ ಕಲಾಲ ಹಾಗೂ ಅರಣ್ಯ ರಕ್ಷಕ ಶಿವ ಶರಣ ಅವರು ಕಾಡಿನಿಂದ ಕಟ್ಟಿಗೆಗಳನ್ನು ತಂದಿ ರುವ ಬಗ್ಗೆ ಬೆದರಿಸಿ 10,000 ಲಂಚದ ಹಣ ಬೇಡಿಕೆ ಇಟ್ಟಿದ್ದು, ಈ ಕುರಿತಂತೆ ಆಪಾದಿತರ ಬಗ್ಗೆ ಕಾರವಾರದ ಭ್ರಷ್ಟಚಾರ ನಿಗ್ರಹ ದಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕರ್ನಾಟಕ ಲೋಕಾಯುಕ್ತ ಸಂಸ್ಥೆ ಪರವಾಗಿ ಲಕ್ಷ್ಮೀಕಾಂತ ಎಮ್. ಪ್ರಭು ವಾದ ಮಂಡಿಸಿದರು.

ಸಮಾಚಾರ ಸಣ್ಣದಲ್ಲ

ರಾಷ್ಟ್ರೀಯ ಯುವ ದಿನಾಚರಣೆ

ಧಾರವಾಡ: ಭಾರತವು ಇಂದು ಜಾಗತಿಕವಾಗಿ ಬೆಳೆಯಲು ಸ್ವಾಮಿ ವಿವೇಕಾನಂದರ ಆದರ್ಶಗಳೇ ಕಾರಣವಾಗಿದೆ. ಸ್ವಾಮಿ ವಿವೇಕಾನಂದರು ಇಡೀ ದೇಶವನ್ನೇ ಒಂದು ಮನೆಯೆಂದು ತಿಳಿದುಕೊಂಡು ಆ ಮನೆಯ ಮೂಲಕ ಜಗತ್ತಿನ ಕಲ್ಯಾಣ ಮಾಡಲು ಹೊರಟರ ಎಂದು ಚಿಂತಕ ರಾದ ಕಿರಣ ಕುಮಾರ ವಿವೇಕವಂಶಿ ಇವರು ಅಭಿಪ್ರಾಯಿ ಸಿದರು. ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ನಡೆದ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮದ ವಕ್ತಾರರಾಗಿ ಅವರು ಮಾತನಾಡಿ, ವಿವೇಕಾನಂದರ ತತ್ವಾದರ್ಶಗಳನ್ನು ನಾವೆಲ್ಲ ರೂಢಿಸಿಕೊಂಡು ರಾಷ್ಟ್ರವನ್ನು ಪರಮ ವೈಭವದ ಕಡೆ ತೆಗೆದುಕೊಂಡು ಹೋಗುವ ಗುರಿಯ ಕಡೆಗೆ ಮುನ್ನಡೆಯಬೇಕಾಗಿದೆ ಎಂದರು. ಶಾಲೆಯಲ್ಲಿ ಕಳೆದ 3 ದಿನಗಳಿಂದ ವಿವೇಕ ಚಿಂತನ ಕಾರ್ಯಕ್ರಮ, ಚಿತ್ರಕಲೆ ಸ್ಪರ್ಧೆ, ಮಕ್ಕಳಿಗಾಗಿ ಮನರಂ ಜನಾ ಆಟಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಉಪ ಪ್ರಾಚಾರ್ಯರಾದ ಶ್ರೀಕೃಷ್ಣ ಜೋಶಿ, ಹಿರಿಯ ಶಿಕ್ಷಕ ಸುನಿಲ ಕುಮಾರ ಶಿರಾಲಿ, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ ಹಾಗೂ ಎಲ್ಲ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ಚಾಗಿ ಗೀತೆಯ ಗಾಯನ ನಡೆಯಿತು. ಶಿಕ್ಷಕ ವಿನಾಯಕ ಭಟ್ ಕಾರ್ಯಕ್ರಮ ನಡೆಸಿಕೊಟ್ಟರು.

ಶಿಕ್ಷಣ ಮಗುವಿನ ಅಭಿವೃದ್ಧಿಗೆ ಪೂರಕ

ಧಾರವಾಡ: ನಗರದ ಜಯದೇವಿ ತಾಯಿ ಬಾಲಕಿಯರ ಪ್ರೌಢ ಶಾಲೆಯ ಶಾಲಾ ವಾರ್ಷಿಕೋತ್ಸವ ಎಸ್ ಚಿಕ್ಕಮಠ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಅಥಿತಿಗಳಾಗಿ ಆಗಮಿಸಿದ ನಿವೃತ್ತ ಆಯುಕ್ತರಾದ ವಿ.ಎ.ಮಾಚಕನೂರ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಕನ್ನಡ ಮಾಧ್ಯಮದ ವಿಧ್ಯಾಭ್ಯಾಸ ಆತ್ಮ ವಿಶ್ವಾಸ ಗೆಲ್ಲುವ ಚಲ ಬುನಾದಿ ಕೌಶಲಗಳ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಆತ್ಮವಿಶ್ವಾಸ ಮೂಡಿಸುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಇತರೆ ದಾನಿಗಳು ಕೊಡಮಾಡಿದ ಒಟ್ಟು 40,000 ರು.ಗಳ ನಗದು ಪುರಸ್ಕಾರ ವಿದ್ಯಾರ್ಥಿನಿಯರಿಗೆ ನೀಡಲಾಯಿತು. ಆಡಳಿತ ಮಂಡಳಿಯ ಸರ್ವ ಸದಸ್ಯರು ಉಪಸ್ಥಿತರಿದ್ದರು. ಮುಖ್ಯಾಧ್ಯಾಪಕ ಸುನೀತ ಸುರಪುರಮಠ ಪರಿಚಯ ಮತ್ತು ಸ್ವಾಗತ ಮಾಡಿದರು. ಹೇಮಾ ತೊಟಗೇರ ವರದಿ ವಾಚನ ಮಾಡಿದರು. ಎಸ್.ಎಸ್. ಚೌದರಿ ನಗದು ಪುರಸ್ಕಾರ ವರದಿ ನೀಡಿದರು. ಮೀನಾಕ್ಷಿ ಹಿರೇಮಠ ನಿರೂಪಿಸಿದರು ವಿ.ವಿ.ಕಿಲ್ಲೇಡ ವಂದನಾರ್ಪಣೆ ಮಾಡಿದರು.

ಯುವನಿಧಿ ವಿಶೇಷ ನೋಂದಣಿ ಅಭಿಯಾನ

ಗದಗ: ಕರ್ನಾಟಕ ಸರಕಾರದ ಖಾತರಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆ ರಾಜ್ಯದ ನಿರುದ್ಯೋಗಿ ಯುವಕ/ಯುವತಿಯರಿಗೆ ನಿರುದ್ಯೋಗಿ ಭತ್ಯೆ ನೀಡಿ ಸಬಲೀಕರಣಗೊಳಿಸಲು ಜಾರಿಗೊಳಿಸಿದ ಮಹತ್ತರ ಯೋಜನೆಯಾಗಿರುತ್ತದೆ. ಈ ಯೋಜನೆಯಡಿಯಲ್ಲಿ ನೋಂದಣಿಯಾಗುವ ಅರ್ಹ ಡಿಪ್ಲೋಮಾದವರಿಗೆ 1500 ರು. ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಸಂಬಂಧಿಸಿದ ಇಲಾಖೆಯಿಂದ ಪಾವತಿಸಲಾಗುತ್ತಿದೆ. ಯುವನಿಧಿ ವಿಶೇಷ ನೋಂದಣಿ ಅಭಿಯಾನ ಜ. 06 ರಿಂದ 20 ವರೆಗೆ ಏರ್ಪಡಿಸಲಾಗಿದ್ದು, ಡಿಪ್ಲೊಮಾ ತೇರ್ಗಡೆ ಹೊಂದಿದ ಅರ್ಹ ವಿದ್ಯಾರ್ಥಿಗಳಿಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಲು ಸರಕಾರಿ ಪಾಲಿಟೆಕ್ನಿಕ್ ಗದಗ ಸಂಸ್ಥೆಯಲ್ಲಿ ವಿಶೇಷ ನೋಂದಣಿ ಸಹಾಯ ಕೇಂದ್ರ ತೆರೆಯಲಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅತಿ ಹೆಚ್ಚಿನ ನೋಂದಣಿ ಮಾಡಿಕೊಳ್ಳಲು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗಿರುತ್ತದೆ.

ಗ್ರಾಮ ಸಹಾಯಕ ಹುದ್ದೆಗೆ ಅರ್ಜಿ

ಹಾವೇರಿ: ಬ್ಯಾಡಗಿ ತಾಲೂಕಿನ ಬನ್ನಿಹಟ್ಟಿ ಸಾಜಾದಲ್ಲಿ ಖಾಲಿ ಇರುವ ಗ್ರಾಮ ಸಹಾಯಕ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಯು 7ನೇ ತರಗತಿ ತೇರ್ಗಡೆಯಾಗಿರಬೇಕು ಹಾಗೂ 25 ವರ್ಷದೊಳಗಿರಬೇಕು. ಬನ್ನಿಹಟ್ಟಿ ಸಾಜಾದ ಖಾಯಂ ರಹವಾಸಿಯಾಗಿರಬೇಕು. ಮಹಾರಕಿ, ತಳವಾರಕಿ, ವಾಲಿಕಾರಕಿ ವಂಶಸ್ಥರು, ಮಾಜಿ ಗ್ರಾಮ ಸಹಾಯಕರ ಸಹಾನುಭೂತಿ ಭತ್ಯೆ ಪಡೆದ ನೌಕರರ ಮಕ್ಕಳಿಗೆ ಆದ್ಯತೆ ಇರುತ್ತದೆ. ಒಂದು ವೇಳೆ ಈ ವರ್ಗದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಇತರೆ ವರ್ಗದ ಅಭ್ಯರ್ಥಿ ಪರಿಗಣಿಸಲಾಗುವುದು. ಆಸಕ್ತರು ಅರ್ಜಿಯೊಂದಿಗೆ ಜನನ ದಾಖಲೆ, ಶೈಕ್ಷಣಿಕ ವಿದ್ಯಾರ್ಹತೆ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ ಹಾಗೂ ರಹವಾಸಿ ಪ್ರಮಾಣಪತ್ರ ಸೇರಿದಂತೆ ಅಗತ್ಯ ದಾಖಲೆಯೊಂದಿಗೆ ಫೆ. 15 ರೊಳಗಾಗಿ ಬ್ಯಾಡಗಿ ತಹಸೀಲ್ದಾರ ಕಚೇರಿಗೆ ಸಲ್ಲಿಸಬೇಕು ಎಂದು ಬ್ಯಾಡಗಿ ತಹಸೀಲ್ದಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಕೆ.ಎಸ್. ಈಶ್ವರಪ್ಪ } ಮಾಜಿ ಡಿಸಿಎಂ

ಗೋವಿನ ಬಗ್ಗೆ ಕಾಂಗ್ರೆಸ್ ಸರಕಾರ ಕೈಕೊಂಡ ಧೋರಣೆಯೇ ಕಿಡಿಗೇಡಿಗಳಿಗೆ ಸ್ಪೂರ್ತಿ. ಗೋವನ್ನು ನಾವು ತಾಯಿ ಎಂದು ಕರೆಯುತ್ತೇವೆ. ಗೋವಿಗೆ ಈ ರೀತಿ ಮಾಡಿದ್ದರಿಂದ ಇಡೀ ಹಿಂದೂ ಸಮಾಜಕ್ಕೆ ಅಪಮಾನವಾಗಿದೆ. ಕೆಚ್ಚಲು ಕತ್ತರಿಸಿ, ಕಾಲಿಗೆ ಗಾಯ ಮಾಡಿರುವುದು ಉದ್ದೇಶ ಪೂರಕವಾಗಿ ಹಿಂದೂ ಸಮಾಜಕ್ಕೆ ಅಪಮಾನ ಮಾಡುವುದಾಗಿದೆ.

ವಿ

ಎಸಿ ರೂಂನಲ್ಲಿ ವರದಿ ಸಿದ್ಧಪಡಿಸಿದ ಆಯೋಗ: ಶಾಸಕ ಸಿ.ಸಿ.ಪಾಟೀಲ್

ಕಾಂತರಾಜ ಜಾತಿಗಣತಿ ಅವೈಜ್ಞಾನಿಕ

ಗದಗ: ಕಾಂತರಾಜ ಆಯೋಗ ಮಾಡಿದ ಜಾತಿಗಣತಿ ಅವೈಜ್ಞಾನಿಕವಾಗಿದ್ದು, ಜಾತಿಗಣತಿಯನ್ನು ಎಸಿ ರೂಂನಲ್ಲಿ ಕುಳಿತು ವರದಿ ಸಿದ್ಧಪಡಿಸಿದ್ದಾರೆ ಎಂದು ಶಾಸಕ, ಮಾಜಿ ಸಚಿವ ಸಿ.ಸಿ ಪಾಟೀಲ್ ಹೇಳಿದರು.

ನಗರದ ಪತ್ರಿಕಾಭವನದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದೊಂದು ವಾರದಿಂದ ಕಾಂಗ್ರೆಸ್ ಪಕ್ಷದ ಬೆಳವಣಿಗೆ ಕಳವಳಕಾರಿಯಾಗಿವೆ ಒಂದು ಕಡೆ ಸಿಎಂ ಔತಣಕೂಟಕ್ಕೆ ಹೋದರೆ ಇನ್ನೊಂದು ಕಡೆ ದಲಿತ ಶಾಸಕರ ಔತಣಕೂಟಕ್ಕೆ ಪಕ್ಷದ ವರಿಷ್ಠರಿಂದ ಬ್ರೇಕ್ ಹಾಕಿಸಿದ್ದಾರೆ ಮುಖ್ಯಮಂತ್ರಿ ಗದ್ದುಗೆ ಕಿತ್ತಾಟ ನಡೆಯುತ್ತಿರುವುದನ್ನು ನೋಡಿದ್ದೇವೆ ಸಿಎಂ ತಮ್ಮ ಆಡಳಿತ ವೈಫಲ್ಯ ಮುಚ್ಚಿಡಲು ವಿಷಯವನ್ನು ಬೇರೆ ಬೇರೆ ಕಾಲಕ್ಕೆ ತಿರುಗಿಸುತ್ತಾ ಬಂದಿದ್ದಾರೆ ಹುಲಿ ಉಗುರು, ದರ್ಶನ್ ಕೇಸ್ ಸೇರಿ ಬೇರೆ ಬೇರೆ ವಿಷಯಗಳ ಬಗ್ಗೆ ರಾಜ್ಯದ ಗಮನ ಸೆಳೆದು ತಮ್ಮ ವೈಫಲ್ಯ ಮರೆಮಾಚೋ ಚಾಣಾಕ್ಷಣತ ತೋರಿಸಿದ್ದಾರೆ ಎಂದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಸಕ ಸಿಸಿ ಪಾಟೀಲ್ ಮಾತನಾಡಿದರು.

ಕಾಂತರಾಜ ಮಾಡಿದ ಜನಗಣತಿ ಅವೈಜ್ಞಾನಿಕವಾಗಿದ್ದು, ವೀರಶೈವ ಹಾಗೂ ಒಕ್ಕಲಿಗರಿಂದಲೂ ಜಾತಿ ಗಣತಿಗೆ ಆಕ್ಷೇಪ ಎತ್ತಿದ್ದನ್ನ ಸರಕಾರ, ಸಿಎಂ ಗಮನಿಸಬೇಕು ಸಮೀಕ್ಷೆಯನ್ನ ವೈಜ್ಞಾನಿಕ ಪಾರದರ್ಶಕ ನಡೆಸಲ್ಲ ಸಮಾಜದ ಎಲ್ಲ ವರ್ಗದ ಜನರಿಗೆ ನ್ಯಾಯ ಕೊಡಬೇಕಾದ್ದು ಸಿಎಂ ಜವಾಬ್ದಾರಿಯಾಗಿದ್ದು, ಗುಳೆ ಹೋದವರನ್ನ ಸಮೀಕ್ಷೆಯಲ್ಲಿ ಪರಿಗಣಿಸಿಲ್ಲ ವೀರಶೈವ ಲಿಂಗಾಯತರು ಸಾಮಾಜಿಕ, ಆರ್ಥಿಕ ಶೈಕ್ಷಣಿಕವಾಗಿ ಹಿಂದೆ ಉಳಿದಿದ್ದಾರೆ ಅನ್ನೋದನ್ನ ಹೋರಾಟದ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೇವೆ ಎಂದರು.

ಈ ಸಮೀಕ್ಷೆ ಒಪ್ಪಿದರೆ ವೀರಶೈವ ಲಿಂಗಾಯತ, ಒಕ್ಕಲಿಗ ಲಕ್ಷಾಂತರ ಮಂದಿಗೆ ಅನ್ಯಾಯ ಆಗುತ್ತದೆ ಕೆಲವು ಜಾತಿವಾರು ಜನಸಂಖ್ಯೆ ಸೋರಿಕೆ ಮಾಡಿ ಗೊಂದಲ ಮೂಡಿಸಲಾಗಿದೆ ವೀರಶೈವ ಲಿಂಗಾಯತ ಸಮುದಾಯದ 50% ಕ್ಕೂ ಹೆಚ್ಚು ಮನೆಗಳಿಗೆ ಇದುವರೆಗೂ ಭೇಟಿ ಕೊಟ್ಟಿಲ್ಲ ವರದಿ ಹಲವು ಲೋಪದೋಷಗಳಿಂದ ಕೂಡಿದೆ ಎಲ್ಲ ಪಕ್ಷಗಳ ವರಿಷ್ಠರಿಂದ ವರದಿ ವರದಿ ಸರಿ ಇಲ್ಲ ಅನ್ನೋ ಟೀಕೆಗಳು ಬಂದಿವೆ ಡಿಕೆಶಿ, ಶಾಮನೂರ ಶಿವಶಂಕರಪ್ಪನವರಿಂದ ಟೀಕೆ ಕೇಳಿದ್ದೇವೆ ವೈಜ್ಞಾನಿಕವಾಗಿ ಜಾತಿ ಗಣತಿ ಮಾಡಬೇಕು ಅಖಿಲ ಭಾರತ ಲಿಂಗಾಯತ ಮುಖಂಡರ ಸಭೆಯಲ್ಲಿ ಪಕ್ಷಾತೀತ ಹೋರಾಕ್ಕೆ ತೀರ್ಮಾನ ಮಾಡಲಾಗಿದೆ ಎಂದು ಹೇಳಿದರು.

> ಈಗ ಮತ್ತೆ ಜನರ ಭಾವನೆ ಬೇರೆ ಕಡೆ ತಿರುಗಿಸಲು ಜಾತಿ ಗಣತಿ ಅನುಷ್ಠಾನ ತೇಲಿಬಿಟ್ಟಿದ್ದಾರೆ ರಾಷ್ಟ್ರ ಮಟ್ಟದಲ್ಲೂ ಜಾತಿಗಣತಿ ಬಗ್ಗೆ ನಡೀತಿದೆ ಹಿಂದುಳಿದ ವರ್ಗಗಳ ಅಭಿವೃದ್ಧಿ ಆರ್ಥಿಕಥೆ, ಅವರ ಸಾಮಾಜಿಕ ಬದುಕು ಸುಂದರಗೊಳಿಸಲು ಬಿಜೆಪಿ ವಿರೋಧವಿಲ್ಲ ನಾವೂ ಕೂಡಾ ಅದಕ್ಕೆ ಬದ್ದರು ನಮ್ಮ ಪಕ್ಷದ ಪ್ರಣಾಳಿಕೆ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು.
> -ಸಿ.ಸಿ ಪಾಟೀಲ್, ಶಾಸಕ

ಇದೊಂದು ಪಾಪರ್ ಸರಕಾರ, ಮತಾಂಧರಿಗೆ ರಕ್ಷಣೆ ಕೊಡ್ತಿರೋ ಸರಕಾರ ಹಿಂದಿನ ಸರಕಾರ ಕೆಲಸ ಕೊಟ್ಟಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳುತ್ತಾರೆ ಅವರು ತನ್ನ ಕ್ಷೇತ್ರಕ್ಕೆ ರಸ್ತೆ ಬೇಕು, ಈಗ ಬಿಲ್ ಕೇಳಿದರೆ ಹಿಂದಿನ ಸರಕಾರ ಕೆಲಸ ಕೊಟ್ಟಿದೆ ಎನ್ನುವದು ಎಷ್ಟು ಸರಿ ಹಿಂದಿನ ಸರಕಾರ ಹೋಗಿ ಎರಡು ವರ್ಷ ಆಗೋಕೆ ಬಂತು ಟ್ಯಾಕ್ಸ್ ಕಲೆಕ್ಷನ್ ಎಲ್ಲಿಗೆ ಹೋಯಿತು ಯಾವ ಉದ್ದೇಶಕ್ಕಾಗಿ ಗುತ್ತಿಗೆದಾರರ ಬಿಲ್ ಪೆಂಡಿಂಗ್ ಇಟ್ಟಕೊಂಡು ಕುಳಿತಿದ್ದಾರೆ ಎನ್ನುವದು ಸ್ಪಷ್ಟಪಡಿಸಬೇಕು ಎಚ್ ಡಿ ಕುಮಾರಸ್ವಾಮಿ ಹೇಳಿದ್ದು ನಿಜಾನಾ ಗುತ್ತಿಗೆದಾರರು ಹೇಳಿದ್ದು ನಿಜಾನಾ?

ಹಗಲು ರಾತ್ರಿ ಸರಕಾರದ ಎಲ್ಲ ಕೆಲಸಕ್ಕೆ ಉಪಯೋಗ ಆಗೋರು ಅಂಗನವಾಡಿ ಕಾರ್ಯಕರ್ತೆಯರು ಅವರಿಗೆ 15 ಸಾವಿರ ಕೊಡೊದಕ್ಕೆ ಆಗುತ್ತಿಲ್ಲ, ಕೂಸನ್ನ ಕಟ್ಟಿಕೊಂಡು ಆಕೆ ನೌಕರಿ ಮಾಡಬೇಕು 12 ತಾಸು ಕೆಲಸ ಮಾಡಬೇಕು. ಡಿಸಿ, ತಹಸೀಲ್ದಾರ ಹೇಳಿದ್ದು ಕೇಳಬೇಕು ಅಂಗನವಾಡಿ ಕಾರ್ಯಕರ್ತರ ಜೀವನ ಕಷ್ಟದ ಜೀವನವಾಗಿದೆ ಆದರೆ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂಎಲ್ಎ ನ ಮಕ್ಕಳು, ಇವರಿಗೆ 25 ಸಾವಿರ ರು. ನೀಡುತ್ತಾರೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರುಡಗಿ, ಎಂ.ಎಸ್ ಕರಿಗೌಡ್ರ, ಅನಿಲ್ ಅಬ್ಬಿಗೇರಿ, ಮಹೇಶ ದಾಸರ, ರವಿ, ಶಿವು ಹಿರೇಮನಿ, ಸೇರಿದಂತೆ ಮುಂತಾದವರು ಇದ್ದರು.

ಡೆಂಘೀ ಪ್ರಕರಣ: ಸ್ಥಳೀಯರಿಂದ ಜಾಗೃತಿ ಜಾಥಾ

ಹಾವೇರಿ: ತಾಲೂಕಿನ ಬೆಳವಗಿ ಗ್ರಾಮದಲ್ಲಿ ಡೆಂಘೀ ಪ್ರಕರಣಗಳು ಕಾಣಿಸಿಕೊಂಡ ಹಿನ್ನಲೆ ಶಾಲಾ ಮಕ್ಕಳು ಹಾಗೂ ಶಿಕ್ಷಕರು, ಆಶಾ ಕಾರ್ಯಕರ್ತರು ಹಾಗೂ ಪ್ರಜ್ಞಾವಂತ ನಾಗರಿಕರೆಲ್ಲರೂ ಸೇರಿ ಡೆಂಘೀ ಜ್ವರ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಒತ್ತಾಯಿಸಿ ಗ್ರಾಮದ ಬೀದಿಯಲ್ಲಿ ಸಂಚರಿಸಿ ಜಾಗೃತಿ ಜಾಥಾ ಕಾರ್ಯಕ್ರಮ ನಡೆಸಿದರು. ಬೆಳವಗಿ ಗ್ರಾಮದಲ್ಲಿ ಕೆಲ ಜಾಗದಲ್ಲಿರುವ ಮಕ್ಕಳಿಗೆ ಡೆಂಘೀ ಜ್ವರ ಕಾಣಿಸಿಕೊಂಡರೂ ಗ್ರಾಮ ಪಂಚಾಯತಿ ಅವರು ಯಾವುದೇ ಮುಂಜಾಗ್ರತ ತೆಗೆದುಕೊಂಡಿಲ್ಲ. ಬೀದಿ ಗಟಾರಗಳ ಸ್ವಚ್ಚತೆ ಫಾಗಿಂಗ್, ವೈದ್ಯಕೀಯ ತಪಾಸಣೆ ಬಗ್ಗೆ ಯಾವುದೇ ಗಮನ ಹರಿಸಿಲ್ಲ. ಗ್ರಾಮದ ಆರೋಗ್ಯ ಬಗ್ಗೆ ನಿರ್ಲಕ್ಷ್ಯ ವಹಿಸಿರುವ ಪಿಡಿಒ ಅವರ ವಿರುದ್ಧ ಕ್ರಮ ತಗೆದುಕೊಳ್ಳಬೇಕು ಎಂದು ಜಾಥಾ ನಡೆಸಿ ನೀಲಪ್ಪ ದೊಡ್ಡಮರಿಯಮ್ಮನವರ ಒತ್ತಾಯ ಮಾಡಿದರು. ಪ್ರತಿಯೊಬ್ಬರು ಮನೆಯ ಸುತ್ತಮುತ್ತಲಿನ ಪ್ರದೇಶ ಸುಚಿತ್ವ ಕಾಪಾಡಿಕೊಳ್ಳಬೇಕು. ಒಂದೇ ಕಡೆ ನೀರು ನಿಲ್ಲದಂತೆ ಗಟಾರ ಸ್ವಚ್ಚತೆ ಇಟ್ಟುಕೊಳ್ಳಬೇಕು ಎಂದು ಜಾಥಾ ನಡೆಸುವ ಮೂಲಕ ಜನರಿಗೆ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಆರೋಗ್ಯ ಸಿಬ್ಬಂದಿ ಬಸವರಾಜ ಮಠಪತಿ, ಶಾಲಾ ಮುಖ್ಯೋಪಾಧ್ಯಯರು, ಶಿಕ್ಷಕರು, ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತರು ಹಾಜರಿದ್ದರು.

ಯುವ ಜನೋತ್ಸವದಲ್ಲಿ ಕವಿವಿ ಸಾಧನೆ

38ನೇ ದಕ್ಷಿಣ ಪೂರ್ವ ವಲಯದ ಯುವಜನೋತ್ಸವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ 56 ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಯಲ್ಲಿ ವಿಜೇತರಾಗಿದ್ದಾರೆ.

ಧಾರವಾಡ: ಬೆಂಗಳೂರಿನ ಕೆಂಗೇರಿ ಕ್ರೈಸ್ಟ್ ವಿಶ್ವವಿದ್ಯಾಲಯವು ಆಯೋಜಿಸಿದ ಡಿ.19 ರಿಂದ 23 ರವರೆಗೆ ನಡೆದ 38ನೇ ದಕ್ಷಿಣ ಪೂರ್ವ ವಲಯದ ಯುವಜನೋತ್ಸವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ 56 ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಯಲ್ಲಿ ವಿಜೇತರಾಗಿದ್ದಾರೆ. ಈ ಯುವ ಜನೋತ್ಸವದಲ್ಲಿ 18 ಕಂಚಿನ ಪದಕ, 04 ಟ್ರೋಫಿ ಹಾಗೂ 26 ಮೆರಿಟ್ ಪ್ರಮಾಣಪತ್ರಗಳನ್ನು ಪಡೆದಿದ್ದಾರೆ.

ಬೆಂಗಳೂರಿನಲ್ಲಿ ನಡೆದ ದಕ್ಷಿಣ ವಲಯದ ಯುವ ಜನೋತ್ಸವದಲ್ಲಿ ವಿಜೇತರಾದ ಸ್ಪರ್ಧಿಗಳು ಮುಂಬರುವ ಮಾ.3 ರಿಂದ 7 ರವರೆಗೆ ಉತ್ತರ ಪ್ರದೇಶದ ನೋಯ್ಡಾದ ಅಮೇಠಿ ವಿಶ್ವವಿದ್ಯಾಲಯದಲ್ಲಿ ನಡೆಯುವ ರಾಷ್ಟ್ರಮಟ್ಟದ ಅಂತರ ವಿಶ್ವವಿದ್ಯಾಲಯ ಯುವಜನೋತ್ಸವದಲ್ಲಿ ಏಕವ್ಯಕ್ತಿ ಶಾಸ್ತ್ರೀಯ ವಾದ್ಯ, ಏಕವ್ಯಕ್ತಿ ಶಾಸ್ತ್ರೀಯ ಗಾಯನ, ಏಕವ್ಯಕ್ತಿ ಪಾಶ್ಚಾತ್ಯ ಗಾಯನ ಹಾಗೂ ಜಾನಪದ ವಾದ್ಯವೃಂದ ತಂಡವು ಭಾಗವಹಿಸಲಿದೆ.

ವ್ಯವಸ್ಥಾಪಕರಾಗಿ ಡಾ.ದಿನೇಶ್ ನಾರಾಯಣಕರ್ ಮತ್ತು ಪ್ರೊ.ಜ್ಯೋತಿ.ಎಸ್ ಅವರ ನೇತೃತ್ವದಲ್ಲಿ ದಕ್ಷಿಣ ಪೂರ್ವ ವಲಯದ ಯುವ ಜನೋತ್ಸವದಲ್ಲಿ ಕವಿವಿ ತಂಡವು ಭಾಗವಹಿಸಿತ್ತು.

ಈ ಸಂದರ್ಭದಲ್ಲಿ ಕವಿವಿ ಪ್ರಭಾರಿ ಕುಲಪತಿ ಪ್ರೊ.ಜಯಶ್ರೀ ಎಸ್, ಪ್ರೊ.ಬಿ.ಎಮ್.ಪಾಟೀಲ್, ಪ್ರೊ.ಅರವಿಂದ ಮೂಲಿಮನಿ, ಕವಿವಿ ಹಣಕಾಸು ಅಧಿಕಾರಿ ಪ್ರೊ.ಸಿ.ಕೃಷ್ಣಮೂರ್ತಿ, ವಿದ್ಯಾರ್ಥಿ ಕಲ್ಯಾಣ ವಿಭಾಗದ ನಿರ್ದೇಶಕ ಪ್ರೊ.ಎಸ್.ಕೆ. ಪವಾರ್, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷ ಪ್ರೊ.ಈಶ್ವರ್ ಬೈದರಿ, ಉಪಾಧ್ಯಕ್ಷ ಪ್ರೊ. ಚೇತನ್ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಧಾರವಾಡದ ಅಥಣಿಯ ಮೋಟಗಿಯ ಮಠದಲ್ಲಿ ನಡೆಯುತ್ತಿರುವ ಶ್ರೀ ಲಿಂ.ಚನ್ನಬಸವ ಶಿವಯೋಗಿಗಳ ಲಿಂಗೈಕ್ಯ ಶತಮಾನೋತ್ಸವದ ಅಂಗವಾಗಿ ಆಯೋಜಿಲಾಗಿದ್ದ ಸಾಮರಸ್ಯದ ಸಮಾಜೋತ್ಸವದ ಸಮಾಜ ಸೇವಾಭೂಷಣ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಧಾರವಾಡದ ಜನತಾ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಡಾ.ಅಜೀತ ಪ್ರಸಾದರವರಿಗೆ ಅವರ ಸಮಾಜಸೇವೆ ಪರಿಗಣಿಸಿ ಕರ್ನಾಟಕದ ಸಮಸ್ತ ಸ್ವಾಮೀಜಿಯವರ ಪರವಾಗಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ್ ಅವರು ಸಮಾಜ ಸೇವಾಭೂಷಣ ಪ್ರಶಸ್ತಿ ನೀಡಿ ಗೌರವಿಸಿದರು.

ಬದುಕಿನಲ್ಲಿ ಮೌಲ್ಯಗಳ ಅನುಪಾಲನೆ ಅಗತ್ಯ

ಧಾರವಾಡ: ಭಾರತೀಯ ದಾರ್ಶನಿಕ ಜಗತ್ತು ಪ್ರತಿಪಾದಿಸಿದ ಮೇರು ಜೀವನ ಮೌಲ್ಯಗಳು ಮನುಕುಲದ ಜೊತೆಗಿವೆ. ಮೌಲ್ಯಾಧಾರಿತ ಜೀವನ ವಿಧಾನಕ್ಕೆ ಯಾವಾಗಲೂ ಶ್ರೇಷ್ಠತೆಯ ಮೆರಗು ಪ್ರಾಪ್ತವಾಗುತ್ತದೆ. ಹಾಗಾಗಿ ಬದುಕಿನಲ್ಲಿ ಮೌಲ್ಯಗಳ ಅನುಪಾಲನೆ ಅಗತ್ಯವಾಗಿದೆ ಎಂದು ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಶ್ರೀಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದಿಸಿದರು.



ಹಳೆಯ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ ಸಮಾರಂಭವನ್ನು ಶ್ರೀಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಅಮ್ಮಿನಬಾವಿ ಗ್ರಾಮದ ಶ್ರೀಶಾಂತೇಶ್ವರ ಪ್ರೌಢ ಶಾಲೆಯಲ್ಲಿ ಅಮ್ಮಿನಬಾವಿ ಹಾಗೂ ಮರೇವಾಡ ಗ್ರಾಮಗಳ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 1995-96ನೆಯ ವರ್ಷದ ಹಳೆಯ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ ಸಮಾರಂಭ ಉದ್ಘಾಟಿಸಿದರು.

ಗುರುವಂದನೆ- ಎಸ್.ಎಲ್.ಎಮ್ಮಿ, ಎನ್.ಬಿ.ಪವಾರ, ಆರ್.ಎಸ್. ಗುಲಗಂಜಿಕೊಪ್ಪ, ಪುಷ್ಪಾ ಬಾಗಲವಾಡಿ, ವ್ಹಿ.ಬಿ. ಕೆಂಚನಗೌಡ್ರ, ಎಸ್.ವೈ ಪೂಜಾರ, ಚೆನ್ನಮ್ಮ ನೀರಲಕಟ್ಟಿ, ಸುಮನ್ ಬೋಂಗಾಳೆ, ಎನ್.ಸಿ. ಪಾಟೀಲ, ಜಿ.ರಾ.ಪದಕಿ, ಎಸ್.ಎಸ್. ಅಂಗಡಿ, ತುಳಸಾ ಮುತಾಲಿಕದೇಶಪಾಂಡೆ, ಜೀಜಾಬಾಯಿ ಜಾಧವ, ಗುರುಮೂರ್ತಿ ಯರಗಂಬಳಿಮಠ, ಚೆನ್ನಮ್ಮ ಬೈಲೂರ, ಪ್ರೇಮಾ ಗುಡಿ, ಮಲ್ಲಿಕಾರ್ಜುನ ಮಠಪತಿ ಅವರನ್ನು ಗೌರವಿಸಿ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸಿದರು.

> ಬದುಕಿಗೆ ಮೌಲ್ಯಗಳ ಅವಶ್ಯಕತೆ ಎಷ್ಟು ಮುಖ್ಯವೋ, ಹಾಗೇ ಗುರುವಿನ ಮಾರ್ಗದರ್ಶನವೂ ಅಷ್ಟೇ ಮುಖ್ಯ. ಲೌಕಿಕ ಇಲ್ಲವೇ ಅಲೌಕಿಕ ವಿದ್ಯಾರ್ಜನೆ ಇದ್ದರೂ ಸಹಿತ ಅಲ್ಲಿ ಗುರು ಮುಖೇನ ಕಲಿತ ವಿದ್ಯೆಯು ಪರಿಪೂರ್ಣವಾಗಿರುತ್ತದೆ.
> -ಶ್ರೀಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ

ಶ್ರೀಶಾಂತೇಶ್ವರ ಪ್ರೌಢಶಾಲೆ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಎಂ.ವ್ಹಿ. ಹೊಸೂರ ಅಧ್ಯಕ್ಷತೆವಹಿಸಿದ್ದರು. ಜಿ.ಎಂ. ಹಂಚಿನಾಳ ಹಾಗೂ ಎಂ. ವ್ಹಿ. ಅಂಗಡಿ ಅತಿಥಿಗಳಾಗಿದ್ದರು. ಎಸ್.ಟಿ. ಹಿರೇಮಠ, ಶಿವಾನಂದ ಅಕ್ಕೋಜಿ, ಚೆನ್ನಬಸಪ್ಪ ಮಾಟರ, ಉಮೇಶ ನಡುವಿನಹಳ್ಳಿ, ಶಿವಯೋಗಿ ಚಂದರಗಿ ಇತರರು ಇದ್ದರು. ನಿವೃತ್ತ ಸೈನಿಕರುಗಳಾದ ಶಿವಯೋಗಿ ಚಂದರಗಿ ಹಾಗೂ ಮೆಹಬೂಬಸುಬಾನಿ ನದಾಫ್ ಅವರನ್ನೂ ಗೌರವಿಸಲಾಯಿತು. ಸಂತೋಷ ಕಮತರ ಸ್ವಾಗತಿಸಿದರು. ಶೋಭಾ ಸುಳ್ಳದ ನಿರೂಪಿಸಿದರು. ಶಿವಲೀಲಾ ಹುಲ್ಲೂರ ವಂದಿಸಿದರು.

ಹಬ್ಬಗಳ ಆಚರಣೆಯಿಂದ ಸಂಸ್ಕೃತಿಯ ಪರಿಚಯ

ಧಾರವಾಡ: ಹಬ್ಬ-ಹರಿದಿನಗಳ ಆಚರಣೆಯಿಂದ ಮಕ್ಕಳಲ್ಲಿ ಭಾರತೀಯ ಸಾಂಸ್ಕೃತಿಯ ಪರಿಚಯವಾಗುತ್ತದೆ. ಮಕರ ಸಂಕ್ರಾಂತ ಹಬ್ಬ ಸೂರ್ಯನಿಗೆ ಸಮರ್ಪಿತವಾದ ಹಬ್ಬ. ಇದು ಸಮೃದ್ಧಿಯ ಸಂಕೇತವಾಗಿದೆ. ಈ ಸಂದರ್ಭದಲ್ಲಿ ಸೂರ್ಯನು ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ತನ್ನ ಪಥವನ್ನು ಬದಲಿಸಿ ಮಕರ ರಾಶಿಗೆ ಪ್ರವೇಶಿಸುವದರಿಂದ ಈ ಹಬ್ಬವನ್ನು ಮಕರ ಸಂಕ್ರಮಣವೆಂದು ನಾವೆಲ್ಲಾ ಕರೆಯುತ್ತೇವೆ ಎಂದು ಜೆಎಸ್ಎಸ್ ಕಾರ್ಯದರ್ಶಿ ಡಾ.ಅಜೀತ ಪ್ರಸಾದ ಹೇಳಿದರು.

> ಸಂಕ್ರಾಂತಿ ಹಬ್ಬ ಕೇವಲ ಧಾರ್ಮಿಕವಾಗಿ ಅಲ್ಲದೇ ವೈಜ್ಞಾನಿಕ ದೃಷ್ಟಿಕೋನದಿಂದ ಪ್ರಾಮುಖ್ಯತೆ ಪಡೆದಿದೆ. ಇದು ಸಂಬಂಧಗಳನ್ನು ಬೆಸೆಯುವ ಹಬ್ಬವಾಗಿದ್ದು, ಸಿಹಿ ಹಂಚುವ ಮೂಲಕ ಮಕ್ಕಳು ನಿಮ್ಮ ತಂದೆ-ತಾಯಿ, ಗುರುಗಳು ಹಾಗೂ ಗೆಳೆಯರೊಂದಿಗೆ ಭಾಂದವ್ಯವನ್ನು ಗಟ್ಟಿಯಾಗಿಸಿಕೊಳ್ಳಿ ದೇವರ ಆಶೀರ್ವಾದ ನಿಮ್ಮ ಮೇಲೆ ಸದಾ ಇರಲೆಂದು ಹಾರೈಸಿದರು.
> -ಡಾ.ಅಜೀತ ಪ್ರಸಾದ, ಜೆಎಸ್ಎಸ್ ಕಾರ್ಯದರ್ಶಿ

ಧಾರವಾಡದ ವಿದ್ಯಾಗಿರಿಯ ಜೆ.ಎಸ್.ಎಸ್ ಶ್ರೀ ಮಂಜುನಾಥೇಶ್ವರ ಸಿಬಿಎಸ್ಇ ಶಾಲೆಯಲ್ಲಿ ಆಯೋಜಿಸಲಾಗಿದ್ದ ಸಂಕ್ರಾಂತಿ ಹಬ್ಬದಲ್ಲಿ, ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಅವರು, ಮಕ್ಕಳಿಗೆ ಕರಿ ಎರೆದು, ಹಬ್ಬದ ಊಟವನ್ನು ಉಣಬಡಿಸಿದರು. ಹಬ್ಬದ ಪ್ರಯುಕ್ತ ಸಂಕ್ರಾಂತಿ ಸಂತೆಯನ್ನು ಸಹ ಆಯೋಜಿಸಲಾಗಿತ್ತು. ಹಬ್ಬಕ್ಕೆ ಬೇಕಾಗುವ ವಿವಿಧ ರೀತಿಯ ವಸ್ತುಗಳನ್ನು, ಆಹಾರ ಪಧಾರ್ಥಗಳನ್ನು ಸ್ವ-ಉದ್ಯೋಗ ಮಾಡುತ್ತಿರುವ ಮಹಿಳೆಯರು ವಿದ್ಯಾರ್ಥಿಗಳ ಸಹಾಯದಿಂದ ವಸ್ತುಗಳನ್ನು ಮಾರಾಟ ಮಾಡಿದರು. ಮಕ್ಕಳು ಸಾಂಸ್ಕೃತಿಕ ಉಡುಪುಗಳನ್ನು ತೊಟ್ಟು, ಗಾಳಿಪಟಗಳನ್ನು ಹಾರಿಸುವ ಮೂಲಕ ಸಂಭ್ರಮಿಸಿದರು. ಇದೇ ಸಂದರ್ಭದಲ್ಲಿ ಶಾಲೆಯ ಪ್ರಾಚಾರ್ಯೆ ಸಾಧನಾ ಎಸ್, ಜೆ.ಎಸ್.ಎಸ್ ಐ.ಟಿ.ಐ ನ ಮಹಾವೀರ ಉಪಾದ್ಯೆ, ಪಾಲಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಧಾರವಾಡದ ವಿದ್ಯಾಗಿರಿಯ ಜೆ.ಎಸ್.ಎಸ್ ಶ್ರೀ ಮಂಜುನಾಥೇಶ್ವರ ಸಿಬಿಎಸ್ಇ ಶಾಲೆಯಲ್ಲಿ ಸಂಕ್ರಾಂತಿ ಹಬ್ಬ ಆಚರಿಸಿದರು.

ಅರ್ಬನ್ ಬ್ಯಾಂಕ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಹುಬ್ಬಳ್ಳಿ: ಹುಬ್ಬಳ್ಳಿ ನಗರದ ಪ್ರತಿಷ್ಠಿತ ಸಹಕಾರಿ ಬ್ಯಾಂಕಾದ ದಿ ಹುಬ್ಬಳ್ಳಿ ಅರ್ಬನ್ ಕೋ-ಆಪ್, ಬ್ಯಾಂಕ ನಿ. ಇದರ ಆಡಳಿತ ಮಂಡಳಿಯ 13 ಸ್ಥಾನಗಳಲ್ಲಿ 11 ಸ್ಥಾನಗಳಿಗೆ ಚುನಾವಣೆ ಜರುಗಿದ್ದು, ಫಲಿತಾಂಶ ಪ್ರಕಟವಾಗಿದೆ. ಹಿಂದೂಳಿದ ಅ ಹಾಗೂ ಬ ವರ್ಗ ಸ್ಥಾನಕ್ಕೆ ಅವಿರೋಧ ಆಯ್ಕೆ ನಡೆದಿದ್ದು, ಉಳಿದ 7 ಸಾಮಾನ್ಯ, 2 ಪರಿಶಿಷ್ಟ ಜಾತಿ ಮೀಸಲು, 2 ಮಹಿಳಾ ಮೀಸಲು ಸೇರಿದಂತೆ ಒಟ್ಟು 11 ಸ್ಥಾನಗಳಿಗೆ ಮತದಾನ ನಡೆದಿತ್ತು. ಚುನಾವಣೆಯಲ್ಲಿ ಸಾಮಾನ್ಯ ಸ್ಥಾನಕ್ಕೆ ವಿಕ್ರಮ.ಆರ್. ಸಿರೂರ, ಅಜಿತ.ಎಸ್.ಜೋಶಿ, ಮಲ್ಲಿಕಾರ್ಜುನ 3 ಸಾವಕಾರ ಆನಂದ .ಆರ್.ಮನಗೊಳಿ, ಗಿರೀಶಭಾಯಿ.ಡಿ. ಉಪಾಧ್ಯಾಯ, ಚಂದ್ರ ಶೇಖರ.ಎಮ್. ಕಮಡೊಳ್ಳಿ, ಸದಾಶಿವ.ಸಿ ಕಾರಡಗಿ ಮಹಿಳಾ ಮೀಸಲು ಸ್ಥಾನಕ್ಕೆ ಪ್ರೀಯಾ.ಎಸ್.ಕಲಾಲ, ಸ್ಮೃತಿ.ಎಸ್. ಕೊರ್ಲಹಳ್ಳಿ, ಹಿಂದುಳಿದ 'ಅ' ಹಾಗೂ 'ಬ' ವರ್ಗ ಸ್ಥಾನಕ್ಕೆ ವೆಂಕಟೇಶ.ಎಲ್ ಉಪ್ಪಾರ, ಮಹೇಶ.ಬಿ.ಬುರ್ಲಿ ಆಯ್ಕೆಯಾಗಿದ್ದಾರೆ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮೀಸಲು ಸ್ಥಾನಗಳಿಗೆ ಬಸವರಾಜ ಎಸ್ ತೇರದಾಳ ಹಾಗೂ ರವೀಂದ್ರ.ಜಿ.ಬೆಂತರ ಆಯ್ಕೆಯಾಗಿದ್ದಾರೆ. ಜ.10ರಂದು ಮುಂದಿನ 5 ವರ್ಷಗಳ ಅವಧಿಗೆ ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಅವಿರೋಧವಾಗಿ ಅಧ್ಯಕ್ಷ ವಿಕ್ರಮ.ಆರ್.ಸಿರೂರ ಹಾಗೂ ಉಪಾಧ್ಯಕ್ಷರಾಗಿ ಗಿರೀಶಭಾಯಿ.ಡಿ.ಉಪಾಧ್ಯಾಯ ಆಯ್ಕೆ ಯಾಗಿದ್ದಾರೆ. ಚುನಾವಣೆಯು ಕಲಗೌಡ ಪಾಟೀಲ, ಬ್ಯಾಂಕಿನ ಸಿಇಒ ಪಿ.ಬಿ. ಮಠಪತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದರು.

ಯುವಕರನ್ನ ಎಚ್ಚರಿಸಿದ ವಿವೇಕಾನಂದರು

ಬ್ಯಾಡಗಿ: ಕ್ರೀಯಾಶೀಲ ಚಿಂತನೆ ಮಾಡದೇ ದಾಸ್ಯಕ್ಕೆ ಗುಲಾಮಗಿರಿಗೆ ಒಳಗಾಗುತ್ತಿರುವ ದೇಶದ ಯುವಕರನ್ನ ದೇಶದ ಸಾಂಸ್ಕೃತಿಕ ರಾಯಭಾರಿ ಸ್ವಾಮಿ ವಿವೇಕಾನಂದರು ಕಳೆದ ಏಳೆಂಟು ದಶಕಗಳ ಹಿಂದೆ ಎಚ್ಚರಿಸುವ ಕೆಲಸ ಮಾಡಿದ್ದಾರೆ ಎಂದು ಬಿಇ ಎಸ್ಎಂ ಕಾಲೇಜು ಪ್ರಾಚಾರ್ಯ ಡಾ.ಎಸ್.ಜಿ.ವೈದ್ಯ ಹೇಳಿದರು. ಸ್ವಾಮಿ ವಿವೇಕಾನಂದರ ದಿನಾಚರಣೆ ಪ್ರಯುಕ್ತ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ, ಕಾರುಣ್ಯ ಶಿಕ್ಷಣ ಸಂಸ್ಥೆ, ರೋಟರಿ ಸಂಸ್ಥೆ ಹಾಗೂ ಇನ್ನರ್ ವ್ಹೀಲ್ ಕ್ಲಬ್ ಇವರ ಸಂಯುಕ್ತಾಶ್ರಯದಲ್ಲಿ ಪ್ರೌಢಶಾಲಾ ವಿಭಾಗದ ಮಕ್ಕಳಿಗೆ 'ನಾನು ಕಂಡಂತೆ ಸ್ವಾಮಿ ವಿವೇಕಾನಂದ' ಎಂಬ ವಿಷಯದ ಏರ್ಪಡಿಸಿದ್ದ ಭಾಷಣ ಹಾಗೂ ಪ್ರಬಂಧ ಸ್ಪರ್ಧೆಗಳನ್ನು ಉದ್ಘಾಟಿಸಿದರು.

ಎರಡು ವಿಭಾಗದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ವಿಜೇತರಿಗೆ ಇನ್ನರ್‌ವ್ಹೀಲ್ ಕ್ಲಬ್ ವತಿಯಿಂದ 2000 ಮತ್ತು ರೋಟರಿ ಕ್ಲಬ್ ವತಿಯಿಂದ 2500 ನಗದು ಬಹುಮಾನ ಪಾಲ್ಗೊಂಡಿದ್ದವರಿಗೆ 60 ಮಕ್ಕಳಿಗೆ ಪ್ರಶಸ್ತಿಪತ್ರ ನೀಡಿ ಅಭಿನಂದಿಸಲಾಯಿತು.



ಮಕ್ಕಳಿಗೆ ನಾನು ಕಂಡಂತೆ ಸ್ವಾಮಿ ವಿವೇಕಾನಂದ ಎಂಬ ವಿಷಯದ ಏರ್ಪಡಿಸಿದ್ದ ಭಾಷಣ ಹಾಗೂ ಪ್ರಬಂಧ ಸ್ಪರ್ಧೆಯನ್ನು ಬಿಇಎಸ್ ಎಂ ಕಾಲೇಜು ಪ್ರಾಚಾರ್ಯ ಡಾ.ಎಸ್.ಜಿ.ವೈದ್ಯ ಉದ್ಘಾಟಿಸಿದರು.

> **ನಿಮ್ಮ ನಿಷ್ಠೆ ಈ ದೇಶಕ್ಕೆ ನೆಲಕ್ಕೆ ಸೀಮಿತವಾಗಿರಲಿ**
> ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಬೌದ್ಧ, ಜೈನ, ಪಾರ್ಸಿ ಅದು ನಿಮ್ಮ ವೈಯಕ್ತಿಕ ಗುರುತು ಮಾತ್ರ. ಈ ನೆಲದ ವಿಚಾರದಲ್ಲಿ ನೀವೆಲ್ಲರೂ ಭಾರತೀಯರು ಎಂಬುದನ್ನು ಯಾರೂ ಸಹ ಮರೆಯ ಬಾರದು ನಿಮ್ಮ ನಿಷ್ಠೆ ಈ ದೇಶಕ್ಕೆ ಈ ನೆಲಕ್ಕೆ ಸೀಮಿತವಾಗಿರಲಿ.

ಬ್ರಹ್ಮಕುಮಾರಿ ಬಿ.ಕೆ.ಸುರೇಖಾ ಅಧ್ಯಕ್ಷತೆ ವಹಿಸಿದ್ದರು, ಅತಿಥಿಗಳಾಗಿ ರೋಟರಿ ಸಂಸ್ಥೆ ಅಸಿಸ್ಟೆಂಟ್ ಗವರ್ನರ್ ಮಂಜುನಾಥ ಉಪ್ಪಾರ, ಕಾರುಣ್ಯ ಸಂಸ್ಥೆ ಅಧ್ಯಕ್ಷ ಬಸವರಾಜ ಹಿರೇಮತ್ತೂರ, ಸ್ನೇಹ ಸದನ ನಿರ್ದೇಶಕಿ ಸಿಸ್ಟರ್ ರೂಪಾ, ರೋಟರಿ ಸಂಸ್ಥೆ ಪರಶುರಾಮ ಮೇಲಗಿರಿ, ಕಿರಣ ಮಾಳೇನಹಳ್ಳಿ, ಸತೀಶ ಅಗಡಿ, ವಿಶ್ವನಾಥ ಅಂಕಲಕೋಟಿ, ಶಿವರಾಜ ಚೂರಿ ಇನ್ನರ್‌ವ್ಹೀಲ್ ಅಧ್ಯಕ್ಷೆ ಕವಿತಾ ಸೊಪ್ಪಿನಮಠ ಸದಸ್ಯ ಲಕ್ಷ್ಮೀ ಉಪ್ಪಾರ, ರೂಪ ಕಡೇಕೊಪ್ಪ, ಪ್ರತಿಭ ಮೇಲಗಿರಿ, ಸುರೇಖಾ ಬೆಟಗೇರಿ ಇನ್ನಿತರರಿದ್ದರು.

ಕ್ಯೂ ಆರ್ ಕೋಡ್ ಕ್ಯಾಲೆಂಡರ್ ಬಿಡುಗಡೆ

ಹಾವೇರಿ: ಪ್ರಸತ್ತ ಸಾಲಿನ ಹೊಸ ವರ್ಷದ ಕ್ಯಾಲೆಂಡರ್ ಬಹಳ ವಿಶಿಷ್ಟತೆಯನ್ನು ಒಳಗೊಂಡಿದ್ದು ಶಿರಣರ, ಸಂತರ ಬಾವೈಕ್ಯತೆ ಜಿಲ್ಲೆ ಎಂದು ಪ್ರಖ್ಯಾತಿ ಪಡೆದಿರುವ ಹಾವೇರಿ ಜಿಲ್ಲೆಯ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳನ್ನು ಬಹಳ ಅದೂತವಾಗಿ ಮುದ್ರಿಸಿದ್ದಲ್ಲದೇ ಕ್ಯಾಲೆಂಡರ್‌ನಲ್ಲಿ ಕ್ಯೂ ಆರ್ ಕೋಡ್ ಅಳವಡಿಸಲಾಗಿದೆ. ಸ್ಕ್ಯಾನ್ ಮಾಡಿ ನೋಡಬಹುದಾಗಿದೆ ಇಂತಹ ಒಂದು ಕ್ಯಾಲೆಂಡರನ್ನು ಕುಲಪತಿ ಸುರೇಶ ಜಂಗಮಶೆಟ್ಟಿ ಅವರು ಹಾಗೂ ಕೆಎಲ್ಇ ಕುಲಸಚಿವ ಡಾ. ಬಸವರಾಜ ಅನಿಮಿ ಹಾಗೂ ರೀಚ್ ಮಚ್ಚ್‌ಹೈಯರ್ ಅಕಾಡಮಿ ಉಪಾಧ್ಯಕ್ಷ ಪ್ರಭು ಅರುಮೂಗಮ್ ವರ್ಗಕೋಣೆಯಲ್ಲಿ ಸಮಾರಂಭದ ಉದ್ಘಾಟನೆಯಲ್ಲಿ ಕ್ಯಾಲೆಂಡರನ್ನು ಬಿಡುಗಡೆ ಗೊಳಿಸಿದರು. ನಗರ ಸಮೀಪದ ಕೆರಿಮತ್ತಿಹಳ್ಳಿಯಲ್ಲಿರುವ ಹಾವೇರಿ ವಿಶ್ವವಿದ್ಯಾಲಯದಲ್ಲಿ ವಾರ್ಷಿಕ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ನೆರವೇರಿತು. ಕಾಲೇಜ್‌ನ್ನು ಅರ್ಧಕ್ಕೆ ಬಿಟ್ಟವರಿಗೆ ಅಲ್ಪಾವಧಿ ವೃತ್ತಿ ಕೌಶಲ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಕುಲಪತಿ ಪ್ರೊ, ಸುರೇಶ ಜಂಗಮ ಶೆಟ್ಟಿ ಮಾತನಾಡಿದರು. ಹುಬ್ಬಳ್ಳಿ ಕೆಎಲ್ ಇ ಕುಲಸಚಿವ ಡಾ. ಬಸವ ರಾಜ ಅನಮಿ ಮಾತನಾಡಿದರು. ಡಿಜಿಟಲ್ ಯುಗದಲ್ಲಿ ಪ್ರತಿಯೊಬ್ಬ ನಾಗರಿಕರಿಗೂ ಕಂಪ್ಯೂಟರ್ ಜ್ಞಾನ ಅಗತ್ಯ. ವಿದ್ಯಾರ್ಥಿಗಳಿಗೆ ವೃತ್ತಿ ಕೌಶಲ್ಯದ ಅಗತ್ಯ ಪುಸ್ತಕ, ಬ್ಯಾಗ್ ಒಳಗೊಂಡ ಕಿಟ್ಟ ವಿತರಣೆಯನ್ನು ಕುಲಪತಿ ಅವರು ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದರು.

ಸಮಾಚಾರ ಸಣ್ಣದಲ್ಲ

ಆಸ್ಪತ್ರೆ ಆವರಣದಲ್ಲಿ ಮಲಗಿದ್ದ ವ್ಯಕ್ತಿ ಸಾವು

ಮೈಸೂರು: ನಗರದ ಚಲುವಾಂಬ ಆಸ್ಪತ್ರೆ ಆವರಣದಲ್ಲಿ ರಾತ್ರಿ ಮಲಗಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ. ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಚೌಡಳ್ಳಿ ಗ್ರಾಮದ

ನಾಗೇಶ್ (47) ಮೃತರು. ನಾಗೇಶ್ ಹೆರಿಗೆಗೆ ಅಂತ ತನ್ನ ಪತ್ನಿಯನ್ನು ಕಳೆದ ಶುಕ್ರವಾರ ಚಲುವಾಂಬ ಆಸ್ಪತ್ರೆಗೆ ದಾಖಲಿಸಿದ್ದರು. ಅಂದೇ ಪತ್ನಿಗೆ ಹೆರಿಗೆಯಾಗಿದ್ದು, ಗಂಡು ಮಗು ಜನಿಸಿತ್ತು. ಆರೋಗ್ಯ ಸಮಸ್ಯೆ ಕಾರಣ ಮೂರು ದಿನಗಳಿಂದಲೂ ಮಗು ವನ್ನು ಐಸಿಯುವಿನಲ್ಲಿ ಇಡಲಾಗಿತ್ತು. ಹೀಗಾಗಿ ನಾಗೇಶ್ ತನ್ನ ಮಗುವಿನ ಮುಖವನ್ನು ಸರಿಯಾಗಿ ನೋಡಲಾಗಿರಲಿಲ್ಲ ಎಂದು ತಿಳಿದು ಬಂದಿದೆ. ಪತ್ನಿಯ ಆರೈಕೆಗಾಗಿ ನಾಗೇಶ್ ಆಸ್ಪತ್ರೆಯಲ್ಲೇ ತಂಗಿದ್ದರು. ನಾಗೇಶ್ ಭಾನುವಾರ ರಾತ್ರಿ 10.30ರ ವೇಳೆ ಆಸ್ಪತ್ರೆ ಮುಂಭಾಗದ ಆವರಣದಲ್ಲಿ ಮಲಗಿದ್ದರು. ಸೋಮವಾರ ಬೆಳಗ್ಗೆ 7 ಗಂಟೆ ಸುಮಾರಿಗೆ ನೋಡಿದಾಗ ನಾಗೇಶ್ ಮೃತಪಟ್ಟಿರುವುದು ತಿಳಿದು ಬಂದಿದೆ. ವ್ಯಕ್ತಿಯ ಮೃತದೇಹವನ್ನು ಕೆ.ಆರ್. ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಕಾರು ಅಪಘಾತ : ಪತ್ರಕರ್ತ ಭರತ್ ಸಾವು

ಗುಡಿಬಂಡೆ: ತಾಲೂಕಿನ ಮಾಚಹಳ್ಳಿ ಗ್ರಾಮದ ಬಳಿ ಕಾರು ನಿಯಂತ್ರಣ ತಪ್ಪಿ ಕರೆ ದಂಡೆಯಲ್ಲಿ ದೇವರ ಗುಡಿಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಯುವ ಪತ್ರಕರ್ತ ಭರತ್ ಗುಡಿಬಂಡೆ (34)

ಸಾವನ್ನಪ್ಪಿದ ಘಟನೆ ಭಾನುವಾರ ತಡರಾತ್ರಿ ನಡೆದಿದೆ. ಜಿಲ್ಲೆಯ ಗುಡಿಬಂಡೆ ನಿವಾಸಿಯಾದ ಭರತ್ ಗುಡಿಬಂಡೆ, ಚಿಕ್ಕಬ ಳ್ಳಾಪುರ, ಬೆಂಗಳೂರು ಸೇರಿದಂತೆ ನಾನಾ ಕಡೆ ಪತ್ರಕರ್ತರಾಗಿ ಕೆಲಸ ಮಾಡಿದ್ದರು.ಸದ್ಯ ಹೊಸದಿಗಂತ ಪತ್ರಿಕೆಯಲ್ಲಿ ಬೆಂಗಳೂರು ವರದಿಗಾರರಾಗಿ ಸೇವೆ ಸಲ್ಲಿಸುತ್ತಿದ್ದರು. ತಮ್ಮ ಮಗಳಿಗೆ ಬರುವ ಫೆ.7 ರಂದು ನಾಮಕರಣವನ್ನು ಗುಡಿಬಂಡೆಯಲ್ಲಿ ಹಮ್ಮಿಕೊಂಡಿದ್ದು, ಕಲ್ಯಾಣ ಮಂಟಪ ಬುಕ್ ಮಾಡಲು ಊರಿಗೆ ಬಂದು ಮರಳಿ ಬಾಗೇಪಲ್ಲಿಗೆ ಹೋಗುವಾಗ ಮಾಚಹಳ್ಳಿ ಕೆರೆ ಕಟ್ಟೆಯ ಮೇಲೆ ಈ ದುರ್ಘಟನೆ ನಡೆದಿದೆ. ಅಪಘಾತದ ರಭಸಕ್ಕೆ ಕಾರು ನಿಯಂತ್ರಣ ತಪ್ಪಿ ಕೆರೆ ಕಟ್ಟೆಯ ಮೇಲೆ ನಿರ್ಮಿಸಿದ್ದ ದೇವರ ಪುಟ್ಟ ಕಲ್ಲಿನ ಗುಡಿಗೆ ಡಿಕ್ಕಿ ಹೊಡೆದಿದೆ. ಗುಡಿಯ ಕಲ್ಲು ಚಪ್ಪಡಿ ಕಾರಿನ ಒಳಗೆ ಹೋಗಿ ತಲೆಗೆ ಬಡಿದ ಪರಿಣಾಮ ಭರತ್‌ನ ತಲೆಗೆ ಗಂಭೀರ ಗಾಯವಾಗಿ ತೀವ್ರ ರಕ್ತಸ್ರಾವವಾಗಿದೆ. ಕೂಡಲೇ ಸ್ಥಳೀಯರು ಗಾಯಾಳುವನ್ನು ಗುಡಿಬಂಡೆ ಸಾರ್ವಜನಿಕ ಆಸ್ಪತ್ರೆಗೆ ಕರೆತಂದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕಾಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಬೇಕಾದವರು ಗಪ್‌ಚುಪ್। ಕೇಂದ್ರದ ಕಿವುಡ ಸರಕಾರ ಮತ್ತು ಬಿಜೆಪಿಯ ಮೂಗ ನಾಯಕರ ವಿರುದ್ಧ ಕನ್ನಡಿಗರು ದನಿ ಎತ್ತಿ

ರಾಜ್ಯದ ಬಿಜೆಪಿಗರು ದೆಹಲಿ ಗುಲಾಮರು: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕಕ್ಕೆ ನಿರಂತರವಾಗಿ ಮಾಡುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಬೇಕಿದ್ದ ರಾಜ್ಯದ ಬಿಜೆಪಿ ನಾಯಕರು ಮತ್ತು ಸಂಸದರು ಅನ್ಯಾಯಕೋರ ಕೇಂದ್ರ ಸರಕಾರವನ್ನು ಸಮರ್ಥಿಸುತ್ತಾ ರಾಜ್ಯದ ಜನರಿಗೆ ಅನ್ಯಾಯ ಮತ್ತು ಅವಮಾನ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ಭಾರತೀಯ ಜನತಾ ಪಕ್ಷದ ನಾಯಕರು ಬಾಯಿಬಿಟ್ಟರೆ ದೇಶಪ್ರೇಮದ ಬಗ್ಗೆ ಮಾತನಾಡುತ್ತಾರೆ. ರಾಜ್ಯವನ್ನೇ ಪ್ರೀತಿಸದವರು ದೇಶ ಹೇಗೆ ಪ್ರೀತಿಸಲು ಸಾಧ್ಯ ಎನ್ನುವುದನ್ನು ಇವರೇ ಹೇಳಬೇಕು. ಕೇಂದ್ರ ಸರಕಾರ ಸೇಡು ತೀರಿಸಿಕೊಳ್ಳುವವರಂತೆ ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯ ಮಾಡುತ್ತಿದೆ. ರಾಜ್ಯದ ಪ್ರಾಮಾಣಿಕ ತೆರಿಗೆದಾರರಿಗೆ ಮಾಡಿರುವ ಘೋರ ಅನ್ಯಾಯ. ಈ ಅನ್ಯಾಯ ಖಂಡಿಸಬೇಕಿರುವ ರಾಜ್ಯದ ಬಿಜೆಪಿ ನಾಯಕರು ನಿರ್ಲಜ್ಜರಾಗಿ ಸಮರ್ಥಿಸುತ್ತಿರುವುದು ಕನ್ನಡಿಗರಿಗೆ ಬಗೆಯುತ್ತಿರುವ ದ್ರೋಹ. ಇವರ ಆರ್ಭಟವೇನಿದ್ದರೂ ರಾಜ್ಯ ಸರಕಾರದ ವಿರುದ್ಧ ಸುಳ್ಳು ಆರೋಪ ಮಾಡಲು ಮತ್ತು ಬೀದಿಗಳಲ್ಲಿ ಪರಸ್ಪರ ಕಚ್ಚಾಡಲು ಸೀಮಿತ. ರಾಜ್ಯದಿಂದ ಆರಿಸಿ ಹೋಗಿರುವ ಬಿಜೆಪಿ ಸಂಸದರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಎದುರು ನಿಂತು ನ್ಯಾಯ ಕೇಳುವ ಕನಿಷ್ಠ ಧೈರ್ಯವಿಲ್ಲದೆ ಗುಲಾಮರಾಗಿದ್ದಾರೆ. ಜನಪ್ರತಿನಿಧಿಗಳು ಜನದ್ರೋಹಿಗಳಾದಾಗ ಅವರನ್ನು ಜನರೇ

ವಿಚಾರಿಸಿಕೊಳ್ಳಬೇಕಾಗುತ್ತದೆ. ಕೇಂದ್ರದ ಕಿವುಡ ಸರಕಾರ ಮತ್ತು ಬಿಜೆಪಿಯ ಮೂಗ ನಾಯಕರ ವಿರುದ್ಧ ಕನ್ನಡಿಗರೆಲ್ಲರೂ ಜಾತಿ, ಧರ್ಮ, ಪಕ್ಷ ಪಂಥಗಳನ್ನು ಮೀರಿ ದನಿ ಎತ್ತಬೇಕಾಗಿದೆ. ಇಂತಹದ್ದೊಂದು ಸಂಕಲ್ಪವನ್ನು ಸಂಕ್ರಮಣದ ಶುಭದಿನದಂದು ಪ್ರತಿ ಕನ್ನಡಿಗರು ಕೈಗೊಂಡು ಕರ್ನಾಟಕಕ್ಕಾ ಅನ್ಯಾಯ ಮತ್ತು ಅವಮಾನದಿಂದ ರಕ್ಷಿಸಬೇಕಾಗಿದೆ ಎಂದಿದ್ದಾರೆ.

2018-19ರಲ್ಲಿ 24.42 ಲಕ್ಷ ಕೋಟಿಗಳಷ್ಟಿದ್ದ ಕೇಂದ್ರದ ಬಜೆಟ್ ಗಾತ್ರ, 2024-25ರಲ್ಲಿ 46.28 ಲಕ್ಷ ಕೋಟಿಯಷ್ಟಾಗಿದೆ. 2018-19ರಲ್ಲಿ ಕರ್ನಾಟಕಕ್ಕೆ ನೀಡಿರುವ ತೆರಿಗೆ ಪಾಲು 46,288 ಕೋಟಿಗಳಾಗಿದ್ದರೆ, 2024-25ರಲ್ಲಿ ಇದು 44,485 ಕೋಟಿ ಮಾತ್ರ. ಅಂದರೆ ಆರು ವರ್ಷಗಳ ಅವಧಿಯಲ್ಲಿ ಬಜೆಟ್ ಗಾತ್ರ ದುಪ್ಪಟ್ಟಾಗಿದ್ದರೂ ಕರ್ನಾಟಕದ ತೆರಿಗೆ ಪಾಲು 15,299 ರು. ಗಳಷ್ಟು ಮಾತ್ರ ಹೆಚ್ಚಾಗಿದೆ. ಈ ತೆರಿಗೆ ಪಾಲು ಕನಿಷ್ಠ ಒಂದು ಲಕ್ಷ ಕೋಟಿ ರು. ಗಳಷ್ಟಾದರೂ ಆಗಬೇಕಿತ್ತಲ್ಲವೇ ಎಂದು ಪ್ರಶ್ನಿಸಿದ್ದಾರೆ. ಕರ್ನಾಟಕದ ಜನತೆ ತೆರಿಗೆ ಮತ್ತು ಸುಂಕದ ಮೂಲಕ ಪ್ರತಿವರ್ಷ ನಾಲ್ಕುವರೆ ಲಕ್ಷ ಕೋಟಿ ರು. ಗಳನ್ನು ಕೇಂದ್ರದ ಬೊಕ್ಕಸಕ್ಕೆ ನೀಡುತ್ತಿದೆ. ಇದಕ್ಕೆ ಪ್ರತಿಯಾಗಿ ಕೇಂದ್ರ ಸರಕಾರ ತೆರಿಗೆ ಪಾಲಿನ ರೂಪದಲ್ಲಿ 45,000 ಕೋಟಿ ಮತ್ತು ಅನುದಾನವಾಗಿ 15,000 ಕೋಟಿ ನೀಡುತ್ತಿದೆ. ಅಂದರೆ ನಾವು ನೀಡುತ್ತಿರುವ ಒಂದು ರೂಪಾಯಿಗೆ ಕೇವಲ 13 ಪೈಸೆಯಷ್ಟು ಮಾತ್ರ ವಾಪಸು ನೀಡುತ್ತಿದೆ ಎಂದಿದ್ದಾರೆ.

ತೆರಿಗೆ ವರ್ಷದಿಂದ ವರ್ಷಕ್ಕೆ ಕಡಿಮೆ

ಕೇಂದ್ರ ಸರಕಾರ ಇತ್ತೀಚೆಗೆ ರಾಜ್ಯಗಳಿಗೆ ತೆರಿಗೆ ಮತ್ತು ಸುಂಕದ ಪಾಲಿನ ರೂಪದಲ್ಲಿ ಒಟ್ಟು 1,73,030 ಕೋಟಿ ರು. ಬಿಡುಗಡೆ ಮಾಡಿದ್ದು, ಇದರಲ್ಲಿ ಕರ್ನಾಟಕ ರಾಜ್ಯಕ್ಕೆ ನೀಡಿರುವ ಪಾಲು ಕೇವಲ 6,310 ಕೋಟಿ ರು. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ಐದರಷ್ಟು ಕನ್ನಡಿಗರಿದ್ದರೂ ದೇಶದ ಜಿಡಿಪಿಯಲ್ಲಿ ಕನ್ನಡಿಗರ ಪಾಲಿನ ಪ್ರಮಾಣ ಶೇ.8.4 ಆಗಿದೆ. ಅತೀ ಹೆಚ್ಚು ಜಿಎಸ್‌ಟಿ ಪಾವತಿಸುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ ಜಿಎಸ್ಟಿ ಸಂಗ್ರಹ ಶೇ.17ರಷ್ಟು ಹೆಚ್ಚಾಗುತ್ತಿದೆ. ಹೀಗಿದ್ದರೂ ತೆರಿಗೆ ಹಂಚಿಕೆಯಲ್ಲಿ ನಮ್ಮ ಪಾಲು ವರ್ಷದಿಂದ ವರ್ಷಕ್ಕೆ ಕಡಿಮೆ ಮಾಡುತ್ತಾ ಬರಲಾಗುತ್ತಿದೆ. ಈ ಅನ್ಯಾಯ ಯಾಕೆ ಎಂದು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಕರ್ನಾಟಕಕ್ಕೆ ಅನ್ಯಾಯ

ತೆರಿಗೆ ಹಂಚಿಕೆ ಮಾಡುವಾಗಲೂ 'ಬಿಮಾರು' ರಾಜ್ಯಗಳೆಂಬ ಅಪಖ್ಯಾತಿಗೀಡಾಗಿರುವ ಬಿಹಾರ (17,403 ಕೋಟಿ), ಮಧ್ಯಪ್ರದೇಶ (13,582 ಕೋಟಿ), ರಾಜಸ್ತಾನ (10,426 ಕೋಟಿ) ಮತ್ತು ಉತ್ತರಪ್ರದೇಶಕ್ಕೆ (31,099 ಕೋಟಿ) ತೆರಿಗೆ ಪಾಲನ್ನು ನೀಡಿರುವ ಕೇಂದ್ರ ಸರಕಾರ ಕರ್ನಾಟಕಕ್ಕೆ ಕೇವಲ 6,310 ಕೋಟಿ ನೀಡಿದೆ. ಇದು ಉತ್ತಮ ಆಡಳಿತ, ಸುಸ್ಥಿರ ಅಭಿವೃದ್ಧಿ ಮತ್ತು ಜಿಎಸ್‌ಟಿ ಸಂಗ್ರಹದಲ್ಲಿ ಮಾಡಿರುವ ಸಾಧನೆಗಾಗಿ ಕರ್ನಾಟಕಕ್ಕೆ ನೀಡಿರುವ ಶಿಕ್ಷೆಯೇ? ಕನ್ನಡಿಗರ ಬೆವರ ಗಳಿಕೆಯ ತೆರಿಗೆ ಹಣ ಭ್ರಷ್ಟ ರಾಜ್ಯಗಳ ಬೊಕ್ಕಸ ತುಂಬಲು ಯಾಕೆ ಬಳಕೆಯಾಗಬೇಕು?. 15 ನೇ ಹಣಕಾಸು ಆಯೋಗ ಕರ್ನಾಟಕದ ತೆರಿಗೆ ಪಾಲನ್ನು ಶೇ.4.73ರಿಂದ ಶೇಕಡಾ 3.64ಕ್ಕೆ ಇಳಿಸಿದೆ. ಇದರಿಂದ ಕಳೆದ ಐದು ವರ್ಷಗಳಲ್ಲಿ 79,770 ಕೋಟಿ ರು. ಕರ್ನಾಟಕ ಕಳೆದುಕೊಂಡಿದೆ. ಈ ಅನ್ಯಾಯಕ್ಕೆ ಪರಿಹಾರವಾಗಿ ರೂ.5,495 ಕೋಟಿ ವಿಶೇಷ ಅನುದಾನ ನೀಡಬೇಕೆಂಬ ಹಣಕಾಸು ಆಯೋಗದ ಶಿಫಾರಸನ್ನು ಕೂಡಾ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿರಸ್ಕರಿಸಿ ಕರ್ನಾಟಕಕ್ಕೆ ಅನ್ಯಾಯ ಎಸಗಿದ್ದಾರೆ ಎಂದಿದ್ದಾರೆ.

ವಾಣಿ ವಿಲಾಸ ಸಾಗರ ಜಲಾಶಯ: ಜ.18ಕ್ಕೆ ಸಿಎಂ ಬಾಗಿನ ಅರ್ಪಣೆ

ಚಿತ್ರದುರ್ಗ: ಕಳೆದ ಒಂದು ಶತಮಾನದಲ್ಲಿ 70 ವರ್ಷ ಬರ ಅನುಭವಿಸಿದ್ದ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಾಣಿ ವಿಲಾಸ ಸಾಗರ ಜಲಾಶಯ ಭರ್ತಿ ಯಾಗಿ ಕೋಡಿಬಿದ್ದಿದೆ. ಕೋಟೆನಾಡಿನ ಏಕೈಕ ಜಲಾಶಯ ನಿರ್ಮಾಣವಾದ ಬಳಿಕ 3ನೇ ಬಾರಿಗೆ ಕೋಡಿಬಿದ್ದ ಜಲಾ ಶಯ ಬರದ ನಾಡಿಗೆ ಈ ಸಲ ಜೀವಕಳೆ ತಂದಿದೆ. ಕೊನೆಯ ಬಾರಿಗೆ 2022ರಲ್ಲಿ ಜಲಾ ಶಯ ಕೋಡಿ ಬಿದ್ದಿತ್ತು. ಆದರೆ ಇತ್ತೀಚೆಗೆ ಭದ್ರಾ ಜಲಾಶಯದ ನೀರು ಹರಿದ ಪರಿಣಾಮ ವಾಣಿವಿಲಾಸ ಸಾಗರ ಜಲಾಶಯ ಮೂರನೇ ಬಾರಿಗೆ ಕೋಡಿಬಿದ್ದಿದೆ

ಜಲಾಶಯ ಭರ್ತಿಯಿಂದ ನೂರಾರು ಕಿ.ಮೀ. ವರೆಗೆ ಅಂತರ್ಜಲದ ಮಟ್ಟ ಹೆಚ್ಚಾಗಿದ್ದು, ಅನ್ನದಾತರ ಮೊಗದಲ್ಲಿ ಮಂದಹಾಸ ಮೂಡಿ ದೆ. ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು ತಾಲ್ಲೂಕಿನ ರೈತರು ಸಂಭ್ರಮಿಸಿದ್ದಾರೆ. ಜಲಾಶಯ ಭರ್ತಿ ಯಾದ ಹಿನ್ನೆಲೆ ರೈತ ಮುಖಂಡರು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಜ.18ರಂದು ಸಿಎಂ ಸಿದ್ದರಾಮಯ್ಯ ಅವರು ಬಾಗಿನ ಅರ್ಪಿಸಲಿದ್ದಾರೆ. 1907ರಲ್ಲಿ ಮೈಸೂರು ಒಡೆಯರಾದ ಕೃಷ್ಣರಾಜ ಒಡೆಯರ್ ವಾಣಿವಿಲಾಸ ಜಲಾಶಯವನ್ನು ನಿರ್ಮಿಸಿದ್ದರು.

ಸ್ಕೈ ಫೋರ್ಸ್ ಸಿನಿಮಾ ಬಿಡುಗಡೆ ಜ.24 ರಂದು

ಮಡಿಕೇರಿ: 1965ರಲ್ಲಿ ಭಾರತ-ಪಾಕ್ ನಡುವೆ ನಡೆದ ಯುದ್ಧದಲ್ಲಿ ಶತ್ರುಗಳ ವಿಮಾನವನ್ನು ಹೊಡೆದುರುಳಿಸಿ ದೇಶಕ್ಕಾಗಿ ಪ್ರಾಣ ತೆತ್ತ



ಸ್ಕ್ವಾಡ್ರನ್ ಲೀಡರ್ ದೇವಯ್ಯ ಸಾಹಸಗಾಥೆ ಬೆಳ್ಳಿತೆರೆಗೆ

ಕೊಡಗಿನ ವೀರ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ಅವರ ಸಾಹಸಗಾಥೆಯ 'ಸ್ಕೈ ಫೋರ್ಸ್' ಬಾಲಿ ವುಡ್ ಸಿನಿಮಾ ಜ.24 ರಂದು ಬಿಡುಗಡೆ ಯಾಗುತ್ತಿದೆ.

ಬೊಳ್ಳಜಿರ ಬಿ.ಅಯ್ಯಪ್ಪ ನೇತೃತ್ವದ ಕೊಡವ ಮಕ್ಕಡ ಕೂಟ ಹೊರತಂದಿರುವ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರು ಬರೆದಿರುವ 1965ರ ಯುದ್ಧ ಹಾಗೂ ಮಹಾವೀರ ಚಕ್ರ ಪುರಸ್ಕೃತ ಸ್ಕ್ವಾ. ಲೀ ಅಜ್ಜಮಾಡ ಬಿ.ದೇವಯ್ಯ ಅವರ ಜೀವನಾಧರಿತ ಪುಸ್ತಕವನ್ನು ಆಧರಿಸಿ 'ಸ್ಕೈ ಫೋರ್ಸ್' ಚಿತ್ರವನ್ನು ತಯಾರಿಸಲಾಗಿದೆ. ಮ್ಯಾಡಾಕ್ ಫಿಲ್ಮ್ಸ್ ಮತ್ತು ಜಿಯೋ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ದಿನೇಶ್ ವಿಜನ್, ಅಮರ್ ಕೌಶಿಕ್ ಹಾಗೂ ಜ್ಯೋತಿ ದೇಶಪಾಂಡೆ ಈ ಸಿನಿಮಾವನ್ನು ನಿರ್ಮಿಸಿದ್ದಾರೆ. ಸಂದೀಪ್ ಕೇವಾಲಾನಿ ಹಾಗೂ ಅಭಿಷೇಕ್ ಅನಿಲ್ ಕಪೂರ್ ಜಂಟಿಯಾಗಿ ಸಿನಿಮಾ ನಿರ್ದೇಶಿಸಿದ್ದಾರೆ. ಅಕ್ಷಯ್ ಕುಮಾರ್ ಹಾಗೂ ವೀರ್ ಪಹಾಡಿಯಾ ಪ್ರಮುಖ ಪಾತ್ರಗಳಲ್ಲಿದ್ದಾರೆ. ಸಾರಾ ಅಲಿ ಖಾನ್, ನಿಮ್ರತ್ ಕೌರ್ ಮತ್ತು ಶರದ್ ಕೇಳ್ಕರ್ ಕೂಡ ಕಾಣಿಸಿಕೊಳ್ಳಲಿದ್ದಾರೆ. ಈ ಚಿತ್ರ ಜ.24ರಂದು ವಿಶ್ವದಾದ್ಯಂತ ಬಿಡುಗಡೆಯಾಗುತ್ತಿದೆ.

ಅಧಿಕಾರಿಗಳ ವಿರುದ್ಧ ಎಚ್.ಡಿ.ರೇವಣ್ಣ ಗುಡುಗು

ನನ್ನ ಕೈಗೆ ಸಿಗದೇ ಎಲ್ಲಿಗೆ ಹೋಗ್ತಾರೆ?

ಹಾಸನ: ಅಧಿಕಾರಿಗಳೆಲ್ಲ ಕಾಂಗ್ರೆಸ್ ಸರಕಾರವೇ ಇರುತ್ತೆ ಎಂದುಕೊಂಡಿದ್ದಾರೆ. ನನ್ನ ಕೈಗೆ ಸಿಗದೇ ಎಲ್ಲಿಗೆ ಹೋಗ್ತಾರೆ? ಸಮಯ ಬರುತ್ತೆ, ನಾನು ಇವರನ್ನು ಬಿಡ್ತಿನಾ ಎಂದು ಡಿಸಿ, ಎಸ್ಪಿ, ಜಿ.ಪಂ. ಸಿಇಓ, ಎಸಿ ವಿರುದ್ಧ ಮಾಜಿ ಸಚಿವ ಎಚ್.ಡಿ.ರೇವಣ್ಣ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರದ ಮುಖ್ಯ ಕಾರ್ಯದರ್ಶಿಗಳು ಜಿಲ್ಲಾಧಿಕಾರಿ, ಎಸ್ಪಿಗೆ ಬಡ್ತಿ ನೀಡಿದ್ದಾರೆ. ಇವರೆಲ್ಲ ಕಾಂಗ್ರೆಸ್ ಸರಕಾರವೇ ಇರುತ್ತೆ ಎಂದುಕೊಂಡಿದ್ದಾರೆ. ನಾನು ಹೆದರಿ ಓಡಿ ಹೋಗುತ್ತೇನೆ, ದೇವೇಗೌಡರ ಕುಟುಂಬದ್ದು ಮುಗಿದೇ ಹೋಯಿತು ಎಂದುಕೊಂಡಿದ್ದಾರೆ ಎಂದು ಕಿಡಿಕಾರಿದ್ದಾರೆ. ದೇವೇಗೌಡರು 94 ನೇ ವಯಸ್ಸಿನಲ್ಲಿ ರಾಜ್ಯಸಭೆಗೆ ಒಂದು ದಿನ ತಪ್ಪಿಸಿಕೊಳ್ಳದೆ ಹಾಜರಾಗಿ ರಾಜ್ಯದ ಪರ ಧ್ವನಿ ಎತ್ತುತ್ತಿದ್ದಾರೆ. ಅವರು, ಈ ಜಿಲ್ಲೆಯ ಜನರನ್ನು ಎಂದು ಮರೆಯಲ್ಲ. ಈ ಜಿಲ್ಲೆಗೆ ಏನು ಮಾಡಬೇಕು ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಜಿಲ್ಲೆಯಲ್ಲಿ ಐಐಟಿ, ವಿಮಾನ ನಿಲ್ದಾಣಕ್ಕೆ ಮೀಸಲಿಟ್ಟಿದ್ದ ಜಾಗವನ್ನು ಕೆಲವರು

ಈ ದೇಶದ ರಾಜಕೀಯ ನೋಡಿದ್ದೇನೆ. ನಾನು, ಸೋತಿದ್ದೇನೆ, ಗೆದ್ದಿದ್ದೇನೆ. ಕೇಸ್ ಹಾಕಿದರೆ ಹೆದರುತ್ತೇನೆ ಎಂದುಕೊಂಡಿದ್ದಾರೆ. ಬಹಳ ಜನರನ್ನು ನೋಡಿದ್ದೇನೆ. ಇವರು ಮಾಡಿರುವ ಅಕ್ರಮವನ್ನು ಧಾರಾವಾಹಿ ತರ ಬಿಡುಗಡೆ ಮಾಡುತ್ತೇನೆ.
- ಎಚ್.ಡಿ.ರೇವಣ್ಣ, ಮಾಜಿ ಸಚಿವ.

ಕಬಳಿಸುತ್ತಿದ್ದಾರೆ. ಕಾಂಗ್ರೆಸ್ ಸರಕಾರದಿಂದ ಐಐಟಿ ಬೇರೆ ಜಿಲ್ಲೆಗೆ ಹೋಯ್ತು. ದೇವೇಗೌಡರು ಬದುಕಿರುವುದರೊಳಗೆ ಐಐಟಿ ತರಲು ಪ್ರಯತ್ನ ಮಾಡುತ್ತೇನೆ. ಕೆಲವರು ಅಡ್ಡಿಪಡಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಚಿಂತಕ ಕೆ.ಎಸ್ ಭಗವಾನ್ ವಿವಾದಾತ್ಮಕ ಹೇಳಿಕೆ

ಹಿಂದೂ ಅವಮಾನಕರ ಶಬ್ದ

ರಾಯಚೂರು: ಹಿಂದೂ ಅನ್ನೋದು ಅವಮಾನಕರ ಶಬ್ದ. ಯಾರು ಹೀನನಾಗಿದ್ದಾನೋ, ಯಾರು ದೂಷಣೆಗೆ ಒಳಗಾಗಿದ್ದಾನೋ ಅವನೇ ಹಿಂದೂ ಅಂತ ಚಿಂತಕ ಕೆ.ಎಸ್ ಭಗವಾನ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ರಾಯಚೂರಿನ ದೇವದುರ್ಗದ ಕನಕಗುರುಪೀಠ ತಿಂಥಿಣಿ ಬ್ರಿಡ್ಜ್‌ನಲ್ಲಿ ನಡೆಯುತ್ತಿರುವ ಹಾಲುಮತ ಉತ್ಸವದಲ್ಲಿ ಮಾತನಾಡಿ,

ಕಾಶ್ಮೀರದ ಶೈವ ಗ್ರಂಥಗಳಲ್ಲಿ ಹಿಂದೂ ಪದಕ್ಕೆ ಯಾರೂ ಹೀನನಾಗಿದ್ದಾರೊ, ಯಾರು ದೂಷಣೆಗೆ ಒಳಗಾಗಿದ್ದಾರೋ ಅವನು ಹಿಂದೂ ಅಂತ ಇದೆ. ಹಾಗಾಗಿ ಹಿಂದೂ ಅನ್ನೋ ಶಬ್ದ ಬಹಳ ಅಪಮಾನಕರವಾಗಿದೆ. ಚಾತುರ್ವರ್ಣದಲ್ಲಿ ಶೂದ್ರ ಅನ್ನೋ ಶಬ್ದ ಸಹ ಮನುಸ್ಮೃತಿ ಪ್ರಕಾರ ಅಪಮಾನಕ್ಕೆ ಒಳಗಾಗಿದೆ. ಸಂವಿಧಾನದಲ್ಲಿ ಸಮಾನತೆ ಸ್ವಾತಂತ್ರ್ಯ ಸೇರಿ ದೊಡ್ಡ ತತ್ವವನ್ನ ಬಾಬಾ ಸಾಹೇಬರು ಅಳವಡಿಸಿದ್ದಾರೆ. ಸಂವಿಧಾನ ತೆಗೆದು ಹಾಕಲು ನಮ್ಮ ದೇಶದ ಜನ ಅವಕಾಶ ನೀಡಬಾರದು. ಮನುಸ್ಮೃತಿಯನ್ನ ವಾಪಸ್ ತರಬಾರದು. ಮನುಸ್ಮೃತಿಯನ್ನ ಬಾಬಾ ಸಾಹೇಬರು, ಪೆರಿಯಾರ್ ಸುಟ್ಟು ಹಾಕಿದರು.

ಹಿಂದೂ ಶಬ್ದ ಬಂದಿದ್ದು 1030ನೇ ಇಸವಿಯಲ್ಲಿ. ಪರ್ಷಿಯನ್ ಲೇಖಕ ಆಲ್ಬರೋನಿ ಭಾರತದ ಬಗ್ಗೆ ಬರೆಯುತ್ತಾ ಸಿಂಧೂ ನದಿಯನ್ನ ಹಿಂದೂ ಅಂತ ಕರೆದರು. ಪರ್ಷಿಯನ್ ಭಾಷೆಯಲ್ಲಿ ಸ' ಕಾರ ಇಲ್ವಂತೆ, ಸ' ಕಾರ ಹ' ಕಾರ ಆಗುತ್ತಂತೆ. ಮುಂದೆ ಅಕ್ಬರ್‌ನ ಕಾಲದಲ್ಲಿ ಈ ದೇಶಕ್ಕೆ ಹಿಂದೂಸ್ತಾನ ಎಂದು ಹೆಸರು ಬಂತು. ಹೀಗಾಗಿ ರಾಮಾಯಣ, ಮಹಾಭಾರತ, ಪುರಾಣ, ವೇದ ಗ್ರಂಥಗಳಲ್ಲಿ ಹಿಂದೂ ಅನ್ನೋ ಹೆಸರಿಲ್ಲ.
- ಕೆ.ಎಸ್ ಭಗವಾನ್, ಚಿಂತಕ

ಸಂವಿಧಾನ ಪರ ಹೋರಾಡಬೇಕು ಮನುಸ್ಮೃತಿಯನ್ನು ತಿರಸ್ಕರಿಸಬೇಕು ಅಂತ ಭಗವಾನ್ ಹೇಳಿದ್ದಾರೆ.

ಕರ್ನಾಟಕ ಸರ್ಕಾರ
ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ, ಸಯ್ಯಾಜಿ ರಾವ್ ರಸ್ತೆ, ಮೈಸೂರು.
ಸಂಖ್ಯೆ: ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ-14/2024-25 ದಿನಾಂಕ: 08.01.2025

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

1) ಟೆಂಡರ್ ಪ್ರಕಟಣೆ ಸಂಖ್ಯೆ.: ಕಾ.ಅ(ಪೂ)/ಟಿಎನ್-56/2024-25, ದಿನಾಂಕ: 08.01.2025. ಒಟ್ಟು ಕಾಮಗಾರಿಗಳು: 07. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 261.35. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: 13.01.2025 ಬೆಳಗ್ಗೆ 11.00 ರ ನಂತರ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27.01.2025 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 28.01.2025 ಸಂಜೆ 5.30 ಗಂಟೆಗೆ.

2) ಟೆಂಡರ್ ಪ್ರಕಟಣೆ ಸಂಖ್ಯೆ.: ಕಾ.ಅ(ಪೂ)/ಟಿಎನ್-57/2024-25, ದಿನಾಂಕ: 06.01.2025. ಒಟ್ಟು ಕಾಮಗಾರಿಗಳು: 13. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 486.69. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: 08.01.2025 ಬೆಳಗ್ಗೆ 11.00 ರ ನಂತರ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.01.2025 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 24.01.2025 ಸಂಜೆ 5.30 ಗಂಟೆಗೆ.

3) ಟೆಂಡರ್ ಪ್ರಕಟಣೆ ಸಂಖ್ಯೆ.: ಕಾ.ಅ(ಪ)/ಟಿಎನ್-58/2024-25, ದಿನಾಂಕ: 08.01.2025. ಒಟ್ಟು ಕಾಮಗಾರಿಗಳು: 05. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 222.75. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: 08.01.2025 ಬೆಳಗ್ಗೆ 11.00 ರ ನಂತರ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.01.2025 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 24.01.2025 ಸಂಜೆ 5.30 ಗಂಟೆಗೆ.

4) ಟೆಂಡರ್ ಪ್ರಕಟಣೆ ಸಂಖ್ಯೆ.: ಕಾ.ಅ(ಪೂ)/ಟಿಎನ್-59/2024-25, ದಿನಾಂಕ: 06.01.2025. ಒಟ್ಟು ಕಾಮಗಾರಿಗಳು: 02. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 300.00. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: 13.01.2025 ಬೆಳಗ್ಗೆ 11.00 ರ ನಂತರ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27.01.2025 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 29.01.2025 ಸಂಜೆ 5.30 ಗಂಟೆಗೆ.

ಸರ್ವಿಸ್ ಕಾಮಗಾರಿ: 5) ಟೆಂಡರ್ ಪ್ರಕಟಣೆ ಸಂಖ್ಯೆ:ಕಾ.ಅ(ಪೂ)/ಟಿಎನ್55/2024-25, ದಿನಾಂಕ: 30.12.2024. ಒಟ್ಟು ಕಾಮಗಾರಿಗಳು: 01. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 600.00. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: 31.12.2024 ಬೆಳಗ್ಗೆ 11.00ರ ನಂತರ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17.01.2025 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 18.01.2025 ಸಂಜೆ 5.30 ಗಂಟೆಗೆ.

6) ಟೆಂಡರ್ ಪ್ರಕಟಣೆ ಸಂಖ್ಯೆ:ಕಾ.ಅ(ಪೂ)/ಟಿಎನ್60/2024-25, ದಿನಾಂಕ: 08.01.2025. ಒಟ್ಟು ಕಾಮಗಾರಿಗಳು: 01. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: 09.01.2025 ಬೆಳಗ್ಗೆ 11.00ರ ನಂತರ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27.01.2025 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 28.01.2025 ಸಂಜೆ 5.30 ಗಂಟೆಗೆ.

7) ಟೆಂಡರ್ ಪ್ರಕಟಣೆ ಸಂಖ್ಯೆ: ಟೆಂ.ಪ್ರ.ಸಂ:ಮೈನಪಾ/ಉಆ(ಅ)/ವಾವಿ/ಪಿಆರ್/84/2024-25, ದಿನಾಂಕ: 08.01.2025. ಒಟ್ಟು ಕಾಮಗಾರಿಗಳು: 03. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 145.53. ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: 15.01.2025 ಬೆಳಗ್ಗೆ 11.00ರ ನಂತರ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 29.01.2025 ಸಂಜೆ 5.30 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 30.01.2025 ಸಂಜೆ 5.30 ಗಂಟೆಗೆ.

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂರ್ವ ಮತ್ತು ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು (ಪೂರ್ವ) ಮೈಸೂರು ಮಹಾನಗರ ಪಾಲಿಕೆ, ಮೈಸೂರು.
ಸಹಿ/- ಕಾರ್ಯಪಾಲಕ ಅಭಿಯಂತರರು (ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು.
DIPR/MYS/RO/1102/2024-25

ಫ್ರಿಡ್ಜ್ ಬ್ಲಾಸ್ಟ್: ವಸ್ತುಗಳು ಸುಟ್ಟು ಕರಕಲು

ಹಾವೇರಿ: ತಡರಾತ್ರಿ ಫ್ರಿಡ್ಜ್ ಬ್ಲಾಸ್ಟ್ ಆಗಿ ವಸ್ತುಗಳು ಸುಟ್ಟುಕರಕಲಾದ ಘಟನೆ ಮಂಜುನಾಥ ನಗರದಲ್ಲಿ ನಡೆದಿದೆ. ಚನ್ನಬಸಪ್ಪ ಗೂಳಪ್ಪನವರ್ ಎಂಬುವರಿಗೆ ಸೇರಿದ ಮನೆಯಲ್ಲಿ ಈ ದುರ್ಘಟನೆ ನಡೆದಿದೆ. ಮನೆಯಲ್ಲಿದ್ದ ಎರಡು ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳು ಸುಟ್ಟು ಕರಕಲಾಗಿವೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸುವ ಕಾರ್ಯ ಮಾಡಿದ್ದಾರೆ.

ಕರ್ನಾಟಕ ಸರ್ಕಾರ
ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಶಿರಸಿ.ಉತ್ತರ ಕನ್ನಡ
ಶಿರಸಿ ಹುಬ್ಬಳ್ಳಿ ರಸ್ತೆ, ಸರ್ಕಾರಿ ಆಯುರ್ವೇದ ಆಸ್ಪತ್ರೆ ಹತ್ತಿರ, ಶಿರಸಿ 581402
ದೂರವಾಣಿ.ಸಂ: 08384-226292 ಮೊ: 8277933045, 9449026142
e-mail : agriadasirsi@gmail.com
ಸಂ/ಸಕೃನಿಶಿ/ಸಿಬ್ಬಂದಿ/ಹೊಗುಸಿ/ಟೆಂಡರ್/2024-25 ದಿನಾಂಕ: 08/01/2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ಕರ್ನಾಟಕ ಇ-ಟೆಂಡರ್ ಪೋರ್ಟಲ್ ಮೂಲಕ)

ಶಿರಸಿ ತಾಲೂಕು ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರು ಶಿರಸಿ, ಅಧೀನದ ರೈತ ಸಂಪರ್ಕ ಕೇಂದ್ರಗಳು ಹಾಗೂ ಮಣ್ಣು ಆರೋಗ್ಯ ಕೇಂದ್ರ ಶಿರಸಿ ಕಛೇರಿಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ 2024-25 (ದಿನಾಂಕ: 01/03/2025 ರಿಂದ 31/03/2026) ರ ವರೆಗೆ ಮುಂದಿನ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆ ಪಡೆಯುವ ಬಗ್ಗೆ. ಅಗತ್ಯ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಮೂಲದಿಂದ ಒದಗಿಸುವ ಏಜೆನ್ಸಿ ಮೂಲಕ ಪಡೆಯಲು ಟೆಂಡರ್‌ನ್ನು ಅಹ್ವಾನಿಸಲಾಗಿರುತ್ತದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 07/02/2025 ಅಪರಾಹ್ನ 5.00 ಘಂಟೆ ವರೆಗೆ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೇಲಿನ ವಿಳಾಸಕ್ಕೆ ಸಂಪರ್ಕಿಸಬಹುದು, ಹಾಗೂ ವೆಬ್‌ಸೈಟ್: www.kppp.karnataka.gov.in ನಲ್ಲಿ ಟೆಂಡರ್ ಫೈಲ್ No: AD/2024-25/SE0243 ನ್ನು ಪರಿಶೀಲಿಸಬಹುದು.

ಸಹಿ/-ಸಹಾಯಕ ಕೃಷಿ ನಿರ್ದೇಶಕರು, ಶಿರಸಿ, ಉತ್ತರ ಕನ್ನಡ
DIPR/ADK/KSMCA/744/24-25 Dt.13.01.25

ನಗರಸಭೆ ಚಿಂತಾಮಣಿ
ಟೆಂಡರ್ ಪ್ರಕಟಣೆ

ಇ-ಪ್ರಕ್ಯೂರ್‌ಮೆಂಟ್ ಮೂಲಕ ಕೆಜಿ, ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ತಾಶಾ/ಸಿಆರ್/124/2024-25 ದಿನಾಂಕ: 30.12.2024 ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000 ಅಡಿಯಲ್ಲಿ ಕರ್ನಾಟಕ ರಾಜ್ಯದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ **ಇಂಡೆಂಟ್ ಸಂಖ್ಯೆ: (1)** DMA/2024-25/OW/WORK_INDENT34205. **(2)** DMA/2024-25/OW/WORK_INDENT34311. **(3)** DMA/2024-25/OW/WORK_INDENT34323. **(4)** DMA/2024-25/OW/WORK_INDENT34324. **(5)** DMA/2024-25/OW/WORK_INDENT34370. ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಆಹ್ವಾನಿಸಿರುತ್ತಾರೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. **ಸೂಚನೆಗಳು:** ಕ್ರ.ಸಂ (1) ರ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 14.01.2025 ರಂದು ಸಮಯ ಸಂಜೆ 17:00 ಗಂಟೆಯವರೆಗೆ** ತಾಂತ್ರಿಕ ಬಿಡ್ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ತೆರೆಯುವ **ದಿನಾಂಕ: 15.01.2025 ರಂದು ಸಮಯ ಸಂಜೆ 17:05 ಗಂಟೆಗೆ** ತಾಂತ್ರಿಕ ಬಿಡ್ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ತೆರೆಯುವ **ದಿನಾಂಕ: 17.01.2025 ರಂದು ಸಮಯ ಸಂಜೆ 17:05 ಗಂಟೆಗೆ** ತೆರೆಯಲಾಗುವುದು. ಕ್ರ.ಸಂ (2)&(5) ರ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 17.01.2025 ರಂದು ಸಮಯ ಸಂಜೆ 17:00 ಗಂಟೆಯವರೆಗೆ** ತಾಂತ್ರಿಕ ಬಿಡ್ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ತೆರೆಯುವ **ದಿನಾಂಕ: 18.01.2025 ರಂದು ಸಮಯ ಸಂಜೆ 17:05 ಗಂಟೆಗೆ** ತಾಂತ್ರಿಕ ಬಿಡ್ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ತೆರೆಯುವ **ದಿನಾಂಕ: 20.01.2025 ರಂದು ಸಮಯ ಸಂಜೆ 17:05 ಗಂಟೆಗೆ ತೆರೆಯಲಾಗುವುದು.**

ಸಹಿ/- ಪೌರಾಯುಕ್ತರು, ನಗರಸಭೆ, ಚಿಂತಾಮಣಿ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:338/ಕೆಎಸ್‌ಎಂಸಿಎ/2024-25

ಕೈ ಪಡೆ ನೋವಿಗೆ ಹೈ ಮುಲಾಮು

ಮೊದಲಪುಟದಿಂದ

ಸಚಿವರ ವರದಿ ಪಡೆದ ಹೈಕಮಾಂಡ್: ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಸುರ್ಜೇವಾಲ ಅವರು ಸಚಿವರ ಕಾರ್ಯಕ್ಷಮತೆಯ ಬಗ್ಗೆ ಪ್ರತ್ಯೇಕ ವರದಿ ಪಡೆದುಕೊಂಡಿದ್ದಾರೆ. ಈ ವರದಿಯನ್ನು ಸುರ್ಜೇವಾಲ ಅವರು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರಿಗೆ ತಲುಪಿಸಲಿದ್ದಾರೆ. ಬಳಿಕ ಇನ್ನೆರಡು ತಿಂಗಳಲ್ಲಿ ಎಲ್ಲ ಸಚಿವರೊಂದಿಗೆ ಒನ್ ಟು ಒನ್ ಚರ್ಚೆ ನಡೆಸಿ, ಇಲಾಖಾ ಪ್ರಗತಿಯ ಮಾಹಿತಿ ಪಡೆಯಲಿದ್ದಾರೆ. ಒಂದು ವೇಳೆ ಮುಂದಿನ 60 ದಿನಗಳಲ್ಲೂ ಸಚಿವರು ಎಚ್ಚೆತ್ತುಕೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ.

ಸಭೆಗೆ ಪರಂ, ರಾಜಣ್ಣ ಗೈರು

ಸೋಮವಾರ ಬೆಳಗ್ಗೆ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಹಾಗೂ ಸಹಕಾರ ಸಚಿವ ಕೆ.ಎನ್.ರಾಜಣ್ಣ ಗೈರಾಗಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಕೆಲ ದಿನಗಳ ಹಿಂದೆ ಪರಮೇಶ್ವರ ಅವರು ದಲಿತ ಶಾಸಕರ ಸಭೆ ನಡೆಸಲು ಉದ್ದೇಶಿಸಿದ್ದರು. ಆದರೆ ಡಿ.ಕೆ.ಶಿವಕುಮಾರ್ ಅವರ ಮನವಿ ಮೇರೆಗೆ ಪಕ್ಷದ ಹೈಕಮಾಂಡ್ ಈ ಸಭೆಯನ್ನು ರದ್ದುಪಡಿಸುವಂತೆ ಸೂಚನೆ ನೀಡಿತ್ತು. ಇದರಿಂದ ಬೇಸರಗೊಂಡು ಸಭೆಯಿಂದ ದೂರ ಉಳಿದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಇಬ್ಬರ ಗೈರಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಸುರ್ಜೇವಾಲ ಅವರು, ಪರಮೇಶ್ವರ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದವರು. ಪಕ್ಷವನ್ನು ಅವರು ನಡೆಸಿರುವ ಅವರಿಗೆ ಪಕ್ಷದ ಶಿಸ್ತಿನ ಬಗ್ಗೆ ಅರಿವಿದೆ. ನಾನು ಪಕ್ಷದ ಒಳಗೆ ನಮ್ಮ ನಾಯಕರಿಗೆ ನನ್ನ ಸಂದೇಶ ತಲುಪಿಸಿದ್ದೇನೆ ಎಂದು ಪರೋಕ್ಷವಾಗಿ ಟಾಂಗ್ ನೀಡಿದ್ದಾರೆ. ಆದರೆ ಸಂಜೆ ನಡೆದ ಶಾಸಕಾಂಗ ಪಕ್ಷದ ಸಭೆಗೆ ಈ ಇಬ್ಬರೂ ಭಾಗವಹಿಸಿದ್ದರು.

ಕುತೂಹಲಕ್ಕೆ ಕಾರಣವಾದ 'ತ್ಯಾಗ'ದ ಹೇಳಿಕೆ

ಕೆಲ ತಿಂಗಳ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತ್ಯಾಗದ ಹೇಳಿಕೆಯನ್ನು ನೀಡಿದ್ದರು. ಇದೀಗ ಇದೇ ಧಾಟಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಮಾತನಾಡಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಕೆಪಿಸಿಸಿ ಕಚೇರಿಯಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ತ್ಯಾಗ ಮಾಡಿದ್ದಾರೆ. ನಾವು ಕೂಡ ಅದೇ ದಾರಿಯಲ್ಲಿ ನಡೆಯುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕಾಂಗ್ರೆಸ್ ಪಕ್ಷದ ಮಾತ್ರ ಪರಿವರ್ತನೆ, ಎಲ್ಲರನ್ನೂ ಒಳಗೊಳ್ಳುವ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿದೆ. ಆದರೆ, ಬಿಜೆಪಿ ಯಥಾಸ್ಥಿತಿ ಬಯಸುತ್ತದೆ ಎಂದರು. ಈ ತ್ಯಾಗದ ಮಾತನ್ನು ಸಿದ್ದರಾಮಯ್ಯ ಅವರು ಯಾರಿಗೆ ಹೇಳಿದ್ದಾರೆ ಎನ್ನುವುದೇ ಪಕ್ಷದಲ್ಲಿ ಚರ್ಚೆಯಾಗುತ್ತಿರುವ ಬಹುದೊಡ್ಡ ವಿಷಯವಾಗಿದೆ.

ಬಿಜೆಪಿಯಲ್ಲಿ ಆಂತರಿಕ ಯುದ್ಧ ನಡೆಯುತ್ತಿದೆ. ಅವರು ಗಾಜಿನ ಮನೆಯಲ್ಲಿ ನಿಂತು ಬೇರೆಯವರ ಮನೆ ಮೇಲೆ ಕಲ್ಲು ಹೊಡೆಯಬಾರದು. ಬಿಜೆಪಿಯ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಗದ್ದಲ ಸೃಷ್ಟಿಸುತ್ತಿದ್ದಾರೆ. ನಮ್ಮ ಪಕ್ಷದ ಸಿದ್ದರಾಮಯ್ಯ, ಶಿವಕುಮಾರ್ ಇಬ್ಬರೂ ಅರ್ಜುನನಂತೆ ತಮ್ಮ ಗುರಿಯತ್ತ ದೃಷ್ಟಿ ನೆಟ್ಟಿದ್ದಾರೆ. ಇವರ ಗುರಿ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸುವುದು ಹಾಗೂ ಸಮರ್ಥವಾಗಿ ಸರಕಾರವನ್ನು ನಡೆಸುವುದು.
- ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಗಾಂಧಿ ಸಮಾವೇಶದಲ್ಲಿ ತೊಡಗಿಸಿಕೊಳ್ಳಿ

ಕೆಪಿಸಿಸಿ ಕಚೇರಿಯಲ್ಲಿ ನಡೆದ ಪದಾಧಿಕಾರಿಗಳ ಸಭೆಯಲ್ಲಿ ಬೆಳಗಾವಿಯಲ್ಲಿ ಹಮ್ಮಿಕೊಂಡಿರುವ ಜೈ ಭೀಮ್, ಜೈ ಸಂವಿಧಾನ ಕಾರ್ಯಕ್ರಮದಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕು. ಅದರಲ್ಲಿಯೂ ಉತ್ತರ ಕರ್ನಾಟಕದ ಶಾಸಕರು, ಸಚಿವರು ಇನ್ನಷ್ಟು ಹೆಚ್ಚುವರಿ ಹೊಣೆಗಾರಿಕೆಯನ್ನು ಹೋರಬೇಕು. ಮಹಾತ್ಮಾ ಗಾಂಧಿ, ಅಂಬೇಡ್ಕರ್ ವಿಷಯದಲ್ಲಿ ಬಿಜೆಪಿ ನಾಯಕರ ಕೆಲ ಸುಳ್ಳು ಆರೋಪಗಳಿಗೆ ಸರಿಯಾದ ಉತ್ತರ ನೀಡುವ ಕೆಲಸವನ್ನು ಕೈ ಪಡೆ ಮಾಡಬೇಕು ಎಂದು ಸುರ್ಜೇವಾಲ ಸೂಚನೆ ನೀಡಿದ್ದಾರೆ.

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು.
ಸಂಖ್ಯೆ:ಸಿಎಂಸಿ/ಸಿಕೆಎಂ/ನನಿಕಾ/ಸಿ.ಆರ್/45/2024-25 ದಿನಾಂಕ: 08.01.2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಕಂಡ ವಿವರದ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಷರತ್ತುಗಳಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)
1	DMA/2024-25/WS/WORK_INDENT 34699	49.50	1,04,800.00
3	DMA/2024-25/WS/WORK_INDENT 34714	49.50	1,04,900.00

ಟೆಂಡರ್ ಫಾರಂ ಬೆಲೆ ಇ-ಪ್ರೊಕ್ಯೂರ್‌ಮೆಂಟ್‌ನಂತೆ, ಕಾಲಾವಧಿ-12 ತಿಂಗಳು
1. ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.01.2025 ರ 17.30 ಗಂಟೆಯವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.01.2025 ರ 11.00 ಗಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ: 28.01.2025 ರ 11.00 ಗಂಟೆಗೆ

ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದ್ದಲ್ಲಿ ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಸಹಿ/- (ಶ್ರೀಮತಿ ಸುಜಾತ ಶಿವಕುಮಾರ್) ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು
ಸಹಿ/- (ಶ್ರೀಮತಿ ಅನು ಮಧುಕರ್) ಉಪಾಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು.
ಸಹಿ/- (ಶ್ರೀ ಬಿ.ಸಿ.ಬಸವರಾಜು ಕೆ.ಎಂ.ಎ.ಎಸ್) ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24-25/141/1406

ಕನ್ನಡದ ಸೂಪರ್ ಹಿಟ್ ಸಿನಿಮಾ ಚಾರ್ಲಿ-777 ಚಿತ್ರದ ನಿರ್ದೇಶಕ ಕಿರಣ್ ರಾಜ್ ಅವರು ಅನಯಾ ವಸುಧಾ ಜತೆ ಮಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಿಶ್ಚಿತಾರ್ಥ ಮಾಡಿಕೊಂಡರು.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಜಗತ್ತಿಗೆ ಬ್ರಾ್ಯಂಡ್ ಆಗಿದ್ದ ಸಿಲಿಕಾನ್ ಸಿಟಿಯನ್ನು ಬ್ರಾ್ಯಂಡ್ ಬೆಂಗಳೂರು ಎನ್ನುತ್ತಲೇ ಬ್ಯಾಡ್ ಬೆಂಗಳೂರನ್ನಾಗಿ ಮಾಡಿದ್ದು INCKarnataka ಸರಕಾರದ ಬಹುದೊಡ್ಡ ಸಾಧನೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೇ ಆ ದಿನಗಳ ಕೊತ್ವಾಲ್ ಶಿಷ್ಯಂದಿರು ಬೆಂಗಳೂರನ್ನು ಅಸುರಕ್ಷಿತ ನಗರವನ್ನಾಗಿ ಮಾಡಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಈ KShivakumar ಅವರು ಕೊತ್ವಾಲ್ ಶಿಷ್ಯಂದಿರ ಜತೆ ಸೇರಿಕೊಂಡು ಟ್ರಾಫಿಕ್ ಜಾಮ್‌ನಲ್ಲಿ ಬೆಂಗಳೂರನ್ನು ವಿಶ್ವದ 3ನೇ ಸ್ಥಾನಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಡಿಕೆ ಶಿವಕುಮಾರ್ ಅವರು siddaramaiah ಅವರನ್ನು ಸೈಡ್‌ಗಿಟ್ಟು ಒಂದು ವೇಳೆ ಮುಖ್ಯಮಂತ್ರಿ ಆದರೆ, ಟ್ರಾಫಿಕ್ ಜಾಮ್‌ನಲ್ಲಿ ನಂಬರ್ 1 ಸ್ಥಾನ ಪಡೆಯುವುದು ಖಚಿತ ನಿಶ್ಚಿತ!

ರಾಜು .ಪಿ

ಈ ರೀತಿಯ ದೋಖಾದಲ್ಲಿ ಪ್ರಧಾನಿ ಮೊದಲು ಅಲ್ವಾ.

ವಿಶ್ವವಾಣಿ ಕ್ಲಬ್ ಹೌಸ್ 14.01.2025 ಕಾರ್ನರ್

ಮಂಗಳವಾರದ ಅತಿಥಿ
ಶ್ರೀಮತಿ ನಾಗಶ್ರೀ
ಸಂಜೆ: 06.55 ರಿಂದ 08.05 ರವರೆಗೆ
ವಿಷಯ
ಗೀತ ಮಾಧುರ್ಯ
vishwavani.news

ಸಿಎಂ, ಡಿಸಿಎಂ ಪ್ರತ್ಯೇಕ ವರದಿ ಸಲ್ಲಿಕೆ | ಮುಂದಿನ ಎರಡು ತಿಂಗಳಲ್ಲಿ ಸಚಿವರ ಜತೆ ಮುಖಾ ಮುಖಿ ಸಭೆ | ವರದಿಯ ಆಧಾರದಲ್ಲಿ ಸಚಿವರ ಭವಿಷ್ಯ ತೀರ್ಮಾನ

ಸಚಿವರ ಕಾರ್ಯವೈಖರಿ ವರದಿ ಪಡೆದ ಹೈಕಮಾಂಡ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಲ್ಲಿ ಅಧಿಕಾರದ ಗದ್ದುಗೆ ಹಿಡಿದು ಒಂದುವರೆ ವರ್ಷ ಕಳೆಯುತ್ತಾ ಬಂದರೂ, ಕೆಲ ಸಚಿವರ ಕಾರ್ಯಕ್ಷಮತೆಯ 'ಗ್ರಾಫ್' ಏರಿಕೆಯಾಗಿಲ್ಲ ಎನ್ನುವ ಆರೋಪದ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಂದ ಪ್ರತ್ಯೇಕ ವರದಿಯನ್ನು ಹೈಕಮಾಂಡ್ ಪಡೆದುಕೊಂಡಿದೆ.

ಕರ್ನಾಟಕದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಡಿನ್ನರ್ ಪಾಲಿಟಿಕ್ಸ್ ಹಾಗೂ ಅಧಿಕಾರ ಹಸ್ತಾಂತರದ ವಿವಾದದ ಬೆನ್ನಲ್ಲೇ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯಕ್ಕೆ ಆಗಮಿಸಿದ್ದು, ಸಚಿವರು ಯಾರದ್ದೋ ಒಬ್ಬರ ಪರ ಬ್ಯಾಟ್ ಮಾಡುವ ಬದಲು ನಿಮಗೆ ವಹಿಸಿರುವ ಕೆಲಸವನ್ನು ಸರಿಯಾಗಿ ನಿರ್ವಹಿಸಿ ಎನ್ನುವ ಸ್ಪಷ್ಟ ಸಂದೇಶ ರವಾನಿಸಿದ್ದಾರೆ.

31 ಸಚಿವರ ಬಗ್ಗೆ ಪ್ರತ್ಯೇಕ ವರದಿ ಸಲ್ಲಿಕೆ: ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು 31 ಸಚಿವರ ಕಾರ್ಯಕ್ಷಮತೆ ಬಗ್ಗೆ ಪ್ರತ್ಯೇಕ ವರದಿಯನ್ನು ಸುರ್ಜೇವಾಲ ಅವರಿಗೆ ಸಲ್ಲಿಸಿದ್ದಾರೆ. ಈ ಇಬ್ಬರು ನಾಯಕರು ಸಲ್ಲಿಸಿರುವ ವರದಿಯ ಆಧಾರದಲ್ಲಿ ಮುಂದಿನ ದಿನದಲ್ಲಿ ಸಚಿವರನ್ನು ಮುಂದುವರಿಸಬೇಕೋ ಬೇಡವೋ ಎನ್ನುವುದು ತೀರ್ಮಾನವಾಗಲಿದೆ ಎಂದು ತಿಳಿದುಬಂದಿದೆ.

ಸಭೆಗೆ ಕೆಲ ದಿನಗಳ ಮೊದಲೇ ಈ ಇಬ್ಬರು ನಾಯಕರಿಗೆ ಪಕ್ಷದ ಹೈಕಮಾಂಡ್ ಕೆಲವೊಂದಷ್ಟು ಪ್ರಶ್ನೆಗಳನ್ನು ಕೇಳಿ, ಎಲ್ಲ ಸಚಿವರ ಬಗ್ಗೆ ವರದಿ ನೀಡುವಂತೆ ಸೂಚನೆ ನೀಡಿತ್ತು. ಐದು ಪ್ರಶ್ನೆಗಳನ್ನು ಗಮನಿಸಿರಿಸಿಕೊಂಡು ಹೈಕಮಾಂಡ್‌ಗೆ ಇಬ್ಬರೂ ಪ್ರತ್ಯೇಕವಾಗಿ ವರದಿ ಸಲ್ಲಿಕೆ ಮಾಡಿದ್ದಾರೆ. ಬೆಳಗಾವಿಯಲ್ಲಿ ನಡೆಯಲಿರುವ ಗಾಂಧಿ ಭಾರತದ ಕಾರ್ಯಕ್ರಮದ ಬಳಿಕ ಈ ವರದಿಯ ವಿಶ್ಲೇಷಣೆಯನ್ನು ನಾಯಕರು ಮಾಡಲಿದ್ದಾರೆ ಎಂದು ತಿಳಿದುಬಂದಿದೆ.

ಜಾತಿ ಗಣತಿಗೆ ಸಂಬಂಧಿಸಿದಂತೆ ಕೆಲ ಸಚಿವರು ವಿರೋಧಿಸುತ್ತಿದ್ದಾರೆ. ಆದರೆ ಜಾತಿಗಣತಿ ಎಂಬುದು ಎಲ್ಲರಿಗೂ ಅವರ ಹಕ್ಕುಗಳಿಗಾಗಿ ಇರುವುದು. ಸಣ್ಣ ಸಮುದಾಯಗಳಿಗೂ ಹಕ್ಕುಗಳು ಸಿಗಬೇಕು. ಇದು ಎಚ್.ಕೆ ಪಾಟೀಲ್ ವಿರುದ್ಧವೋ ಡಿಕೆ ಶಿವಕುಮಾರ್ ವಿರುದ್ಧವೋ ಅಲ್ಲ ಎಂದಿದ್ದಾರೆ. ಈ ಮೂಲಕ ಜಾತಿಗಣತಿ ಪರವಾಗಿ ಇರುವಂತೆ ನಾಯಕರುಗಳಿಗೆ ತಿಳಿಸಿದ್ದಾರೆ ಎನ್ನಲಾಗಿದೆ.



ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು 31 ಸಚಿವರ ಕಾರ್ಯಕ್ಷಮತೆ ಬಗ್ಗೆ ಪ್ರತ್ಯೇಕ ವರದಿಯನ್ನು ಸುರ್ಜೇವಾಲ ಅವರಿಗೆ ಸಲ್ಲಿಸಿದರು.

ಮೌಲ್ಯಮಾಪನಕ್ಕೆ ಕೇಳಿದ ಪ್ರಶ್ನೆಗಳೇನು?

- ಇಲಾಖೆಯಲ್ಲಿ ಸಚಿವರು ತಂದಿರುವ ಬದಲಾವಣೆಗಳೇನು?
- ಇಲಾಖೆಯ ಬದಲಾವಣೆಗೆ ಸಚಿವರು ತಗೆದುಕೊಂಡು ಪ್ರಮುಖ ತೀರ್ಮಾನವೇನು?
- ಸಚಿವರು ಮಾಡಿದ ಗಮನಾರ್ಹ ಸಾಧನೆಗಳೇನು?
- ಪಕ್ಷ ಸಂಘಟನೆಗೆ ಸಚಿವರ ಕೊಡುಗೆಗಳೇನು?
- ಸರಕಾರದ ಇಮೇಜ್ ಹೆಚ್ಚಿಸಲು ಸಚಿವರ ಕೈಗೊಂಡ ಕೆಲಸವೇನು?
- ಪಕ್ಷಕ್ಕೆ ಸಚಿವರ ನೀಡಿರುವ ಕೊಡುಗೆ ಏನು?

ಇನ್ನೆರೆಡು ತಿಂಗಳಲ್ಲಿ ಬದಲಾಯಿಸಿಕೊಳ್ಳಿ

ವರದಿಯನ್ನು ಸ್ವೀಕರಿಸಿರುವ ಸುರ್ಜೇವಾಲ ಅವರು ಕೆಲ ಸಚಿವರ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಾಯಕರು ನೀಡಿರುವ ವರದಿಯನ್ನು ಪರಿಶೀಲಿಸುತ್ತೇವೆ. ಆದರೆ ಇದರೊಂದಿಗೆ ಸಚಿವರಿಗೆ 60 ದಿನಗಳ ಗುರಿ ನೀಡಲಾಗಿದೆ. ಈ 60 ದಿನಗಳ ಬಳಿಕ ಸಚಿವರ ಜತೆ ಒನ್ ಟು ಒನ್ ಚರ್ಚೆ ಮಾಡಲಿದ್ದಾರೆ. ಈ ವೇಳೆ ಸಚಿವರ ಕಾರ್ಯವೈಖರಿ ಬದಲಾಗದಿದ್ದರೆ ಕಠಿಣ ಕ್ರಮ ಅನಿವಾರ್ಯ ಎನ್ನುವ ಮಾತುಗಳನ್ನು ಸುರ್ಜೇವಾಲ ಹೇಳಿದ್ದಾರೆ ಎನ್ನಲಾಗಿದೆ. ಪಕ್ಷದ ಒಂದಿಷ್ಟು ನಾಯಕರಲ್ಲಿ ಶಿಸ್ತು ಇಲ್ಲ. ಸಚಿವರು, ಶಾಸಕರು ಯಾರು ಶಿಸ್ತು ಮೀರಬಾರದು. ಪಕ್ಷ ತಾಯಿ ಇದ್ದಂಗೆ, ಸರಕಾರ ಮಗು ಇದ್ದ ಹಾಗೇ. ಯಾರು ಕೂಡ ಪಕ್ಷವನ್ನು ನಿರ್ಲಕ್ಷ್ಯ ಮಾಡಬಾರದು. ಪಕ್ಷಕ್ಕಿಂತ ನಾವು ದೊಡ್ಡವರು ಅಂತ ಭಾವಿಸಬೇಡಿ. ಎಲ್ಲ ಸಚಿವರು ಜಡತ್ವ ಬಿಟ್ಟು ಕೆಲಸ ಮಾಡಬೇಕು ಎಂದು ಸೂಚನೆ ನೀಡಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಸ್ಪಷ್ಟನೆ | ಸಿಎಂ, ಡಿಸಿಎಂ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ

ಸಿಎಂ ಬದಲಾವಣೆಯಿಲ್ಲ ಅಧಿಕಾರ ಹಂಚಿಕೆಯೂ ಇಲ್ಲ

ಬೆಂಗಳೂರು: ಕರ್ನಾಟಕ ಮುಖ್ಯಮಂತ್ರಿಯ ಬದಲಾವಣೆಯಾಗಲಿ ಅಥವಾ ಅಧಿಕಾರ ಹಂಚಿಕೆಯ ಬಗ್ಗೆಯಾಗಲಿ ಯಾವುದೇ ಪ್ರಸ್ತಾಪವಿಲ್ಲ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸ್ಪಷ್ಟಪಡಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸರ್ವಸದಸ್ಯರ ಸಭೆಗೂ ಮೊದಲು ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಯಾವುದೇ ಕುರ್ಚಿ ಕಿತ್ತಾಟವಿಲ್ಲ. ಬಿಜೆಪಿ-ಜೆಡಿಎಸ್‌ನಲ್ಲಿರುವ ನಾಯಕತ್ವದ ಗೊಂದಲಗಳನ್ನು ಮುಚ್ಚಿಡಲು ಕೆಲ ಮಾಧ್ಯಮಗಳ ಮೂಲಕ ದಿನಕ್ಕೊಂದು ಕತೆಯನ್ನು ಹರಿಯಬಿಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಜೆಪಿಯವರ ಹೊಟ್ಟೆಯಲ್ಲಿ ಚಿಟ್ಟೆಗಳು ಹಾರುತ್ತಿವೆ: ಕರ್ನಾಟಕದಲ್ಲಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಿರುವ ಕಾಂಗ್ರೆಸ್, ಕೊಟ್ಟ ಮಾತಿನಂತೆ ನಡೆದುಕೊಂಡಿದೆ. ಇಡೀ ದೇಶಕ್ಕೆ ಮಾದರಿಯಾಗಿರುವ ಪಂಚಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ದೇಶದಲ್ಲಿಯೇ ದೊಡ್ಡ ಪ್ರಮಾಣದ ಕಲ್ಯಾಣ ಕಾರ್ಯಕ್ರಮಗಳಾಗಿವೆ. ಈ ಎಲ್ಲ ಯೋಜನೆಗಳು ಕೇವಲ ಕರ್ನಾಟಕ ಮಾತ್ರವಲ್ಲದೇ, ದೇಶದ ಜನರಿಗೆ ಇಷ್ಟವಾಗಿರುವುದರಿಂದ ಬಿಜೆಪಿಯವರ ಹೊಟ್ಟೆಯಲ್ಲಿ ಚಿಟ್ಟೆಗಳು ಹಾರುತ್ತಿವೆ ಎಂದು ಲೇವಡಿ ಮಾಡಿದರು.

ಇಲ್ಲಸಲ್ಲದ ಆರೋಪಗಳು ಪರಿಣಾಮ ಬೀರಲ್ಲ: ರಾಜ್ಯ ಸರಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳಿಂದ 58 ಸಾವಿರ ಕೋಟಿ ರು.ಗಳಷ್ಟು ಹಣ ನೇರವಾಗಿ ಫಲಾನುಭವಿಗಳ ಖಾತೆಗೆ ರವಾನೆಯಾಗುತ್ತಿದೆ. ಬಿಜೆಪಿ ಮತ್ತು ಜೆಡಿಎಸ್ ನಾಯಕರು ಈ ಗ್ಯಾರಂಟಿ ಯೋಜನೆಗಳ ಕುರಿತು ಅಸಹನೆ ಹೊಂದಿದ್ದಾರೆ.

ಅದಕ್ಕಾಗಿ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಅವರ ಟೀಕೆಗಳು ಕಾಂಗ್ರೆಸ್ ಪಕ್ಷಕ್ಕಾಗಲೀ, ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಅವರಿಗಾಗಲೀ ಪರಿಣಾಮ ಬೀರುವುದಿಲ್ಲ. ನೇರವಾಗಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಮತ್ತು ರಾಜ್ಯದ ಜನರ ಮೇಲೆ ದಾಳಿಯಾಗಿದೆ ಎಂದರು.

> ಈ ಹಿಂದೆ ನಿಗದಿಯಾಗಿದ್ದ ಸಮಾವೇಶ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಕಾಲಿಕ ನಿಧನದಿಂದ ಮುಂದೂಡಲ್ಪಟ್ಟಿತ್ತು. ಜ.21 ರಂದು ಸಮಾವೇಶಕ್ಕೆ ದಿನಾಂಕ ನಿಗದಿಪಡಿಸಲಾಗಿದೆ. ಕೇಂದ್ರ ಗೃಹಸಚಿವ ಅಮಿತ್ ಶಾ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದರು. ಇದು ಪ್ರತಿಯೊಬ್ಬ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಾದ ಅಪಮಾನ.
> -ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಕಾಂಗ್ರೆಸ್‌ನಲ್ಲಿ ಯಾವುದೇ ಗುಂಪುಗಾರಿಕೆಯಿಲ್ಲ

ಬಿಜೆಪಿಯವರು ತಮ ವೈಫಲ್ಯವನ್ನು ಮುಚ್ಚಿಕೊಳ್ಳಲು ದಿನಕ್ಕೊಂದು ಚಿತ್ರಕಥೆಯನ್ನು ಸೃಷ್ಟಿಸಿ ಅಪಪ್ರಚಾರ ಮಾಡುತ್ತಿದ್ದಾರೆ. ಬಿಜೆಪಿಯಲ್ಲಿ ಬಣ ಬಡಿದಾಟಗಳು ತೀವ್ರವಾಗಿವೆ. ವಿಜಯೇಂದ್ರ, ಆರ್.ಅಶೋಕ್, ಅಶ್ವತ್ಥನಾರಾಯಣ ಅವರದು ಒಂದು ಗುಂಪಾದರೆ ರಮೇಶ್ ಜಾರಕಿಹೊಳಿ, ಬಸನಗೌಡ ಯತ್ನಾಳ್ ಹಾಗೂ ಮತ್ತಿತರರು ಮತ್ತೊಂದು ಬಣದಲ್ಲಿ ಕಿತ್ತಾಡುತ್ತಿದ್ದಾರೆ. ಜೆಡಿಎಸ್‌ನಲ್ಲಿಯೂ ಇದೇ ರೀತಿಯ ನಾಯಕತ್ವದ ಸಂಘರ್ಷ ಇದೆ. ಕಾಂಗ್ರೆಸ್‌ನಲ್ಲಿ ಯಾವುದೇ ಗುಂಪುಗಾರಿಕೆಗಳಿಲ್ಲ. ಮುಖ್ಯಮಂತ್ರಿ ಹುದ್ದೆಗಾಗಲೀ ಅಥವಾ ಇನ್ಯಾವುದೇ ಅಧಿಕಾರಕ್ಕಾಗಲೀ ಸಂಘರ್ಷವಿಲ್ಲ ಎಂದು ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸ್ಪಷ್ಟಪಡಿಸಿದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಕಲಬುರಗಿ**

ಸಮಸ್ಯೆಯೇನು..?

- ಕಲಬುರಗಿಯ ಸೂಪರ್ ಮಾರ್ಕೆಟ್ ಸಿಟಿ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಇಲ್ಲದೆ ಗಂಟೆಗಂಟಲೆ ನಿಂತುಕೊಳ್ಳುವ ಪರಿಸ್ಥಿತಿ.
- **ಪರಿಹಾರ:** ಕಲಬುರಗಿಯ ಸೂಪರ್ ಮಾರ್ಕೆಟ್ ಸಿಟಿ ಬಸ್ ನಿಲ್ದಾಣದಲ್ಲಿ ಆಸನದ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿದೆ. ಮತ್ತಷ್ಟು ಸೀಟುಗಳನ್ನು ಒದಗಿಸಿಕೊಡುವ ಬಗ್ಗೆ ಮುಂದಿನ ದಿನಮಾನಗಳಲ್ಲಿ ಚರ್ಚಿಸುತ್ತೇವೆ ಎಂದು ಕ.ಕ.ರ.ಸಾ.ನಿ ಸಂಸ್ಥೆ ತಿಳಿಸಿದೆ

ದೇಶದ ಸ್ವಾತಂತ್ರ್ಯ ಮತ್ತು ಸಂವಿಧಾನದ ಬಗ್ಗೆ ಗೌರವವಿರುವ ಎಲ್ಲರಿಗೂ ಸ್ವಾಗತ | ನಾವು ಗಾಂಧಿ ವಂಶಸ್ಥರು ಮತ್ತು ಅವರು ಗೋಡ್ಸೆ ವಂಶಸ್ಥರು

ಐತಿಹಾಸಿಕ ಯಾನವನ್ನು ಯಶಸ್ವಿಗೊಳಿಸೋಣ:ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜೈ ಬಾಪು-ಜೈ ಭೀಮ್-ಜೈ ಸಂವಿಧಾನದ ಐತಿಹಾಸಿಕ ಅಭಿಯಾನವನ್ನು ಅತ್ಯಂತ ಯಶಸ್ವಿ ಮಾಡೋಣ. ಜ 21ರ ಬೆಳಗಾವಿಯ ಚಾರಿತ್ರಿಕ ಸಮಾವೇಶಕ್ಕೆ ಮುನ್ನಡೆಯಿರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕೆಪಿಸಿಸಿ ಕಚೇರಿಯಲ್ಲಿ ನಡೆದ ಗಾಂಧಿ ಭಾರತ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯ ಹೋರಾಟ, ದೇಶದ ಸ್ವಾತಂತ್ರ್ಯ ಮತ್ತು ಸಂವಿಧಾನದ ಬಗ್ಗೆ ಗೌರವ ಇರುವ ಎಲ್ಲರಿಗೂ ಸಮಾವೇಶಕ್ಕೆ ಸ್ವಾಗತ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದೇ ದೇಶಕ್ಕೆ ದ್ರೋಹ ಬಗೆದ ಚರಿತ್ರೆಯನ್ನು ಸಭೆಯಲ್ಲಿ ಸ್ಮರಿಸಿದರು.

ಕಾಂಗ್ರೆಸ್ ಪಕ್ಷ ಹೋರಾಟ, ತ್ಯಾಗ, ಬಲಿದಾನಗಳಿಂದ ಕಟ್ಟಿದ್ದಾಗಿದೆ. ಇಂದಿರಾಗಾಂಧಿ ಮತ್ತು ರಾಜೀವ್ ಗಾಂಧಿ ದೇಶಕ್ಕಾಗಿ ಹುತಾತ್ಮರಾದರು. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ತಮ್ಮ ಪಾಲಿಗೆ ಒದಗಿ ಬಂದಿದ್ದ ಪ್ರಧಾನಿ ಹುದ್ದೆಯನ್ನು ತ್ಯಾಗ ಮಾಡಿ ಮನಮೋಹನ್ ಸಿಂಗ್ ಅವರನ್ನು ಪ್ರಧಾನಿ ಮಾಡಿದರು. ಈ ಆದರ್ಶಗಳ ಮಾರ್ಗದಲ್ಲಿ ನಾವು ಮುನ್ನಡೆಯೋಣ ಎಂದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಬಗ್ಗೆ ಗೌರವ ಇಲ್ಲದೆ, ವಿಗ್ರಹ ಮಾಡಿಟ್ಟುಕೊಂಡಿರುವ ಬಿಜೆಪಿಯವರು, ಗಾಂಧಿ ಬಗ್ಗೆ ಗೌರವವಿಲ್ಲದ ಬಿಜೆಪಿಯವರು, ಸ್ವಾತಂತ್ರ್ಯ ಹೋರಾಟದ ಬಗ್ಗೆ ಗೌರವವಿಲ್ಲದ ಇವರಿಗೆ, ಅಂಬೇಡ್ಕರ್, ನೆಹರೂ ಯಾರ ಬಗ್ಗೆಯೂ ಗೌರವವಿಲ್ಲ ಎಂದು ಟೀಕಿಸಿದರು.

ಶೀಘ್ರವೇ ನಿಗಮಕ್ಕೆ ನೇಮಕ

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಸಿಎಂ ಸಿದ್ದರಾಮಯ್ಯ ಸಿಹಿ ಸುದ್ದಿಯನ್ನು ನೀಡಿದರು. ಇತ್ತೀಚೆಗೆ ನಡೆದ ಮೂರು ಉಪ ಚುನಾವಣೆಯಲ್ಲಿ ನಾವು ಗೆಲುವು ಸಾಧಿಸಿದ್ದೇವೆ. ಇದಕ್ಕೆ ಪಕ್ಷದ ಕಾರ್ಯಕರ್ತರು, ಮುಖಂಡರ ಪ್ರಯತ್ನವಿದೆ. ಯಾರಿಗೆ ಜವಾಬ್ದಾರಿ ನೀಡಲಾಗಿತ್ತು. ಅವರು ಚುನಾವಣೆಯ ಗೆಲುವಿಗೆ ಶ್ರಮಿಸಿದ್ದಾರೆ. ಅದಕ್ಕಾಗಿ ಸರಕಾರ ಮತ್ತು ಪಕ್ಷದ ವತಿಯಿಂದ ಕೃತಜ್ಞತೆ ಸಲ್ಲಿಸುತ್ತೇನೆ. ಕಾರ್ಯಕರ್ತರಿಗೆ ಅಧಿಕಾರದ ಅವಕಾಶವನ್ನು ನೀಡುವ ಹಿನ್ನೆಲೆಯಲ್ಲಿ ಡಾ. ಜಿ ಪರಮೇಶ್ವರ ಅವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಲಾಗಿತ್ತು. ಈ ಸಮಿತಿ ಪಕ್ಷದ ಕಾರ್ಯಕರ್ತರಿಗೆ ನಿಗಮ ಮಂಡಳಿಗಳಲ್ಲಿ ನಿರ್ದೇಶಕ ಸ್ಥಾನ ನೀಡುವ ಬಗ್ಗೆ ವರದಿ ನೀಡಿದೆ. ಅಲ್ಲದೆ, ಇನ್ನು ಬಾಕಿ ಇರುವ ನಿಗಮ- ಮಂಡಳಿಗಳಿಗೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಸಂಘಟನೆಗೆ ಒತ್ತು ನೀಡಿ : ಸುರ್ಜೇವಾಲ

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, ಈ ವರ್ಷ ಪಕ್ಷದ ಸಂಘಟನೆಗೆ ಆದ್ಯತೆ ನೀಡಲಾಗಿದ್ದು, ಪಂಚಾಯಿತಿ ಹಾಗೂ ವಾರ್ಡ್ ಮಟ್ಟದ ಸಮಿತಿಗಳನ್ನು ರಚಿಸಲು ಗಮನಹರಿಸಲಾಗುವುದು. ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ತಳಮಟ್ಟದಲ್ಲಿ ಸಾಧ್ಯವಾದಷ್ಟು ಹೆಚ್ಚು ಪದಾಧಿಕಾರಿಗಳನ್ನು ನೇಮಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

21ರಂದು ಬೆಳಗಾವಿಯಲ್ಲಿ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶವನ್ನು ಹಮ್ಮಿಕೊಂಡಿದ್ದೇವೆ. ಈ ಸಮಾವೇಶದ ಉದ್ದೇಶವನ್ನು ಈಗಾಗಲೇ ನಾವು ವಿವರಿಸಿದ್ದೇವೆ. ಇದರ ಜತೆಗೆ ಕೆಪಿಸಿಸಿ ಅಧ್ಯಕ್ಷರು, ಸಿಎಂ ಸೇರಿ ಚರ್ಚೆ ಮಾಡಿ ರಾಜ್ಯದಲ್ಲಿ 100 ಗಾಂಧಿ ಭಾರತ ಕಚೇರಿಗಳನ್ನು ನಿರ್ಮಿಸಲು ತೀರ್ಮಾನಿಸಿದ್ದಾರೆ. ಮುಂದಿನ ತಿಂಗಳು ಫೆಬ್ರವರಿ ತಿಂಗಳಲ್ಲಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿನಲ್ಲಿ ಒಟ್ಟಿಗೆ ಎಲ್ಲಾ ಕಚೇರಿಗಳ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈಗಾಗಲೇ 74 ಕಚೇರಿಗಳ ನಿರ್ಮಾಣದ ಜಾಗ ಗುರುತಿಸಲಾಗಿದ್ದು, ಉಳಿದ ಕಚೇರಿಗಳ ನಿರ್ಮಾಣದ ಬಗ್ಗೆ ಪಕ್ಷ ಶೀಘ್ರ ತೀರ್ಮಾನ ಮಾಡಲಿದೆ ಎಂದರು.



ಕೆಪಿಸಿಸಿ ಕಚೇರಿಯಲ್ಲಿ ನಡೆದ ಗಾಂಧಿ ಭಾರತ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ್, ಕೆ.ಎಚ್.ಮುನಿಯಪ್ಪ, ಮಹದೇವಪ್ಪ ಇದ್ದರು.

> ಬಿಜೆಪಿಯಲ್ಲಿ ಎಲ್ಲವೂ ಅಸ್ತವ್ಯಸ್ಥವಾಗಿದೆ. ಬಿಜೆಪಿಯಲ್ಲಿ ತಮ್ಮ ನಾಯಕ ಯಾರು ಎಂಬುದು ಗೊತ್ತಾಗುತ್ತಿಲ್ಲ. ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಆರ್.ಅಶೋಕ್, ವಿಜಯೇಂದ್ರ ಇವರಲ್ಲಿ ಪಕ್ಷದ ನೇತೃತ್ವ ಯಾರು ವಹಿಸಿಕೊಂಡಿದ್ದಾರೆ? ಪಕ್ಷದಲ್ಲಿ ಆಂತರಿಕ ಯುದ್ಧ ನಡೆಯುತ್ತಿದ್ದರೆ ಅದು ಬಿಜೆಪಿಯಲ್ಲಿ ನಡೆಯುತ್ತಿದೆ. ಅವರು ಗಾಜಿನ ಮನೆಯಲ್ಲಿ ನಿಂತು ಬೇರೆಯವರ ಮನೆ ಮೇಲೆ ಕಲ್ಲು ಹೊಡೆಯಬಾರದು. ಬಿಜೆಪಿಯ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಗದ್ದಲ ಸೃಷ್ಟಿಸುತ್ತಿದ್ದಾರೆ.
> -ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

> ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಪಂಚಾಯಿತಿಯಿಂದ ತಾಲೂಕು, ಜಿಲ್ಲಾ ಮಟ್ಟದಲ್ಲಿ ಸಮಿತಿ ರಚಿಸಿ ಪಕ್ಷ ಬಲವರ್ಧನೆಗೆ ಹೊಸರೂಪ ನೀಡಬೇಕು ಎಂದು ತೀರ್ಮಾನಿಸಲಾಗಿದೆ. ಉದಯಪುರ ಘೋಷಣೆಯಂತೆ ಕಾರ್ಯನಿರ್ವಹಣೆಗೆ ಸೂಚಿಸಲಾಗಿದೆ. ಇಂದು ನಡೆಸಿದ ಸಭೆಯಲ್ಲಿ ಯಾರಿಗೆ ಯಾವ ಜವಾಬ್ದಾರಿ ನೀಡಲಾಗಿದೆ ಅದನ್ನು ನಿಭಾಯಿಸಬೇಕು. ಯಾರಿಗೆಲ್ಲ ಬೇರೆ ಜವಾಬ್ದಾರಿ ಇದೆಯೋ ಅವರಿಗೆ ವಿಶ್ರಾಂತಿ ನೀಡಬೇಕು.
> - ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಪಕ್ಷ ಸಂಘಟನೆ ಬಗ್ಗೆ ಚರ್ಚೆ: ಡಿ.ಕೆ. ಶಿವಕುಮಾರ್

ಸಭೆಯ ಬಳಿಕ ಕೆಪಿಸಿಸಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಂಘಟನೆಗಾಗಿ ನಮ್ಮ ಪಕ್ಷ ಹಾಗೂ ಸರಕಾರ ಇಡೀ ದಿನ ಮುಡಿಪಾಗಿಟ್ಟು ಸಭೆ ನಡೆಸಲಾಗಿದೆ. ಈ ವರ್ಷ ಪಕ್ಷ ಸಂಘಟನೆಗೆ ಆದ್ಯತೆ ನೀಡುವುದು ಹಾಗೂ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶದ ಸಿದ್ಧತೆ ಬಗ್ಗೆ ಚರ್ಚೆ ಮಾಡಲಾಗಿದೆ ಎಂದರು.

ಮಾಜಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರು ನಿಧನರಾದ ಹಿನ್ನೆಲೆಯಲ್ಲಿ ಕಳೆದ ವರ್ಷದ ಡಿ. 27 ರಂದು ನಡೆಯಬೇಕಾಗಿದ್ದ ಎಐಸಿಸಿಯ ಸಮಾವೇಶವನ್ನು ಮುಂದೂಡಲಾಗಿತ್ತು. ಈ ಸಮಾವೇಶವನ್ನು ಇದೇ ತಿಂಗಳು 21ರಂದು ಬೆಳಗಾವಿಯಲ್ಲೇ ನಡೆಸಲಾಗುವುದು. ಈ ಸಮಾವೇಶದ ಪೂರ್ವಭಾವಿ ಸಭೆಯನ್ನು ನಡೆಸಿ ನಮ್ಮ ನಾಯಕರಿಗೆ ನೀಡಲಾಗಿರುವ ಜವಾಬ್ದಾರಿಗಳ ಬಗ್ಗೆ ಮಾರ್ಗದರ್ಶನ ನೀಡಿದ್ದೇವೆ ಎಂದು ತಿಳಿಸಿದರು.

224 ಕ್ಷೇತ್ರಗಳಿಂದ ಕನಿಷ್ಠ ಪಕ್ಷದ ನೂರು ಜನ ಮುಖಂಡರು ಹಾಗೂ ಕಾರ್ಯಕರ್ತರು ಆಗಮಿಸಬೇಕು ಎಂದು ಹೇಳಿದ್ದೇವೆ. ಈ ಐತಿಹಾಸಿಕ ಸಭೆಗೆ ಎಲ್ಲರೂ ಆಗಮಿಸಬೇಕು ಎಂದು ಆಹ್ವಾನ ನೀಡುತ್ತೇನೆ. ನಾವು ಈ ಸಮಾವೇಶಕ್ಕೆ ನೇಮಿಸಿದ್ದ ಸಮಿತಿಗಳು ತಮ್ಮ ಕಾರ್ಯ ನಿರ್ವಹಣೆ ಮಾಡಲಿವೆ. ನಮ್ಮ ಎಲ್ಲ ಪದಾಧಿಕಾರಿಗಳು ಇದೇ 15 ಹಾಗೂ 16ರಂದು ಎಲ್ಲಾ ಕ್ಷೇತ್ರಗಳಿಗೆ ಪ್ರವಾಸ ಮಾಡಿ ಈ ಸಮಾವೇಶದ ಪೂರ್ವಭಾವಿ ಸಭೆ ಮಾಡಲು ಸೂಚಿಸಿದ್ದೇವೆ. ಕಿತ್ತೂರು ಕರ್ನಾಟಕ ಭಾಗಕ್ಕೆ ನಮ್ಮ ಸಚಿವರು ಹಾಗೂ ಶಾಸಕರು ವಿಧಾನಸಭಾ ಕ್ಷೇತ್ರಗಳಿಗೆ ಹೋಗಿ ಪೂರ್ವಭಾವಿ ಸಭೆ ನಡೆಸಲು ಸೂಚಿಸಿದ್ದೇವೆ ಎಂದು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಅಂಬಿಕಾತನಯದತ್ತ ಪ್ರಶಸ್ತಿ ಪ್ರದಾನ 31ಕ್ಕೆ

ಧಾರವಾಡ: ಡಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿಗೆ ಸಾಹಿತಿ ವೀಣಾ ಶಾಂತೇಶ್ವರ ಹಾಗೂ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಆಯ್ಕೆಯಾಗಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ಡಿ.ಎಂ. ಪಾಟೀಲ ತಿಳಿಸಿದರು. ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಪುರಸ್ಕಾರವು ತಲಾ 50 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಜ.31 ರಂದು ನಗರದ ಬೇಂದ್ರೆ ಭವನ ದಲ್ಲಿ ನಡೆಯುವ ಬೇಂದ್ರೆ ಜನ್ಮದಿ ನದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಡಿ.ಕೆ.ಶಿವಕುಮಾರ್ ಎಂದಿಗೂ ಸಿಎಂ

ವಿಜಯಪುರ: ನಮ್ಮ ಹಿಂದೂ ಧರ್ಮಕ್ಕೆ ಏನೇ ಅಪಾಯ ಬಂದರೂ, ಗಣಪತಿ ಉತ್ಸವದಲ್ಲಿ ಗಲಾಟೆಯಾದರೂ ಡಿ.ಕೆ.ಶಿವಕುಮಾರ್ ಏನೂ ಮಾಡಲಿಲ್ಲ. ಈಗ ಕುರ್ಚಿ ಬೇಕಾದಾಗ ದೇವರು ಮತ್ತು ಹಿಂದೂ ಸನಾತನ ಧರ್ಮ ಬೇಕಾಗಿದೆ. ಈ ರೀತಿಯ ಅವರ ಕೊಳಕು ಬುದ್ಧಿ ನೋಡಿದರೆ ಅವರು ಎಂದಿಗೂ ಸಿಎಂ ಆಗುವುದಿಲ್ಲ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು. ಸುದ್ದಿಗಾರರ ಜತೆ ಅವರು ಮಾತನಾಡಿ, ಡಿ.ಕೆ. ಶಿವಕುಮಾರ್ ಪ್ರತ್ಯಂಗಿರಾ ಹೋಮ ಮಾಡಿದ್ದಾರೆ. ಅವರ ಶತ್ರುಗಳು ಯಾರು? ಸಿದ್ದರಾಮಯ್ಯ, ಸತೀಶ್ ಜಾರಕಿಹೊಳಿ, ರಾಜಣ್ಣ ಅವರಿದ್ದಾರೆ. ಅವರೆಲ್ಲ ನಾಶವಾಗಲೆಂದು ಈ ಹೋಮ ಮಾಡಿದ್ದಾರೆ. ಸಿಎಂ ಆಗಲೆಂದು ದೇವರಲ್ಲಿ ಬೇಡಿಕೊಳ್ಳುತ್ತಿದ್ದಾರೆ ಎಂದರು.

ಗ್ಯಾರಂಟಿಯಿಂದ ಮಠದ ಅನುದಾನಗಳಿಗೆ ಕತ್ತರಿ

ದಾವಣಗೆರೆ: ಸರಕಾರದ ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದ ವಿವಿಧ ಮಠಗಳ ಅಭಿವೃದ್ಧಿಯ ಅನುದಾನಕ್ಕೆ ಕತ್ತರಿ ಬಿದ್ದಿದೆ ಮಹಾಸಂಸ್ಥಾನದ ಪೀಠಾಧಿಪತಿ ಡಾ.ಪ್ರಣವಾನಂದರಾಮ್ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ಯಾರಂಟಿ ಯೋಜನೆಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಕಂಟಕ ಎದುರಾಗಿದೆ. ಒಟ್ಟು 28 ನಿಗಮಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರು ಕೇವಲ 5 ನಿಗಮಗಳಿಗೆ ಮಾತ್ರ ಅನುದಾನ ನೀಡಿದ್ದು, ಮುಂಬರುವ ದಿನಗಳಲ್ಲಿ ಮಂಡಿಸಲಿರುವ ಬಜೆಟ್‌ನಲ್ಲಿ ಎಲ್ಲ ನಿಗಮಗಳಿಗೂ ಹಣ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ರಾಮನ ದೇವಸ್ಥಾನಕ್ಕೆ ಸಿದ್ಧತೆ

ಮೈಸೂರು: ಅಯೋಧ್ಯೆಯಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಯಾಗಿ ಒಂದು ವರ್ಷವಾದ ಹಿನ್ನೆಲೆಯಲ್ಲಿ ರಾಮನ ಮೂರ್ತಿ ಕೆತ್ತನೆ ಮಾಡಲು ಬಳಸಿದ ಕಲ್ಲು ಸಿಕ್ಕಿರುವ ಜಾಗದಲ್ಲಿ ರಾಮನ ದೇವಸ್ಥಾನ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ. ಮೈಸೂರು ತಾಲೂಕಿನ ಗುಜ್ಜೇಗೌಡನಪುರದಲ್ಲಿ ಅಪರೂಪದ ಕಲ್ಲು ಸಿಕ್ಕಿತ್ತು. ದೇವಸ್ಥಾನ ಕಟ್ಟಲು ಕಳೆದ ವರ್ಷ ಭೂಮಿ ಪೂಜೆ ಸಹ ಮಾಡಲಾಗಿತ್ತಾದರೂ, ಈವರೆಗೆ ಆ ಯೋಜನೆ ಅನುಷ್ಠಾನಕ್ಕೆ ಬಂದಿರಲಿಲ್ಲ. ಸೋಮವಾರ ಜೆಸಿಬಿಯಿಂದ ಭೂಮಿ ಸ್ವಚ್ಛಗೊಳಿಸುವ ಕೆಲಸ ಆರಂಭವಾಗಿದೆ. ಜನವರಿ 22ರಂದು ಮತ್ತೆ ಪೂಜೆ ಮಾಡಿ ಕಲ್ಲು ಸಿಕ್ಕಿರುವ ಜಾಗದಲ್ಲಿ ಮೂಲ ಕಲ್ಲಿಗೆ ಪೂಜೆ ಆರಂಭಿಸಲು ಗ್ರಾಮಸ್ಥರು ನಿರ್ಧಾರ ಮಾಡಿದ್ದಾರೆ. ಕಲ್ಲು ಸಿಕ್ಕ ಜಾಗವನ್ನು ಪ್ರವಾಸಿ ತಾಣವಾಗಿಸುವ ನಿಟ್ಟಿನಲ್ಲಿ ಅಂದು ಹೇಳಿಕೆ ನೀಡಿದ್ದ ರಾಜಕೀಯ ಪ್ರಮುಖರು ಈವರೆಗೂ ಜಾಗದತ್ತ ಸುಳಿಯದಿರುವುದು ಸ್ಥಳೀಯರಿಗೆ ಬೇಸರ ತರಿಸಿದೆ.

ಹಸುಗಳ ಕೆಚ್ಚಲು ಕತ್ತರಿಸಲು ಸರಕಾರವೇ ಪ್ರೇರಣೆ

ರಾಯಚೂರು: ಬೆಂಗಳೂರಿನಲ್ಲಿ ಕೊಟ್ಟಿಗೆಯಲ್ಲಿದ್ದ ಮೂರು ಹಸುಗಳ ಕೆಚ್ಚಲು ಕತ್ತರಿಸಿದ್ದಾರೆ. ಇದಕ್ಕೆ ಪ್ರೇರಣೆಯೇ ರಾಜ್ಯದ ಕಾಂಗ್ರೆಸ್ ಸರಕಾರ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದಿನ ಬಿಜೆಪಿ ಸರಕಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗೋಶಾಲೆ ತೆರೆಯಬೇಕು ಎಂದು 14 ಗೋ ಶಾಲೆ ಆರಂಭಿಸಿತ್ತು. ಈ ಸರಕಾರ ಸಚಿವ ಸಂಪುಟದಲ್ಲಿ ಎಲ್ಲ ಗೋಶಾಲೆಗಳನ್ನು ರದ್ದು ಮಾಡಲು ಮುಂದಾಗಿದೆ. ಸಿಎಂ ಹಾಗೂ ಎಲ್ಲರೂ ಕಠಿಣ ಕ್ರಮಕ್ಕೆಗೊಳ್ಳುತ್ತೇವೆ ಎಂದಿದ್ದಾರೆ. ಈ ಮನೋಭಾವನೆ ಹೇಗೆ ಹೋಗಬೇಕು. ಈ ಬಗ್ಗೆ ರಾಜ್ಯ ಸರಕಾರವೇ ಗಮನಿಸಬೇಕು. ನಾವು ಅಧಿಕಾರ ದಲ್ಲಿದ್ದಾಗ ಗೋ ಹತ್ಯೆ ನಿಷೇಧ ಕಾಯ್ದೆ ತಂದಿದ್ದೆವು. ಆದರೆ, ಕಾಂಗ್ರೆಸ್ ಕಾಯ್ದೆ ರದ್ದು ಮಾಡುವ ಬಗ್ಗೆ ಚಿಂತನೆ ಮಾಡುತ್ತೇವೆ ಎನ್ನುತ್ತಿದೆ. ರಾಜ್ಯ ಸರಕಾರ ಹಿಂದು ಸಮಾಜದ ತಾಳ್ಮೆ ಪರೀಕ್ಷೆ ಮಾಡುತ್ತಿದೆ ಇದು ಒಳ್ಳೆಯದ್ದಲ್ಲ. ರಾಜ್ಯದಲ್ಲಿ ಹಿಂದು ಸಮಾಜ ಎದ್ದರೆ ಏನಾಗಬಹುದು ಎನ್ನುವ ಚಿಂತೆ ರಾಜ್ಯ ಕಾಂಗ್ರೆಸ್ ಸರಕಾರ ಮಾಡಬೇಕು. ಮುಂದೆ ಗಂಭೀರ ಗಲಭೆಗಳಾದರೆ ಸಾವು ನೋವುಗಳಾದರೆ ಕಾಂಗ್ರೆಸ್ ಕಾರಣ ಎನ್ನುವ ಎಚ್ಚರಿಕೆ ಕೊಡುತ್ತೇನೆ ಎಂದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ವೈಫಲ್ಯ

ಕಾರ್ಕಳ: ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕೊಯ್ದು ಅನಾಗರಿಕ, ಕ್ರೌರ್ಯ ಮೆರೆದಿರುವ ಘಟನೆ ತೀವ್ರ ವೇದನೆ ಸೃಷ್ಟಿಸಿದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ವೈಫಲ್ಯ ಮತ್ತು ಓಟು ಬ್ಯಾಂಕ್ ರಾಜಕೀಯ ಓಲೈಕೆಯಿಂದಾಗಿ ಇಂಥ ಘಟನೆಗಳು ನಡೆಯುತ್ತಿದೆ ಎಂದು ಶಾಸಕ ಸುನಿಲ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಗಾವೋ ವಿಶ್ವಸ್ಯ ಮಾತರಃ ಎಂದು ನಂಬಿದ ನಾಡು ನಮ್ಮದು. ಗೋಮಾತೆ ಎಂದೇ ಕರೆಯಲಾಗುತ್ತದೆ. ಅಂಥ ತಾಯಿಯ ಕೆಚ್ಚಲನ್ನೇ ಕತ್ತರಿಸುವಂಥ ವಿಕೃತ ಸ್ಥಿತಿಗೆ ಸಮಾಜ ಜಾರಿದೆ ಎಂದರೆ ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಳ್ಳಬೇಕು. ಆದರೆ ಈ ಸರಕಾರದಲ್ಲಿ ಏನು ಮಾಡಿದರೂ ನಡೆಯುತ್ತದೆ ಎಂಬ ಸನ್ನಿವೇಶ ನಿರ್ಮಾಣವಾಗಿದ್ದು ಕಾನೂನಿನ ಭಯ ಇಲ್ಲದಂತಾಗಿದೆ. ಈ ಘಟನೆಗೆ ಕಾರಣವಾದ ವ್ಯಕ್ತಿಗಳು ಯಾರೇ ಆದರೂ ಸರಕಾರ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಸರಕಾರದಿಂದ ಆಡಳಿತ ವೈಫಲ್ಯ

ಕಾಂಗ್ರೆಸ್ ಸರಕಾರ ಬಂದ ಬಳಿಕ ಕ್ರಿಮಿನಲ್‌ಗಳಿಗೆ ಧೈರ್ಯ: ಜೋಶಿ



ಹುಬ್ಬಳ್ಳಿ: ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಸಮಾಜ ದ್ರೋಹಿಗಳಿಗೆ ಶಕ್ತಿ ಬಂದಂತಾಗಿದೆ. ಅಧಿಕಾರಕ್ಕೆ ಬಂದಾಗೆಲ್ಲ ಪಿಎಫ್‌ಐ, ಎಸ್‌ಡಿಪಿಐ ಮೇಲಿನ ಕೇಸ್‌ಗಳನ್ನು ಹಿಂಪಡೆದ ಹಿನ್ನೆಲೆ ಕೆಲವರಿಗೆ ಶಕ್ತಿ ಬಂದಿದೆ. ಹೀಗಾಗಿ ಹಸು ಕೆಚ್ಚಲು ಕೊಯ್ಯುವ ಮಟ್ಟಕ್ಕೆ ಬಂದಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ರಾಜ್ಯ ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರಕಾರ ಬಂದ ಬಳಿಕ ಕ್ರಿಮಿನಲ್‌ಗಳಿಗೆ ಧೈರ್ಯ ಬಂದಿದೆ. ಏನಾದರೂ ಆದ್ರೆ ರಕ್ಷಿಸುತ್ತಾರೆ ಅನ್ನೋ ಧೈರ್ಯ ಹುಟ್ಟಿಕೊಂಡಿದೆ. ಪರಿಣಾಮ ಈ ರೀತಿಯ ಪ್ರಕರಣಗಳು ನಡೆಯುತ್ತಿವೆ. ಸರಕಾರ ಗಟ್ಟಿಯಾಗಿದ್ರೆ, ಈ ರೀತಿಯ ಘಟನೆಗಳು ನಡೆಯೋದಿಲ್ಲ. ಸರಕಾರದ ಸಂಪೂರ್ಣ ವೈಫಲ್ಯ ಆಗಿದೆ. ಅಮಾಯಕ ಹಸುಗಳ ಮೇಲೆ ಈ ರೀತಿ ಮಾಡುತ್ತಿದ್ದಾರೆ. ಎಲ್ಲಾ ಕ್ರಿಮಿನಲ್‌ಗಳಿಗೆ ಕಾಂಗ್ರೆಸ್ ಸರಕಾರ ಸ್ವರ್ಗ ಆಗಿದೆ ಎಂದು ಕಿಡಿಕಾರಿದರು.

ಕುಡಿದು ಏನ್ ಬೇಕಾದರೂ ಮಾಡಬಹುದಾ?

ಕುಡಿದ ಮತ್ತಿನಲ್ಲಿ ಹಸುವಿನ ಕೆಚ್ಚಲು ಕೊಯ್ದಿದ್ದಾನೆ ಎಂದು ಯಾರೋ ಹೇಳುತ್ತಿದ್ದಾರೆ. ಹಾಗಾದ್ರೆ, ಕುಡಿದಾಗ ಏನು ಬೇಕಾದ್ರೂ ಮಾಡಬಹುದಾ? ಕುಡಿದ ಮತ್ತಿನಲ್ಲಿ ಅವರ ಮನೆಯವರನ್ನು ಕೊಲೆ ಮಾಡ್ತಾರಾ? ಯಾರು ಆ ರೀತಿ ಹೇಳಿದ್ದಾರಲ್ಲ, ಅವರ ಮನೆಯಲ್ಲೇ ಯಾರನ್ನಾದ್ರೂ ಕೊಲೆ ಮಾಡಿದ್ರೆ ಬಿಡ್ತಾರಾ? ಇದ್ದ ಹಸುಗಳನ್ನು ನರಳುವಂತೆ ಮಾಡಿ, ಹೊಸ ಹಸು ಕೊಡಿಸುವೆ ಅಂದ್ರೆ, ಜಮೀರ್‌ಗೆ ಏನಾದ್ರೂ ಬುದ್ಧಿ ಇದೆಯಾ? ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಪ್ರಶ್ನಿಸಿದರು.

ವಿಶ್ವವಾಣಿ

ಸಂಪಾದಕೀಯ

ಮಾತು ಮುತ್ತಿನ ಹಾರದಂತಿರಲಿ

ಮತ್ತೊಮ್ಮೆ 'ಮಕರ ಸಂಕ್ರಾಂತಿ' ಹಬ್ಬ ಬಂದಿದೆ. ಕುಟುಂಬದ ಒಳಗೆ ಮಾತ್ರವಲ್ಲದೆ ಸಮಾಜದ ವಿವಿಧ ಸ್ತರಗಳಲ್ಲಿ ಶಾಂತಿ, ನೆಮ್ಮದಿ, ಸಹಕಾರ ಮನೋಭಾವ, ಒಗಟ್ಟಿನ ಪ್ರಜ್ಞೆ ಇತ್ಯಾದಿಗಳನ್ನು ಮೂಡಿಸುವ ನಿಟ್ಟಿನಲ್ಲಿ ಸಂಕ್ರಾಂತಿಗೆ ಅದರದ್ದೇ ಆದ ಮಹತ್ವವಿದೆ. ಈ ಹಬ್ಬದಂದು ತಯಾರಿಸಲಾಗುವ 'ಎಳ್ಳು-ಬೆಲ್ಲ'ದ ಮಿಶ್ರಣವು ಈ ಭಾವವನ್ನು ವರ್ಧಿಸುವುದರ ಸಂಕೇತರೂಪ. ಏಕೆಂದರೆ ಈ ಹಬ್ಬದಂದು ಪರಸ್ಪರರು ಎಳ್ಳು-ಬೆಲ್ಲವನ್ನು ನೀಡಿ, ''ಎಳ್ಳು-ಬೆಲ್ಲ ತಿಂದು ಒಳ್ಳೆಯ ಮಾತಾಡಿ'' ಎಂದು ಆಶಿಸುವುದು ವಾಡಿಕೆ. ಆದರೆ, ಒಳ್ಳೆಯ ಮಾತು ಎಂಬುದು ಸಂಕ್ರಾಂತಿಯ ಹಬ್ಬಕ್ಕೆ ಮಾತ್ರವೇ ಸೀಮಿತವಾಗದೆ, ಅದು ನಮ್ಮ ಅನುದಿನದ ಮತ್ತು ಅನುಕ್ಷಣದ ವ್ರತವೂ ಆಗಬೇಕಿದೆ. ಏಕೆಂದರೆ, ಅಸಾಧ್ಯ ಎನಿಸುವಂಥ ಕೆಲಸಗಳನ್ನೂ ಸಾಧ್ಯವಾಗಿಸುವ ಶಕ್ತಿಯು ವ್ಯಕ್ತಿಯೊಬ್ಬನ ನಗು ಹಾಗೂ ಒಳ್ಳೆಯ ಮಾತಿಗೆ ಇರುತ್ತದೆ ಎಂಬುದು ಬಲ್ಲವರ ಮಾತು. 'ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು' ಎಂದು ನಮ್ಮ ಶರಣರು ಹೇಳಿದ್ದು ಈ ನೆಲೆಯಲ್ಲೇ. ಸಮಾಜದಲ್ಲಿ ಪ್ರಸ್ತುತ ಒಂದೊಮ್ಮೆ ಅಸಹನೆ, ದ್ವೇಷಮಯ ವಾತಾವರಣ, ಅಸಹಿಷ್ಣುತೆ ಕಾಣುತ್ತಿದೆ ಎಂದಾದಲ್ಲಿ, ಒಳ್ಳೆಯ ಮಾತಿನ ಕೊರತೆಯೇ ಅದಕ್ಕೆ ಕಾರಣ ಎಂದು ಹೇಳಿಬಿಡಬಹುದು. ಯುದ್ಧ ಮತ್ತು ಸಂಘರ್ಷದಂಥ ಅಸಹಜ ವಾತಾವರಣ ವಿವಿಧೆಡೆ ತಾಂಡವವಾಡುತ್ತಿರುವುದಕ್ಕೆ ಇಂಥ ಒಳ್ಳೆಯ ಮಾತು ಮತ್ತು ಸಂವಹನದ ಕೊರತೆಯೇ ಕಾರಣ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಆದರೆ ಈ ಸರಳ ಸತ್ಯ ಕೆಲವರಿಗೆ ಇನ್ನೂ ಅರ್ಥವಾಗದಿರುವುದು ವಿಷಾದನೀಯ. ಒಳ್ಳೆಯ ಮಾತೆಂಬುದು 'ಒಳ್ಳೆಯ ಕೃತಿ' ಸಂಭವಿಸಲು ವೇಗೋತ್ಕರ್ಷಕವಾಗಿ ಪರಿಣಮಿಸುತ್ತದೆ. ಅದು ಪಾರಸ್ಪರಿಕ ಸಂಬಂಧವನ್ನು ಮತ್ತಷ್ಟು ಹಸನುಗೊಳಿಸುವುದರ ಜತೆಗೆ, ವಾತಾವರಣವು ಸೌಹಾರ್ದತೆ ಮತ್ತು ದಿವ್ಯತೆಯಿಂದ ಬೆಳಗುವುದಕ್ಕೂ ಕಾರಣವಾಗುತ್ತದೆ. ಸಂಕ್ರಾಂತಿಯಂದು ಪಠಿಸಲಾಗುವ ಈ 'ಒಳ್ಳೇಮಾತಿನ ಮಂತ್ರ'ದ ಆಶಯ ಇದುವೇ ಆಗಿದೆ. ಎಲ್ಲರಿಗೂ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು.

ಸೊಂಪಾದಕೀಯ

ದಳಪತಿ ಗೆಲ್ಲುತ್ತಾರಾ?

ನಮ್ಮ ದೇಶದಲ್ಲಿ ಚಿತ್ರರಂಗ ಮತ್ತು ರಾಜಕೀಯ ರಂಗದ ನಡುವೆ ಇರುವ ನಂಟು ಎಲ್ಲರಿಗೂ ಗೊತ್ತೇ ಇದೆ. ರಾಜಕೀಯ ರಂಗದಲ್ಲಿ ಹೆಸರು ಮಾಡಿದವರು ಆಗಾಗ ಬಣ್ಣ ಹಚ್ಚಿ ಚಿತ್ರರಂಗದಲ್ಲಿ ಮುಖ ತೋರಿಸಿದ ಅನೇಕ ಉದಾಹರಣೆಗಳಿವೆ. ಆದರೆ ಅದಕ್ಕಿಂತ ದೊಡ್ಡ ಮಟ್ಟದಲ್ಲಿ ಚಿತ್ರರಂಗದಲ್ಲಿ ಹೆಸರು ಮಾಡಿದವರು ನಂತರ ರಾಜಕೀಯ ರಂಗದಲ್ಲಿ ಅದೇ ಜನಪ್ರಿಯತೆಯನ್ನು ಬಳಸಿಕೊಂಡು ಬೆಳೆಯಲು ಯೋಚನೆ ಮಾಡುವುದು ಕೂಡ ಇದೆ. ಈಗ ಈ ಪಟ್ಟಿಗೆ ಹೊಸದಾಗಿ ಸೇರಿಕೊಂಡಿರುವುದು ತಮಿಳುನಾಡಿನ ಸ್ಟಾರ್ ನಟ ವಿಜಯ್. 'ದಳಪತಿ' ಎಂದು ಹೆಸರು ಮಾಡಿರುವ ವಿಜಯ್ ಈಗ ರಾಜಕೀಯದಲ್ಲಿ ತಮ್ಮ ದಾಳ ಉರುಳಿಸಲು ಸಿದ್ಧರಾಗಿದ್ದಾರೆ. ಆದರೆ ಅಲ್ಲಿನ ಮತದಾರರು ಇವರ ತಾಳಕ್ಕೆ ತಕ್ಕಂತೆ ಕುಣಿಯುತ್ತಾರಾ ಅನ್ನುವ ಕುತೂಹಲ ಎಲ್ಲರದು. ಕೆಲ ತಿಂಗಳ ಹಿಂದೆ ಭರ್ಜರಿ ಸಮಾವೇಶ ಮಾಡಿ ತಮ್ಮ ರಾಜಕೀಯ ಎಂಟ್ರಿಯನ್ನು ಘೋಷಣೆ ಮಾಡಿದ ವಿಜಯ್, 'ಸಿನಿಮಾ ರಂಗದಲ್ಲಿ ಗಳಿಸಿದ ದೊಡ್ಡ ಹೆಸರು, ಅಷ್ಟೊಂದು ಸಂಭಾವನೆ ಬರುವ ಅವಕಾಶ ಇವೆಲ್ಲವನ್ನೂ ಬಿಟ್ಟು ನಿಮ್ಮ ಸೇವೆಗಾಗಿ ರಾಜಕೀಯಕ್ಕೆ ಬಂದಿದ್ದೇನೆ' ಎಂದು ಎಮೋಷನಲ್ ಆಗಿ ಮಾತಾಡಿದ್ದು ನಿಮಗೆ ಗೊತ್ತು. ಅಲ್ಲದೆ ಬಿಜೆಪಿ ಮತ್ತು ಡಿಎಂಕೆ ನಮ್ಮ ವಿರೋಧಿಗಳು ಎಂದು ಕೂಡ ವಿಜಯ್ ಹೇಳಿಕೊಂಡಿದ್ದಾರೆ. ಚಿತ್ರರಂಗದಲ್ಲಿ ಮಾರ್ಕೆಟ್ ಬಿದ್ದು ಹೋದ ಮೇಲೆ ರಾಜಕೀಯ ಪ್ರವೇಶಿಸುವ ಕೆಲವರನ್ನು ನಾವು ನೋಡಿದ್ದೇವೆ. ಆದರೆ ಚಿತ್ರರಂಗದ ವೃತ್ತಿಜೀವನದಲ್ಲಿ ಉತ್ತುಂಗದಲ್ಲಿ ಇರುವಾಗಲೇ ಎಲ್ಲವನ್ನೂ ಬಿಟ್ಟು 'ಚಿತ್ರಸನ್ಯಾಸ' ತೆಗೆದುಕೊಂಡು ರಾಜಕೀಯ ರಂಗಕ್ಕೆ ಬಂದಿದ್ದು ವಿಜಯ್ ಹೆಗ್ಗಳಿಕೆ. ರಾಜಕೀಯ ಪ್ರವೇಶವಾದ್ದರಿಂದ ಇನ್ನು ಮುಂದೆ ಅವರು ಚಲನಚಿತ್ರಗಳಲ್ಲಿ ಕಾಣಿಸಿಕೊಳ್ಳುವುದು ಡೌಟೇ! ಆದರೆ, ಚಿತ್ರರಂಗದಲ್ಲಿ ಭರ್ಜರಿ ಗೆಲುವು ದಾಖಲಿಸಿದ್ದ ವಿಜಯ್, 2026ರ ತಮಿಳುನಾಡು ಚುನಾವಣೆಯಲ್ಲಿ 'ವಿಜಯಮಾಲೆ' ಧರಿಸುತ್ತಾರಾ? ಎನ್ನುವುದು ಎಲ್ಲರ ಕುತೂಹಲ. ಏಕೆಂದರೆ, ಕಮಲಹಾಸನ್ ಕೂಡ ರಾಜಕೀಯ ಪ್ರವೇಶಿಸಿದ್ದರೂ, ಅಂದುಕೊಂಡ ಮಟ್ಟಕ್ಕೆ ಈ ಕ್ಷೇತ್ರದಲ್ಲಿ ಸಾಧನೆ ಮಾಡಲು ಅವರಿಗಿನ್ನೂ ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ವಿಜಯ್ ಭವಿಷ್ಯ ಕುತೂಹಲ ಹುಟ್ಟಿಸಿರೋದಂತೂ ದಿಟ.

ಸಂಪಾದಕರ ಸದ್ಯಶೋಧನೆ

ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ

ಕಳೆದ 8 ವರ್ಷಗಳಿಂದ ಜಪಾನಿನ ಟೋಕಿಯೋ ನಗರದಲ್ಲಿ ವಾಸವಾಗಿರುವ ಶಿವಮೊಗ್ಗದ ವಾಸುದೇವ ಎಂಬುವವರು ಮಾತಿಗೆ ಸಿಕ್ಕಿದ್ದರು. ಅವರು ಆ ದೇಶದಲ್ಲಿ ತಮಗಾದ ಅನುಭವವನ್ನು ಹೇಳಿದರು. ಒಮ್ಮೆ ಅವರು ನಿರ್ಜನ ರಸ್ತೆಯಲ್ಲಿ ನಡೆಯುತ್ತಿರುವಾಗ ಅದರ ಪಕ್ಕದಲ್ಲಿ ಹೊಸದಾಗಿ ಆರಿಸಿದ ಹಣ್ಣುಗಳ ಹತ್ತಾರು ಬಕೆಟ್‌ಗಳನ್ನು ನೋಡಿದರು. ಆ ಪೈಕಿ ಖಾಲಿ ಬಕೆಟ್‌ಗಳೂ ಇದ್ದವು. ವಾಸುದೇವ ಅವರು ಅಲ್ಲಿಯೇ ಇದ್ದ ಜಪಾನಿ ಪ್ರಜೆಗೆ ಅದು ಏನು ಎಂದು ಕೇಳಿದರು. 'ಅವು ಮಾರಾಟಕ್ಕಿಟ್ಟ ಹಣ್ಣುಗಳು' ಎಂದು ಆತ ವಿವರಿಸಿದ. ಖರೀದಿದಾರನು ತನಗೆ ಬೇಕಾದ ಬಕೆಟ್‌ನ ಗಾತ್ರವನ್ನು ಆರಿಸಿಕೊಳ್ಳಬಹುದು ಮತ್ತು ಹಣವನ್ನು ಅಲ್ಲಿಯೇ ಇರಿಸಲಾದ ಪೆಟ್ಟಿಗೆಯಲ್ಲಿ ಇಡಬಹುದು. ಆದರೆ ಹಣ್ಣುಗಳನ್ನು ಮಾರಾಟಕ್ಕಿಟ್ಟ ರೈತ ಅಲ್ಲಿರುವುದಿಲ್ಲ, ಆತ ಬರುವುದು ಸಾಯಂಕಾಲವೇ. ಯಾರು ಬೇಕಾದರೂ ಬಕೆಟ್‌ನಲ್ಲಿಟ್ಟ ಹಣ್ಣುಗಳನ್ನು ತೆಗೆದುಕೊಂಡು ಹೋಗಬಹುದು. ಹಣ್ಣುಗಳ ಬೆಲೆ ಎಷ್ಟು ಎಂಬುದನ್ನು ಬಕೆಟ್ ಮೇಲೆ ಬರೆದಿರುತ್ತದೆ. ಹಣ್ಣು ತೆಗೆದುಕೊಂಡು ಹೋಗುವವರು ಪಕ್ಕದಲ್ಲಿಟ್ಟ ಪೆಟ್ಟಿಗೆಯಲ್ಲಿ ಅದಕ್ಕೆ ಸಮನಾದ ಹಣವನ್ನು ಹಾಕಿ ಹೋಗುತ್ತಾರೆ. ಚಿಲ್ಲರೆ ಇಲ್ಲ ಎಂಬ ಕಾರಣಕ್ಕೆ ಹೆಚ್ಚಿನ ಹಣ ಹಾಕಿ ಹೋಗಬಹುದು, ಯಾರೂ ಹಣವನ್ನು ಕಮ್ಮಿ ಹಾಕುವುದಿಲ್ಲ. ಇದನ್ನು ನೋಡಿ ವಾಸುದೇವರಿಗೆ ಆಶ್ಚರ್ಯವಾಯಿತು. 'ಯಾರಾದರೂ ಬಕೆಟ್ ತುಂಬಾ ಹಣ್ಣನ್ನು ಹಣ ನೀಡದೇ ತಮ್ಮ ಕಾರಿನಲ್ಲಿ ಹಾಕಿಕೊಂಡು ಹೋಗಬಹುದಲ್ಲ? ಕಾರಣ ಅಲ್ಲಿ ಹಣ ಕೇಳಲು ಅಥವಾ ಸ್ವೀಕರಿಸಲು ಯಾರೂ ಇಲ್ಲವಲ್ಲ?' ಎಂದು ಜಪಾನಿ ಪ್ರಜೆಗೆ ಕೇಳಿದರು. 'ಯಾರಾದರೂ ಏಕೆ ಹಾಗೆ ಮಾಡುತ್ತಾರೆ? ಹಣ ಸ್ವೀಕರಿಸಲು ಅಲ್ಲಿ ಯಾರೂ ಇಲ್ಲದಿದ್ದರೆ ಏನಾಯಿತು? ಬಕೆಟ್ ಮೇಲೆ ಹಣ್ಣಿನ ದರ ಬರೆದಿದ್ದಾರೆ. ಪಕ್ಕದಲ್ಲಿ ಪೆಟ್ಟಿಗೆ ಇಟ್ಟಿದ್ದಾರೆ' ಎಂದು ಆತ ಉತ್ತರಿಸಿದ. ಮುಂದುವರಿದ ಆತ, 'ಜಪಾನಿನಲ್ಲಿ ಯಾರೂ ತಮ್ಮದಲ್ಲದ ವಸ್ತುಗಳನ್ನು ಮುಟ್ಟುವುದಿಲ್ಲ. ದಾರಿ ಪಕ್ಕದಲ್ಲಿ ಹಣ್ಣುಗಳನ್ನು ಇಟ್ಟಿದ್ದಾರೆ ಅಂದ್ರೆ, ಅದನ್ನು ಮಾರಾಟಕ್ಕೆ ಇಟ್ಟಿದ್ದಾರೆ ಎಂದೇ ಅರ್ಥ. ಅದರ ಮೇಲೆ ಬೆಲೆ ಬರೆದು, ಪಕ್ಕದಲ್ಲಿ ಪೆಟ್ಟಿಗೆ ಇಟ್ಟಿರುವಾಗ, ಯಾರೂ ಹಣ ಕೊಡದೇ, ಸುಮ್ಮನೆ ಎತ್ತಿಕೊಂಡು ಹೋಗುವುದಿಲ್ಲ' ಎಂದ. ಇಂಥ ಹತ್ತಾರು ಅನುಭವಗಳು ತಮಗೆ ಆಗಿವೆ ಎಂದು ವಾಸುದೇವ ಹೇಳಿದರು. ಅವರು ಇನ್ನೊಂದು ಪ್ರಸಂಗವನ್ನು ಹೇಳಿದರು. ಅವರ ಕಚೇರಿಯಲ್ಲಿ ರಿಫ್ರೆಶ್ಮೆಂಟ್ ಪ್ರದೇಶವಿದೆಯಂತೆ, ಅಲ್ಲಿ ಒಂದು ಪುಟ್ಟ ಸ್ಟಾಲ್ ಸಹ ಇದೆಯಂತೆ. ಸ್ಟಾಲ್‌ನಲ್ಲಿ ಆಹಾರ, ಚಾಕೊಲೇಟ್, ಮಿಠಾಯಿಗಳ ಬಾಕ್ಸ್‌ಗಳನ್ನು ಪ್ಯಾಕ್ ಮಾಡಿ ಇಟ್ಟಿರುತ್ತಾರಂತೆ. ಹಣವನ್ನು ಸಂಗ್ರಹಿಸಲು ಅಲ್ಲಿ ಯಾರೂ ಇಲ್ಲ. ಜನರು ತಮಗೆ ಬೇಕಾದುದನ್ನು ತೆಗೆದುಕೊಂಡು ಪೆಟ್ಟಿಗೆಯಲ್ಲಿ ಹಣವನ್ನು ಹಾಕುತ್ತಾರೆ. ಜಪಾನಿನ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟೋ ಅಂಗಡಿಗಳಲ್ಲಿ ಯಾರೂ ಇರುವುದಿಲ್ಲ. ತಮಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಅದರ ಮೇಲೆ ನಮೂದಿಸಿದ ಬೆಲೆಯನ್ನು ಕೌಂಟರಿನಲ್ಲಿಟ್ಟ ಪೆಟ್ಟಿಗೆಯಲ್ಲಿ ಹಾಕಿ ಹೋಗಬಹುದು. ಯಾರೂ ವಸ್ತುವಿನ ಬೆಲೆಗಿಂತ ಕಮ್ಮಿ ಹಣವನ್ನು ಹಾಕಿ ಹೋಗುವುದಿಲ್ಲ. ಟೋಕಿಯೋದಲ್ಲೂ ಅಂಥ ಹಲವು ಅಂಗಡಿಗಳಿವೆಯಂತೆ (ನಮ್ಮಲ್ಲಿ ಅಂಥ ಅಂಗಡಿಗಳಿದ್ದರೆ ಏನಾಗಬಹುದು, ಒಮ್ಮೆ ಯೋಚಿಸಿ). ಜಪಾನಿಯರಿಗೆ ಕಳ್ಳತನ ಅಂದ್ರೆ ಏನು ಎಂಬುದು ಗೊತ್ತಿಲ್ಲ. ಗೊತ್ತಿದ್ದವರೂ ಕಳವು ಮಾಡುವುದಿಲ್ಲ. ಒಮ್ಮೆ ವಾಸುದೇವ ಅವರು ಟ್ರೇನಿನಲ್ಲಿ ಪ್ರಯಾಣಿಸುವಾಗ, ಪಕ್ಕದಲ್ಲಿದ್ದ ವ್ಯಕ್ತಿ ತಮ್ಮ ಬ್ಯಾಗನ್ನು ಸೀಟಿನಲ್ಲಿಯೇ ಬಿಟ್ಟು ಹೊರಟು ಹೋದನಂತೆ. ಅವರ ಪಕ್ಕದಲ್ಲಿದ್ದ ವ್ಯಕ್ತಿ ಟ್ರೇನಿನಿಂದ ಇಳಿಯುವಾಗ ಅದನ್ನು ತೆಗೆದುಕೊಂಡು ಹೋಗಿ ಪೊಲೀಸರಿಗೆ ಒಪ್ಪಿಸಿ ಹೋದನಂತೆ. ಅದರಲ್ಲಿ ಏನಿದೆ ಎಂದೂ ಆತ ನೋಡಲಿಲ್ಲವಂತೆ. ಒಂದು ವೇಳೆ ಯಾರಾದರೂ ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಅಮೂಲ್ಯ ವಸ್ತುಗಳನ್ನು ಮರೆತು ಹೋದರೆ, ಅದು ನಿಶ್ಚಿತವಾಗಿಯೂ ವಾರಸುದಾರರಿಗೆ ಸಿಕ್ಕೇ ಸಿಗುತ್ತದೆ, ಯಾವ ಅನುಮಾನವೂ ಬೇಡ. ಇಂಥ ನೂರು ನಿದರ್ಶನಗಳನ್ನು ಹೇಳಬಲ್ಲೆ ಎಂದು ಅವರು ಹೇಳಿದರು. ಸುಳ್ಳು, ಕಳ್ಳತನ, ಅಪ್ರಾಮಾಣಿಕತೆ ಜಪಾನಿಯರ ಜೀವನದಲ್ಲಿ ಕಾಣಲು ಸಾಧ್ಯವಿಲ್ಲ ಎಂಬುದು ಅವರ ಅಭಿಪ್ರಾಯ.

ಚುನಾವಣಾ ಫಲಿತಾಂಶವೇ ನಿರ್ಣಾಯಕ

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣಾ ಫಲಿತಾಂಶವೇ ನಿರ್ಣಾಯಕ. ಮ್ಯಾಜಿಕ್ ಸಂಖ್ಯೆಯನ್ನು ಯಾವ ಪಕ್ಷ ಪಡೆಯುತ್ತದೆಯೋ ಆ ಪಕ್ಷ ರಾಜ್ಯವನ್ನು ಆಳುವುದಕ್ಕೆ ಅರ್ಹ. ಗೆದ್ದು ಬೀಗಿದ ಶಾಸಕರು ಯಾರನ್ನು ಬೆಂಬಲಿಸುವರೋ ಅವರೇ ಮುಂದಿನ ಮುಖ್ಯಮಂತ್ರಿಯಾಗಿ ಅಧಿಕೃತವಾಗಿ ಘೋಷಣೆಯಾಗುತ್ತಾರೆ. ಕಾನೂನಾತ್ಮಕವಾಗಿ ಶಾಸಕರ ಬೆಂಬಲವೇ ಶಾಸಕಾಂಗ ಪಕ್ಷದ ನಾಯಕ, ಮುಖ್ಯಮಂತ್ರಿ ಆಯ್ಕೆಗೆ ಏಕೈಕ ಮಾನದಂಡವಾಗಿದೆ. ಆದರೆ ಭಾರತದ ರಾಜಕೀಯದಲ್ಲಿರುವ 'ಅಲಿಖಿತ' ನಿಯಮದ ಪ್ರಕಾರ ಆಯಾ ಪಕ್ಷದ ವರಿಷ್ಠರು ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎನ್ನುವುದನ್ನು ತೀರ್ಮಾನಿಸುತ್ತಾರೆ.

ಮುಖ್ಯಮಂತ್ರಿ ಆಯ್ಕೆಯ ವಿಷಯದಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಹಾಗೂ ರಾಷ್ಟ್ರೀಯ ಪಕ್ಷಗಳಿಗೆ ಅಜಗಜಾಂತರವಿದೆ. ಪ್ರಾದೇಶಿಕ ಪಕ್ಷಗಳಲ್ಲಿ, ಆಯಾ ಪಕ್ಷದ ವರಿಷ್ಠ ಅಥವಾ ಪಕ್ಷವನ್ನು ಸ್ಥಾಪಿಸಿದ ನಾಯಕರ ಮಕ್ಕಳಲ್ಲಿಯೇ 'ಪವರ್ ಶೇರಿಂಗ್' ಆಗುತ್ತದೆ. ಆದರೆ ರಾಷ್ಟ್ರೀಯ ಪಕ್ಷಗಳಲ್ಲಿ ಅಧಿಕಾರ ಹಂಚಿಕೆ ಎನ್ನುವುದಕ್ಕೆ ಹತ್ತಾರು ಮಾನದಂಡಗಳಿರುತ್ತವೆ. ಅಲ್ಲಿ ಶಾಸಕರ ಬೆಂಬಲ ಅಥವಾ ರಾಜ್ಯದಲ್ಲಿ ನಾಯಕನಿಗಿರುವ ಜನಬಲಕ್ಕಿಂತ ಹೆಚ್ಚಾಗಿ ದಿಲ್ಲಿ ನಾಯಕರ ಕೃಪಾಕಟಾಕ್ಷ ಯಾರ ಮೇಲಿದೆ ಎನ್ನುವುದರ ಮೇಲೆ ಮುಖ್ಯಮಂತ್ರಿ ಯಾರಾಗಬೇಕು, ಯಾರಾಗುತ್ತಾರೆ? ಎನ್ನುವುದು ತೀರ್ಮಾನವಾಗುತ್ತದೆ.

ಅದರಲ್ಲಿಯೂ ಕಾಂಗ್ರೆಸ್ ಹಾಗೂ ಬಿಜೆಪಿಯಲ್ಲಿ ಸ್ಥಳೀಯ ನಾಯಕರ ಅಭಿಪ್ರಾಯಕ್ಕಿಂತ ದೆಹಲಿ ಕಚೇರಿಯಲ್ಲಾಗುವ ತೀರ್ಮಾನವೇ ಅಂತಿಮವಾಗಿರುತ್ತದೆ. ಈ ಹಿಂದೆ ಕಾಂಗ್ರೆಸ್‌ನಲ್ಲಿ ಹಲವು ಬಾರಿ 'ಮುಚ್ಚಿದ ಲಕೋಟೆ'ಯಲ್ಲಿನ ಸಂದೇಶವನ್ನು ಹೊತ್ತು ತಂದು ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂದು ಘೋಷಿಸಿ ಹೋಗಿರುವ ಘಟನೆಗಳಾಗಿವೆ. ಇದೇ ರೀತಿ ಯಾರನ್ನಾದರೂ ಕುರ್ಚಿಯಿಂದ ಕೆಳಗಿಳಿಸಬೇಕು ಎಂದರೆ 'ಫೋನ್ ಕರೆ'ಯಲ್ಲಿ ಅಧಿಕಾರ ಮೊಟಕುಗೊಳಿಸಿರುವ ಅದೆಷ್ಟೋ ಉದಾಹರಣೆಗಳಿವೆ. ಜವಾಹರಲಾಲ್ ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಅವರ ಕಾಲದಲ್ಲಿ ನಾಯಕರು, ರಾಜ್ಯ ನಾಯಕರ ವಿಶ್ವಾಸ ಗಳಿಸುವುದಕ್ಕಿಂತ ದಿಲ್ಲಿಯಲ್ಲಿ ಲಾಬಿ ಮಾಡುವ ಮೂಲಕ ಅಧಿಕಾರದ ಗದ್ದುಗೆ ಏರಿರುವ ಅದೆಷ್ಟೋ ಉದಾಹರಣೆಗಳಿವೆ. ಸೋನಿಯಾ ಗಾಂಧಿ ಅವರು 'ಅಧಿನಾಯಕಿ' ಪಟ್ಟವನ್ನು ಬಿಟ್ಟು ರಾಹುಲ್ ಗಾಂಧಿಗೆ ಅದನ್ನು ನೀಡುವ ತನಕ ಕಾಂಗ್ರೆಸ್‌ನಲ್ಲಿ ಹೈಕಮಾಂಡ್ ಮಾತಿಗೆ ಅದರದ್ದೇ ಆದ 'ತೂಕ'ವಿತ್ತು. ಆದರೆ ಇತ್ತೀಚಿನ ದಿನದಲ್ಲಿ ದೆಹಲಿ ನಾಯಕರ ಸೂಚನೆಯನ್ನೂ ಉಲ್ಲಂಘಿಸುವ ಅಥವಾ ಧಿಕ್ಕರಿಸುವ ಅದೆಷ್ಟೋ ಸನ್ನಿವೇಶಗಳು ಹಲವು ರಾಜ್ಯಗಳಲ್ಲಿ ನಡೆದಿರುವ ಉದಾಹರಣೆಗಳಿವೆ.

ಹಾಗೆಂದ ಮಾತ್ರಕ್ಕೆ ಕಾಂಗ್ರೆಸ್ ಹೈಕಮಾಂಡ್ ತನ್ನ ಹಿಡಿತವನ್ನು ಎಲ್ಲ ರಾಜ್ಯಗಳಲ್ಲಿಯೂ ಕಳೆದುಕೊಂಡಿದೆ ಎಂದಲ್ಲ ಅಥವಾ ಎಲ್ಲ ನಾಯಕರು ಹೈಕಮಾಂಡ್ ಮಾತನ್ನು ಹೇಳುವುದಿಲ್ಲ ಎಂದಲ್ಲ, ಆದರೆ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಹೈಕಮಾಂಡ್‌ಗೆ ಹೋಲಿಸಿದರೆ ಆಯಾ ರಾಜ್ಯ ನಾಯಕತ್ವಗಳು ಬಲಿಷ್ಠವಾಗಿವೆ. ಹೈಕಮಾಂಡ್‌ಗಿಂತ ಹೆಚ್ಚು ಬಲಿಷ್ಠವಾಗಿರುವ ಬಹುತೇಕ ರಾಜ್ಯಗಳಲ್ಲಿ, ಏಕವ್ಯಕ್ತಿ ಸಾಮ್ರಾಜ್ಯವಿದ್ದರೆ ಸಮಸ್ಯೆಯಿಲ್ಲ. ಒಂದು ವೇಳೆ ಇಬ್ಬರು ಅಥವಾ ಮೂವರು ಸಮಾನ ಬಲಿಷ್ಠ ನಾಯಕರಿದ್ದರೆ, ಯಾರಿಗೆ ಬೆಂಬಲಿಸಬೇಕು ಯಾರನ್ನು ಕೈಬಿಡಬೇಕು ಎನ್ನುವ 'ಇಕ್ಕಟ್ಟಿಗೆ' ಹೈಕಮಾಂಡ್ ನಾಯಕರು ಸಿಲುಕುತ್ತಾರೆ. ಅದರಲ್ಲಿಯೂ ಆಡಳಿತದಲ್ಲಿರುವ ರಾಜ್ಯದಲ್ಲಿ ಈ ಇಕ್ಕಟ್ಟಿನ ಸ್ಥಿತಿ ಹೆಚ್ಚಾಗಿಯೇ ಇರುತ್ತದೆ ಎಂಬುದು ಸ್ಪಷ್ಟ.

ಈ ಇಕ್ಕಟ್ಟಿನ ಪರಿಸ್ಥಿತಿ ಸದ್ಯ ಕರ್ನಾಟಕ ಕಾಂಗ್ರೆಸ್ ವಿಷಯದಲ್ಲಿ ಪಕ್ಷದ ಹೈಕಮಾಂಡ್‌ಗೆ ಸೃಷ್ಟಿಯಾಗಿದೆ. ಕರ್ನಾಟಕದಲ್ಲಿ ಭಾರಿ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಹಿಡಿಯಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಷ್ಟೇ ಮಹತ್ವದ ಪಾತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಹಿಸಿದ್ದರು. ಸಿದ್ದರಾಮಯ್ಯರಿಗೆ ಶಾಸಕ ಬಲ ತುಸು ಹೆಚ್ಚೇ ಇರುವುದರಿಂದ ಅನಿವಾರ್ಯವಾಗಿ ಸಿಎಂ ಸ್ಥಾನದಲ್ಲಿ ಕೂರಿಸಬೇಕಾಯಿತು. ಆದರೆ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಹಾಗೂ ಪ್ರತಿಪಕ್ಷದಲ್ಲಿದ್ದಾಗ ಪಕ್ಷದ ಸಂಘಟನೆಯಲ್ಲಿ ಡಿ.ಕೆ.ಶಿವಕುಮಾರ್ ತೊಡಗಿಸಿಕೊಂಡ ರೀತಿಯನ್ನೂ ಮರೆಯುವಂತಿಲ್ಲ. ಈ ಕಾರಣಕ್ಕೆ ಪಕ್ಷ ಬಹುಮತ ಪಡೆಯುತ್ತಿದ್ದಂತೆ ಶಿವಕುಮಾರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ 'ಟವೆಲ್' ಹಾಕಿದರು. ಆದರೆ ಶಾಸಕರ ಬಲ, ಗ್ಯಾರಂಟಿ ಯೋಜನೆಯ ಜಾರಿ ಸೇರಿದಂತೆ ವಿವಿಧ ಕಾರಣಗಳಿಗಾಗಿ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿರಲಿ ಎಂದು ಡಿಕೆ ಅವರನ್ನು ಹೈಕಮಾಂಡ್ ಸಂತೈಸಿತ್ತು. ಈ ಕಾರಣಕ್ಕಾಗಿಯೇ ಶಿವಕುಮಾರ್ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಜತೆಗೆ ಉಪಮುಖ್ಯಮಂತ್ರಿ ಸ್ಥಾನ ಹಾಗೂ ಎರಡು ಆಯಕಟ್ಟಿನ ಖಾತೆಗಳನ್ನು ನೀಡುವ ಮೂಲಕ 'ಒಬ್ಬ ವ್ಯಕ್ತಿ ಒಂದು ಹುದ್ದೆ' ಎನ್ನುವ ನಿಯಮವನ್ನು ಹೈಕಮಾಂಡ್ ಸಡಿಲಿಸಿತ್ತು.

ಹಾಗೆ ನೋಡಿದರೆ, ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ರಾಷ್ಟ್ರೀಯ ನಾಯಕತ್ವವನ್ನು ಗಮನಿಸಿದರೆ, ರಾಜ್ಯದ ನಾಯಕತ್ವ ಗಟ್ಟಿಯಾಗಿದೆ. ಅಹಿಂದ ನಾಯಕರಾಗಿ ಸಿದ್ದರಾಮಯ್ಯ ಅವರಿಗೆ 'ಮಾಸ್ ಇಮೇಜ್' ಇದ್ದರೆ, ಹಳೇ ಮೈಸೂರು ಭಾಗದಲ್ಲಿ, ಒಕ್ಕಲಿಗ ಎನ್ನುವ ಕಾರಣಕ್ಕೆ ಹಾಗೂ ಸಂಘಟನೆಯ ವಿಷಯದಲ್ಲಿ ಶಿವಕುಮಾರ್ ಗಟ್ಟಿಯಾಗಿದ್ದಾರೆ. ಆದ್ದರಿಂದ ಇಬ್ಬರೂ 'ಹೊಂದಾಣಿಕೆ'ಯಲ್ಲಿ ಸರಕಾರ ಹಾಗೂ ಪಕ್ಷವನ್ನು ನಡೆಸುತ್ತಿದ್ದರೂ, ಅಲ್ಲಲ್ಲಿ ಗೊಂದಲ, ಭಿನ್ನಾಭಿಪ್ರಾಯ ಕಾಣಿಸಿಕೊಳ್ಳುತ್ತಿತ್ತು.

ಕಾಂಗ್ರೆಸ್‌ನಲ್ಲಿ ಆಯಾ ರಾಜ್ಯಗಳ ನಾಯಕತ್ವದಲ್ಲಿ ಈ ರೀತಿ ಗೊಂದಲ, ಗೋಜಲು, ವಿವಾದ ಸೃಷ್ಟಿಯಾಗಿರುವುದು ಇದೇ ಮೊದಲಲ್ಲ. ಈ ಹಿಂದೆ 2018ರಲ್ಲಿ ರಾಜಸ್ಥಾನದಲ್ಲಿ ಅಧಿಕಾರದ ಗದ್ದುಗೆ ಏರಿದ ಕಾಂಗ್ರೆಸ್‌ಗೆ, ಅಶೋಕ್ ಗೆಹ್ಲೋಟ್ ಹಾಗೂ ಸಚಿನ್ ಪೈಲಟ್ ನಡುವಿನ ಕಿತ್ತಾಟ ತಲೆನೋವು ತಂದಿತ್ತು. ಅದಕ್ಕೂ ಮೊದಲು ಮಧ್ಯಪ್ರದೇಶದಲ್ಲಿ ಕಮಲನಾಥ್ ಮತ್ತು ಜ್ಯೋತಿರಾದಿತ್ಯ ಸಿಂಧಿಯಾ ನಡುವಿನ ಕುರ್ಚಿ ಫೈಟ್‌ನಿಂದಾಗಿ ಕೊನೆಗೆ ಜ್ಯೋತಿರಾದಿತ್ಯ ಸಿಂಧಿಯಾ ಅವರು ಪಕ್ಷವನ್ನೇ ಬಿಡಬೇಕಾದ ಪರಿಸ್ಥಿತಿ ಬಂತು. ತೀರಾ ಇತ್ತೀಚಿಗೆ ಛತ್ತೀಸ್‌ಗಢದಲ್ಲಿ ನಡೆದ ವಿಧಾನಸಭೆ ಚುನಾವಣೆಯ ವೇಳೆ ಮುಂದಿನ ಮುಖ್ಯಮಂತ್ರಿ ವಿಷಯದಲ್ಲಿ ಭೂಪೇಶ್ ಬಘೇಲಾ ಹಾಗೂ ಸಿಂಗದೇವ ನಡುವಿನ ಒಳಜಗಳದಿಂದಾಗಿ ಅಧಿಕಾರಕ್ಕೆ ಬರುವ ಸುವರ್ಣಾವಕಾಶವನ್ನು ಕಾಂಗ್ರೆಸ್ ಕಳೆದುಕೊಂಡಿತ್ತು.

ಕರ್ನಾಟಕದಲ್ಲಿ ಸದ್ಯಕ್ಕೆ ರಾಜಸ್ಥಾನ, ಮಧ್ಯಪ್ರದೇಶದಲ್ಲಿರುವ ಕಠಿಣ ಪರಿಸ್ಥಿತಿಯಿಲ್ಲ. ಸಿದ್ದರಾಮಯ್ಯ-ಶಿವಕುಮಾರ್ ಈಗಲೂ 'ಜೋಡೆತ್ತಿನ' ರೀತಿಯಲ್ಲಿ ಮೇಲ್ನೋಟಕ್ಕೆ ಕರ್ನಾಟಕ ಕಾಂಗ್ರೆಸ್ ಅನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಡಿಕೆಶಿ ಸಹ ಈ ಕ್ಷಣವೇ ಸಿದ್ದರಾಮಯ್ಯರನ್ನು ಕೆಳಗಿಳಿಸಿ, ತಾವು ಮುಖ್ಯಮಂತ್ರಿಯಾಗಬೇಕು ಎನ್ನುವ ಮನಸ್ಥಿತಿಯಲ್ಲಿಲ್ಲ, ಅದೇ ರೀತಿ ಸಿದ್ದರಾಮಯ್ಯ ಅವರಿಗೂ ತಮ್ಮ ಆಪ್ತರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನ ಅಥವಾ ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಬೇಕು ಎನ್ನುವ ಉಮೇದಿಲ್ಲ. ಆದರೆ ಪರಸ್ಪರ ಆಪ್ತರ ಮೂಲಕ ಈ ರೀತಿಯ ಸಂದೇಶ ರವಾನಿಸುವುದಕ್ಕೆ ಪ್ರಮುಖ ಕಾರಣ, ತಮ್ಮ ಕುರ್ಚಿಯ ಮೇಲೆ ಇನ್ನೊಬ್ಬರು ಕಣ್ಣು ಹಾಕದಂತೆ ನೋಡಿಕೊಳ್ಳಲು. ಹೀಗಾಗಿ ಆಗಾಗ ಈ ರೀತಿಯ ವಿಷಯವನ್ನು ತೇಲಿಬಿಡುತ್ತಿದ್ದಾರೆ.

ಆದರೆ ರಾಜ್ಯ ನಾಯಕತ್ವದ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸಮಬಲ ಹೊಂದಿರುವುದರಿಂದ, ಪಕ್ಷದ ಹೈಕಮಾಂಡ್ ಯಾವುದೇ ಸ್ಪಷ್ಟ ತೀರ್ಮಾನ ಕೈಗೊಳ್ಳಲು ಸಾಧ್ಯವಾಗದ ಸ್ಥಿತಿಗೆ ತಲುಪಿದೆ. ವಿಧಾನಸಭಾ ಚುನಾವಣೆ, ಲೋಕಸಭೆ ಚುನಾವಣೆ ಹಾಗೂ ವಿಧಾನಸಭಾ ಉಪಚುನಾವಣೆಯ ಗೆಲುವಿನಲ್ಲಿ ಈ ಇಬ್ಬರ ಪಾತ್ರ ಮಹತ್ವದ್ದಾಗಿದೆ. ಆದ್ದರಿಂದ ಇತ್ತ ಸಿದ್ದರಾಮಯ್ಯರ ಬಣಕ್ಕೆ ಎಚ್ಚರಿಕೆ ನೀಡಿದರೆ ಸಿದ್ದರಾಮಯ್ಯರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಶಿವಕುಮಾರ್ ಬಣಕ್ಕೆ ಎಚ್ಚರಿಕೆ ನೀಡಿದರೆ ಡಿಕೆಶಿ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಇಬ್ಬರನ್ನೂ ನಿಭಾಯಿಸುವುದೇ ಹೈಕಮಾಂಡ್‌ಗೆ ತಲೆನೋವಾಗಿದೆ. ಹೀಗಾಗಿ ಎರಡೂ ಬಣವನ್ನು ವಿಶ್ವಾಸಕ್ಕೆ ಪಡೆದುಕೊಂಡು 'ಬಲ' ಉಳಿಸಿಕೊಂಡು ಹೋಗುವ ಅನಿವಾರ್ಯತೆಯಲ್ಲಿ ಹೈಕಮಾಂಡ್ ಸಿಲುಕಿದೆ ಎಂದರೆ ತಪ್ಪಾಗುವುದಿಲ್ಲ.

ಇನ್ನು ಈ ಪ್ರಮಾಣದಲ್ಲಿ ಕರ್ನಾಟಕದಲ್ಲಿ ಗೊಂದಲ ಸೃಷ್ಟಿಯಾಗಲು ಮತ್ತೊಂದು ಕಾರಣವಿದೆ. ಅದೇನೆಂದರೆ, ಕರ್ನಾಟಕ ವಿಧಾನಸಭೆಯಲ್ಲಿ ಸ್ಪಷ್ಟ ಬಹುಮತ ಬಂದ ಬಳಿಕ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಆರೇಳು ದಿನ ದೆಹಲಿಯಲ್ಲಿ ಕೂತು ಅಧಿಕಾರ ಹಂಚಿಕೆಯ ಬಗ್ಗೆ ಹೈಕಮಾಂಡ್ ಜತೆ ಚರ್ಚಿಸಿದ್ದರು. ಅಂತಿಮವಾಗಿ ಅಧಿಕಾರ ಹಂಚಿಕೆ ಸೂತ್ರ ಸಿದ್ಧಪಡಿಸಿದ ಸಭೆಯಲ್ಲಿ ಕೇವಲ ಆರು ಮಂದಿಯಷ್ಟೇ ಇದ್ದರು. ಆದ್ದರಿಂದ ಆ ಸಭೆಯಲ್ಲಿ ಯಾವ ರೀತಿಯ ಚರ್ಚೆ ಹಾಗೂ ಒಪ್ಪಂದವಾಗಿದೆ ಎನ್ನುವ ಬಗ್ಗೆ ಯಾರಿಗೂ ಸ್ಪಷ್ಟನೆಯಿಲ್ಲ. ಆ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರಿದ್ದರು. ಡಿಕೆಶಿ ಅವರು ಅಧಿಕಾರ ಹಂಚಿಕೆಯಾಗಿದೆ ಎಂದು ಆಪ್ತರ ಬಳಿ ಹೇಳಿಕೊಂಡಿದ್ದರೆ, ಸಿದ್ದರಾಮಯ್ಯ ಅವರು ಆಗಿಲ್ಲವೆಂದಿದ್ದಾರೆ. ಹೀಗಿರುವಾಗ ಸಭೆಯಲ್ಲಿದ್ದ ಮೂರನೇ ವ್ಯಕ್ತಿ ನಡೆದಿದ್ದೇನು ಎಂದು ಹೇಳಿದರೆ ಸ್ಪಷ್ಟನೆ ಸಿಗುತ್ತದೆ. ಆದರೆ ಈ ಸಭೆಯ ಬಗ್ಗೆ ಈವರೆಗೆ ಸಿದ್ದರಾಮಯ್ಯ ಅವರಾಗಲಿ, ಡಿ.ಕೆ.ಶಿವಕುಮಾರ್ ಅವರಾಗಲಿ ಯಾವುದೇ ಸ್ಪಷ್ಟನೆ ನೀಡದಿರುವುದರಿಂದ ಗೊಂದಲ ಮುಂದುವರಿದುಕೊಂಡೇ ಸಾಗಿದೆ. ಸಾಗುತ್ತಲೇ ಇರುತ್ತದೆ ಎನ್ನುವುದು ಸ್ಪಷ್ಟ.

ಈ ಹಿಂದೆ ದೆಹಲಿಯಿಂದ ಬರುವ 'ಕವರ್'ನಲ್ಲಿ ರಾಜ್ಯ ನಾಯಕರ ಭವಿಷ್ಯ ಅಡಕವಾಗಿದೆ ಎನ್ನುವ ಕಾಂಗ್ರೆಸ್ ನಾಯಕರ ಮಾತು ಇಂದಿನ ಕಾಂಗ್ರೆಸ್‌ಗೆ ಸರಿಹೊಂದುವುದಿಲ್ಲ, ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ ಎಂದು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಹೇಳಿದರೂ, ಈ ಇಬ್ಬರು ನಾಯಕರು ಹೈಕಮಾಂಡ್‌ನಿಂದ ಇದೇ ರೀತಿಯ ಮಾತು ಬರಬೇಕು ಎಂದು ನಿರ್ಧರಿಸುವ ಹಂತದಲ್ಲಿದ್ದಾರೆ. ಈ ಕಾರಣಕ್ಕಾಗಿಯೇ, 138 ಶಾಸಕರ ಸ್ಪಷ್ಟ ಬಹುಮತದೊಂದಿಗೆ ದಶಕಗಳ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದ ಗದ್ದುಗೆ ಏರಿದರೂ, ಪದೇಪದೆ ಗೊಂದಲಗಳು ಬಹಿರಂಗವಾಗಿಯೇ ಕಾಣಿಸಿಕೊಳ್ಳುತ್ತಿವೆ. ಈ ಗೊಂದಲಗಳಿಗೆ ಬ್ರೇಕ್ ಹಾಕುವುದು ಪಕ್ಷದ ಹೈಕಮಾಂಡ್ ಜವಾಬ್ದಾರಿ ಎಂದರೂ, ಹೈಕಮಾಂಡ್‌ನ ಮಾತನ್ನು ಕೇಳುವ ಮನಸ್ಥಿತಿಯಲ್ಲಿ ರಾಜ್ಯದ ಎಷ್ಟು ನಾಯಕರಿದ್ದಾರೆ ಎನ್ನುವುದಕ್ಕೆ ಕಾಂಗ್ರೆಸಿಗರ ಬಳಿ ಉತ್ತರವಿಲ್ಲ. ಅಧಿಕಾರಕ್ಕೆ ಬಂದ ಎರಡು ವರ್ಷ ಕಳೆಯುವಷ್ಟರಲ್ಲಿ ಮೂರನೇ ಬಾರಿಗೆ ಹೈಕಮಾಂಡ್ 'ಎಚ್ಚರಿಕೆಯ ಸಂದೇಶ' ರವಾನಿಸಿದೆ. ಇದು ಮೂರಕ್ಕೆ ಮುಕ್ತಾಯವಾಗುವುದೋ ಅಥವಾ ಇಲ್ಲವೋ ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ದುಬಾರಿ ಸಾರಿಗೆ

ಮೈಸೂರಿನಲ್ಲಿ ಆಯೋಜನೆಗೊಂಡಿದ್ದ ನನ್ನ ಮಿತ್ರನ ಮದುವೆಗೆ ಬಂಧು-ಬಳಗ ಮತ್ತು ಗೆಳೆಯರನ್ನು ಬೆಂಗಳೂರಿನಿಂದ ಕರೆದೊಯ್ಯಲು ಕೆಎಸ್‌ಆರ್‌ಟಿಸಿಯ ಸಾಮಾನ್ಯ ಬಸ್ಸನ್ನು (ರಾಜಹಂಸ ಮತ್ತು ವೋಲ್ವೋ ಬಸ್ಸುಗಳ ದರವನ್ನು ಕೇಳಿದರೆ ಬವಳಿಯೇ ಬಂದೀತು) ಒಂದು ದಿನಕ್ಕೆ ಕಾಯ್ದಿರಿಸಲು ವಿಚಾರಿಸಿದಾಗ, ಕನಿಷ್ಠ ಕಿಲೋಮೀಟರ್, ಜಿಎಸ್‌ಟಿ, ಟೋಲ್ ಸೇರಿದಂತೆ ಸರಿಸುಮಾರು 40 ಸಾವಿರ ರುಪಾಯಿ ಆಗುತ್ತದೆ ಎಂಬ ಮಾಹಿತಿ ಲಭಿಸಿತು. ಅಷ್ಟು ಭರಿಸಲಾಗದ ಮಿತ್ರನು ಖಾಸಗಿ ಸಾರಿಗೆಯವರಲ್ಲಿ ವಿಚಾರಿಸಿದಾಗ, ಎಲ್ಲವನ್ನೂ ಒಳಗೊಂಡಂತೆ 25 ಸಾವಿರ ರುಪಾಯಿಯಷ್ಟಾಗುತ್ತದೆ ಎಂದು ತಿಳಿಸಿದರು. ಕಡಿಮೆ ವಾಹನಗಳನ್ನು ಹೊಂದಿರುವ ಖಾಸಗಿಯವರ ದರವು ಕಡಿಮೆ ಇದ್ದು, ಗಣನೀಯ ಸಂಖ್ಯೆಯ ವಾಹನಗಳಿರುವ ಸರಕಾರಿ ಸಂಸ್ಥೆಯ ಬಸ್ಸುಗಳ ದರ ಹೆಚ್ಚು ಇರುವುದು ಏಕೆ? ಸರಕಾರಿ ಸಾರಿಗೆಯು ಜನಸ್ನೇಹಿ ಆಗಿರಬೇಕೇ ಹೊರತು, ಜನರನ್ನು ಕಿತ್ತು ತಿನ್ನುವಂತೆ ಇರಬಾರದು. ಸರಕಾರಿ ಸೇವೆಯು ದುಬಾರಿ ಆಗಿರುವುದರಿಂದಲೇ ಜನರು ಖಾಸಗಿಯವರತ್ತ ಮುಖಮಾಡುವಂಥ ಅನಿವಾರ್ಯ ಸ್ಥಿತಿ ಸೃಷ್ಟಿಯಾಗಿದೆ. ಕೆಎಸ್‌ಆರ್‌ಟಿಸಿಯವರು ಹೀಗೆ ದರ ನಿಗದಿ ಮಾಡುವ ಮುನ್ನ ಸಾಕಷ್ಟು ಯೋಚಿಸಬೇಕು. ದರವು ಕೈಗೆಟಕುವಂತೆ ಇದ್ದರೆ ಜನರಿಗೂ 'ಇದು ನಮ್ಮ ಸಂಸ್ಥೆ, ನಮ್ಮ ಬಸ್ಸು' ಎಂಬ ಆಪ್ತತೆ ಮೂಡುತ್ತದೆ, ಅಲ್ಲವೇ?

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಬಿಗ್‌ಬಾಸ್ ರಾಮಾಯಣ!

ಕಿರಣ್ ಉಪಾಧ್ಯಾಯ ಅವರು ತಮ್ಮ 'ವಿದೇಶವಾಸಿ' ಅಂಕಣದಲ್ಲಿ (ವಿಶ್ವವಾಣಿ ಜ.13), 'ರಾಮಾಯಣ' ಕಿರುತೆರೆ ಧಾರಾವಾಹಿಯ ಬೆಳಕಿನಲ್ಲಿ 'ಬಿಗ್‌ಬಾಸ್' ಎಂಬ 'ಕರ್ಮ... ಕರ್ಮ' ಕುರಿತು, ಸಂಬಂಧಿಸಿದವರಿಗೆ ಮರ್ಮಾಘಾತವಾಗುವಂತೆ ವಾಸ್ತವವನ್ನು ಬಿಚ್ಚಿಟ್ಟಿದ್ದಾರೆ. ಈ ಲೇಖನವನ್ನು ಓದಿದಾಗ ನನ್ನ ನೆನಪು ಸುಮಾರು 12 ವರ್ಷಗಳಷ್ಟು ಹಿಂದಕ್ಕೆ ಓಡಿತು. 2013ರ ಮಾರ್ಚ್ 24ರಂದು ಮೊಟ್ಟಮೊದಲಿಗೆ ಕನ್ನಡದಲ್ಲಿ ಕಾಣಿಸಿಕೊಂಡ 'ಬಿಗ್ ಬಾಸ್' ಲಗಾತಾರ್ 99 ದಿನ ಓಡಿ, ಅದೇ ವರ್ಷದ ಜೂನ್ 30ರಂದು ತನ್ನ ಪ್ರಥಮ ಸುತ್ತಿನ ಓಟವನ್ನು ಮುಗಿಸಿದನಷ್ಟೆ. ಆ ಅವಧಿಯಲ್ಲಿ ನಾನು ಆ ಕಾರ್ಯಕ್ರಮವನ್ನು ಕಟುವಾಗಿ ಟೀಕಿಸಿ ಹಲವು ಸುದೀರ್ಘ ಲೇಖನಗಳನ್ನು ಬರೆದಿದ್ದೆ, ಅವು ದಿನಪತ್ರಿಕೆಯೊಂದರ ಅಂದಂದಿನ ಸಂಚಿಕೆಯಲ್ಲಿ ಪ್ರಕಟಗೊಂಡಿದ್ದೂ ಉಂಟು. ಆದರೆ, ಏನು ಪ್ರಯೋಜನವಾಯಿತು? 'ಬಿಗ್ ಬಾಸ್' ಲಗಾತಾರ್ ಅಬ್ಬರಿಸುತ್ತಲೇ ಇದ್ದಾನೆ. ಇದಕ್ಕೆ ವಾರಾಂತ್ಯದಲ್ಲಿ ಬರುವ ಪಂಚಾಯತಿಯ ಒಗ್ಗರಣೆ ಬೇರೆ! ಅಲ್ಲಿನ ಸ್ಪರ್ಧಿಗಳೆಲ್ಲರೂ ಮಹಾನ್ ಸಾಧಕರು, ಮಹಾನ್ ನಾಯಕ-ನಾಯಕಿಯರು (ಕೆಲವರು ಖಳನಾಯಕ- ಖಳನಾಯಕಿಯರು) ಎಂಬಂತೆ ಬಿಂಬಿಸಲ್ಪಡುತ್ತಿದ್ದಾರೆ! ಬಿತ್ತರಿಸಿದವರಿಗೆ ಕಾಸು, ಭಾಗವಹಿಸಿದವರು ಮತ್ತಷ್ಟು ಫೇಮಸ್ಸು, ವೀಕ್ಷಕರ ತಲೆ ಒಂದಷ್ಟು ಲೂಸು! ಹೀಗೇ ಮುನ್ನಡೆಯುತ್ತಾನೆ ಬಿಗ್ ಬಾಸು! ಕರ್ಮಕಾಂಡ ಕುತೂಹಲಿ ವೀಕ್ಷಕರ ದೃಷ್ಟಿಯಲ್ಲಿ ನಮ್ಮ ಲೇಖನಗಳಿಗೆ ಬೆಲೆ ಇಲ್ಲ ಚಿಕ್ಕಾಸೂ!

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಶುಭ ಹಾರೈಸೋಣ!

'ರಸದೌತಣ' ಅಂಕಣದಲ್ಲಿ (ವಿಶ್ವವಾಣಿ ಜ.12) ಪ್ರಕಟಗೊಂಡ ಬರಹವನ್ನು ಓದಿದೆ. ಮನಕಲಕುವ ಕಥಾನಕವಿದು. ಸತ್ಯಕಥೆ ಎಂದರೂ, ಯಾರೇ ಆದರೂ ನಂಬಲೇಬೇಕಾದ್ದು. ಹಾಗಿದೆ ಇಂದಿನ ಸಮಾಜ. ರಾಮನಿಗೆ ಜಾನಕಿ, ಜಾನಕಿಗೆ ರಾಮ, ಮತ್ತು ಲವ-ಕುಶರಿಗೆ 'ಜಾನಕೀರಾಮ' ಸಿಕ್ಕಿದರು ಮತ್ತು ಆಮೇಲೆ ಅವರೆಲ್ಲರೂ ಕೊನೇ ತನಕ ಸುಖ-ಸಂತೋಷದಿಂದ ಬಾಳಿದರು ಎಂದು ಆಶಿಸೋಣ!

- ಶ್ರೀವತ್ಸ ಜೋಶಿ, ವಾಷಿಂಗ್ಟನ್

ಅಂತರಂಗ ಮತ್ತು ಅಂತರಿಕ್ಷದ ನಡುವಿನ ಅವಿನಾಭಾವ ಸಂಬಂಧ

ನಿರ್ಮಲನುಡಿ
ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ
vveditoped@gmail.com

ಭಾಗ-1

ನಮ್ಮ ನಾಡಿನ ಅನುಭಾವಿಗಳು ಸುತ್ತಲಿನ ಜಗತ್ತಿನಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುತ್ತ, ಅವನ್ನೇ ರೂಪಕವಾಗಿ ಬಳಸಿಕೊಂಡು ಆತ್ಮಸಾಧನೆಯ ತತ್ವಗಳನ್ನು ಸರಳವಾಗಿ ಬೋಧಿಸುತ್ತಿದ್ದರು. ಉದಾಹರಣೆಗೆ ಸಂತ ಶಿಶುನಾಳ ಶರೀಫರ ಕಾಲದಲ್ಲಿ (ಕ್ರಿ.ಶ. 1819-1889) ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿಯಾಗಿತ್ತು, ಅಲ್ಲಿನ ಆಧುನಿಕ ಯಂತ್ರಗಳು ಒಂದೊಂದಾಗಿ ಭಾರತಕ್ಕೂ ಪದಾರ್ಪಣೆ ಮಾಡಲಾರಂಭಿಸಿದ್ದವು. ಶರೀಫರ ತತ್ವಪದಗಳನ್ನು ಗಮನಿಸಿದರೆ ಅವರು ಹುಬ್ಬಳ್ಳಿ ಮುಂತಾದ ನಗರಗಳಲ್ಲಿ ಅಂಥ ಯಂತ್ರೋಪಕರಣಗಳನ್ನು ಕಂಡಿದ್ದರು ಎನಿಸುತ್ತದೆ.

''ಗಿರಣಿ ವಿಸ್ತಾರ ನೋಡಮ್ಮ ಅದಕೆ ಪರಾಕು ಮಾಡಮ್ಮ ॥ ಧರಣಿಪತಿಯು ರಾಣಿ ಕರುಣಾಟ ರಾಜ್ಯಕೆ ತರಿಸಿದ ಘನ ಚೋದ್ಯವೋ ಚೀನಾದ ವಿದ್ಯವೋ ॥ ಜಲ ಅಗ್ನಿ ವಾಯು ಒಂದಾಗಿ ಕಲೆತು ಚಂದಾಗಿ ಜಲ ಅಗ್ನಿ ವಾಯು ಒಂದಾಗಿ ನೆಲದಿಂದ ಗಗನಕ್ಕೆ ಮುಟ್ಟಿದಂತೆಸುವುದು ಚಲುವ ಚನ್ನಿಗವಾದ ಕಂಭವೋ, ಹೊಗಿಯ ಬಿಂಬವೋ ॥ ಒಳಗೊಂದು ಬೇರೆ ಆಕಾರ ತಿಳಕೋ ಚಮತ್ಕಾರ ಒಳಗೊಂದು ಬೇರೆ ಆಕಾರ ದಳಗಳೊಂಭತ್ತು ಚಕ್ರ ಸುಳಿವ ಸೂತ್ರಾಧಾರ ಲಾಳಿ ಮೂರು ಕೊಳಿವಿಯೊಳು ಎಳೆ ತುಂಬುತದರೊಳು ॥''.

19ನೇ ಶತಮಾನದ ಪೂರ್ವಾರ್ಧದಲ್ಲಿ ಬದುಕಿದ್ದ ಶರೀಫರು ಈ ತತ್ವಪದದಲ್ಲಿ ವಿಕ್ಟೋರಿಯಾ ರಾಣಿಯನ್ನು ಸ್ಮರಿಸಿದ್ದಾರೆ. ಅವಳನ್ನು 'ಧರಣಿಪತಿ ರಾಣಿ' ಎಂದು ಕರೆದಿದ್ದಾರೆ. ಅವಳು ತನ್ನ ಆಧೀನದಲ್ಲಿರುವ ಕರ್ನಾಟಕ ರಾಜ್ಯಕ್ಕೆ ತರಿಸಿದ ಘನಚೋದ್ಯವಿದು ಎಂದು ಈ ಗಿರಣಿಯನ್ನು ಬಣ್ಣಿಸುತ್ತಾರೆ. ಇಂಥ ಒಂದು ಆಧುನಿಕ ಯಾಂತ್ರಿಕ ಸಾಧನ ಸಾಮಾನ್ಯ ಜನಕ್ಕೆ ಆಗ ಸೋಜಿಗದ ವಸ್ತುವಾಗಿತ್ತು. ಅದನ್ನೇ ಶರೀಫರು 'ಘನಚೋದ್ಯ' ಎಂದು ಕರೆದಿರುವುದು. ಈ ಯಂತ್ರದ ಕಾರ್ಯವೈಖರಿಯನ್ನು ವರ್ಣಿಸುತ್ತಲೇ ಅವರು ಶರೀರದೊಳಗಿನ ಪಂಚಭೂತಗಳು, ನವರಂಧ್ರಗಳು, ಷಟ್ಚಕ್ರಗಳು, ಸುಷುಮ್ನಾದಿ ಮೂರು ನಾಡಿಗಳು, ರೂಪದೊಳಗಿನ ಅರೂಪ ಮುಂತಾದ ಆಧ್ಯಾತ್ಮಿಕ ಸಂಗತಿಗಳನ್ನು ತತ್ವಪದದಲ್ಲಿ ಬೋಧಿಸಿದ್ದಾರೆ. ಶರೀಫರಲ್ಲಿ ಇಂಥ ಇನ್ನೂ ಹಲವು ತತ್ವಪದಗಳಿವೆ 'ಕುಂಬಾರಕಿ ಈಕಿ ಕುಂಬಾರಕಿ' ಎಂಬ ತತ್ವಪದದಲ್ಲಿ ಕುಂಬಾರ ಮಡಕೆ ಮಾಡುವ ಕ್ರಮವನ್ನು ನಿರೂಪಿಸುತ್ತಲೇ ಈ ಬ್ರಹ್ಮಾಂಡದ ಸೃಷ್ಟಿಯನ್ನು ವಿವರಿಸುತ್ತಾರೆ.

ಈ ನೆಲದ ಸಂತರು, ಅನುಭಾವಿಗಳು ಇಹವನ್ನು ತ್ಯಜಿಸಿ ಕಾಡಿಗೆ ಹೋಗಿ ಸಾಧನೆ ಮಾಡಬೇಕು ಎನ್ನುವುದಿಲ್ಲ, ಸಾಮಾನ್ಯ ಬದುಕಿನ ದೈನಂದಿನ ಚಟುವಟಿಕೆಗಳಿಗೆ ಬೆನ್ನು ತೋರಿಸುವುದಿಲ್ಲ ಇಹಲೋಕದ ಚಟುವಟಿಕೆಗಳ ನಿದರ್ಶನಗಳಿಂದಲೇ ಪರಲೋಕದ ಸ್ಮರಣೆಯನ್ನು ತಂದುಕೊಡುತ್ತಾರೆ, ಇಹವೇ ಪರಕ್ಕೆ ಸಾಧನವಾಗಬೇಕು ಎಂಬುದು ನಮ್ಮ ಭಾರತೀಯ ಅನುಭಾವ ಪರಂಪರೆಯ ಸಂದೇಶವಾಗಿದೆ. ಶ್ರೀ ರಾಮಕೃಷ್ಣರ ದೃಷ್ಟಾಂತಗಳಲ್ಲಿ ಸಹ ಇಂಥ ಹಲವು ನಿದರ್ಶನಗಳನ್ನು ಕಾಣಬಹುದು.

ಈ ವಿಷಯದಲ್ಲಿ ಕನ್ನಡದ ಆಧುನಿಕ ಕವಿಗಳೂ ಹಿಂದೆ ಬಿದ್ದಿಲ್ಲ. ಕುವೆಂಪು ಅವರ 'ರೈಲ್ ರಸ್ತೆ'ಯಂಥ ಪದ್ಯಗಳಲ್ಲಿ ಆಧುನಿಕತೆಯನ್ನು ವಿಡಂಬಿಸಲಾಗಿದೆ. ಅವರು ರೈಲ್ವೇಹಳಿಗಳನ್ನು, ಆಧುನಿಕತೆಯ ಕಬ್ಬಿಣದ ಹೃದಯಕ್ಕೆ ರಕ್ತ ಹೊತ್ತು ಪ್ರವಹಿಸುವ ಲೋಹದ ರೇಖಾನಾಳಕ್ಕೆ ಹೋಲಿಸಿದ್ದಾರೆ. ಕವಿ ಗೋಪಾಲಕೃಷ್ಣ ಅಡಿಗರು ತಮ್ಮ ಒಂದು ಪದ್ಯದಲ್ಲಿ ಮನುಷ್ಯ ಶರೀರದೊಳಗಿನ ಕುಂಡಲಿನೀ ಶಕ್ತಿಯನ್ನು ರಾಕೆಟ್ಟಿಗೂ, ಮೂಲಾಧಾರ, ಸ್ವಾಧಿಷ್ಠಾನ ಮುಂತಾದ 6 ಚಕ್ರಗಳನ್ನು ರಾಕೆಟ್ ಉಡಾವಣೆಯ ವಿವಿಧ ಹಂತಗಳಿಗೂ ಹೋಲಿಸಿ ಅಂತರಂಗದ 'ಸೋಹಂ' ಭಾವವು ಈ ಹಂತಗಳನ್ನೇರಿ ಕೊನೆಯ ಹಂತವಾದ ಸಹಸ್ರಾರ ಚಕ್ರವನ್ನು ತಲುಪುವ ಕ್ರಮವನ್ನು ಬಹಳ ರೂಪಕಾತ್ಮಕವಾಗಿ ವರ್ಣಿಸಿದ್ದಾರೆ (ಷಟ್ಚಕ್ರ ರಾಕೆಟ್ಟುಗಳ ಹಂತಹಂತಕ್ಕೆ ಅಂಚೆ ತಲುಪೀತೆ ಸಹಸ್ರಾರಕೆ?- ಶ್ರೀರಾಮನವಮಿಯ ದಿವಸ).

ಕಳೆದ ಡಿಸೆಂಬರ್ 30ರಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೋ) ಶ್ರೀಹರಿಕೋಟಾದಿಂದ ಪಿಎಸ್‌ಎಲ್‌ವಿ ಸಿ-60 ರಾಕೆಟ್ ಮೂಲಕ 220 ಕೆ.ಜಿ. ತೂಕದ 'ಸ್ಪೆಡೆಕ್ಸ್-ಎ' ಹಾಗೂ 'ಸ್ಪೆಡೆಕ್ಸ್-ಬಿ' ಎಂಬ ಎರಡು ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿತು. ಭವಿಷ್ಯದ ಯೋಜನೆಗಳಲ್ಲಿ ಈ ಎರಡು ಉಪಗ್ರಹಗಳು ನಿರ್ಣಾಯಕ ಪಾತ್ರ ವಹಿಸಲಿವೆ. ಇನ್ನು ಮುಂದೆ ಆನ್‌ಬೋರ್ಡ್ ಕ್ಯಾಮರಾದಿಂದ ಡಾಕಿಂಗ್ ಪ್ರಕ್ರಿಯೆಯ ಚಿತ್ರಗಳನ್ನು ಪ್ರಸಾರ ಮಾಡುವುದು ಸೇರಿದಂತೆ ಡಾಕಿಂಗ್‌ನ ಎಲ್ಲ ಚಟುವಟಿಕೆಗಳನ್ನು ಬೆಂಗಳೂರಿನ ಇಸ್ರೋ ಕೇಂದ್ರದಿಂದ ವೀಕ್ಷಿಸಲು ಸಾಧ್ಯವಾಗಲಿದೆ. ಅಮೆರಿಕ, ರಷ್ಯಾ ಮತ್ತು ಚೀನಾ ಮಾತ್ರ ಬಾಹ್ಯಾಕಾಶ ನೌಕೆಗಳ 'ಡಾಕಿಂಗ್' ತಂತ್ರಜ್ಞಾನವನ್ನು ಬಳಸುತ್ತಿದ್ದು ಈಗ ಈ ಸಾಲಿಗೆ ಭಾರತವೂ ಸೇರ್ಪಡೆಯಾಗಿದೆ. ಈ ಉಪಗ್ರಹಗಳು 24 ಪೇಲೋಡ್‌ಗಳನ್ನು ಹೊಂದಿದ್ದು ಅದರಲ್ಲಿ ನಮ್ಮ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಚಿಕ್ಕಬಳ್ಳಾಪುರದ ಎಂಜಿನಿಯರಿಂಗ್ ಕಾಲೇಜು ಅಭಿವೃದ್ಧಿ ಪಡಿಸಿರುವ 'ಬಿಜಿಎಸ್ ಅರ್ಪಿತ್' (ಅಮೆಚೂರ್ ರೇಡಿಯೋ ಪೇಲೋಡ್ ಫಾರ್ ಇನ್ಫಾರ್ಮೇಷನ್ ಟ್ರಾನ್ಸ್ಮಿಷನ್) ಸಹ ಸೇರಿದೆ. ಎಫ್‌ಎಂ ಮಾಡ್ಯುಲೇಷನ್ ಮತ್ತು ವಿಎಚ್‌ಎಫ್ ಬ್ಯಾಂಡ್‌ಗಳನ್ನು ಬಳಸಿ ಉಪಗ್ರಹದಿಂದ ಶಬ್ದ, ಪಠ್ಯ ಹಾಗೂ ಚಿತ್ರಗಳು ಪ್ರಸರಣವಾಗುವಂತೆ ಬಿಜಿಎಸ್ ಅರ್ಪಿತ್ ವಿನ್ಯಾಸಗೊಂಡಿದೆ.

ಪಿಎಸ್‌ಎಲ್‌ವಿ ಸಿ-60 ರಾಕೆಟ್ ಭೂಮಿಯಿಂದ ಅಂತರಿಕ್ಷಕ್ಕೇರಿ ಉಪಗ್ರಹವನ್ನು ಹಂತ ಹಂತವಾಗಿ ಕಕ್ಷೆಗೆ ಸೇರಿಸುವ ವಿಡಿಯೋವನ್ನು ಇಸ್ರೋ ಸಂಸ್ಥೆಯು ತನ್ನ 'ಎಕ್ಸ್' (ಟ್ವಿಟರ್) ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಿದೆ. ಆ ದೃಶ್ಯಗಳನ್ನು ನೋಡುತ್ತಿದ್ದರೆ ಮನುಷ್ಯ ಚೈತನ್ಯವು ಈ ಮೃಣ್ಮಯ ಶರೀರದಿಂದ ಹಂತ ಹಂತವಾಗಿ ಮೇಲಕ್ಕೇರಿ ದಿವ್ಯತ್ವದಲ್ಲಿ ಐಕ್ಯವಾಗುವ ವಿದ್ಯಮಾನ ನೆನಪಾಗುತ್ತದೆ.

ರಾಕೆಟ್‌ಗಳು ಉಪಗ್ರಹವನ್ನು ಹೊತ್ತೊಯ್ದು ಅದರ ಕಕ್ಷೆಗೆ ಸೇರಿಸುತ್ತವೆ. ಒಮ್ಮೆ ಅದು ಕಕ್ಷೆಗೆ ಸೇರಿದ ಮೇಲೆ ರಾಕೆಟ್ ಅಂತರಿಕ್ಷದಲ್ಲೇ ವಿಘಟನೆಗೊಂಡು ವಿಲೀನವಾಗುತ್ತದೆ. ನಮ್ಮ ಶರೀರವೂ ಆತ್ಮವನ್ನು ಹೊತ್ತಿರುವ ರಾಕೆಟ್‌ಗಿಂತ ಭಿನ್ನವಲ್ಲ. ಕವಿ ಕಾಳಿದಾಸನು ಕುಮಾರ ಸಂಭವದಲ್ಲಿ 'ಶರೀರಮಾದ್ಯಂ ಖಲು ಧರ್ಮಸಾಧನಮ್' ಎನ್ನುತ್ತಾನೆ. ಧರ್ಮಸಾಧನೆಗೂ, ಪರಮ ಪುರುಷಾರ್ಥ ಸಾಧನೆಗೂ ಶರೀರವೇ ಆಧಾರವಾಗಿದೆ. ರಾಕೆಟ್‌ಗಳು ಉಪಗ್ರಹವನ್ನು ಹೊತ್ತು 3 ಹಂತದಲ್ಲಿ ಅಂತರಿಕ್ಷವನ್ನು ಸೇರುತ್ತವೆ. ಮೊದಲ ಹಂತವನ್ನು 'ಲಿಫ್ಟ್ ಆಫ್' ಎನ್ನುತ್ತಾರೆ. ಯೋಗದ ಪರಿಭಾಷೆಯಲ್ಲಿ ಹೇಳುವುದಾದರೆ ಅದು ಊರ್ಧ್ವಗಮನ, ಮೇಲ್ಮುಖ ಚಲನೆ. ಮನುಷ್ಯ ಬದುಕಿಗೆ 2 ಆಯಾಮದ ಚಲನೆಗಳಿವೆ ಒಂದು ಸಮತಲ ಚಲನೆ (ಹಾರಿಜಾಂಟಲ್) ಮತ್ತೊಂದು ಲಂಬ ಅಥವಾ ಊರ್ಧ್ವ ಚಲನೆ (ವರ್ಟಿಕಲ್). ಇದನ್ನು ಉಪನಿಷತ್ತು 'ಶ್ರೇಯ' ಮತ್ತು 'ಪ್ರೇಯ' ಎಂದು ವಿಂಗಡಿಸುತ್ತದೆ. ''ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಃ ತೌ ಸಂಪರೀತ್ಯ ವಿವಿನಕ್ತಿ ಧೀರಃ? ಶ್ರೇಯೋ ಹಿ ಧೀರೋ? ಭಿಪ್ರೇಯಸೋ ವೃಣೀತೇ ಪ್ರೇಯೋ ಮಂದೋ ಯೋಗಕ್ಷೇಮಾದ್ವೃಣೀತೇ? (ಕಠೋಪನಿಷತ್ 1.2.2) (ಅರ್ಥ: ಮನುಷ್ಯರ ಮುಂದೆ ಶ್ರೇಯಸ್ಸು ಮತ್ತು ಪ್ರೇಯಸ್ಸು ಎಂಬೆರಡು ಮಾರ್ಗಗಳಿವೆ. ಧೀರರಾದವರು (ಯೋಗ್ಯರಾದವರು) ಎರಡನ್ನೂ



ಸರಿಯಾಗಿ ಪರೀಕ್ಷಿಸಿ ವಿಂಗಡಿಸಿಕೊಳ್ಳುವರು. ಯೋಗ್ಯರು ಶ್ರೇಯಸ್ಸನ್ನು ಆರಿಸಿಕೊಂಡರೆ ಮಂದ ಬುದ್ಧಿಯವರು ಪ್ರೇಯಸ್ಸನ್ನು ಆಯ್ಕೆ ಮಾಡಿಕೊಂಡು ಆತ್ಮಜ್ಞಾನದಿಂದ ವಂಚಿತರಾಗುವರು).

ಪ್ರೇಯವೆಂದರೆ ಲೌಕಿಕದ ಬಯಕೆ, ಅದಕ್ಕೆ ಸಮತಲ ಚಲನೆ ಅಗತ್ಯ. ಇನ್ನು ಶ್ರೇಯವೆಂದರೆ ಅಲೌಕಿಕದ ಬಯಕೆ; ಈ ಬಯಕೆಯನ್ನು ಈಡೇರಿಸಿಕೊಳ್ಳಲು ಮನುಷ್ಯರು ಸಮತಲ ಚಲನೆಯನ್ನು ಬಿಟ್ಟು ಊರ್ಧ್ವಗಾಮಿಗಳಾಗಬೇಕಾಗುತ್ತದೆ. ಲೋಕದ ವ್ಯವಹಾರಗಳಿಗಿಂತ ಭಿನ್ನವಾದ, ವ್ಯತಿರಿಕ್ತವಾದ ಮಾರ್ಗದಲ್ಲಿ ಚಲಿಸಬೇಕಾಗುತ್ತದೆ.

ರಾಕೆಟ್ ಅಗಾಧವಾದ ಶಕ್ತಿಯನ್ನು ಬಳಸಿ ಭೂಮಿಯ ಗುರುತ್ವಾಕರ್ಷಣೆಗೆ ವಿಪರೀತದ ದಿಕ್ಕಿನಲ್ಲಿ ಕ್ರಮಿಸುತ್ತದೆ. ಉಡಾವಣೆಗೆ ಮುನ್ನ ಅದರ ಬುಡದಲ್ಲಿ ಅಗ್ನಿಸ್ಫೋಟವಾಗುತ್ತದೆ. ಟನ್‌ಗಟ್ಟಲೆ ತೂಕವಿರುವ ರಾಕೆಟ್ಟು ಭೂಮಿಯ ಸೆಳೆತದಿಂದ ಮೇಲೇರಿ ಊರ್ಧ್ವಗಾಮಿಯಾಗಲು ಇಂಥ ತೀವ್ರಸ್ಫೋಟ ಅತ್ಯಗತ್ಯ. ಅಧ್ಯಾತ್ಮ ಸಾಧಕರು ನಿಃಶ್ರೇಯಸ್ಸಿನ ಕಡೆಗೆ ಮುಖ ಮಾಡಲು ಕಾರಣವಾಗುವಂಥ ಈ ಬಗೆಯ ತೀವ್ರಸ್ಫೋಟವನ್ನು (ಅಂತರಂಗದ ತೀವ್ರಸ್ಫೋಟವನ್ನು) ಅವರ ಚರಿತ್ರೆಯಲ್ಲಿ ನಾವು ಕಾಣುತ್ತೇವೆ.

ಅರಮನೆಯ ಸುಖಭೋಗದೊಳಗೆ ಮುಳುಗಿದ್ದ ಗೌತಮಬುದ್ಧ ಒಬ್ಬ ಮುದುಕ, ಒಬ್ಬ ರೋಗಿ, ಒಂದು ಮೃತದೇಹ ಮತ್ತು ಒಬ್ಬ ಸನ್ಯಾಸಿಯನ್ನು ಕಂಡ ಗಳಿಗೆಯಲ್ಲಿ ಅವನ ಲೌಕಿಕ ಬದುಕು ಛಿದ್ರಗೊಂಡಿತು. ಕಾಮಲತೆಯ ಸಾವನ್ನು ಕಂಡ ಅಲ್ಲಮಪ್ರಭುವಿನ ಚಿತ್ತದಲ್ಲಿ ಅಥವಾ ರಾಜನರ್ತಕಿ ನೀಲಾಂಜನೆಯ ಶಾರೀರಕ ನಶ್ವರತೆಯ ದರ್ಶನ ಮಾಡಿದ ಪ್ರಥಮ ತೀರ್ಥಂಕರರಾದ ಆದಿನಾಥರ ಚಿತ್ತದಲ್ಲಿ ಮೂಡಿದ ವಿರಕ್ತಿಯನ್ನೂ ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಲೌಕಿಕ ಬದುಕಿನಿಂದ ನಿವೃತ್ತಿಗೊಂಡು ತಪೋನಿರತರಾಗುವ ಸಾಧಕರನ್ನು ಅಲ್ಲಮಪ್ರಭು 'ವಿಪರೀತ ಚರಿತ್ರ' ಎಂದು ಕರೆಯುತ್ತಾರೆ. ವಿಪರೀತ ಚರಿತ್ರರು -ಅಂದರೆ ಸಾಧಕರು- ಲೋಕದ ಜನಗಳ ವ್ಯವಹಾರಗಳಿಗೆ ವ್ಯತಿರಿಕ್ತವಾದ ರೀತಿಯಲ್ಲಿ ವ್ಯವಹರಿಸಬೇಕಾಗುತ್ತದೆ. ಸಾಧಕರು ತಮ್ಮ ಚಿತ್ತವನ್ನು ಇಹಲೋಕದ ಸೆಳೆತದಿಂದ ಬಿಡಿಸಿಕೊಂಡು ಪರಮಾತ್ಮನ ಕಡೆಗೆ ಹರಿಸಬೇಕಾಗುತ್ತದೆ. ಅದಕ್ಕಾಗಿ ಅವರು ಅಗಾಧವಾದ ಚೈತನ್ಯವನ್ನು ಬಳಸಬೇಕಾಗುತ್ತದೆ. ಆ ಚೈತನ್ಯದ ಬಳಕೆಯನ್ನೇ ತಪಸ್ಸು ಎನ್ನುವುದು. ತಪಸ್ಸು ಎಂಬ ಪದಕ್ಕೂ ತಾಪ, ಅಗ್ನಿ ಮುಂತಾದ ಅರ್ಥಗಳಿವೆ.

ಪರಮಪದವನ್ನು ತಲುಪಲು ಸಾಧನೆ ಮಾಡುವ ಮುಮುಕ್ಷುಗಳು ಮೊದಲು ಲೌಕಿಕ ಬಂಧದಿಂದ, ಸೆಳೆತದಿಂದ ಪಾರಾಗಬೇಕಾಗುತ್ತದೆ. ಅದಕ್ಕಾಗಿ ಮಹರ್ಷಿ ಪತಂಜಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಸಮಾಧಿ ಎಂಬ ಅಷ್ಟಾಂಗ ಯೋಗವನ್ನು ಬೋಧಿಸಿದ್ದಾರೆ. ಮೊದಲೆರಡು ಸಾಧನೆಗಳಾದ ಯಮ ಮತ್ತು ನಿಯಮಗಳ ಸಾಧನೆಯಿಂದ ಸಾಧಕರು ಲೌಕಿಕ ಬಂಧನದಿಂದ ಬಿಡುಗಡೆ ಹೊಂದುತ್ತಾರೆ.

'ಯಮ' ಎಂಬ ಪದವು ನಮ್ಮ ಲೋಕದ ವ್ಯವಹಾರಗಳಿಗೆ ಅಂತ್ಯ ಹಾಡುವ ಮೃತ್ಯುದೇವತೆಯ ಹೆಸರೂ ಹೌದು. ಯಮ ಎಂಬ ಮೊದಲ ಅಂಗವು ಅಹಿಂಸೆ (ಹಿಂಸೆ ಮಾಡದಿರುವುದು), ಸತ್ಯ (ಸುಳ್ಳನ್ನು ನುಡಿಯದಿರುವುದು), ಅಸ್ತೇಯ (ಅನ್ಯರ ವಸ್ತುವನ್ನು ಕದಿಯದಿರುವುದು), ಅಪರಿಗ್ರಹ (ಅನ್ಯರ ವಸ್ತುವನ್ನು ತನ್ನ ಬಳಿ ಇರಿಸಿಕೊಳ್ಳದಿರುವುದು), ಬ್ರಹ್ಮಚರ್ಯ (ಇಂದ್ರಿಯಗಳನ್ನು ನಿಗ್ರಹಿಸುವುದು) ಎಂಬುದನ್ನು ಒಳಗೊಂಡಿದೆ.

ಮಾಡಬಾರದ ಕೆಲಸಗಳನ್ನೇನೋ ಪಟ್ಟಿ ಮಾಡಿದ್ದಾಯಿತು, ಸರಿ. ಈಗ ಮಾಡಬೇಕಾದ ಕೆಲಸಗಳಾವುವು? ಇದನ್ನು ಪತಂಜಲಿಯ ಎರಡನೆಯ ಅಂಗವಾದ 'ನಿಯಮ'ದಲ್ಲಿ ವಿವರಿಸುತ್ತಾರೆ. ಶೌಚ (ಒಳಗೂ ಹೊರಗೂ ಶುದ್ಧವಾಗಿರಬೇಕು), ಸಂತೋಷ (ಚಿತ್ತವು ಸದಾಕಾಲ ಆನಂದದಿಂದಿರಬೇಕು), ತಪಸ್ಸು (ಸಾಧನಾ ನಿರತರಾಗಬೇಕು), ಸ್ವಾಧ್ಯಾಯ (ಸಾಧಕರು ತಮ್ಮನ್ನು ಸದಾ ಅವಲೋಕಿಸಿಕೊಳ್ಳುತ್ತಿರಬೇಕು) ಮತ್ತು ಈಶ್ವರ ಪ್ರಣಿಧಾನ (ಪರಮಾತ್ಮನಿಗೆ ಶರಣಾಗಬೇಕು).

ಹೀಗೆ ಪತಂಜಲಿ ಸೂಚಿಸುವ ಮಾಡಬೇಕಾದ ಮತ್ತು ಮಾಡಬಾರದ ಕೆಲಸಗಳನ್ನು ಅಂದರೆ ವಿಧಿ ಮತ್ತು ನಿಷೇಧಗಳನ್ನು ಮುಮುಕ್ಷುಗಳು ನಿಷ್ಠೆಯಿಂದ ಪಾಲಿಸಿದರೆ ಲೌಕಿಕ ಸೆಳೆತದಿಂದ ಸುಲಭವಾಗಿ ವಿಮುಖರಾಗುವರು, ಊರ್ಧ್ವಮುಖಿಗಳಾಗುವರು. ಇದನ್ನೇ ಈ ಹಿಂದೆ ಖಗೋಳ ವಿಜ್ಞಾನದ ಪರಿಭಾಷೆಯಲ್ಲಿ 'ಲಿಫ್ಟ್ ಆಫ್' ಎಂದು ವಿವರಿಸಿದ್ದು. ರಾಕೆಟ್ಟು ಒಮ್ಮೆ ಗುರುತ್ವಾಕರ್ಷಣೆಯ ಪರಿಧಿಯನ್ನು ದಾಟಿದ ಮೇಲೆ ಸರಾಗವಾಗಿ ಮುಂದುವರಿಯುವಂತೆ ಸಾಧಕರು ಒಮ್ಮೆ ಲೋಕಕ್ಕೆ ವಿಮುಖರಾದ ಮೇಲೆ ಅವರ ಆಧ್ಯಾತ್ಮಿಕ ಪಯಣ ಸುಲಭವಾಗುತ್ತದೆ.

(ಮುಂದುವರಿಯುವುದು)

(ಲೇಖಕರು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರು)

ಭಟ್ಟರ್ ಸ್ಕಾಚ್

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಜಾತಿಗಣತಿ ಮಾಡ್ತೀವಿ ಮಾಡ್ತೀವಿ ಎನ್ನುತ್ತಿದ್ದ ಸರಕಾರ ಈಗ ಕೈಗೊಂಡಿದ್ದಾದರೂ ಏನು?
– **ಜಾನುವಾರು ಗಣತಿ!**

- **ಘಂಟಿ ರಾಮಾಚಾರ್ಯ, ಮೈಸೂರು**
ಭಟ್ರೇ, ಉಳುವವನಿಗೇ ಭೂಮಿ, ಓಡಿಸುವವನಿಗೇ ಕಾರು, ಪೌರೋಹಿತ್ಯ ಮಾಡಿಸುವವನಿಗೇ?
– **ಮದುವೆ ಹುಡುಗಿ!**

- **ವಿನಾಯಕ ಹಿರೇಹಳ್ಳ, ಮೋಟೆಬೆನ್ನೂರು**
ಭಟ್ರೇ, ನೀವು ಯಾರ ತೆಕ್ಕೆಗೂ ಸಿಗುವ ಆಸಾಮಿ ಅಂತಾರಲ್ಲ?
– **ನಮ್ಮ ತೆಕ್ಕೆಗೆ ಸಿಕ್ಕರೂ ಆಗಬಹುದು!**

- **ಚಂಚಲಾ ಚಿಟಗುಪ್ಪಿ, ಮೈಸೂರು**
ಭಟ್ಟರನ್ನು ಹಾಕಿಕೊಂಡು ಪ್ರಣಯ ಪ್ರಧಾನ ಸಿನಿಮಾ ಮಾಡಹೊರಟರೆ ಅವರು ಯಾವ ವಿಷಯದಲ್ಲಿ ರಾಜಿಯಾಗುವುದಿಲ್ಲ?
– **ಅವರು ಯಾವುದರಲ್ಲಿ ರಾಜಿಯಾಗ್ತಾರೆ ಎಂದು ಕೇಳಿದ್ದರೆ ಹೇಳಿರುತ್ತಿದ್ದರು!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಎಲ್ ಆ್ಯಂಡ್ ಟಿ ಮುಖ್ಯಸ್ಥ ಎಸ್.ಎನ್. ಸುಬ್ರಹ್ಮಣ್ಯನ್ ಹೇಳಿಕೆಗೆ ಪ್ರಚೋದನೆ ಏನು?
– **ಮನೆಯಲ್ಲಿ ಹೆಂಡತಿ ಕಾಟ ಇರಬಹುದು ಅಂತೀಯಾ?!**

- **ವಿನೋದ ಕಾಳಪ್ಪ, ಕುಶಾಲನಗರ**
ಭಟ್ರೇ, ಡಿಕೆಶಿ ಮುಖ್ಯಮಂತ್ರಿ ಆಗೋದು ಗ್ಯಾರಂಟಿಯಾ?
– **ಕಾಂಗ್ರೆಸ್ ಹೈಕಮಾಂಡ್‌ಗೆ ಗ್ಯಾರಂಟಿ ಇಲ್ವಂತೆ!**

- **ನೂರಳ್ಳಿ ಗಣೇಶ, ಚಿತ್ರದುರ್ಗ**
ಭಟ್ರೇ, ಬಾಸ್ ಯಾವತ್ತೂ ಸರಿ ಅಂತಾರಲ್ಲ?
– **ಎಲ್ಲಿ ತನಕ ಆತ ಸಂಬಳ, ಪ್ರೊಮೋಷನ್ ಕೊಡ್ತಾನೋ ಅಲ್ಲಿ ತನಕ ಆತನೇ ಸರಿ!**

- **ವಿ.ಕೆ.ಪರಮೇಶ, ಗೋಣಿಕೊಪ್ಪ**
ಭಟ್ರೇ, ಒಳ್ಳೆಯ ಮಾತು ಹೇಳಿದರೂ ಹೊಡೆಯುತ್ತಾರಲ್ಲ?
– **'ನಿಮ್ಮ ಮಗಳು ಡೀಸೆಂಟ್ ರೀ' ಎನ್ನುವ ಬದಲು, 'ನಿಮ್ಮ ಮಗಳು ಡಿಸೆಂಟ್ರಿ' ಅಂದ್ರೆ ಇನ್ನೇನು ಮಾಡ್ತಾರೆ?!**

- **ಕೇಶವ ಹೆಗಡೆ, ಸಿದ್ದಾಪುರ**
ಭಟ್ರೇ, ನಿಮ್ಮ ಮುಂದಿನ ವಿದೇಶ ಪ್ರಯಾಣ ಎಲ್ಲಿಗೆ?
– **ಈ ಪ್ರಶ್ನೆಗೆ ವಿದೇಶದಲ್ಲಿ ಕುಳಿತು ಉತ್ತರಿಸುತ್ತಿದ್ದೇನೆ!**

- **ರಾ.ಸಂಜೀವ, ಕುಂದಾಪುರ**
ಭಟ್ರೇ, ಬಿಗ್ ಬಾಸ್ ಮನೆ ಶಾಂತ ಅಂತ ಅನಿಸ್ತಿದೆಯಲ್ಲ?
– **ಚೈತ್ರಾ ಕುಂದಾಪುರ ಅಲ್ಲಿಂದ ಹೊರಬಂದಿರಬೇಕು!**

ಸೋಲು ಗೆಲುವಿನ ಸೋಪಾನ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಮೈಕಲ್ ಜೋರ್ಡನ್ ಯಶಸ್ಸಿನ ತುತ್ತತುದಿಯಲ್ಲಿದ್ದಾಗ ಕೂಡ ಸೋಲುತ್ತಿದ್ದರು. ಆಟಗಾರರ ಬದುಕೇ ಹಾಗೆ, ಅಲ್ಲವೇ? ಗೆದ್ದ ತಕ್ಷಣ ತಲೆಯ ಮೇಲೆ ಕೂರಿಸಿಕೊಂಡು ಮೆರೆಸುವ ಜಗತ್ತು, ಒಂದು ಪಂದ್ಯದಲ್ಲಿ ಪ್ರದರ್ಶನ ಕಳಪೆಯಾದರೆ ಸಾಕು, ಆತನ ಹಿಂದಿನ ಎಲ್ಲಾ ಗೆಲುವುಗಳನ್ನೂ ಮರೆತು ಹಂಗಿಸಲು ಶುರುಮಾಡುತ್ತದೆ. ಮೈಕಲ್ ಜೋರ್ಡನ್ 'ಅಂತಾರಾಷ್ಟ್ರೀಯ ತಾರೆ', 'ಕಲ್ಚರಲ್ ಐಕಾನ್' ಎಂದು ನೆನಪಿನಲ್ಲಿ ಇಟ್ಟುಕೊಳ್ಳುವಂತೆ ಬೆಳೆದ ಹಾದಿಯಲ್ಲಿ ಹೂವಿಗಿಂತ ಹೆಚ್ಚು ಮುಳ್ಳಿದೆ.

ಅಮೆರಿಕದ ನ್ಯೂಯಾರ್ಕ್ ನಗರದ ಬ್ರೂಕ್ಲಿನ್ ಎಂಬಲ್ಲಿ 1963ರ ಫೆಬ್ರವರಿ 17ರಂದು ಮೈಕಲ್ ಜೋರ್ಡನ್ ಜನಿಸಿದರು. ಅಮ್ಮ ಡೆಲೋರಿಸ್ ಬ್ಯಾಂಕ್ ಉದ್ಯೋಗಿ, ಅಪ್ಪ ಜೇಮ್ಸ್ ಆರ್. ಜೋರ್ಡನ್ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದರು. ದಂಪತಿಗೆ ಒಟ್ಟು ಐದು ಮಕ್ಕಳು. ಇಬ್ಬರೂ ದಿನಪೂರ್ತಿ ಕೆಲಸದಲ್ಲಿ ತೊಡಗಿರುತ್ತಾರೆ. ಹೀಗಾಗಿ ಶಾಲೆಯಿಂದ ಬಂದ ಮಕ್ಕಳು ಮನೆಯಲ್ಲಿ ಏನು ಮಾಡುತ್ತಿರುತ್ತಾರೆ ಎನ್ನುವ ಚಿಂತೆ ಇಬ್ಬರದೂ; ಮಕ್ಕಳಿಗೆ ಖಾಲಿ ಕೂರಲು ಸಮಯ ಸಿಕ್ಕಬಾರದು ಎನ್ನುವುದು ಅವರ ನಿಲುವು. ಈ ಕಾರಣದಿಂದ, ಜಿಮ್ ಜತೆಗೆ ಅನೇಕ ಕ್ರೀಡೆಗಳಿಗೆ ಸೇರ್ಪಡೆಯಾಗುವಂತೆ ಅವರು ಮಕ್ಕಳಿಗೆ ಹೇಳುತ್ತಾರೆ. ಬಾಲಕ ಮೈಕಲ್ ಜೋರ್ಡನ್ ಉತ್ತಮ ದೇಹವನ್ನೂ, ಆಟದ ಮೇಲೆ ಪ್ರೀತಿಯನ್ನೂ ಹೊಂದಲು ಇದು ಮುಖ್ಯ ಕಾರಣವಾಗುತ್ತದೆ. ಆತನ ತಾಯಿ ಡೆಲೋರಿಸ್ ಅಸಾಧಾರಣ ಮಹಿಳೆ; ಮುಂದೆ ಮಗ ವಿಶ್ವವಿಖ್ಯಾತನಾದಾಗ ಅವನೊಂದಿಗೆ ಕುಳಿತು 'ನೈಕಿ' ಸಂಸ್ಥೆಯ ಜತೆಗೆ ಒಪ್ಪಂದ ಮಾಡಿಕೊಳ್ಳುವಲ್ಲಿ ಆಕೆ ಪ್ರಮುಖ ಪಾತ್ರ ವಹಿಸುತ್ತಾರೆ. ಅದು ಮುಂದೆ 'ಏರ್ ಜೋರ್ಡನ್' ಶೂಸ್ ಹುಟ್ಟಿಗೆ ಕಾರಣವಾಗುತ್ತದೆ. 2023ರಲ್ಲಿ ತೆರೆಗೆ ಬಂದ 'ಏರ್' ಚಿತ್ರಕ್ಕೂ ಕಾರಣವಾಗುತ್ತದೆ.

ಮಕ್ಕಳ ಬೆಳವಣಿಗೆಯಲ್ಲಿ ಹೆತ್ತವರ ಪಾತ್ರ ಅದೆಷ್ಟು ದೊಡ್ಡದು ಎನ್ನುವುದನ್ನು ಜೋರ್ಡನ್ ತಮ್ಮ ಮಾತುಗಳಲ್ಲಿ ಹೇಳಿದ್ದಾರೆ. 'ಎಲ್ಲಾ ಗೆಲುವಿಗೆ, ಸಂಪತ್ತಿಗೆ ಸದಾ ದೇವರಿಗೆ ಧನ್ಯವಾದ ಅರ್ಪಿಸುವುದನ್ನು ಎಂದಿಗೂ ಮರೆಯಬೇಡ' ಎಂದು ಅವರ ತಾಯಿ ಹೇಳಿಕೊಟ್ಟರಂತೆ. 'ಜೀವನದಲ್ಲಿ ಎದುರಾಗುವ ಎಲ್ಲಾ ಸೋಲುಗಳನ್ನು ಮೊದಲು ಒಪ್ಪಿಕೊಂಡು, ನಂತರ ಅವುಗಳನ್ನು ಜಯಕ್ಕೆ ಪರಿವರ್ತಿಸುವುದನ್ನು ಕಲಿಯಬೇಕು' ಎಂದು ಅಪ್ಪ ಹೇಳಿಕೊಟ್ಟರಂತೆ. ಇವೆರಡನ್ನೂ ಜೋರ್ಡನ್ ತಮ್ಮ ಬದುಕಿನಲ್ಲಿ ಅದೆಷ್ಟರ ಮಟ್ಟಿಗೆ ಅಳವಡಿಸಿಕೊಂಡರು ಎಂದರೆ, ಬದುಕಿನುದ್ದಕ್ಕೂ ಜಗತ್ತು ನಿಬ್ಬೆರಗಾಗಿ ನಿಂತು ನೋಡುವಂಥ ಯಶಸ್ಸು ಸಿಕ್ಕ ಮೇಲೆ ಕೂಡ ಅವರ ಬಗ್ಗೆ ಹಗುರವಾಗಿ ಮಾತನಾಡುವುದು, ಅವರ ಕ್ಷಮತೆಯ ಬಗ್ಗೆ ಸಂದೇಹಿಸುವುದು ಮಾಡಿದಾಗೆಲ್ಲಾ, ಅವರು ಇನ್ನಷ್ಟು ವಿನಮ್ರರಾಗಿ ಆ ಮಾತುಗಳನ್ನು ಕೇಳುತ್ತಿದ್ದರು. ಅದಕ್ಕೆ ವಿರುದ್ಧ ಹೇಳುವುದು, ಉತ್ತರ ಕೊಡುವುದು, ಹಾಗೆ ಹೇಳಿದವರ ಮೇಲೆ ದ್ವೇಷ ಸಾಧಿಸುವುದು ಮಾಡಲು ಹೋಗಲಿಲ್ಲ. ಬದಲಿಗೆ ಇನ್ನಷ್ಟು ಶ್ರಮವಹಿಸಿ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವುದರ ಮೂಲಕ, ಕೆಲಸದ ಮೂಲಕ ಉತ್ತರ ಕೊಡುತ್ತ ಹೋದರು.

ಅವರು ತಮ್ಮ ಸೋಲುಗಳ ಬಗ್ಗೆ ಮಾತನಾಡುತ್ತಾ, ''1984ರಿಂದ 2003ರವರೆಗೆ ಒಟ್ಟಾರೆ ಆಡಿದ ವರ್ಷಗಳಲ್ಲಿ ಒಂದಲ್ಲ ಎರಡಲ್ಲ, 9 ಸಾವಿರ ಎಸೆತಗಳು ಗುರಿ ತಪ್ಪಿವೆ. ಆಡಿದ ಆಟಗಳ ಪೈಕಿ 300ರಲ್ಲಿ ಸೋಲನ್ನು ಕಂಡಿದ್ದೇನೆ. ವಿಜಯಕ್ಕೆ ಬೇಕಾಗಿರುವ ಎಸೆತವನ್ನು ನನ್ನ ಮೇಲೆ ಅಪಾರ ನಂಬಿಕೆಯಿಟ್ಟು ನೀಡಿದಾಗ, ನಾನು 26 ಬಾರಿ ಗುರಿ ತಪ್ಪಿದ್ದೇನೆ, ಸೋಲಿಗೆ ಶರಣಾಗಿದ್ದೇನೆ. ಗೆದ್ದೆ ಎನ್ನುವ ಸಮಯದಲ್ಲಿ ಸೋಲು ನನ್ನನ್ನು ಆವರಿಸಿಕೊಳ್ಳುತ್ತಿತ್ತು. ನಾನು ಒಂದಲ್ಲ ಹಲವು ಬಾರಿ, ಪದೇಪದೆ ಸೋತಿದ್ದೇನೆ. ನಿಮಗೆ ಆಶ್ಚರ್ಯ ಆಗಬಹುದು, ನನ್ನ ಗೆಲುವಿಗೆ ನನ್ನ ಸೋಲುಗಳು ಕಾರಣ'' ಎಂದಿದ್ದಾರೆ.

80-90ರ ದಶಕದಲ್ಲಿ ಬ್ಯಾಸ್ಕೆಟ್‌ಬಾಲ್ ಆಟಕ್ಕೆ ವಿಶ್ವಮನ್ನಣೆ ತಂದುಕೊಟ್ಟ ವಿಶ್ವಪ್ರಸಿದ್ಧ ಆಟಗಾರ ಮೈಕಲ್ ಜೋರ್ಡನ್, ಹೈಸ್ಕೂಲ್ ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ಆಯ್ಕೆಯಾಗಿರಲಿಲ್ಲ ಎನ್ನುವ ಕಥೆಯನ್ನು ನಾವೆಲ್ಲರೂ ಹತ್ತಾರು ಬಾರಿ ಕೇಳಿರುತ್ತೇವೆ. ಈ ಸುದ್ದಿಯು ಜಗತ್ತಿನಾದ್ಯಂತ ಕೋಟಿ ಬಾರಿಯಾದರೂ ಬಾಯಿಂದ ಬಾಯಿಗೆ ಹರಡಿರುತ್ತದೆ. ಮೈಕಲ್ ಜೋರ್ಡನ್ ಅವತ್ತಿಗೆ ಹೈಸ್ಕೂಲ್ ತಂಡಕ್ಕೆ ಆಯ್ಕೆಯಾಗಿರಲಿಲ್ಲ ಎಂಬುದು ಸತ್ಯ. ಸೀನಿಯರ್ ತಂಡಕ್ಕೆ ಬೇಕಾದ ಆಟಗಾರರು ಅದಾಗಲೇ ತಮ್ಮ ಸ್ಥಾನವನ್ನು ಭದ್ರಮಾಡಿಕೊಂಡಿದ್ದರು. ಕೇವಲ ಒಂದು ಸ್ಥಾನವಷ್ಟೇ ಉಳಿದಿತ್ತು. ಅದಕ್ಕೆ ಮೈಕಲ್ ಗೆಳೆಯ ಲೆರಾಯ್ ಸ್ಮಿತ್ ಆಯ್ಕೆಯಾದರು. ಸ್ಮಿತ್‌ಗಿಂತ ಮೈಕಲ್ ಉತ್ತಮ ಆಟಗಾರ ಎಂಬುದು ಶಾಲೆಯ ಇತರ ವಿದ್ಯಾರ್ಥಿಗಳಿಗೂ, ಆಯ್ಕೆ ಸಮಿತಿಯವರಿಗೂ ಗೊತ್ತಿತ್ತು. ಆದರೆ ಬ್ಯಾಸ್ಕೆಟ್‌ಬಾಲ್ ಎತ್ತರವನ್ನು ಕೇಳುತ್ತದೆ. ಅಂದಿಗೆ ಮೈಕಲ್ 5 ಅಡಿ 10 ಇಂಚು ಎತ್ತರವಿರುತ್ತಾರೆ. ಆದರೆ ಸ್ಮಿತ್ ಇದ್ದುದು 6 ಅಡಿ 6 ಇಂಚು! ಆಟದಲ್ಲಿರುವ ತನ್ಮಯತೆ, ಪ್ರತಿಭೆ, ಕೌಶಲ ಯಾವುದೂ ಲೆಕ್ಕಕ್ಕೆ ಬರುವುದಿಲ್ಲ. ಎತ್ತರವಿದ್ದ, ಆದರೆ ಆಟದಲ್ಲಿ ಮೈಕಲ್‌ಗಿಂತ ಕಡಿಮೆ ಸಾಮರ್ಥ್ಯವಿದ್ದ ಸ್ಮಿತ್‌ನನ್ನು ಆಯ್ಕೆಗಾರರು ಆಯ್ಕೆಮಾಡುತ್ತಾರೆ. ಇದು ಮೈಕಲ್‌ಗೆ ಆದ ಮೊದಲ ಸೋಲಿನ ಅನುಭವ.

ಆತನಲ್ಲಿ ಎಲ್ಲವೂ ಇತ್ತು; ಆದರೆ ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ಆಯ್ಕೆಯಾಗಲಿಕ್ಕೆ ಇರುವ ಮೊದಲ ಮಾನದಂಡವೇ 'ಎತ್ತರ'. ಇದನ್ನು ಮೈಕಲ್ ಮನಗಾಣುತ್ತಾರೆ, ಅಪ್ಪ ಹೇಳಿದ ಮಾತುಗಳನ್ನು ಅನುಷ್ಠಾನಕ್ಕೆ ತರುತ್ತಾರೆ. ಮೊದಲಿಗೆ, ತಮ್ಮ ಎತ್ತರ ಸಾಲದು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಆಯ್ಕೆಯಾಗಲಿಲ್ಲ ಎಂದು ಬೇಜಾರು ಮಾಡಿಕೊಳ್ಳುವುದಿಲ್ಲ. ಜೂನಿಯರ್ ತಂಡದಲ್ಲಿ ಆಡುತ್ತಾರೆ. ಅಲ್ಲಿ ಅವರಿಗೆ ಆಡಲು ಹೆಚ್ಚಿನ ಅವಕಾಶ ಸಿಗುತ್ತದೆ. ಹಾಗೊಮ್ಮೆ ಸೀನಿಯರ್ ತಂಡದಲ್ಲಿ ಆಯ್ಕೆಯಾಗಿದ್ದರು ಕೂಡ ಆಡಲು ಹೆಚ್ಚಿನ ಅವಕಾಶ ಸಿಗುತ್ತಿರಲಿಲ್ಲ, ತಂಡದ ಇತರ ಆಟಗಾರರಿಗೆ ಸಹಾಯಕನಾಗಿರಬೇಕಿತ್ತು. ಹೀಗಾಗಿ, ಸಿಕ್ಕ ಸಮಯದಲ್ಲಿ ದೇಹವನ್ನು ಇನ್ನಷ್ಟು ಎತ್ತರ ಮಾಡಿಕೊಳ್ಳುವ ಕಸರತ್ತು ಮಾಡುತ್ತಾರೆ. 5 ಅಡಿ 10 ಇಂಚು ಎತ್ತರವಿದ್ದ ಮೈಕಲ್, 6 ಅಡಿ 6 ಇಂಚು ಎತ್ತರಕ್ಕೆ ಬೆಳೆಯುತ್ತಾರೆ.

ಜೀವನದುದ್ದಕ್ಕೂ ಮೈಕಲ್, ಒಂದು ಸೋಲು ಆದರೆ ಅದರ ಹಿಂದೆಯೇ ಒಂದು ಮಹತ್ತರ ಗೆಲುವನ್ನು ಸಾಧಿಸುತ್ತಾ ಹೋಗುತ್ತಾರೆ. ಹೈಸ್ಕೂಲ್ ತಂಡಕ್ಕೆ ಆಯ್ಕೆಯ ಸಮಯದಿಂದ ಎನ್‌ಬಿಎ ತಂಡದ ಫ್ರಾಂಚೈಸ್‌ನಲ್ಲಿ ಷೇರುದಾರನಾಗುವವರೆಗೆ ಬದುಕಿನುದ್ದಕ್ಕೂ ಹಾವು-ಏಣಿ ಆಟದಲ್ಲಿ ಮೈಕಲ್ ಪ್ರಯಾಣ ಸಾಗುತ್ತದೆ. ದಶಕಗಳ ನಂತರ, Charlotte Bobcats ಎಂಬ ಎನ್‌ಬಿಎ ಬ್ಯಾಸ್ಕೆಟ್‌ಬಾಲ್ ತಂಡದ ಫ್ರಾಂಚೈಸ್‌ನಲ್ಲಿ ಮೈನಾರಿಟಿ ಮಾಲೀಕತ್ವವನ್ನು ಹೊಂದುತ್ತಾರೆ. ಆಗ ತಂಡದ ಫಲಿತಾಂಶ ಚೆನ್ನಾಗಿರುತ್ತದೆ. 2010ರಲ್ಲಿ ಅದೇ ತಂಡದ ಹೆಚ್ಚಿನ ಮಾಲೀಕತ್ವವನ್ನು, ಅಂದರೆ ಮೆಜಾರಿಟಿ ಸ್ಟೇಕ್ ಅನ್ನು ಬಾಬ್ ಜಾನ್ಸನ್ ಅವರಿಂದ ಪಡೆದುಕೊಳ್ಳುತ್ತಾರೆ. ತಂಡವು ಕುಸಿತವನ್ನು ಕಾಣತೊಡಗುತ್ತದೆ. ತಂಡವನ್ನು ಮುನ್ನಡೆಸಲು ಬೇಕಾಗುವ ಖರ್ಚುಗಳನ್ನೂ ಸ್ವಂತ ಹಣದಿಂದ ನಿಭಾಯಿಸಬೇಕಾದ ಸ್ಥಿತಿ ಒದಗುತ್ತದೆ.

2011-12ರಲ್ಲಿ ತಂಡವು 7 ಗೆಲುವು ಮತ್ತು 59 ಸೋಲುಗಳೊಂದಿಗೆ ಜನರಿಂದ ಲೇವಡಿಗೆ ಒಳಗಾಗುತ್ತದೆ. ಮೈಕಲ್ ಜೋರ್ಡನ್ ಎಂಬ 'ಜೀವಂತ ದಂತಕಥೆ'ಯನ್ನು ಇಟ್ಟುಕೊಂಡೂ



ತಂಡವು ಸೋಲುತ್ತಿದೆ ಎಂದು ಮಾಧ್ಯಮಗಳು ಆಡಿಕೊಳ್ಳತೊಡಗುತ್ತವೆ. ನಮ್ಮಲ್ಲಿ ಬಹುತೇಕರಿಗೆ 'ಪಬ್ಲಿಕ್ ಸೋಲು' ಎಂದರೆ 'ಪಬ್ಲಿಕ್ ಅವಮಾನ'. ಆದರೆ, ಸೋಲನ್ನು ಗೆಲುವಾಗಿ ಪರಿವರ್ತಿಸುವುದು ಜೋರ್ಡನ್‌ರ ಮನಸ್ಥಿತಿಯಾಗಿತ್ತು. 2012-2013 ಮತ್ತು 2013-2014ರಲ್ಲಿ ತಂಡ ಸಂಪೂರ್ಣ ಬದಲಾಯಿತು, ಗೆಲುವಿನ ಮೇಲೆ ಗೆಲುವನ್ನು ಸಾಧಿಸತೊಡಗಿತು. ತಂಡದ ಹೆಸರಿನ ಜರ್ಸಿ, ಬಾಲ್ ಇತ್ಯಾದಿಗಳ 'ಮರ್ಚಂಡೈಸ್ ವ್ಯಾಪಾರ'ದಲ್ಲಿ ಅಪಾರ ಹಣದ ಗಳಿಕೆಯಾಯಿತು. ಎಲ್ಲಕ್ಕಿಂತ ಮುಖ್ಯವಾಗಿ, ಸೋಲೆಂಬುದು ಗೆಲುವಾಗಿ ಪರಿವರ್ತನೆಯಾಯಿತು. ಇಂಥ ಹಾದಿ ಸುಲಭವಲ್ಲ. ತಂಡದ ಎಲ್ಲಾ ಕಾರ್ಯಚಟುವಟಿಕೆಗಳನ್ನು ಜೋರ್ಡನ್ ನೋಡಿಕೊಳ್ಳುತ್ತಿರುತ್ತಾರೆ. 'ಈ ರೀತಿ ಮಾಡುವುದು ಸರಿಯಲ್ಲ' ಎಂಬ ವೃತ್ತಿಪರರ ಮಾತು ಕೇಳಿ ಜೋರ್ಡನ್, ತಂಡದ ಎಲ್ಲಾ ಕೆಲಸಗಳಲ್ಲಿ ಮೂಗು ತೂರಿಸುವುದನ್ನು ಬಿಟ್ಟು ಪೂರ್ಣವಾಗಿ ಹೊರಬರುತ್ತಾರೆ. 'ನಾನು ಮಾಡಿದ್ದೇ ಸರಿ' ಎನ್ನುವ ಜನರ ಮಧ್ಯೆ ಜೋರ್ಡನ್ ವಿಭಿನ್ನವಾಗಿ ನಿಲ್ಲುವುದು, ಗೆಲ್ಲುವುದು ಈ ಕಾರಣಗಳಿಂದಲೇ; ಇದನ್ನು ಅವರು ವೃತ್ತಿಜೀವನದಲ್ಲಿ ಪದೇಪದೆ ಮಾಡಿ ತೋರಿಸಿದ್ದಾರೆ.

ಬದುಕಿನುದ್ದಕ್ಕೂ ಏಳಿಳಿತಗಳ ಹಾದಿಯಲ್ಲಿ ಸಾಗಿರುವ ಮೈಕಲ್ ಜೋರ್ಡನ್ ಉರುಫ್ 'ಎಂ.ಜೆ' ಇಂದಿಗೆ ಬರೋಬ್ಬರಿ 320 ಕೋಟಿ ಅಮೆರಿಕನ್ ಡಾಲರ್‌ನಷ್ಟು ನಿವ್ವಳ ಆಸ್ತಿಯನ್ನು ಹೊಂದಿದ್ದಾರೆ. 'ನೈಕಿ' ಸಂಸ್ಥೆಯು ಇವರ ಹೆಸರಿನಲ್ಲಿರುವ ಶೂಸ್ ಮಾರಾಟದಿಂದ ಬರುವ ಲಾಭದಲ್ಲಿ 5 ಪ್ರತಿಶತ ಹಣವನ್ನು ಪ್ರತಿವರ್ಷ ಇವರಿಗೆ ರಾಯಲ್ಟಿ ರೂಪದಲ್ಲಿ ನೀಡುತ್ತದೆ. ಆ ಹಣವೇ ಮಿಲಿಯನ್ ಡಾಲರ್‌ಗಳಲ್ಲಿ ಇರುತ್ತದೆ. ಶ್ರದ್ಧೆ, ಅಪರಿಮಿತ ಉತ್ಸಾಹದಿಂದ ಹೆಜ್ಜೆಯಿಟ್ಟರೆ ಸೋಲನ್ನು ಸೋಲಿಸುವುದು ಕಷ್ಟವಲ್ಲ ಎಂಬುದನ್ನು 61ರ ಹರೆಯದ (2024ರಲ್ಲಿ 61 ತುಂಬಿದೆ) 'ಎಂ.ಜೆ' ಸಾಬೀತುಪಡಿಸಿದ್ದಾರೆ.

'ಎಂ.ಜೆ' ಬದುಕಿನಿಂದ ಕಲಿಯಬಹುದಾದ ಪಾಠಗಳು: ಸೋಲನ್ನು ಅವಮಾನ ಎನ್ನುವಂತೆ ಮನಸ್ಸಿಗೆ ಹಚ್ಚಿಕೊಳ್ಳಬಾರದು. ಯಾವುದೇ ಕೆಲಸವಿರಲಿ ಸೋಲುವ ಸಂಭಾವ್ಯತೆ 50 ಪ್ರತಿಶತ ಇದ್ದೇ ಇರುತ್ತದೆ; ಹಾಗೆಯೇ ಗೆಲುವಿನ ಸಂಭಾವ್ಯತೆ ಕೂಡ ಐವತ್ತು. ಎಲ್ಲೋ ಕೆಲವೊಮ್ಮೆಯಷ್ಟೇ ಮಧ್ಯಮ ಫಲಿತಾಂಶ ಬರಬಹುದು. ಪ್ರತಿ ಸೋಲನ್ನೂ ಗೆಲುವಿನ ಹೆಜ್ಜೆಯಾಗಿ ಮಾರ್ಪಡಿಸಿಕೊಳ್ಳುವುದು ಹೇಗೆ ಎಂಬುದಕ್ಕೆ 'ಎಂ.ಜೆ' ಜೀವನ ಸಾಕ್ಷಿಯಾಗಿದೆ.

- ಅಗತ್ಯವಿರುವ ಎಲ್ಲಾ ಪ್ರತಿಭೆಯಿದ್ದರೂ ಕೆಲವೊಮ್ಮೆ ಅವಕಾಶವಂಚಿತರಾಗಬೇಕಾಗುತ್ತದೆ. ಹಾಗೆಂದು ಅಳುತ್ತಾ ಕೂತರೆ ಜಗತ್ತಿಗೆ ಯಾವ ನಷ್ಟವೂ ಇಲ್ಲ, ಅದು ಮರುಕ್ಷಣದಲ್ಲೇ ನಮ್ಮನ್ನು ಮರೆತುಬಿಡುತ್ತದೆ. ಸೋಲನ್ನು ಸವಾಲಾಗಿ ಸ್ವೀಕರಿಸಿ ಗೆದ್ದವರನ್ನು ಮಾತ್ರವೇ ಸಮಾಜ ನೆನಪಿನಲ್ಲಿ ಇಟ್ಟುಕೊಳ್ಳುತ್ತದೆ. ಸೋಲಿನಿಂದ ಕಲಿಯಬೇಕು, ಪದೇಪದೆ ಅದೇ ತಪ್ಪುಗಳನ್ನು ಮಾಡುವಂತಿಲ್ಲ. ಈ ಜಗತ್ತಿನಲ್ಲಿ ನಮ್ಮಷ್ಟೇ ಅಥವಾ ನಮಗಿಂತ ಹೆಚ್ಚಿನ ಬುದ್ಧಿವಂತರ, ಕಷ್ಟಪಡುವವರ ಸಂಖ್ಯೆ ದೊಡ್ಡದಿದೆ. ಹೀಗಾಗಿ ಗೆಲುವು ಮತ್ತು ಯಶಸ್ಸು ನಮಗಾಗಿ ಕಾಯುವುದಿಲ್ಲ, ಯೋಗ್ಯರ ಬೆನ್ನೇರಿ ಹೊರಟುಬಿಡುತ್ತವೆ. ಆದ್ದರಿಂದ ನಮ್ಮ ಯೋಗ್ಯತೆಯನ್ನು ಬೆಳೆಸಿಕೊಳ್ಳಬೇಕು.
- ಯಶಸ್ಸಿನ ತುತ್ತತುದಿಯಲ್ಲಿದ್ದಾಗ ಕೂಡ ಒಂದು ಸಣ್ಣತಪ್ಪನ್ನು ಜಗತ್ತು ಪ್ರಶ್ನಿಸುತ್ತದೆ, ಹಿಂದೆ ಮಾಡಿದ್ದ ಯಾವ ಸಾಧನೆಗಳೂ ಅದರ ನೆನಪಿಗೆ ಬರುವುದಿಲ್ಲ. ಹಾಗೆಂದು ಜಗತ್ತನ್ನು ಹಳಿಯುತ್ತಾ ಕೂರುವಂತಿಲ್ಲ. ಜಗತ್ತು ಇರುವುದೇ ಹೀಗೆ, ಮುಂದಿನ ಹಾದಿ ಗೆಲುವಿನದಾಗಿದ್ದರೆ ಸಾಕು.
- ಪ್ರಸಿದ್ಧ ವೈದ್ಯರು, ಅತಿಬುದ್ಧಿವಂತರು ಎಂದ ಮಾತ್ರಕ್ಕೆ ಅವರಿಗೆ ಷೇರುಪೇಟೆಯಲ್ಲಿನ ಹೂಡಿಕೆ ಬಗ್ಗೆ ತಿಳಿದಿರುತ್ತದೆಯೇ? ಎಲ್ಲದಕ್ಕೂ ವೃತ್ತಿಪ್ರವೀಣರು ಇರುತ್ತಾರೆ. ಈ ಸತ್ಯವನ್ನು 'ಎಂ.ಜೆ' ಬಹುಬೇಗ ಅರಿತರು, ತಮ್ಮ ಫ್ರಾಂಚೈಸಿ ನಿರ್ವಹಣೆಯ ಹೊಣೆಯನ್ನು ಬೇರೆಯವರಿಗೆ ನೀಡಿದರು. ಇದು ಎಲ್ಲರೂ ಕಲಿಯಬೇಕಾದ ಪಾಠ.
- 'ಮರಳಿ ಯತ್ನವ ಮಾಡು' ಎಂಬ ಇನ್ನೊಂದು ಸಂದೇಶ ಕೂಡ 'ಎಂ.ಜೆ' ಬದುಕಿನಿಂದ ನಮಗೆ ತಿಳಿಯುತ್ತದೆ. ಅವರ ಬದುಕು ನಿಂತಿರುವುದೇ 'ಪ್ರಯತ್ನವೇ ಪರಮಾತ್ಮ' ಎನ್ನುವ ಅಡಿಪಾಯದ ಮೇಲೆ! 'ಪ್ರಯತ್ನಪಡದೆ ಸೋಲನ್ನು ನಾನೆಂದಿಗೂ ಒಪ್ಪಿಕೊಳ್ಳುವುದಿಲ್ಲ' ಎಂಬ ಅವರ ಮಾತೇ ಇದಕ್ಕೆ ಸಾಕ್ಷಿ.
- ನೀವು ಏನಾದರೂ ಮಹತ್ವದ್ದು ಮಾಡಲು ಹೊರಟರೆ ಅಡೆತಡೆಗಳು ಸಹಜ. ಈ ವಿಷಯದಲ್ಲಿ ನಾವು ಮೊದಲಿಗರೂ ಅಲ್ಲ, ಕೊನೆಯವರೂ ಅಲ್ಲ. ಅಡೆತಡೆಗಳನ್ನು ದಾಟಬೇಕು.
- ಮಾಡುವ ಕೆಲಸದಲ್ಲಿ ಎಂಥಾ ಛಾಪು ಮೂಡಿಸಬೇಕು ಎಂದರೆ, ಕೆಲಸ ಮುಗಿದ ನಂತರವೂ ಅದರಿಂದ ಉತ್ಪತ್ತಿ, ಹಣ ಬರುತ್ತಿರಬೇಕು.

ಎಳ್ಳು-ಬೆಲ್ಲ

ಅಶೋಕ ಪಾಟೀಲ, ಕಲಬುರಗಿ

ಸಂಕ್ರಾಂತಿ ಬಂತು ರತ್ತೋ ರತ್ತೋ..

ಭಾರತದಲ್ಲಿ ಆಚರಿಸಲಾಗುವ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ 'ಮಕರ ಸಂಕ್ರಾಂತಿ'. ಇದು ಜ್ಞಾನ, ಸತ್ಯ, ಪ್ರೀತಿ ಮತ್ತು ಶಾಂತಿಗಳನ್ನು ಪ್ರತಿಬಿಂಬಿಸುವ ಹಬ್ಬವೂ ಹೌದು. ಈ ಹಬ್ಬವು ಸಾಮಾನ್ಯವಾಗಿ ಪ್ರತಿವರ್ಷದ ಜನವರಿ 14 ಅಥವಾ 15ರಂದು ಬರುವುದು ವಾಡಿಕೆ. ಸೂರ್ಯನು ಧನಸ್ಸು ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಸಮಯಕ್ಕೆ ಸರಿಯಾಗಿ ಈ ಹಬ್ಬದ ಆಚರಣೆ ನಡೆಯುತ್ತದೆ.

ಸನಾತನ ಧರ್ಮದಲ್ಲಿ ವಿಶೇಷ ಮಹತ್ವವನ್ನು ಹೊಂದಿರುವ ಈ ಪರ್ವಕಾಲವು ಪ್ರಮುಖವಾಗಿ ಕೃಷಿಕರ ಹಬ್ಬವೆಂದು ಪ್ರಸಿದ್ಧವಾಗಿದೆ. ಏಕೆಂದರೆ, ಈ ಸಮಯದಲ್ಲಿ ಧಾನ್ಯದ ಬೆಳೆಯುವಿಕೆ ಪ್ರಾರಂಭವಾಗುತ್ತದೆ. ಮಕರ ಸಂಕ್ರಾಂತಿ ಹಬ್ಬವು ಮಾಘಮಾಸದ ಆರಂಭವನ್ನೂ ಸೂಚಿಸುತ್ತದೆ. ಈ ಹಬ್ಬವು ಸಮಾಜದಲ್ಲಿನ ಆನಂದ ಮತ್ತು ಒಗ್ಗಟ್ಟಿನ ಸಂಕೇತವಾಗಿದೆ. ಮುಂಜಾನೆಯೇ ಮನೆಯನ್ನು

ಶುಚಿಗೊಳಿಸಿ, ಎಣ್ಣೆ ಸ್ನಾನ ಮಾಡಿಕೊಂಡು, ಹೊಸಬಟ್ಟೆ ಧರಿಸಿ, ಮನೆಯನ್ನು ಹೂವಿನಿಂದ ಅಲಂಕರಿಸಿ ಸಂಭ್ರಮಿಸಲಾಗುತ್ತದೆ. ಸೂರ್ಯನು ಅಂದು ಮಕರ ರಾಶಿಗೆ ಪ್ರವೇಶಿಸುವುದರಿಂದ ಈ ದಿನವನ್ನು ಪವಿತ್ರ ದಿನವೆಂದು ಪರಿಗಣಿಸಲಾಗುತ್ತದೆ ಮತ್ತು ಮನೆಯಲ್ಲಿ ಶ್ರದ್ಧಾಭಕ್ತಿಯಿಂದ ಪೂಜಾಕಾರ್ಯವನ್ನು ನಿರ್ವಹಿಸಲಾಗುತ್ತದೆ. ಹೊತ್ತಿಕೆಯಿಂದ ಅನ್ನವನ್ನು ದೇವರಿಗೆ ಅರ್ಪಿಸಿ ನೈವೇದ್ಯ ಮಾಡುವುದು ಸಂಪ್ರದಾಯ. ಮಕರ ಸಂಕ್ರಾಂತಿ ಹಬ್ಬಕ್ಕೆ ಸಂಬಂಧಿಸಿ ವಿಶೇಷ ಆಹಾರ ಪದಾರ್ಥಗಳನ್ನು, ಸಿಹಿಖಾದ್ಯಗಳನ್ನು ತಯಾರಿಸಲಾಗುತ್ತದೆ. ಎಳ್ಳು ಮತ್ತು ಬೆಲ್ಲ ಇಂಥದೊಂದು ಖಾದ್ಯ. ಇದನ್ನು ಶಾಂತಿ ಮತ್ತು ಸಂತೋಷದ ಸಂಕೇತವೆಂದು ಪರಿಗಣಿಸಲಾಗುತ್ತದೆ. ಸಂಕ್ರಾಂತಿಯಂದು ಮನೆಯ ಜನರು, ಬಂಧು-ಮಿತ್ರರು ಎಳ್ಳು-ಬೆಲ್ಲವನ್ನು ಪರಸ್ಪರರಿಗೆ ನೀಡಿ ಶುಭಾಶಯಗಳನ್ನು ಹಾರೈಸಿ, 'ಎಳ್ಳು-ಬೆಲ್ಲ ತಿಂದು ಒಳ್ಳೇ ಮಾತಾಡಿ' ಎಂದು ಹೇಳುವುದು ವಿಶೇಷ. ಈ ಹಬ್ಬದಂದು ಕೆಲವೆಡೆ ಗಾಳಿಪಟ ಹಾರಿಸುವ ಪರಿಪಾಠವೂ ಉಂಟು. ಈ ವೇಳೆ ಮಕ್ಕಳು, ಯುವಜನರು ಮತ್ತು ಹಿರಿಯರೆಲ್ಲರೂ ಪಾಲ್ಗೊಂಡು ಸಂಭ್ರಮಿಸುತ್ತಾರೆ ಎಂಬುದು ಗಮನಾರ್ಹ.

ಸಂಕ್ರಾಂತಿಯು ಪ್ರೇಮ ಮತ್ತು ಸಹಕಾರ ಭಾವದ ದ್ಯೋತಕವಾಗಿರುವ, ಜಾತಿ-ಮತ-ಪಂಥಗಳನ್ನು ಮೀರಿದ ಒಗ್ಗಟ್ಟಿನ ಪ್ರಜ್ಞೆಯನ್ನು ಪ್ರತಿಬಿಂಬಿಸುವ ಹಬ್ಬ. ಕೃಷಿ ಉತ್ಪನ್ನಗಳನ್ನು ಬಿಂಬಿಸುವುದರ ಜತೆಗೆ ಹೊಸ ಜೀವನಕ್ಕೆ, ಬದುಕಿನಲ್ಲಿನ ಬೆಳವಣಿಗೆಗೆ ಸಂಕಲ್ಪಿಸುವ ಹಾಗೂ ಅದನ್ನು ನೀಡುವಂತೆ ದೇವರನ್ನು ಪ್ರಾರ್ಥಿಸುವ ಪರ್ವಕಾಲವೂ ಆಗಿದೆ ಸಂಕ್ರಾಂತಿ. ಇದನ್ನು ನಾವೆಲ್ಲರೂ ಸಂಭ್ರಮ-ಸಡಗರಗಳಿಂದ ಆಚರಿಸೋಣ. ಇಡೀ ಮನುಕುಲಕ್ಕೆ ಒಳಿತಾಗಲಿ, ಎಲ್ಲರ ಬಾಳಲ್ಲೂ ಶಾಂತಿ, ಆರೋಗ್ಯ, ಸಮೃದ್ಧಿ, ಯಶಸ್ಸು, ನವಚೈತನ್ಯ, ನವೋತ್ಸಾಹ ನಳನಳಿಸಲಿ ಎಂದು ಪ್ರಾರ್ಥಿಸೋಣ. ಎಲ್ಲರಿಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

(ಲೇಖಕರು ಹವ್ಯಾಸಿ ಪತ್ರಕರ್ತರು)

ಟ್ರಂಪೇರಿಕಾ ಉದಯಕ್ಕೆ ದಿನಗಣನೆ ಶುರುವಾಗುತ್ತಿದೆ...



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

ಡೊನಾಲ್ಡ್ ಟ್ರಂಪ್ ಯಾವಾಗ ಏನು ಮಾಡುತ್ತಾರೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಆದರೆ ಅವರೇ ಈಗ ಒಂದು ಅಪಾಯಕ್ಕೆ ಸಿಲುಕಿದ್ದಾರೆ. ಅದೇನು ಗೊತ್ತಾ? ಅವರೇನು ಮಾಡುತ್ತಾರೆ ಎಂಬುದು ಜನರಿಗೆ ಗೊತ್ತಾಗಲು ಆರಂಭವಾಗಿದೆ!

ಮೊದಲಿಗೆ ಅವರಿಗೊಂದು ಅಭಿನಂದನೆ ಹೇಳೋಣ. ಅವರು ಅಮೆರಿಕವೆಂಬ ಅದ್ಭುತ ದೇಶಕ್ಕೆ ಎರಡನೇ ಬಾರಿ ಅಧ್ಯಕ್ಷರಾಗುತ್ತಿದ್ದಾರೆ. ಆ ದೇಶದ ಪ್ರಸಿದ್ಧ ಗಾಯಕ ಫ್ರಾಂಕ್ ಸಿನಾತ್ರಾ ಹೆಸರು ನೀವು ಕೇಳಿರುತ್ತೀರಿ. 'ಮೈ ವೇ' ಎಂದು ಹಾಡಿ ಜಗತ್ಪ್ರಸಿದ್ಧಿ ಗಳಿಸಿದ ವ್ಯಕ್ತಿ. ಒಂದು ರೀತಿಯಲ್ಲಿ ಟ್ರಂಪ್ ಆ ಗಾಯಕನ ಶಿಷ್ಯನಿದ್ದಂತೆ. ಇವರು ಕೂಡ 'ನಾನು ನಡೆದಿದ್ದೇ ದಾರಿ' ಎಂಬಂತೆ ನಡೆದು ಇದೀಗ ಪುನಃ ಶ್ವೇತಭವನವನ್ನು ಪ್ರವೇಶಿಸುತ್ತಿದ್ದಾರೆ. ಮುಂದಿನ ನಾಲ್ಕು ವರ್ಷಗಳನ್ನು ಅವರು ಫ್ಲೋರಿಡಾಕ್ಕಿಂತ ಒಳ್ಳೆಯ ಹವೆಯಿರುವ ಹಾಗೂ ಸಾಕಷ್ಟು ಐಷಾರಾಮಗಳಿರುವ ಬಂಗಲೆಯಲ್ಲಿ ಕಳೆಯುತ್ತಾರೆ.

ಇತಿಹಾಸದಲ್ಲಿ ಇದೇ ಮೊದಲ ಬಾರಿ ಜಗತ್ತಿನ ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯವೊಂದು ಲಂಗುಲಗಾಮಿಲ್ಲದ ವ್ಯಕ್ತಿಯೊಬ್ಬನ ಕೈಗೆ ಸೇರುತ್ತಿದೆ. ಈ ಹಿಂದೆ ಟ್ರಂಪ್ ಅಧ್ಯಕ್ಷರಾಗಿ ಅಧಿಕಾರ ನಡೆಸಿದ್ದಾರಾದರೂ, ಆಗ ಅವರಿಗೆ ಮತ್ತೊಂದು ಸಲಕ್ಕೆ ಚುನಾವಣೆಗೆ ಸ್ಪರ್ಧಿಸುವ ಇರಾದೆಯಿತ್ತು. ಹೀಗಾಗಿ ತಕ್ಕಮಟ್ಟಿಗಾದರೂ ಎಚ್ಚರಿಕೆಯಿಂದ ಇದ್ದರು. ಆದರೆ, ಈ ಬಾರಿ ಅವರಿಗೆ ತಾನಿನ್ನು 2028ರಲ್ಲಿ ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಿಲ್ಲ ಎಂಬುದು ಗೊತ್ತಿದೆ. ಹೀಗಾಗಿ ಬಿಂದಾಸ್ ಆಗಿ, ತಮಗೆ ಬೇಕಾದಂತೆ, ಯಾವ ಅಡೆತಡೆಯೂ ಇಲ್ಲದೆ ಮೆರೆಯುವುದಕ್ಕೆ ಸಿದ್ಧರಾಗಿದ್ದಾರೆ. ಅವರ ರಿಪಬ್ಲಿಕನ್ ಪಕ್ಷಕ್ಕೆ 2028ರ ಬಳಿಕ ಅಧಿಕಾರ ಬೇಕು ಅನ್ನಿಸಿದರೆ ಅದು ಈಗಿನಿಂದಲೇ ಎಚ್ಚರಿಕೆ ವಹಿಸಬೇಕಷ್ಟೆ.

ಟ್ರಂಪ್ ಅವರ ಮೊದಲ ಅವಧಿಯಲ್ಲಿ ಸಾಕಷ್ಟು ಅಚ್ಚರಿಗಳು ಜಗತ್ತಿಗೆ ಸಿಕ್ಕಿದ್ದವು. ಆದರೆ, ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಅವರು ಪುನಃ ಗೆದ್ದಾಗ ಅಚ್ಚರಿಗೊಂಡಿದ್ದು ಕೇವಲ ಅವರ ಶತ್ರುಗಳು ಮಾತ್ರ. ಏಕೆಂದರೆ ಅವರೆಲ್ಲ ಟ್ರಂಪ್ ಬಗೆಗಿನ ದ್ವೇಷದಲ್ಲಿ ಕುರುಡಾಗಿದ್ದರು. ಇನ್ನುಳಿದವರಿಗೆ ವಾಸ್ತವ ಗೊತ್ತಿತ್ತು. ಜನವರಿ 20ರಿಂದ ಟ್ರಂಪ್ ಖುದ್ದಾಗಿ ಕುಳಿತು 'ಟ್ರಂಪೇರಿಕಾ' ಎಂಬ ಹೊಸ ದೇಶದ ಇತಿಹಾಸವನ್ನು ಬರೆಯಲಿದ್ದಾರೆ.

ಟ್ರಂಪ್ ಬಳಿಯಿರುವ ಅತಿದೊಡ್ಡ ಆಸ್ತಿಯೆಂದರೆ ಅನುಮಾನ. ಅದನ್ನೇ ಅವರು ವ್ಯೂಹಾತ್ಮಕ ಅಸ್ತ್ರದಂತೆ ಬಳಸುತ್ತಾರೆ. ಗಾಜಾದಿಂದ ಒತ್ತೆಯಾಳುಗಳನ್ನು ಬಿಡುಗಡೆ ಮಾಡದೆ ಇದ್ದರೆ ಅಧಿಕಾರಕ್ಕೇರಿದ 48 ಗಂಟೆಯೊಳಗೆ ಅವರು ಅಲ್ಲಿನ ಅಳಿದುಳಿದ ಆಸ್ತಿಪಾಸ್ತಿಗಳ ಮೇಲೆ ಬಾಂಬ್ ಹಾಕುತ್ತಾರೆಯೇ? ಹೇಳಲು ಸಾಧ್ಯವಿಲ್ಲ. ಅದೇ ಟ್ರಂಪ್‌ಗಿರುವ ಶಕ್ತಿ. ಅವರು ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳುತ್ತಾರಾ? ಆ ಹೇಳಿಕೆ ಕೇವಲ ಜೋಕ್ ಆಗಿರಬೇಕು ಎಂದೇನಿಲ್ಲ. ಗ್ರೀನ್‌ಲ್ಯಾಂಡ್‌ನ ರಾಜಧಾನಿ ನೂಕ್‌ಗೆ ಅವರೇನೂ ಯುದ್ಧನೌಕೆಗಳನ್ನು ಕಳುಹಿಸಬೇಕಿಲ್ಲ. 836,330 ಚದರ ಮೈಲುಗಳಷ್ಟು ವಿಸ್ತೀರ್ಣದ, 1814ರಿಂದ ಡೆನ್ಮಾರ್ಕ್‌ನ ಭಾಗವಾಗಿದೆ ಎಂಬುದು ಯಾರಿಗೂ ಗೊತ್ತಿಲ್ಲದ ನಗರವದು. ಅದನ್ನು 10ನೇ ಫ್ರೆಡರಿಕ್ ರಾಜ ಆಳುತ್ತಿದ್ದಾನೆ. ಜನಸಂಖ್ಯೆ 56,583. ಅವರಲ್ಲಿ ಶೇ.89.51ರಷ್ಟು ಜನರು ಇನೂಗಳು. ಅಲ್ಲಿ ಟ್ರಂಪ್ ಅಮೆರಿಕದ ವಸಾಹತು ಸ್ಥಾಪಿಸಿ ಖನಿಜ ಗಣಿಗಾರಿಕೆ ಆರಂಭಿಸಬಹುದು. ಆಗ ಡೆನ್ಮಾರ್ಕ್‌ನ ರಾಜ ಏನು ಮಾಡುತ್ತಾನೆ? ಯುದ್ಧ ವಿಮಾನಗಳನ್ನು ಕಳುಹಿಸುತ್ತಾನಾ?

ಇನ್ನು, ಟ್ರಂಪ್ ಕೆನಡಾವನ್ನು ಕೆಣಕುತ್ತಲೇ ಇರುತ್ತಾರೆ. ನಗಬೇಕು ಅನ್ನಿಸಿದಾಗಲೆಲ್ಲ ಅವರು ಕೆನಡಾದ ಹೆಸರು ಹೇಳಬಹುದು! ಅಷ್ಟೇ ಅಲ್ಲ, ಅವರು ಮೆಕ್ಸಿಕನ್ ಕೊಲ್ಲಿಯನ್ನು ಅಮೆರಿಕನ್ ಕೊಲ್ಲಿ ಎಂದೂ ಕರೆಯುವವರಿದ್ದಾರೆ. ಹಾಗಂತ ರಷ್ಯಾ ಮೇಲೆ ಯಾವುದೇ ಕಾರಣಕ್ಕೂ ಬಾಂಬ್ ಹಾಕಲು ಹೋಗುವುದಿಲ್ಲ. ಏಕೆಂದರೆ ರಷ್ಯಾ ಪ್ರತಿದಾಳಿ ನಡೆಸುತ್ತದೆ. ಹಾಗೆಯೇ, ಚೀನಾದ ಜತೆಗೆ ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ಸಮರಕ್ಕೂ ಟ್ರಂಪ್ ಕೈಹಾಕುವುದಿಲ್ಲ. ಏಕೆಂದರೆ ಅದರಿಂದ ಅಮೆರಿಕಕ್ಕೇ ನಷ್ಟ. ಆದರೆ, ಖಂಡಿತ ಅವರು ಯುರೋಪನ್ನು ಒಂದಷ್ಟು ಆಟವಾಡಿಸುತ್ತಾರೆ. ಏಕೆಂದರೆ ಬಹುತೇಕ ಯುರೋಪಿಯನ್ ದೇಶಗಳಿಗೆ ಟ್ರಂಪ್ ಬಗ್ಗೆ ದ್ವೇಷವಿದೆ. ಟ್ರಂಪೇರಿಕಾದಲ್ಲಿ ಮಾಸ್ಕೋದ ರಸ್ತೆ ಪ್ಯಾರಿಸ್ ಅಥವಾ ಬರ್ಲಿನ್ ಮೂಲಕ ಹೋಗುವುದಿಲ್ಲ.

ನನ್ನ ಪ್ರಕಾರ ಟ್ರಂಪ್ ಒಮ್ಮೆ ದೆಹಲಿಯ ದಾರಿಯನ್ನು ನೋಡಿಟ್ಟುಕೊಳ್ಳುವುದು ಒಳ್ಳೆಯದು. ಏಕೆಂದರೆ ಅವರಿಗೊಬ್ಬ ಸ್ನೇಹಿತನ ಅಗತ್ಯ ಬೀಳಬಹುದು. ಇನ್ನುಳಿದ ಜಗತ್ತು ಸಂದರ್ಭಕ್ಕೆ ತಕ್ಕಂತೆ ಕುಣಿಯುತ್ತದೆ. ಹೀಗಾಗಿ ಅದರ ಮೇಲೆ ಟ್ರಂಪ್ ಆಗಾಗ ಕಣ್ಣು ಹಾಯಿಸಿದರೆ ಸಾಕು. ಟ್ರಂಪೇರಿಕಾ ವಿರುದ್ಧ ಅವುಗಳಲ್ಲಿ ಯಾವುದಾದರೂ ದೇಶ ಕತ್ತಿ ಮಸೆಯುತ್ತಿದೆ ಅಂತಾದರೆ ಕ್ಷಣ ಮಾತ್ರದಲ್ಲಿ ಅಪಾಯ ನಿವಾರಿಸಿಕೊಳ್ಳುವುದು ಟ್ರಂಪ್‌ಗೆ ಸಾಧ್ಯವಿದೆ.

• • •

2024ರಲ್ಲಿ ಕ್ರಿಪ್ಟೋ ಕೋಟ್ಯಧಿಪತಿಗಳ ಸಂಖ್ಯೆ ಡಬಲ್ ಆಗಿದೆ. ಜಾಗತಿಕ ವ್ಯಾಪಾರ 33 ಟ್ರಿಲಿಯನ್ ಡಾಲರ್‌ಗೆ ವೃದ್ಧಿಯಾಗಿದೆ. ರೋಲ್ಸ್ ರಾಯ್ಸ್ ಷೇರಿನ ದರ 292 ಪೌಂಡ್‌ನಿಂದ 588 ಪೌಂಡ್‌ಗೆ ಜಿಗಿದಿದೆ. ಶಸ್ತ್ರಾಸ್ತ್ರ ತಯಾರಿಸುವ ಉದ್ದಿಮೆಗಳು ಪ್ರತಿ ವಾರ ಕ್ರಿಸ್‌ಮಸ್, ಈದ್, ದೀಪಾವಳಿ ಆಚರಿಸಿವೆ. ಏಕೆಂದರೆ ಜಾಗತಿಕ ಮಿಲಿಟರಿ ವೆಚ್ಚ 2.443 ಟ್ರಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದು ಜಗತ್ತಿನ ಇತಿಹಾಸದಲ್ಲೇ ಅತಿದೊಡ್ಡ ದಾಖಲೆ. ಅಮೆರಿಕ, ಫ್ರಾನ್ಸ್, ಚೀನಾ, ರಷ್ಯಾ ಹಾಗೂ ಜರ್ಮನಿ ದೇಶಗಳು ಅತಿಹೆಚ್ಚು ಮಿಲಿಟರಿ ಸರಕುಗಳನ್ನು ರಫ್ತು ಮಾಡಿವೆ. ಈ ದೇಶಗಳ ಲೆಕ್ಕದಿಂದ ಶಸ್ತ್ರಾಸ್ತ್ರ ವ್ಯಾಪಾರದ ಬಾಬ್ತನ್ನು ಕಳೆದುಬಿಟ್ಟರೆ ಕೇವಲ ಅಮೆರಿಕದ ಆರ್ಥಿಕತೆ ಮಾತ್ರ ಬದುಕುಳಿಯುತ್ತದೆ. ಇನ್ನೆಲ್ಲಾ ದೇಶಗಳು ದಿವಾಳಿಯಾಗುತ್ತವೆ. ಇದಕ್ಕೆ ಸಮಾನಾಂತರವಾಗಿರುವ ಶ್ರಮಿಕ ವರ್ಗದ ಆರ್ಥಿಕತೆಯ ಅಂಕಿ-ಅಂಶಗಳು ಯಾರ ಬಳಿಯಲ್ಲೂ ಇಲ್ಲ, ಏಕೆಂದರೆ ಯಾರೂ ಕಾರ್ಮಿಕರ ಅಸ್ತಿತ್ವವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ, ಕಳೆದ ಎರಡು ವರ್ಷಗಳಿಂದ ಶ್ರಮಿಕ ವರ್ಗದ ಆರ್ಥಿಕತೆ ಕೂಡ ಎತ್ತರಕ್ಕೆ ಜಿಗಿಯುತ್ತಿದೆ. ಅವರಲ್ಲಿ ಎರಡು ವಿಧದ ಜನರಿದ್ದಾರೆ. ಒಬ್ಬರು, ಪಾಸ್‌ಪೋರ್ಟ್‌ನಲ್ಲಿ ನಂಬಿಕೆ ಇರಿಸಿದವರು. ಇನ್ನೊಬ್ಬರು, ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ಇರುವವರು. ಇವರಲ್ಲಿ ಸಮರ್ಥರನ್ನು ಮುಂದಿನ ಸಾಲಿನಿಂದ ಎಳೆದು ಹೊರಹಾಕಿದಾಗ ಮೂರನೇ ವರ್ಗ ಹುಟ್ಟಿಕೊಳ್ಳುತ್ತದೆ. ಏಕೆಂದರೆ ಜಗತ್ತಿನಲ್ಲೀಗ ಎಲ್ಲರಿಗೂ ಬೇಡಿಕೆಯಿದೆ. ಆದರೆ ಎಲ್ಲವೂ ಹೆಡ್‌ಲೈನ್ ಆಗಬೇಕಿಲ್ಲ.

• • •

2024ರಲ್ಲಿ ಪೊಗದಸ್ತಾಗಿ ಬೆಳೆದ ಉದ್ದಿಮೆಯೆಂದರೆ ಆಷಾಢಭೂತಿತನ! ಉಕ್ರೇನ್ ಮೇಲೆ ರಷ್ಯಾ ಯುದ್ಧ ಆರಂಭಿಸಿದಾಗ ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳು ತಮ್ಮಲ್ಲಿನ ಸುದ್ದಿ ಮಾಧ್ಯಮಗಳನ್ನು ಬಳಸಿಕೊಂಡು ರಷ್ಯಾವನ್ನು ಸಾಕಷ್ಟು ಹೆದರಿಸಿದವು. ಪಾಶ್ಚಾತ್ಯ ದೇಶಗಳೆಲ್ಲ ಸೇರಿ ರಷ್ಯಾದ ಮೇಲೆ ಭಾರಿ ಪ್ರಮಾಣದ ಆರ್ಥಿಕ ದಿಗ್ಬಂಧನ ವಿಧಿಸಿ ವ್ಲಾದಿಮಿರ್ ಪುಟಿನ್ ಮಂಡಿಯೂರಿ ಕುಳಿತುಕೊಳ್ಳುವಂತೆ ಮಾಡುತ್ತವೆ ಎಂದೇ ಎಲ್ಲರೂ ಭಾವಿಸಿದ್ದರು. ಇನ್ನೂ ಯುದ್ಧ ಮುಗಿಯುವ ಲಕ್ಷಣಗಳು ಕಾಣಿಸುತ್ತಿಲ್ಲ. ರಷ್ಯಾಕ್ಕೆ ಏನೂ ಸಮಸ್ಯೆಯಾಗಿಲ್ಲ. ರಷ್ಯಾದಿಂದ ಯುರೋಪ್‌ಗೆ ಅನಿಲ ಪೂರೈಸುತ್ತಿದ್ದ ಪೈಪ್‌ಲೈನ್ ಈ ತಿಂಗಳು ಬಂದ್ ಆಗಿದೆ. ಅದು ಉಕ್ರೇನ್ ಮೂಲಕ ಹಾದುಹೋಗಿತ್ತು, ಹಾಗಾಗಿ ಕಡಿತಗೊಂಡಿದೆಯಷ್ಟೇ ಹೊರತು ಇನ್ನೇನೂ ವಿಶೇಷವಿಲ್ಲ. ಹಾಗಿದ್ದರೆ ದಿಗ್ಬಂಧನ? ಕಾಗದಪತ್ರಗಳಲ್ಲಿ ನಡೆಯುತ್ತಿದ್ದ ವ್ಯಾಪಾರಗಳ ಮೇಲೆ ದಿಗ್ಬಂಧನ ವಿಧಿಸಲ್ಪಟ್ಟಿರ

ಬಹುದಷ್ಟೆ. ರಷ್ಯಾದಲ್ಲಿರುವ ಶ್ರೀಮಂತರಿಗೆ ಏನೂ ತೊಂದರೆಯಾಗಿಲ್ಲ. ಅವರು ಪಾಶ್ಚಾತ್ಯ ರಾಷ್ಟ್ರಗಳಿಂದ ದುಬಾರಿ ವಸ್ತುಗಳನ್ನು ಖರೀದಿಸಿ ಮೋಜು ಮಾಡುವುದಕ್ಕೆ ಯಾವ ಸಮಸ್ಯೆಯೂ ಆಗಿಲ್ಲ. ನಂಬಿಕೆ ಬರದಿದ್ದರೆ ರಷ್ಯಾದ ಜತೆ ಗಡಿ ಹಂಚಿಕೊಂಡಿರುವ ದೇಶಗಳಿಗೆ ಐಷಾರಾಮಿ ಕಾರುಗಳು ಯಾವ ಪ್ರಮಾಣದಲ್ಲಿ ರಫ್ತಾಗಿವೆ ಎಂಬುದನ್ನೊಮ್ಮೆ ಪರಾಮರ್ಶಿಸಬಹುದು.

ಇನ್ನೊಂದು ಕಡೆಯಿಂದ ಬಂದ ಸುದ್ದಿಯಲ್ಲಿ, ಸೂಯೆಜ್ ಕಾಲುವೆಯಲ್ಲಿ ಹಡಗುಗಳ ಸಂಚಾರ ಬಂದ್ ಆಗಿದೆ. ಹೌತಿ ಉಗ್ರರು ಕ್ಷಿಪಣಿ ಉಡಾಯಿಸಿ ಹೆದರಿಸಿದ ಪರಿಣಾಮ ವ್ಯಾಪಾರಕ್ಕೆ ಹೊಡೆತ ಬಿದ್ದಿದೆ. ಈಗ ಬಳಸುದಾರಿಯಲ್ಲಿ ಹಡಗುಗಳು ಸಂಚರಿಸಬೇಕು. ಸ್ವಲ್ಪವೂ ಗೊಣಗದೆ ಅದರ ವೆಚ್ಚವನ್ನು ಮಾರುಕಟ್ಟೆ ತನ್ನ ಹೊಟ್ಟೆಗೆ ಹಾಕಿಕೊಂಡಿದೆ. ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ, ಉದಾಹರಣೆಗೆ ಭಾರತ ಮತ್ತು ದಕ್ಷಿಣ ಆಫ್ರಿಕಾದಂಥ ದೇಶಗಳಲ್ಲಿ, ಸರಕಾರಗಳು ಉಳಿದಿರುವುದೇ ಸೋತವರ ಹತಾಶೆಯು ಗೆದ್ದವರ ದಿಗ್ಭ್ರಾಂತಿಗೆ ಸಮನಾಗಿರುವುದರಿಂದ! ಇಲ್ಲಿ ಗೆದ್ದವರು ಕೂಡ ದಿಕ್ಕು ತೋಚದಂತೆ ಕುಳಿತಿರುತ್ತಾರೆ. ಅಮೆರಿಕ, ಬ್ರಿಟನ್, ಬ್ರೆಜಿಲ್, ಬಾಂಗ್ಲಾದೇಶ ಮತ್ತು ಪಾಕಿಸ್ತಾನದಲ್ಲಿ ಆಡಳಿತಾರೂಢರು ಕುಸಿದು ಬಿದ್ದಿದ್ದಾರೆ. ಕ್ರೀಡಾಕ್ಷೇತ್ರಕ್ಕೆ ಬಂದರೆ, ಭಾರತದಲ್ಲಿ ಕ್ರಿಕೆಟ್ ಆಟವನ್ನು ಪೂಜಿಸುವವರಿಗೆ ಅವರ ದೇವರುಗಳೇ ಮೋಸ ಮಾಡಿದ್ದಾರೆ.

• • •

ಗೋವಾದಲ್ಲಿ ಡಿಸೆಂಬರ್ ಮತ್ತು ಜನವರಿ ತಿಂಗಳ ನಡುವೆ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್‌ನ ಪುರಾತನ ಮೃತದೇಹವನ್ನು ಪ್ರದರ್ಶನಕ್ಕೆ ಇರಿಸುವುದರೊಂದಿಗೆ ಹೊಸ ದಶಕಕ್ಕೆ ಈಗಷ್ಟೇ ಸಂಭ್ರಮದ ಸ್ವಾಗತ ಲಭಿಸಿದೆ. ಸಮುದ್ರದ ಅಂಚಿನಲ್ಲಿರುವ ಈ ಪುಟ್ಟ ರಾಜ್ಯದಲ್ಲೊಂದು ಪವಾಡಸದೃಶ ಸಂಗತಿಯಿದೆ. ಪ್ರತಿ ಹತ್ತು ವರ್ಷಕ್ಕೊಮ್ಮೆ ಪಣಜಿಯ ಕ್ಯಾಥೋಲಿಕ್ ಚರ್ಚ್‌ನಲ್ಲಿ 16ನೇ ಶತಮಾನದಲ್ಲಿ ಆಗಿಹೋದ ಸಂತ ಫ್ರಾನ್ಸಿಸ್ ಕ್ಸೇವಿಯರ್‌ನ ಮೃತದೇಹವನ್ನು ಪ್ರದರ್ಶಿಸಲಾಗುತ್ತದೆ. ಈತ ಗೋವಾ, ಚೀನಾ ಮತ್ತು ಜಪಾನ್‌ಗೆ ಕ್ರೈಸ್ತ ಚಳವಳಿಯನ್ನು ಕೊಂಡೊಯ್ದ ಸಂತ. ಆಸ್ತಿಕ ಕ್ರೈಸ್ತರಿಗಾಗಿ ಆತನ ಮೃತದೇಹವನ್ನು ಇಂದಿಗೂ ಕಾಪಿಡಲಾಗಿದೆ. ನಾವು ಕೂಡ ಮುಂಜಾನೆಯ ಸರತಿ ಸಾಲಿನಲ್ಲಿ ಹೋಗಿ ನಿಂತಿದ್ದೆವು. ನಮ್ಮ ಸರದಿ ಬಂದಾಗ ತಲೆಬಾಗಿ ನಮಿಸಿದೆವು. ಇಂದಿಗೂ ಚರ್ಮ ಮತ್ತು ಆಕಾರವನ್ನು ಉಳಿಸಿಕೊಂಡಿರುವ, ನಾಲ್ಕೂವರೆ ಶತಮಾನದ ಹಿಂದಿನ ಸಂತನ ದೇಹವನ್ನು ತನ್ನೊಳಗೆ ಇರಿಸಿಕೊಂಡಿರುವ ಗಾಜಿನ ಶವಪೆಟ್ಟಿಗೆಯನ್ನು ಅಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ. ಅದರಲ್ಲಿರುವ ದೇಹವನ್ನು ನಾವು ಗುರುತಿಸಬಹುದು. ಅನುಮಾನವಾದಿಗಳು ಈ ಸಾಲಿನಲ್ಲಿ ನಿಲ್ಲುವುದಿಲ್ಲ, ಏಕೆಂದರೆ ಅವರಿಗೆ ವಿವರಣೆ ನೀಡಲು ಸಾಧ್ಯವಿಲ್ಲ. ಬಹುಶಃ ವಿಜ್ಞಾನದಲ್ಲಿ ಇದಕ್ಕೆ ಉತ್ತರ ಇರಬಹುದು. ಆದರೆ ಅದಕ್ಕಿಂತ ದೇವರನ್ನು ಗುರುತಿಸುವುದೇ ಸುಲಭ. ನಾಸ್ತಿಕರು ಮಾತ್ರ ಸಾವನ್ನು ನಂಬುತ್ತಾರೆ. ಇನ್ನುಳಿದ ಬಹುಸಂಖ್ಯಾತರಾದ ನಾವು ಅನುಮಾನ, ಮೌನ ಮತ್ತು ನಂಬಿಕೆಯ ನಡುವೆ ಓಡಾಡಿಕೊಂಡಿರುತ್ತೇವೆ.

ಅಲ್ಲೇ ಪಕ್ಕದಲ್ಲಿ ಆಧುನಿಕ ಭಾರತದ ಪ್ರತೀಕವಾಗಿ ಅದ್ಭುತವಾದ ಮಾರುಕಟ್ಟೆಯೊಂದು ತಲೆಯೆತ್ತಿದೆ. ಅಲ್ಲಿರುವ ಅಂಗಡಿಗಳು ಸಮಕಾಲೀನ ಬದುಕಿನ ಪ್ರತಿಬಿಂಬದಂತೆ ಇವೆ. ಸವಾಲ್ ಗೋವಾ ಶಾಪಿಂಗ್ ಸೆಂಟರ್. ರತ್ನ ಸಾಗರ್ ಫ್ಯಾಮಿಲಿ ರೆಸ್ಟೋರೆಂಟ್ ಆ್ಯಂಡ್ ಬಾರ್ ಪಕ್ಕದಲ್ಲೇ ಉಡುಪಿ ರತ್ನ ಸಾಗರ್ ಪ್ಯೂರ್ ವೆಜ್ ರೆಸ್ಟೋರೆಂಟ್. ಗೋವನ್ ವೈನ್ ಹೌಸ್. ಬಾಸ್ಕಿನ್ ರಾಬಿನ್ಸ್. ಟ್ಯಾಟೂ ಸ್ಟುಡಿಯೋ. ಚಿನ್ನದ ಬಣ್ಣದ ವೇಷ ಧರಿಸಿದ ಮೈಮ್ ಕಲಾವಿದರು. ಸ್ಟೆಪ್ ಇನ್ ರೆಸ್ಟೋರೆಂಟ್‌ಗಳು. ಫ್ರೆಂಚ್ ಡೈರಿ ಐಸ್‌ಕ್ರೀಮ್. ಮುಂಬೈ ಸ್ಪೆಷಲ್ ಗೋಬಿ ಮಂಚೂರಿಯಾ. ಅದಕ್ಕೆ ಶಾರುಖ್ ಖಾನ್‌ರಂತೆ ಕಾಣಿಸುವ ವ್ಯಕ್ತಿಯ ಜಾಹೀರಾತು. ಕೋಕಾ ಕೋಲಾ. ಬೆಳಗಾವಿ ಫಾಸ್ಟ್ ಫುಡ್. ಮುಂಬೈ ಕಾಸ್ಮೆಟಿಕ್. ಕ್ರಿಶ್ಚಿಯನ್ ಐಕಾನ್‌ಗಳನ್ನು ಹೊಂದಿರುವ, ಹೆಸರಿಲ್ಲದ ಗೂಡಂಗಡಿಗಳು. ಸಂಕಲ್ಪ್ ಚನಾ. ಬಟ್ಟೆಗಳು ಮತ್ತು ಬಟ್ಟೆಯಂಗಡಿಯ ನಡುವೆ ನೇತಾಡುವ ಸೇಂಟ್ ಜಾನ್ ಬ್ಯಾಪ್ಟಿಸ್ಟ್ ರೆಸ್ಟೋರೆಂಟ್‌ನ ಬ್ಯಾನರ್. ಓಲ್ಡ್ ಗೋವಾದಿಂದ ಬಂದ ಹೂವುಗಳು: 60 ಮತ್ತು 70 ರುಪಾಯಿ. ಫಿಕ್ಸೆಡ್ ದರ. ಅಪೋಲೋ ಮ್ಯಾಜಿಕ್ ವರ್ಲ್ಡ್: ಜಾದೂ ಕಲಿಯಿರಿ, ಜಾದೂ ಖರೀದಿಸಿರಿ. ಸಂಪರ್ಕಿಸಿ: 9822135183. ಕಾಂಡಿಮೆಂಟ್ಸ್ ರಾಜಸ್ಥಾನ ಉಪ್ಪಿನಕಾಯಿ. ಗಡಿಯಿಲ್ಲದ ಅಂಗಡಿಯಲ್ಲಿ ಆಟಿಕೆ ಸಾಮಾನುಗಳನ್ನು ಮಾರುವ ಗಡ್ಡದ ಅಂಕಲ್. ಅವರ ಕೈಯಲ್ಲಿ ಪವಿತ್ರ ಪುಸ್ತಕ ಮತ್ತು ಬಾಯಿಯಲ್ಲಿ ಜಪ. ಲೈಮ್ ಸೋಡಾ ಮತ್ತು ಸ್ವೀಟ್ ಕಾರ್ನ್. ದಿಲ್ಲಿ ಪಾಪಡ್, ಕಾಲಿಫ್ಲವರ್ ಡ್ರೈ ಗೋಬಿ. ಆಲೂಗಡ್ಡೆ ಟ್ವಿಸ್ಟರ್. ಬೇಯಿಸಿದ ಸ್ವೀಟ್ ಕಾರ್ನ್, 3 ಫ್ಲೇವರ್‌ನಲ್ಲಿ ಲಭ್ಯ, ಫ್ರೆಶ್ ಮತ್ತು ಆರೋಗ್ಯಕರ. ಆಕರ್ಷಕ ಒಳ ಉಡುಪುಗಳು. ಮದರ್ ಮೇರಿ ಹಲ್ವಾ ಸ್ಟೋರ್. ವೇಲಾಂಕಣಿ ಹಾಟ್ ಬನಾನಾ. ಎಸ್‌ಪಿ ಮಸಾಲಾ ಹಲ್ವಾ ಸೇರಿದಂತೆ 12 ವೆರೈಟಿಯಲ್ಲಿ ಕೇರಳ ಕ್ಯಾಲಿಕಟ್ ಹಲ್ವಾ... ಅಲ್ಲಿ ಏನುಂಟು ಏನಿಲ್ಲ.

• • •

2025ಕ್ಕೆ ಎರಡು ಚಿಂತನೆಗಳು: ಏಷ್ಯಾ ಎಂಬುದು ಗ್ರೀಕ್ ಪದ. ಅದರ ಅರ್ಥ ಪುನರುತ್ಥಾನ. 2025ರಲ್ಲಿ ಏಷ್ಯಾ ಖಂಡ ತನ್ನ ಹೆಸರಿಗೆ ಅನ್ವರ್ಥವಾಗುವಂತೆ ಎದ್ದು ನಿಲ್ಲುವುದೇ? ಅಸ್ತವ್ಯಸ್ತತೆಯನ್ನು ಮರು ಜೋಡಿಸುವುದೇ ವ್ಯವಸ್ಥೆಯನ್ನು ಸರಿಪಡಿಸುವ ಮಾರ್ಗವಾಗಿದ್ದರೆ, ಅಸ್ತವ್ಯಸ್ತತೆಯೇ ಸಹಜ, ಶಿಸ್ತೆಂಬುದು ಅಪವಾದ ಎಂದಾಯಿತಲ್ಲವೇ?

ನಮ್ಮ ಹೊಸ ವರ್ಷಗಳು ಸಂಕಲನದೊಂದಿಗೆ ಶುರುವಾಗಿ ವ್ಯವಕಲನದೊಂದಿಗೆ ಮುಗಿಯುತ್ತವೆ. 2024ರ ಚಳಿಗಾಲದಲ್ಲಿ ಇನ್ನೊಬ್ಬ ಆಪ್ತ ಸ್ನೇಹಿತನನ್ನು ಕಳೆದುಕೊಂಡೆ. ಉಳಿದಿರುವುದು ಪ್ರಾರ್ಥನೆಯೊಂದೇ. ಕೆಲ ದಂತಕತೆಗಳನ್ನು ನಾವು ಸುಳ್ಳೆಂದು ತಳ್ಳಿಹಾಕಬಾರದು. ಜನರ ನಂಬಿಕೆಯನ್ನು ಗೌರವಿಸುವುದಾದರೆ, ಬುದ್ಧಿಜೀವಿಯೂ ಚಿಂತಕನೂ ಶಿಕ್ಷಣ ತಜ್ಞನೂ ಆಗಿದ್ದ ಹಸನ್ ಸಬಾಹ್‌ನ (1037-1124) ಓಲ್ಡ್ ಮ್ಯಾನ್ ಆಫ್ ದಿ ಮೌಂಟೇನ್ಸ್ ಗ್ರಂಥಾಲಯದಲ್ಲಿ ಉಮರ್ ಖಯ್ಯಾಮ್‌ನ ಏಕೈಕ ರುಬಾಯತ್ ಸಂರಕ್ಷಿಸಲ್ಪಟ್ಟಿದೆ. ಹಾಗಾಗಿ, ಯಾವತ್ತೂ ಕಾಡುವ ಈ ಸಾಲುಗಳನ್ನು ಎದೆಯಲ್ಲಿ ಬೆಚ್ಚಗೆ ಕಾಪಿಟ್ಟುಕೊಳ್ಳುವ ನಿಮಗಿದೋ ಧನ್ಯವಾದಗಳು:

ಯೋಚಿಸಿ, ಮರುಭೂಮಿಯ ಈ ಶಿಥಿಲ ವಿಶ್ರಾಂತಿ ಗೃಹಗಳಲ್ಲಿ,
ಹಗಲು ಮತ್ತು ರಾತ್ರಿ ತೆರೆದುಕೊಳ್ಳುವ ಬೇರೆ ಬೇರೆ ದ್ವಾರಗಳಲ್ಲಿ,
ಹೇಗೆ ಸುಲ್ತಾನನ ನಂತರ ಸುಲ್ತಾನರು ಬಾಜಾಬಜಂತ್ರಿ ಜತೆ ಬಂದು,
ಒಂದೋ ಎರಡೋ ತಾಸು ಇದ್ದು ತಮ್ಮ ದಾರಿ ಹಿಡಿದರು.
ಹೇ ಪ್ರಿಯೇ, ಶೀಷೆಗೆ ಇನ್ನಷ್ಟು ತುಂಬಿಸು
ಇತಿಹಾಸದ ಪಶ್ಚಾತ್ತಾಪ, ಭವಿಷ್ಯದ ಆತಂಕ ಅಳಿಸಿಹೋಗಲಿ;
ನಾಳೆ ಏಕೆ, ನಾಳೆ ನಾನು
ನಿನ್ನೆಯ ಏಳು ಸಾವಿರ ವರ್ಷಗಳ ವ್ಯಕ್ತಿಯಾಗಿರಬಹುದು.
ಇನ್ನೂ ಕಳೆಯದ ಕ್ಷಣಗಳ ಸಂಪೂರ್ಣ ಲಾಭ ಪಡೆಯೋಣ,
ನಾವು ಕೂಡ ಮಣ್ಣಲ್ಲಿ ಮಣ್ಣಾಗಿ ಹೋಗುವುದರೊಳಗೆ.
ಧೂಳಿಗೆ ಧೂಳು, ಧೂಳಿನಡಿ ಮಲಗುವ ನಾವು,
ಮದಿರೆಯಿಲ್ಲ, ಹಾಡಿಲ್ಲ, ಹಾಡುಗಾರರಿಲ್ಲ, ಕೊನೆಯಿಲ್ಲ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:67, Issue: 250

ಸಮಾಚಾರ ಸಣ್ಣದಲ್ಲ

ಹಳೆ ವಿದ್ಯಾರ್ಥಿನಿ ಮೇಲೆ 'ಎಚ್‌ಎಂ' ಅತ್ಯಾಚಾರ

ಅಹ್ಮದಾಬಾದ್: ಗುಜರಾತ್ ರಾಜ್ಯದ ಭರೂಚ್‌ನಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಭೆಗೆ ಬಂದ ಯುವತಿ ಮೇಲೆ ಮುಖ್ಯೋಪಾಧ್ಯಾಯರೇ ಅತ್ಯಾಚಾರ ನಡೆಸಿದ್ದಾರೆ. ಪ್ರಕರಣ ದಾಖಲಿಸಿದ ಪೊಲೀಸರು, ಮುಖ್ಯೋಪಾಧ್ಯಾಯ ಕಮಲೇಶ್ ರಾವಲ್‌ಗಾಗಿ ಶೋಧ ನಡೆಸಿದ್ದಾರೆ. 2021-22ರಲ್ಲಿ ಖಾಸಗಿ ಶಾಲೆ 10ನೇ ತರಗತಿ ವಿದ್ಯಾರ್ಥಿನಿಯಾಗಿದ್ದಾಗಲೂ ಪ್ರಾಂಶುಪಾಲರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರು. ಆರೋಪಿ ಬೆದರಿಕೆ ಹಾಕಿದ್ದರಿಂದ ಹಿಂದೆ ದೂರು ನೀಡಿರಲಿಲ್ಲ ಎಂದು ವಿದ್ಯಾರ್ಥಿನಿ ಹೇಳಿದ್ದಾಗಿ ಪೊಲೀಸರು ತಿಳಿಸಿದ್ದಾರೆ. ಬಿಎನ್‌ಎಸ್ ಕಾಯಿದೆ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಯಡಿ ಆರೋಪಿ ಎಚ್‌ಎಂ ವಿರುದ್ಧ ಅತ್ಯಾಚಾರ, ಹಲ್ಲೆ, ಕ್ರಿಮಿನಲ್ ಬೆದರಿಕೆ, ಸರಣಿ ಲೈಂಗಿಕ ದೌರ್ಜನ್ಯ ಆರೋಪದಡಿ ಎಫ್‌ಐಆರ್ ದಾಖಲಿಸಿದ್ದಾರೆ.

ವೀಸಾ ನಿಯಮ ಕಠಿಣ: ಸೌದಿ ಅರೇಬಿಯ ಕ್ರಮ

ದೆಹಲಿ: ಸೌದಿ ಅರೇಬಿಯ ಸರಕಾರ ವಿದೇಶಿ ಉದ್ಯೋಗಿಗಳಿಗೆ ನೀಡುವ ವೀಸಾಗಳಿಗೆ ಸಂಬಂಧಿಸಿದ ನಿಯಮಗಳನ್ನು ಬದಲಿಸಿದ್ದು, ಗುಣಮಟ್ಟಕ್ಕೆ ಆದ್ಯತೆ ನೀಡಲು ಮುಂದಾಗಿದೆ. ನೌಕರಿ ಅರಸಿ ಬರುವವರಿಗೆ ವಲಸೆ ನಿಯಮಗಳನ್ನು ಮತ್ತಷ್ಟು ಕಠಿಣಗೊಳಿಸಲಾಗುತ್ತಿದೆ. ಭಾರತ ಮೂಲದವರಿಗೆ ಶೈಕ್ಷಣಿಕ ಮತ್ತು ವೃತ್ತಿಪರ ಅರ್ಹತೆಗಳ ಪರಿಶೀಲನೆ ಕಡ್ಡಾಯಗೊಳಿಸಲಾಗಿದೆ. ಸೌದಿ ಸರಕಾರ ಆರು ತಿಂಗಳ ಹಿಂದೆಯೇ ಹೊಸ ವೀಸಾ ನಿಯಮ ಪ್ರಸ್ತಾಪಿಸಿತ್ತು. ಮಂಗಳವಾರದಿಂದ ಜಾರಿಗೆ ಬರಲಿದೆ. ಭಾರತೀಯ ಕಾರ್ಮಿಕರ ಮೇಲೆ ನೇರ ಪರಿಣಾಮ ಬೀರಲಿದೆ. ಸೌದಿಯಲ್ಲಿ ಭಾರತೀಯ ಕಾರ್ಮಿಕರ ಸಂಖ್ಯೆ ಕಡಿಮೆಯಾಗಲಿದೆ ಎನ್ನಲಾಗಿದೆ. ಸೌದಿಯಲ್ಲಿ ಬಾಂಗ್ಲಾದೇಶೀಯರೇ ಅಧಿಕ ಸಂಖ್ಯೆಯ ವಲಸಿಗರು. ಭಾರತೀಯರು ಎರಡನೇ ಅತಿದೊಡ್ಡ ವಲಸಿಗ ಸಮುದಾಯ ಎನಿಸಿಕೊಂಡಿದ್ದಾರೆ. 2024 ರಲ್ಲಿ ಸೌದಿಯಲ್ಲಿ 24 ಲಕ್ಷಕ್ಕೂ ಹೆಚ್ಚು ಭಾರತೀಯರಿದ್ದರು. ಇವರಲ್ಲಿ 16.4 ಲಕ್ಷ ಮಂದಿ ಖಾಸಗಿ ಕಂಪನಿಗಳಲ್ಲಿ, 7.85 ಲಕ್ಷ ಮಂದಿ ಮನೆಗೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.

ವಿಜಯೋತ್ಸವಕ್ಕೆ ಪಟಾಕಿ ತಂದಿಟ್ಟುಕೊಳ್ಳಿ: ಶಾ

ದೆಹಲಿ: 26 ಸಮಾನ ಮನಸ್ಕ ಪ್ರತಿಪಕ್ಷಗಳ ಒಕ್ಕೂಟ 'ಇಂಡಿಯ'ದಲ್ಲಿನ ಭಿನ್ನಾಭಿಪ್ರಾಯ, ಬಿರುಕು ಉಲ್ಲೇಖಿಸಿ ಅಣಕವಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ದೆಹಲಿ ವಿಧಾನಸಭೆ ಚುನಾವಣೆ, ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಗೆಲುವು ನಮ್ಮದೇ. ವಿಜಯೋತ್ಸವಕ್ಕೆ ಈಗಲೇ

ಪಟಾಕಿ ತಂದಿಟ್ಟುಕೊಳ್ಳಿ ಎಂದು ಪಕ್ಷದ ಕಾರ್ಯಕರ್ತರು, ಅಭಿಮಾನಿಗಳಿಗೆ ಕರೆ ನೀಡಿದ್ದಾರೆ. ಮಹಾರಾಷ್ಟ್ರದಲ್ಲಿ ಸೋಮವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಶಾ, ಇಂಡಿಯ ಒಕ್ಕೂಟ ಸ್ಥಿತಿ ದಯನೀಯವಾಗಿದೆ. ಇಂಡಿ ಒಕ್ಕೂಟದ ಮಿತ್ರಪಕ್ಷಗಳಾದ ಶಿವಸೇನೆ(ಉದ್ಧವ್ ಬಣ) ಮತ್ತು ಕಾಂಗ್ರೆಸ್-ಎನ್‌ಸಿಪಿ ಗುಂಪು ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸುತ್ತಿವೆ. ಅತ್ತ ದೆಹಲಿಯಲ್ಲೂ ಮಿತ್ರಪಕ್ಷಗಳಾದ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷ (ಎಎಪಿ) ಪ್ರತ್ಯೇಕವಾಗಿಯೇ ಸ್ಪರ್ಧೆ ಮಾಡುತ್ತಿವೆ. ಪಶ್ಚಿಮ ಬಂಗಾಳದಲ್ಲಿಯೂ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷ ಮತ್ತು ಕಾಂಗ್ರೆಸ್ ಬೇರೆ ಬೇರೆ ಆಗಿವೆ. ಇಂಡಿಯ ಒಕ್ಕೂಟವೀಗ 'ಘಮಾಂಡಿಯ' ಆಗಿದೆ ಎಂದು ಛೇಡಿಸಿದರು. ಪ್ರಧಾನಿ ಮೋದಿ ನಾಯಕತ್ವದಲ್ಲಿ ಬಿಜೆಪಿ ಗೆಲುವಿನ ಸರಣಿ ಮುಂದುವರಿಸಲಿದೆ. ಫೆ.5ರ ದೆಹಲಿ ಚುನಾವಣೆಯಲ್ಲೂ ಗೆಲುವು ನಮ್ಮದಾಗಲಿದೆ. ಫೆ.8ರಂದು ಫಲಿತಾಂಶ, ಬಿಜೆಪಿ ವಿಜಯೋತ್ಸವಕ್ಕೆ ಪಟಾಕಿ ಸಿದ್ಧವಾಗಿಟ್ಟುಕೊಳ್ಳಿ ಎಂದರು.

ಗಡಿ ತಕರಾರು: ಬಾಂಗ್ಲಾ ರಾಯಭಾರಿಗೆ ಸಮನ್ಸ್

ದೆಹಲಿ: ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಉದ್ವಿಗ್ನತೆ ಹೆಚ್ಚಿದ ಹಿನ್ನೆಲೆ ದೆಹಲಿಯಲ್ಲಿರುವ ಬಾಂಗ್ಲಾದೇಶದ ಉಪ ಹೈಕಮಿಷನರ್ ನೂರುಲ್ ಇಸ್ಲಾಂಗೆ ಭಾರತ ಸರಕಾರ ಸಮನ್ ಮಾಡಿ ಕರೆಸಿಕೊಂಡು ಗಡಿಯಲ್ಲಿನ ಸದ್ಯದ ಪರಿಸ್ಥಿತಿ ಬಗ್ಗೆ ಗಮನ ಸೆಳೆದಿದೆ. ಅತ್ತ ಢಾಕಾದಲ್ಲಿರುವ ಭಾರತದ ಹೈಕಮಿಷನರ್ ಪ್ರಣಯ್ ವರ್ಮಾ ಅವರನ್ನು ವಿದೇಶಾಂಗ ಸಚಿವಾಲಯಕ್ಕೆ ಕರೆಸಿಕೊಂಡು, 4,156 ಕಿ.ಮೀ. ಉದ್ದದ ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಐದು ನಿರ್ದಿಷ್ಟ ಸ್ಥಳಗಳಲ್ಲಿ ಭಾರತ ಬೇಲಿ ನಿರ್ಮಿಸಲು ಪ್ರಯತ್ನಿಸುತ್ತಿದೆ ಎಂದು ಬಾಂಗ್ಲಾ ವಿದೇಶಾಂಗ ಸಚಿವಾಲಯ ಆರೋಪಿಸಿತ್ತು. ಗಡಿ ಚಟುವಟಿಕೆ ನಿಯಂತ್ರಣದ ದ್ವಿಪಕ್ಷೀಯ ಒಪ್ಪಂದದ ಉಲ್ಲಂಘನೆ ಎಂದು ಢಾಕಾ ಅಸಮಾಧಾನ ವ್ಯಕ್ತಪಡಿಸಿತ್ತು.

{ **ಸಂಜಯ್ ರಾವತ್** } ಶಿವಸೇನೆ ಸಂಸದ

ಇಂಡಿಯ ಒಕ್ಕೂಟದ ಮಿತ್ರಪಕ್ಷಗಳ ನಡುವೆ ಕಾಲಕಾಲಕ್ಕೆ ಮಾತುಕತೆ ನಡೆಯದೇ ಇದ್ದರೆ ರಾಜಕೀಯ ಮೈತ್ರಿ ಸಫಲವಾಗದು. ಆದರೆ, ಇಂಡಿಯ ಒಕ್ಕೂಟದ ಪಕ್ಷಗಳಲ್ಲಿ ಮಾತುಕತೆ ಮುಗಿದಿದೆ ಎಂಬಂತೆ ತೋರುತ್ತಿದೆ. ಉತ್ತಮ ಸಂವಹನ ಪ್ರಕ್ರಿಯೆ ಸರಾಗ ಸಾಗಲು ಜವಾಬ್ದಾರಿ ಇರುವ ನಾಯಕರಿಗೇ ಒಕ್ಕೂಟದ ನೇತೃತ್ವ ವಹಿಸಬೇಕು.

144 ವರ್ಷಗಳಿಗೊಮ್ಮೆ ನಡೆಯುವ ವಿಶ್ವದ ಅತಿದೊಡ್ಡ ಧಾರ್ಮಿಕ ಕಾರ್ಯಕ್ರಮ

ಮಹಾ ಕುಂಭಮೇಳ: ಪ್ರಯಾಗರಾಜ್ ಕೇಸರಿಮಯ

ಮಹಾ ಕುಂಭ ಮೇಳ ಅನಾದಿ, ಆಧ್ಯಾತ್ಮಿಕ ಪರಂಪರೆ ಸಂಕೇತ, ನಂಬಿಕೆ, ಸಾಮರಸ್ಯದ ಆಚರಣೆ: ಪ್ರಧಾನಿ ಮೋದಿ

ಪ್ರಯಾಗ್‌ರಾಜ್: ಉತ್ತರ ಪ್ರದೇಶದಲ್ಲಿ ತ್ರಿವೇಣಿ(ಗಂಗಾ, ಯಮುನಾ, ಸರಸ್ವತಿ) ನದಿಗಳ ಪವಿತ್ರ ಸಂಗಮ ಸ್ಥಳವಾದ ಪ್ರಯಾಗ್‌ರಾಜ್‌ನಲ್ಲಿ ಪ್ರತಿ 12 ವರ್ಷಗಳಿಗೊಮ್ಮೆ ಜರುಗುವ ಮಹಾಕುಂಭ ಮೇಳ-2025 ಸೋಮವಾರ ನಸುಕಿನಲ್ಲಿ ಆರಂಭಗೊಂಡಿದೆ. ಲಕ್ಷಾಂತರ ನಾಗ ಸಾಧುಗಳು ಪವಿತ್ರ ಸ್ನಾನ ಮಾಡುವ ಮೂಲಕ ಮಹಾಕುಂಭ ಮೇಳಕ್ಕೆ ವಿದ್ಯುಕ್ತ ಚಾಲನೆ ನೀಡಲಾಗಿದೆ.

ಈ ಬಾರಿಯ ಮಹಾಕುಂಭ ಮೇಳ ಅತಿವಿಶಿಷ್ಟವಾದುದಾಗಿದೆ. ಕಾರಣ, 144 ವರ್ಷಗಳಿಗೊಮ್ಮೆ ನಡೆಯುವ ವಿಶ್ವದ ಅತಿದೊಡ್ಡ ಧಾರ್ಮಿಕ ಕಾರ್ಯಕ್ರಮವಾಗಿದೆ. ಹಾಗಾಗಿಯೇ ಈ ಬಾರಿ 45 ಕೋಟಿ ಭಕ್ತರು, ಪ್ರವಾಸಿಗರು ಆಗಮಿಸುವ ನಿರೀಕ್ಷೆ ಹೊಂದಲಾಗಿದೆ. ಆ ಮೂಲಕ ಇಡೀ ವಿಶ್ವದ ಧಾರ್ಮಿಕ ಮನೋಭಾವದವರ ಗಮನ ಸೆಳೆಯುತ್ತಿದೆ.

ಲಕ್ಷಾಂತರ ಸಾಧು-ಸಂತರು ಒಂದೆಡೆ ಕಲೆತಿರುವುದರಿಂದ ಧಾರ್ಮಿಕ ನಗರಿ ಪ್ರಯಾಗ್‌ರಾಜ್ ಅಕ್ಷರಶಃ ಕೇಸರಿ ವರ್ಣಕ್ಕೆ ತಿರುಗಿಬಿಟ್ಟಿದೆ. ಜೈ ಗಂಗಾ ಮಯ್ಯಾ, ಓಂ ನಮಃ ಶಿವಾಯ, ಜೈಶ್ರೀರಾಮ್, ಜೈ ಭಜರಂಗ ಬಲಿ ಮೊದಲಾದ ಘೋಷಣೆಗಳೇ ಕೇಳಿಬರುತ್ತಿವೆ. ದೇಶ-ವಿದೇಶದ ಲಕ್ಷಾಂತರ ಭಕ್ತರು ಪ್ರಯಾಗ್‌ರಾಜ್‌ಗೆ ಆಗಮಿಸಿದ್ದು, ತ್ರಿವೇಣಿ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನ ಮಾಡಿ ಪುನೀತ ಭಾವ ಹೊಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, 'ಭಾರತೀಯ ಮೌಲ್ಯಗಳು ಮತ್ತು ಸಂಸ್ಕೃತಿಯನ್ನು ಪಾಲಿಸುವ ಕೋಟ್ಯಂತರ ಜನರಿಗೆ ಇಂದು ಬಹಳ ವಿಶೇಷವಾದ ದಿನ. ಮಹಾ ಕುಂಭ ಮೇಳವು ಭಾರತದ ಅನಾದಿ ಕಾಲದ ಆಧ್ಯಾತ್ಮಿಕ ಪರಂಪರೆಯನ್ನು ಸಂಕೇತಿಸುತ್ತದೆ. ನಂಬಿಕೆ ಮತ್ತು ಸಾಮರಸ್ಯದ ಆಚರಣೆ ಇದಾಗಿದೆ' ಎಂದು ಸನಾತನ ಧರ್ಮೀಯರಿಗೆ 'ಎಕ್ಸ್' ಸಂದೇಶವನ್ನು ಸೋಮವಾರ ರವಾನಿಸಿದ್ದಾರೆ. ಸಾಧು-ಸಂತರು, ಯಾತ್ರಾರ್ಥಿಗಳು ಮತ್ತು ಪ್ರವಾಸಿಗರಿಗೆ ಶುಭಕೋರಿದ್ದಾರೆ.

ಗಂಗಾ-ಯಮುನಾ-ಸರಸ್ವತಿ ಪವಿತ್ರ ನದಿಗಳ ಸಂಗಮ ಸ್ಥಳದಲ್ಲಿ ವಿಶ್ವದ ಅತಿದೊಡ್ಡ ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿದೆ. ಈ ಧಾರ್ಮಿಕ ಸಮಾರಂಭದಲ್ಲಿ, ಭಾರತ ಮತ್ತು ವಿದೇಶಗಳಿಂದ ಕೋಟ್ಯಂತರ ಜನರು ಆಗಮಿಸುತ್ತಾರೆ ಮತ್ತು ಪವಿತ್ರ ತ್ರಿವೇಣಿ ಸಂಗಮದಲ್ಲಿ ನಂಬಿಕೆಯ ಪವಿತ್ರ ಸ್ನಾನ ಮಾಡುತ್ತಾರೆ ಎಂದು ಹೇಳಿದ್ದಾರೆ,

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೂ ಸನಾತನ ಧರ್ಮೀಯರಿಗೆ ಮಹಾಕುಂಭ ಮೇಳ ಹಿನ್ನೆಲೆಯಲ್ಲಿ ಶುಭ ಕೋರಿದ್ದಾರೆ. 'ವಿವಿಧತೆಯಲ್ಲಿ ಏಕತೆ ಅನುಭವಿಸಲು, ನಂಬಿಕೆ ಮತ್ತು ಆಧುನಿಕತೆಯ ಸಂಗಮದಲ್ಲಿ ಧ್ಯಾನ ಮಾಡಲು ಮತ್ತು ಪವಿತ್ರ ಸ್ನಾನ ಮಾಡಲು ಬಂದವರನ್ನು ರಾಜ್ಯದ ಮುಖ್ಯಮಂತ್ರಿಯಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುವೆ' ಎಂದು 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

2025ರ ಮಹಾಕುಂಭಮೇಳದಲ್ಲಿ ಭಾಗವಹಿಸುವ ಮೂಲಕ ಸನಾತನ ಸಂಸ್ಕೃತಿಯ ವೈಭವಯುತ ಸಂಪ್ರದಾಯದ ಭಾಗವಾಗೋಣ ಎಂದಿದ್ದಾರೆ.

ಕುಂಭ-ಅರ್ಧ-ಮಹಾ ಕುಂಭ: ಉತ್ತರಾಖಂಡ ರಾಜ್ಯದ ಹರಿದ್ವಾರದ ಗಂಗಾ ನದಿತೀರ, ಮಧ್ಯಪ್ರದೇಶದ ಉಜ್ಜಯಿನಿಯ ಶಿಪ್ರಾ ನದಿತೀರ, ಮಹಾರಾಷ್ಟ್ರದ ನಾಸಿಕ್‌ನಲ್ಲಿ ಗೋದಾವರಿ ನದಿತೀರ ಮತ್ತು ಉತ್ತರಪ್ರದೇಶದ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮ ಸ್ಥಳದಲ್ಲಿ ಪ್ರತಿ 3 ವರ್ಷಗಳಿಗೆ ಒಮ್ಮೆ ಕುಂಭ ಮೇಳ ನಡೆಯುತ್ತದೆ. ಆ ಬಳಿಕ 6 ವರ್ಷಗಳಿಗೊಮ್ಮೆ ಅರ್ಧ ಕುಂಭಮೇಳ ನಡೆಯುತ್ತದೆ. 2019ರ ಅರ್ಧ ಕುಂಭಮೇಳ ಪ್ರಯಾಗ್‌ರಾಜ್‌ನಲ್ಲೇ ನಡೆದಿತ್ತು. ನಂತರದಲ್ಲಿ 12 ವರ್ಷಗಳಿಗೆ ಮಹಾ ಕುಂಭಮೇಳ ಜರುತ್ತದೆ. ಹಿಂದೂ ಕ್ಯಾಲೆಂಡರ್ ಅನುಸಾರ ಸೂರ್ಯ, ಚಂದ್ರ, ಮತ್ತು ಗುರು ಗ್ರಹದ ಚಲನೆ ಆಧರಿಸಿ ಕುಂಭಮೇಳಗಳು ನಡೆಯುವ ಸ್ಥಳ, ದಿನ ನಿಗದಿಪಡಿಸಲಾಗುತ್ತದೆ.

ಮುಖ್ಯಾಂಶಗಳು

- ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭ ಮೇಳ
- ಗಂಗಾ-ಯಮುನಾ-ಸರಸ್ವತಿ ನದಿಗಳ ಸಂಗಮದ ಪುಣ್ಯಸ್ಥಳ
- 45 ಕೋಟಿ ಭಕ್ತರ ಮಹಾಪೂರವೇ ಹರಿದು ಬರುವ ನಿರೀಕ್ಷೆ
- ಜ.13ರಿಂದ ಫೆ.26ರವರೆಗೆ 45 ದಿನಗಳ ಧಾರ್ಮಿಕ ಕಾರ್ಯ
- 2013ರಲ್ಲಿ ಪ್ರಯಾಗ್‌ರಾಜ್‌ನಲ್ಲಿ ನಡೆದ ಮೇಳ
- ದೇಶದ 4 ಧಾರ್ಮಿಕ ಸ್ಥಳಗಳಲ್ಲಿ 3 ವರ್ಷಕ್ಕೊಮ್ಮೆ ಕುಂಭಮೇಳ
- 12 ವರ್ಷಗಳಿಗೊಮ್ಮೆ ನಡೆಯುವುದು ಮಹಾಕುಂಭ ಮೇಳ
- ಮಕರ ಸಂಕ್ರಾಂತಿ, ವಸಂತ, ಪಂಚಮಿ ಸೇರಿ 5 ಪುಣ್ಯಸ್ನಾನ

ಫೆ.26ರವರೆಗೂ ಮಹಾಕುಂಭ

ಮಹಾಕುಂಭ ಮೇಳ 144 ವರ್ಷಗಳ ಬಳಿಕ ನಡೆಯುತ್ತಿದೆ. ಪೂರ್ಣ ಕುಂಭಮೇಳ ಮುಗಿದ 12 ವರ್ಷಗಳ ನಂತರ ಮಹಾಕುಂಭಮೇಳವನ್ನು ಆಚರಿಸಲಾಗುತ್ತಿದೆ. ಕಾರ್ಯಕ್ರಮಕ್ಕೆ 45 ಕೋಟಿಗೂ ಅಧಿಕ ಭಕ್ತರನ್ನು ನಿರೀಕ್ಷಿಸಲಾಗಿದೆ. ಈ ಬಾರಿಯ ಮಹಾಕುಂಭ ಮೇಳ ಮಹಾ ಶಿವರಾತ್ರಿ ಬಳಿಕ ಫೆ.26ರಂದು ಮುಕ್ತಾಯಗೊಳ್ಳಲಿದೆ.

ಕುಂಭ ಮೇಳ ರೈಲಿನ ಮೇಲೆ ಕಲ್ಲೆಸೆತ

ಮಹಾಕುಂಭ ಮೇಳಕ್ಕೆಂದು ಗುಜರಾತ್‌ನಿಂದ ಭಕ್ತರನ್ನು ಕರೆದೊಯ್ಯುತ್ತಿದ್ದ ತಪತಿ ಗಂಗಾ ಎಕ್ಸ್‌ಪ್ರೆಸ್ ವಿಶೇಷ ರೈಲಿನ ಮೇಲೆ ಮಹಾರಾಷ್ಟ್ರದ ಜಲಗಾಂವ್ ರೈಲು ನಿಲ್ದಾಣದ ಬಳಿ ದುಷ್ಕರ್ಮಿಗಳು ಕಲ್ಲು ತೂರಿದ್ದಾರೆ. ಪರಿಣಾಮ, ಬಿ6 ಬೋಗಿಯ ಕಿಟಕಿ ಗಾಜು ಚೂರಾಗಿದೆ. ಭಕ್ತರು ಸ್ವಲ್ಪದರಲ್ಲೇ ಕಲ್ಲೇಟಿನಿಂದ ಪಾರಾಗಿದ್ದಾರೆ. ಸೂರತ್‌ನಿಂದ ಛಾಪ್ರಾಕ್ಕೆ ತೆರಳುತ್ತಿದ್ದ ರೈಲಿನ ಮೇಲೆ ಕಲ್ಲು ತೂರಾಟ ನಡೆದಿದೆ. ರೈಲಿಗಾದ ಹಾನಿಯನ್ನು ಪ್ರಯಾಣಿಕರೊಬ್ಬರು ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಜಲಗಾಂವ್ ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

1947ರ ಬಳಿಕ ಸರಕಾರದ ಆಯೋಜನೆ: 8ನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರು ಕುಂಭ ಮೇಳದಲ್ಲಿ ಹೆಚ್ಚೆಚ್ಚು ಸಾಧು ಸಂತರು ಒಟ್ಟಾಗಿ ಪಾಲ್ಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದರು ಎಂದೂ ಹೇಳಲಾಗುತ್ತಿದೆ. 1947ರಲ್ಲಿ ದೇಶ ಸ್ವಾತಂತ್ರ್ಯ ಪಡೆದ ಬಳಿಕ ಸರಕಾರವೇ ಕುಂಭ ಮೇಳಗಳನ್ನು ಆಯೋಜಿಸುತ್ತಿದೆ. ಕುಂಭ ಮೇಳದಲ್ಲಿ ಸಾಧು-ಸಂತರ 13 ಅಖಾಡಾಗಳು (ಗುಂಪು) ಸಕ್ರಿಯವಾಗಿ ಭಾಗವಹಿಸುತ್ತವೆ. ನಾಗಾ-ಸಾಧುಗಳು, ಅಘೋರಿಗಳು ಸೇರಿದಂತೆ ದೇಶದಾದ್ಯಂತ ವಿವಿಧ ರಾಜ್ಯಗಳ ಸಾಧು ಸಂತರು ಈ ಕುಂಭಮೇಳದಲ್ಲಿ ಭಾಗವಹಿಸುವುದು ವಿಶೇಷ.

ಭದ್ರತೆ-ಸರಕಾರದ ಸಿದ್ಧತೆ: ಸಾಧ-ಸಂತರು ನದಿಗಿಳಿದು ಪವಿತ್ರ ಸ್ನಾನ ಮಾಡುವಾಗ ಯಾವುದೇ ಅಪಾಯ, ಕಿಡಿಗೇಡಿ ಕೃತ್ಯ ಜರುಗದಂತೆ ತಡೆಯಲು, ಇದೇ ಮೊದಲ ಬಾರಿಗೆ ನೀರಿನೊಳಗೂ ಕಣ್ಗಾವಲು ನಡೆಸುವ ಡ್ರೋನ್‌ಗಳ ಬಳಕೆ ಮಾಡಲಾಗುತ್ತಿದೆ. ನಗರದೆಲ್ಲೆಡೆಯೂ ಕೃತಕ ಬುದ್ಧಿಮತ್ತೆ(ಎಐ) ತಂತ್ರಾಂಶ ಒಳಗೊಂಡ ಸಾವಿರಾರು ಕ್ಯಾಮರಾಗಳನ್ನು ಅಳವಡಿಸಲಾಗಿದೆ.

ಗಂಗಾ-ಯಮುನಾ ನದಿಗಳ ಉದ್ದಕ್ಕೂ 12 ಕಿ.ಮೀ.ವರೆಗೀ ಸ್ನಾನಘಟ್ಟಗಳನ್ನು ನಿರ್ಮಾಣ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಎನ್‌ಡಿಆರ್‌ಎಫ್ ಪಡೆಯಿಂದ ನೀರಿನ ಮೇಲೆ ಆ್ಯಂಬುಲೆನ್ಸ್ ಸಂಚಾರ ನಡೆಸುತ್ತಿದೆ. ಐಸಿಯು ಸೌಲಭ್ಯವನ್ನೂ ಹೊಂದಿರುವ ಅಂಬುಲೆನ್ಸ್‌ಗಳನ್ನು ನದಿಯಲ್ಲಿ ಸಂಚಾರ ನಡೆಸುವಂತೆ ವ್ಯವಸ್ಥೆ ಮಾಡಲಾಗಿದೆ. ಅಂಬುಲೆನ್ಸ್‌ಗಳಲ್ಲಿ ವೈದ್ಯಕೀಯ ಸಿಬ್ಬಂದಿ ಮತ್ತು ಹಾಸಿಗೆಗಳ ಜತೆಗೆ ಆಮ್ಲಜನಕ ಮತ್ತು ವೆಂಟಿಲೇಟರ್ ಸೌಲಭ್ಯವನ್ನೂ ಕಲ್ಪಿಸಲಾಗಿದೆ. ನದಿಯಲ್ಲಿ ಸ್ನಾನ ಮಾಡುವವರ ಸುರಕ್ಷತೆಗಾಗಿ 800 ಪ್ರಾದೇಶಿಕ ಸಶಸ್ತ್ರ ಪಡೆಯ ಕಾನ್‌ಸ್ಟೇಬಲ್, 150 ಎಸ್‌ಡಿಆರ್‌ಎಫ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

45 ಕೋಟಿ ಭಕ್ತರು ನಿರೀಕ್ಷೆ 2 ಲಕ್ಷ ಕೋಟಿ ರು. ಆದಾಯ

ದೇಶ-ವಿದೇಶಗಳಿಂದ ಒಟ್ಟು 45 ಕೋಟಿ ಭಕ್ತರು ಮಹಾ ಕುಂಭಮೇಳಕ್ಕೆ ಆಗಮಿಸುವ ನಿರೀಕ್ಷೆ ಇದೆ. 40 ಕೋಟಿ ಭಕ್ತರು ಸರಾಸರಿ 5 ಸಾವಿರ ರು. ವೆಚ್ಚ ಮಾಡಿದರೂ ಕನಿಷ್ಟ 2 ಲಕ್ಷ ಕೋಟಿ ರು.ಗಳಾಗಲಿದೆ. ಆ ಮೂಲಕ ಉತ್ತರ ಪ್ರದೇಶ ಸರಕಾರದ ಬೊಕ್ಕಸಕ್ಕೆ ಏನಿಲ್ಲವೆಂದರೂ 2 ಲಕ್ಷ ಕೋಟಿ ರು. ಆದಾಯ ಹರಿದುಬರಲಿದೆ ಎಂಬ ಅಂದಾಜು ಮಾಡಲಾಗಿದೆ. ಮಹಾ ಕುಂಭಮೇಳದಲ್ಲಿ ಅಘೋರಿಗಳಿಂದ 'ಮಸಾನ್ ಹೋಳಿ' ಆಚರಣೆ ನಡೆಯಲಿದೆ. ಸಂಗಮದಲ್ಲಿ ಸ್ನಾನ ಮಾಡಲು ಶನಿವಾರ 33 ಲಕ್ಷ ಭಕ್ತರು ಭೇಟಿ ನೀಡಿದ್ದರು. ಕಳೆದೆರಡು ದಿನಗಳಲ್ಲಿ 85 ಲಕ್ಷಕ್ಕೂ ಹೆಚ್ಚು ಜನರು ನದಿಯಲ್ಲಿ ಸ್ನಾನ ಮಾಡಿದ್ದಾರೆ. ಸೋಮವಾರ ಮಧ್ಯಾಹ್ನದವರೆಗೆ, ತ್ರಿವೇಣಿ ಸಂಗಮ ಸ್ಥಳದಲ್ಲಿ 40 ಲಕ್ಷಕ್ಕೂ ಹೆಚ್ಚು ಜನರು ಪವಿತ್ರಸ್ನಾನ ಮಾಡಿದ್ದಾರೆ ಎಂದು ಮಹಾ ಕುಂಭಮೇಳದ ಅಧಿಕಾರಿ ವಿಜಯ್ ಕಿರಣ್ ಆನಂದ್ ಅವರು ತಿಳಿಸಿದ್ದಾರೆ.

ಕುಂಭಮೇಳಕ್ಕೇ ಪ್ರತ್ಯೇಕ ನಗರ

- ಯಾತ್ರಿಕರಿಗಾಗಿ ಡೇರೆಗಳ ನಿರ್ಮಾಣ 1.50 ಲಕ್ಷ
- ಹೊಸ ವಿದ್ಯುತ್ ಸಂಪರ್ಕಗಳ ಸ್ಥಾಪನೆ 4.50 ಲಕ್ಷ
- ನಿತ್ಯ 1 ಕೋಟಿ ಭಕ್ತರಿಗೆ ತಂಗಲು ಅಗತ್ಯ ವ್ಯವಸ್ಥೆ
- ಕುಂಭಮೇಳಕ್ಕೆ 98 ವಿಶೇಷ ರೈಲು, 3,300 ಟ್ರಿಪ್
- ಪ್ರಯಾಗ್‌ರಾಜ್ ನಗರ 92 ರಸ್ತೆಗಳ ನವೀಕರಣ
- ಕುಂಭಮೇಳ ಹೊಸ 30 ಸೇತುವೆಗಳ ನಿರ್ಮಾಣ
- ಹಿಂದಿ-ಇಂಗ್ಲಿಷ್ ಸೇರಿ 800 ಬಹುಭಾಷಾ ಫಲಕ
- ನೈರ್ಮಲ್ಯಕ್ಕಾಗಿ ಹೆಚ್ಚುವರಿ ಶೌಚಾಲಯ ಸೌಲಭ್ಯ

ಸಂಗಮದಲ್ಲಿ ಶಾಹಿಸ್ನಾನ

- ಜ.13 ಪೌಷ ಪೂರ್ಣಿಮಾ ಸ್ನಾನ (ಉದ್ಘಾಟನಾ ದಿನ)
- ಜ.15 ಮಕರ ಸಂಕ್ರಾಂತಿ ಸ್ನಾನ
- ಜ.29 ಮೌನಿ ಅಮಾವಾಸ್ಯೆ ಸ್ನಾನ (ರಾಜಸ್ನಾನ/ಶಾಹಿಸ್ನಾನ)
- ಫೆ.3 ವಸಂತ ಪಂಚಮಿ ಸ್ನಾನ (ರಾಜ ಸ್ನಾನ/ಶಾಹಿ ಸ್ನಾನ)
- ಫೆ.12 ಮಾಘಿ ಪೂರ್ಣಿಮಾ ಸ್ನಾನ
- ಫೆ.26 ಮಹಾ ಶಿವರಾತ್ರಿ ಸ್ನಾನ (ಸಮಾಪ್ತಿಯ ದಿನ)

ಪ್ರವಾಸೋದ್ಯಮಕ್ಕೆ ಆದ್ಯತೆ

ಮೇಳದಲ್ಲಿ ಧಾರ್ಮಿಕ ಕಾರ್ಯಕ್ರಮದ ಜತೆಗೆ ಪ್ರವಾಸೋದ್ಯಮಕ್ಕೂ ಆದ್ಯತೆ ನೀಡಲಾಗಿದೆ. ಜಗತ್ತಿನ ವಿವಿಧೆಡೆಯಿಂದ ಬರುತ್ತಿರುವ ಜನರಿಗಾಗಿ ರೈಲು, ಬಸ್ ಹಾಗೂ ವಿಮಾನ ಸಂಚಾರದ ವ್ಯವಸ್ಥೆಗಳನ್ನು ಮಾಡಲಾಗಿದೆ. ಭಾರತದ ವಿವಿಧ ನಗರಗಳಿಂದ ಪ್ರಯಾಗ್ರಾಜ್ಗೆ ವಿಮಾನ ಸೌಕರ್ಯ ಕಲ್ಪಿಸಲಾಗಿದೆ. ಅಲ್ಲಿ ಪ್ರವಾಸಿಗರು ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಹಿರಿಮೆಯನ್ನು ಹಾಗೂ ಕುಂಭಮೇಳದ ಹಿನ್ನೆಲೆಯನ್ನು ತಿಳಿಯಲು ಅಗತ್ಯ ವ್ಯವಸ್ಥೆ ಮಾಡಲಾಗಿದೆ. ವಿದೇಶಿ ಪ್ರವಾಸಿಗರು, ವಿದ್ವಾಂಸರು, ಸಂಶೋಧಕರಿಗಾಗಿ 5,000 ಚದರಡಿ ಜಾಗದಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ.

ಝಡ್-ಮೋರ್ಹ್ ಸುರಂಗ ಮಾರ್ಗ ಉದ್ಘಾಟನೆ

ಕಾಶ್ಮೀರ: ವರ್ಷಪೂರ್ತಿ ಸಂಪರ್ಕ ಕಲ್ಪಿಸುವ ಮಾರ್ಗಕ್ಕೆ ಪ್ರಧಾನಿ ಮೋದಿ ಚಾಲನೆ

ಶ್ರೀನಗರ: ಜಮ್ಮು-ಕಾಶ್ಮೀರದ ಗಂದರ್ಬಾಲ್ ಜಿಲ್ಲೆಯಲ್ಲಿ 6.5 ಕಿ.ಮೀ. ಉದ್ದದ ಝಡ್-ಮೋರ್ಹ್ ಸುರಂಗ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಬೆಳಗ್ಗೆ ಉದ್ಘಾಟಿಸಿದರು.

ಉದ್ಘಾಟನೆ ಬಳಿಕ ಸುರಂಗದ ಒಳಗೆ ತೆರಳಿ ಪರಿಶೀಲಿಸಿದ ಮೋದಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಅತ್ಯಂತ ಕಠಿಣ ಹವಾಮಾನದಲ್ಲೂ ಶ್ರಮಪಟ್ಟು ಸುರಂಗ ನಿರ್ಮಿಸಿದ ಕಾರ್ಮಿಕರ ಜತೆಗೂ ಸಂವಾದ ನಡೆಸಿದರು.

ವಿಮಾನ ನಿಲ್ದಾಣದಿಂದ ಸುರಂಗ ಸ್ಥಳಕ್ಕೆ ಹೆಲಿಕಾಪ್ಟರ್‌ನಲ್ಲಿ ತೆರಳಿದ ಮೋದಿ ಜತೆ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ಜಮ್ಮು-ಕಾಶ್ಮೀರದ ಲೆ.ಗವರ್ನರ್ ಮನೋಜ್ ಸಿನ್ಹಾ , ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಇದ್ದರು. 2024ರ ವಿಧಾನಸಭಾ ಚುನಾವಣೆ ಬಳಿಕ ಜಮ್ಮು ಕಾಶ್ಮೀರಕ್ಕೆ ಪ್ರಧಾನಿ ಮೋದಿ ಅವರ ಮೊದಲ ಭೇಟಿಯಾಗಿದೆ.

ಮಧ್ಯ ಕಾಶ್ಮೀರದ ಗಂದರ್ಬಾಲ್ ಜಿಲ್ಲೆಯ ಗಗಾಂಗೀರ್ ಮತ್ತು ಸೋನಾಮಾರ್ಗ್ ನಡುವೆ 6.5 ಕಿಮೀ ದ್ವಿಪಥದ ಸುರಂಗದಲ್ಲಿ ತುರ್ತು ಪರಿಸ್ಥಿತಿಗಾಗಿ ಸಮಾನಾಂತರವಾಗಿ 7.5 ಮೀಟರ್ ಎಸ್ಕೇಪ್ ಮಾರ್ಗವನ್ನೂ ನಿರ್ಮಿಸಲಾಗಿದೆ.

ಸಮುದ್ರ ಮಟ್ಟದಿಂದ 8,650 ಅಡಿ ಎತ್ತರದಲ್ಲಿ ನಿರ್ಮಿಸಲಾಗಿರುವ ಈ ಸುರಂಗ ಮಾರ್ಗ ಶ್ರೀನಗರ-ಸೋನಾಮಾರ್ಗ್ ಪ್ರದೇಶಗಳನ್ನು ಜೋಡಿಸುತ್ತದೆ. ಲೇಹ್‌ಗೆ ಹೋಗುವ ಮಾರ್ಗದಲ್ಲಿ ಸರ್ವಋತುಗಳಲ್ಲೂ ಸಂಪರ್ಕ ಕಲ್ಪಿಸುತ್ತದೆ. ಭೂಕುಸಿತ ಮತ್ತು ಹಿಮಪಾತದಿಂದ ಕೆಲವೊಮ್ಮ ಸಂಪರ್ಕ ಕಡಿತವಾಗುತ್ತಿದ್ದ ಸಮಸ್ಯೆಗೆ ಈ ಸುರಂಗ ಮಾರ್ಗ ಉತ್ತಮ ಪರಿಹಾರವಾಗಿದೆ.

ಕ್ರೀಡೆ-ಪ್ರವಾಸಕ್ಕೆ ಸಹಕಾರಿ

ಈ ಸುರಂಗ ಮಾರ್ಗ ನಿರ್ಮಾಣವಾಗಿರುವುದರಿಂದ ಚಳಿಗಾಲದ ಕ್ರೀಡಾ ಕೇಂದ್ರವಾಗಿ ಸೋನಾಮಾರ್ಗ್ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಸೋನಾಮಾರ್ಗ್ ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದ ಅತ್ಯಾಧುನಿಕ ಐಸ್-ಸ್ಕೇಟಿಂಗ್ ರಿಂಗ್‌ನಲ್ಲಿ ಚಳಿಗಾಲದಲ್ಲೂ ಕ್ರೀಡಾ ಚಟುವಟಿಕೆ ನಡೆಸುವುದಕ್ಕೆ ಅನುಕೂಲ ಮಾಡಿಕೊಡಲಿದೆ ಎಂದು ಹೇಳಲಾಗಿದೆ. ಬೇಸಿಗೆಯಲ್ಲಿ ಪ್ರವಾಸಿಗರಿಂದ ತುಂಬಿ ತುಳುಕುತ್ತಿರುತ್ತಿದ್ದ ಸೋನಾಮಾರ್ಗ್‌ನಲ್ಲಿ ಚಳಿಗಾಲದಲ್ಲಿ ಭಾರೀ ಹಿಮಪಾತದಿಂದ ಸಂಚಾರ ಸ್ಥಗಿತವಾಗಿರುತ್ತಿತ್ತು. ಈಗ ಸುರಂಗ ನಿರ್ಮಾಣವಾಗಿರುವುದರಿಂದ ವರ್ಷಪೂರ್ತಿ ಪ್ರವಾಸಿಗರ ಸಂಚಾರಕ್ಕೆ ಅವಕಾಶವಾಗಲಿದೆ.

ಗಂಟಲಲ್ಲಿ ಪಿಸ್ತಾ ಸಿಪ್ಪೆ ಸಿಲುಕಿ ಮಗು ಸಾವು

ಕಾಸರಗೋಡು: ಡ್ರೈಫ್ರೂಟ್ ಕಾಸರಗೋಡು ಜಿಲ್ಲೆಯ ಪುಟ್ಟ ಮಗುವಿನ ಪಾಲಿಗೆ ಡೈ ಫ್ರೂಟ್ ಆಗಿ ಪರಿಣಮಿಸಿದೆ.

ಕುಂಬಳೆ ಭಾಸ್ಕರ ನಗರದ ನಿವಾಸಿ ಅನ್ವರ್-ಮೆಹರೂಫಾ ದಂಪತಿ ಪುತ್ರ 2 ವರ್ಷದ ಅನಸ್‌ಗೆ ಪಿಸ್ತಾ ಸಿಪ್ಪೆಯೇ ಮಾರಕವಾಗಿದೆ. ಪಿಸ್ತಾದ ಒರಟಾದ ಸಿಪ್ಪೆ ಗಂಟಲಲ್ಲಿ, ಬಳಿಕ ಎದೆಗೂಡಲ್ಲಿ ಸಿಲುಕಿದ್ದರಿಂದ ಅನಸ್ ಉಸಿರಾಟ ಕಷ್ಟವಾಗಿ ಮೃತಪಟ್ಟಿದ್ದಾನೆ.

ಶನಿವಾರ ಸಂಜೆ ಮನೆಯವರೇ ಪಿಸ್ತಾ ಸಿಪ್ಪೆ ಬಿಡಿಸಿ ಅನಸ್‌ಗೆ ತಿನ್ನಿಸುತ್ತಿದ್ದರು. ಪಿಸ್ತಾದ ಒಂದು ಬದಿಯ ಸಿಪ್ಪೆ ಅಂಟಿಕೊಂಡೇ ಇದ್ದುದನ್ನು ಗಮನಿಸದೇ ಕೊಟ್ಟಿದ್ದಾರೆ. ಮಗು ಬಾಯಿಗೆ ಹಾಕಿಕೊಂಡಾಗ ಸಿಪ್ಪೆ ಗಂಟಲಲ್ಲಿ ಸಿಲುಕಿಕೊಂಡಿದೆ. ಉಸಿರಾಟ ಕಷ್ಟವಾಗಿ ಅನಸ್ ಒದ್ದಾಡಲಾರಂಭಿಸಿದ್ದಾನೆ. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದಾಗ ತಪಾಸಣೆ ನಡೆಸಿದ ವೈದ್ಯರು, ಗಂಟಲಲ್ಲಿ ಯಾವುದೇ ವಸ್ತು ಸಿಲುಕಿಕೊಂಡಿಲ್ಲ ಎಂದು ತಿಳಿಸಿದ್ದರಿಂದ ಮನೆಗೆ ವಾಪಸ್ ಕರೆತರಲಾಗಿತ್ತು. ಆದರೆ, ಭಾನುವಾರ ಬೆಳಿಗ್ಗೆ ಅನಸ್‌ಗೆ ಮತ್ತೆ ಸಮಸ್ಯೆ ಕಾಣಿಸಿಕೊಂಡಿದೆ. ಪಿಸ್ತಾ ಸಿಪ್ಪೆ ಶ್ವಾಸಕೋಶದಲ್ಲಿ ಉಳಿದಿದ್ದರಿಂದ ಸರಾಗ ಉಸಿರಾಡಲಾಗದೇ ಮೃತಪಟ್ಟಿರುವುದಾಗಿ ತಿಳಿದುಬಂದಿದೆ. ಮಗುವಿನ ತಂದೆ ಅನ್ವರ್ ರಜೆಗೆ ಊರಿಗೆ ಬಂದಿದ್ದವರು ಕಳೆದ ವಾರವಷ್ಟೇ ವಿದೇಶಕ್ಕೆ ತೆರಳಿದ್ದರು.

ನಟ ವೆಂಕಟೇಶ್, ರಾಣಾ ಕುಟುಂಬ ವಿರುದ್ಧ ದೂರು

ಹೈದರಾಬಾದ್: ತೆಲುಗಿನ ಜನಪ್ರಿಯ ನಟರಾದ ವೆಂಕಟೇಶ್ ದಗ್ಗುಬಾಟಿ ಮತ್ತು ಅವರ ಸೋದರಳಿಯ, ಬಾಹುಬಲಿ ಚಿತ್ರದ ನಟ ರಾಣಾ ದಗ್ಗುಬಾಟಿ ಹಾಗೂ ಅವರ ಕುಟುಂಬ ಸದಸ್ಯರಿಗೆ ಕಾನೂನು ಸಂಕಷ್ಟ ಎದುರಾಗಿದೆ.

ದಗ್ಗುಬಾಟಿ ಕುಟುಂಬದಿಂದ 2014ರಲ್ಲಿ ಲೀಸ್‌ಗೆ ಪಡೆದಿದ್ದ ಫಿಲಂ ನಗರದ ಜಾಗದಲ್ಲಿ ಉದ್ಯಮಿಯೊಬ್ಬರು ಹೋಟೆಲ್ ನಡೆಸುತ್ತಿದ್ದರು. ಗುತ್ತಿಗೆ ಅವಧಿ ಮುಗಿಯದಿದ್ದರೂ ಜಾಗದ ಮಾಲೀಕರು ಹೋಟೆಲ್ ತೆರವುಗೊಳಿಸಲು ಯತ್ನಿಸಿ ಧ್ವಂಸಗೊಳಿಸಿದ್ದಾರೆ ಎಂದು ಹೋಟೆಲ್ ಮಾಲೀಕ ದೂರು ದಾಖಲಿಸಿದ್ದಾರೆ.

ನ್ಯಾಯಾಲಯದ ನಿರ್ದೇಶನದ ನಂತರವಷ್ಟೇ ನಿರ್ಮಾಪಕ ಡಿ.ಸುರೇಶ್, ನಟರಾದ ವೆಂಕಟೇಶ್ ಮತ್ತು ರಾಣಾ ದುಗ್ಗುಬಾಟಿ ಕುಟುಂಬ ಸದಸ್ಯರ ವಿರುದ್ಧ ಕ್ರಿಮಿನಲ್ ಪಿತೂರಿ, ಮನೆ ಅತಿಕ್ರಮಣ ಆರೋಪದಡಿ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳಲ್ಲಿ ಫಿಲಂ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಚಾರ ಸಣ್ಣದಲ್ಲ

ಅಕ್ರಮ ಮರಳು:ಐದು ಟಿಪ್ಪರ್‌ಗಳು ವಶ

ಸಿಂಧನೂರು: ಅಕ್ರಮ ಮರಳು ಸಾಗಾಣಿಕೆಯಲ್ಲಿ ತೊಡಗಿದ್ದ 5 ಟಿಪ್ಪರ್, 1 ಜೆಸಿಬಿ ಯನ್ನು ಬಳಗಾನೂರು ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆಂದು ಪಿಎಸ್ಐ ಎರಿಯಪ್ಪ ತಿಳಿಸಿದರು. ಜಿಲ್ಲಾ ಪೊಲೀಸ್ ಅಧಿಕ್ಷಕ ಎಂ.ಪುಟ್ಟ ಮಾದಯ್ಯ ಅವರು ಜಿಲ್ಲೆಯಾದ್ಯಂತ ಅನಧಿಕೃತ ಚಟುವಟಿಕೆಗಳನ್ನ ನಿಯಂತ್ರಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಅಕ್ರಮ ಮರಳು ಸಾಗಾಣಿಕೆ, ಇಸ್ಪೀಟು, ಮಟ್ಕಾ, ಗಾಂಜಾ ಕಡಿವಾಣ ಹಾಕಲಾಗುತ್ತಿದೆ. ತಾಲೂಕಿನ ಹೆಡಗಿನಾಳ ಗ್ರಾಮದ ಹಳ್ಳದಲ್ಲಿ ಅಕ್ರಮವಾಗಿ ಮರಳು ತುಂಬುತ್ತಿರುವ ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿ ಐದು ಟಿಪ್ಪರ್ ಹಾಗೂ ಜೆಸಿಬಿ ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ. ಒಂದೇ ಬಾರಿಗೆ ಐದು ಟಿಪ್ಪರ್ ವಶಕ್ಕೆ ಪಡೆದಿರುವುದು ದೊಡ್ಡ ಕಾರ್ಯಾಚರಣೆ ಎನ್ನಬಹುದಾಗಿದೆ. ಟಿಪ್ಪರ್ ಗಳಿಗೆ ಇನ್ನೂ ನಂಬರ್ ಪ್ಲೇಟ್ ಇಲ್ಲದಿರುವ ವಾಹನಗಳನ್ನು ಅನಧಿಕೃತ ವಾಗಿ ಮರಳು ಸಾಗಾಣಿಕೆಗೆ ಬಳಸಲಾಗುತ್ತಿದ್ದು, ಆರ್ ಟಿ ಓ ಅವರು ಈ ಬಗ್ಗೆ ನ ಹರಿಸಬೇಕಿದೆ.

ಯೋಜನೆ ಪ್ರಾಧಿಕಾರ ಈಗ ನಗರಾಭಿವೃದ್ಧಿ

ಸಿಂಧನೂರು: ನಗರ ಯೋಜನಾ ಪ್ರಾಧಿಕಾರವನ್ನು ಸರಕಾರ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರ ವೆಂದು ಮೇಲ್ದರ್ಜೆಗೇರಿಸಿ ಆದೇಶ ನೀಡಿದೆ. ಸಿಂಧನೂರು ತಾಲೂಕು ಕೇಂದ್ರ ಸ್ಥಾನವಾಗಿದ್ದು, ಪಟ್ಟಣದ ಯೋಜನಾಬದ್ಧ ಬೆಳವಣಿಗೆಯ ಉದ್ದೇಶದಿಂದ ಹಾಗೂ ಪಟ್ಟಣದ ವ್ಯಾಪ್ತಿಯಲ್ಲಿನ ಅಭಿವೃದ್ಧಿಗಳನ್ನು ನಿಯಂತ್ರಿಸಲು ಸಿಂಧನೂರು ಯೋಜನಾ ಪ್ರದೇಶವನ್ನು ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರವನ್ನಾಗಿ ಮೇಲ್ದರ್ಜೆಗೇರಿಸಿ ನಗರಾಭಿವೃದ್ಧಿ ಇಲಾಖೆಯ ಅಭಿವೃದ್ಧಿ ಪ್ರಾಧಿಕಾರದ ಅಧೀನ ಕಾರ್ಯದರ್ಶಿ ಲತಾ.ಕೆ. ಅವರು ಆದೇಶ ಹೊರಡಿಸಿದ್ದಾರೆ. ಜನವರಿ 10 ರಿಂದ ಈ ಆದೇಶ ಜಾರಿಗೆ ಬಂದಿರುವುದಾಗಿ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಮಹಾನ್ ಜ್ಞಾನಸತ್ರ ಜ.15ರಿಂದ 12ರವರೆಗೆ

ರಾಯಚೂರು: ಶ್ರೀ ಮುಂಗ್ಲಿ ಮುಖ್ಯಪ್ರಾಣ ಸೇವಾ ಸಮಿತಿ ಹಾಗೂ ಸಮಸ್ತ ಯುವಕ ಮಂಡಳಿ ಕೋಟೆ ವತಿಯಿಂದ 57 ನೇ ವರ್ಷದ ಶ್ರೀ ಗೋಪಲದಾಸರ, ಪುರಂದರದಾಸರ ಪುಣ್ಯತಿಥಿ ಹಾಗೂ ಶ್ರೀಮನ್ ಮಧ್ವನವಮಿ ಉತ್ಸವ ಅಂಗವಾಗಿ ಜನವರಿ 15 ರಿಂದ ಫೆಬ್ರವರಿ 12 ರವರೆಗೆ ಮಹಾನ್ ಜ್ಞಾನಸತ್ರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಆನಂದ ಆಚಾರ್ಯ ಹೇಳಿದರು. ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಾರ್ಯಕ್ರಮವು ನಗರದ ಕೋಟೆಯ ಶ್ರೀ ಮುಂಗ್ಲಿ ಪ್ರಾಣದೇವರ ದೇವಸ್ಥಾನದಲ್ಲಿ ಜರುಗಲಿದ್ದು, ಜನವರಿ 15 ರಂದು ಸಂಜೆ 6- 30 ಕ್ಕೆ ಕಾರ್ಯಕ್ರಮ ಉದ್ಘಾಟನೆಯನ್ನು ಮಂತ್ರಾಲಯ ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ ನಿವೃತ್ತ ಪ್ರಾಂಶುಪಾಲ ಡಾ. ಎನ್. ವಾದಿರಾಜಾಚಾರ್ ಅವರು ಮಾಡಲಿದ್ದಾರೆ. ಜ.15 ಮತ್ತು 16 ರಂದು ಸಂಜೆ 7 ಕ್ಕೆ ಪಂ. ಡಾ. ವಾದಿರಾಜಾಚಾರ್ ಅವರಿಂದ ಭಾಗವತೋಕ್ತ ಪ್ರಕೃತಿ ಪಾಠದ ಕುರಿತು ಉಪನ್ಯಾಸವನ್ನು ನೀಡಲಿದ್ದಾರೆ ಎಂದರು. ಜ.20 ರಿಂದ 22 ರವರೆಗೆ ಸಂಜೆ 6-30 ಗಂಟೆಗೆ ಮೂಲ ಮಹಾಸಂಸ್ಥಾನ ಶ್ರೀ ಅದಮಾರು ಮಠದ ಪೀಠಾಧಿಪತಿ ಶ್ರೀಮನ್ ಮಧ್ವಾಚಾರ್ಯ ಅವರು ರಾಮಾಯಣ ಕುರಿತು ಉಪನ್ಯಾಸ ನೀಡುವರು. ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ್ ಆಚಾರ್ಯ, ರಾಮಚಾರ, ಶ್ರೀಹರಿಚಾರ, ಅನಿಲ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಲಯದ ಆದೇಶ ವಾಪಸ್‌ಗೆ ಒತ್ತಾಯ

ರಾಯಚೂರು: ಸಿಕಂದರಾಬಾದ್ ದಕ್ಷಿಣ ವಲಯದಲ್ಲಿದ್ದ ರಾಯಚೂರು ಯಾದಗಿರಿ ಜಿಲ್ಲೆಗಳನ್ನು ನೂತನ ವಾಗಿ ರಚಿತವಾದ ಸುಮಾರು 800 ಕೀ.ಮಿ.ದೂರದಲ್ಲಿ ಇರುವ ಆಂದ್ರಪ್ರದೇಶದ ದಕ್ಷಿಣ ಕರಾವಳಿ ರೈಲ್ವೆ ವಲಯಕ್ಕೆ ಸೇರಿಸಿರುವ ಕೇಂದ್ರ ರೈಲ್ವೆ ಇಲಾಖೆಯ ಕ್ರಮವನ್ನು ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್ ವಾದಿ ಸಮಿತಿ (ಸಿಪಿಐಎಂ) ಜಿಲ್ಲಾ ಪ್ರದಾನ ಕಾರ್ಯದರ್ಶಿ ಕೆ ಜಿ ವೀರೇಶ ಪತ್ರಿಕಾ ಪ್ರಕಟಣೆ ಮೂಲಕ ತೀವ್ರವಾಗಿ ಖಂಡಿಸಿದ್ದಾರೆ. ರಾಯಚೂರಿನಿಂದ ಕೇವಲ 142-150ಕೀ.ಮಿ. ಅಂತರದಲ್ಲಿರುವ ಸಿಕಂದರಾ ಬಾದ್ ನ ಮಧ್ಯ ರೈಲ್ವೆ ವಲಯದಲ್ಲಿದ್ದ ಗುಂತಕಲ್ - ರೈಲ್ವೆ ವಿಭಾಗದಲ್ಲಿ ರಾಯಚೂರು - ಯಾದಗಿರಿ ಜಿಲ್ಲೆಗಳಿದ್ದವು. ಅತಿ ಹೆಚ್ಚು ಆದಾಯ ತಂದುಕೂ ಡುವ ವಲಯವಾಗಿದೆ. ಇದನ್ನು ಅವೈಜ್ಞಾನಿಕವಾಗಿ ಸುಮಾರು 800 ಕೀ.ಮಿ.ದೂರದಲ್ಲಿರುವ ವಿಶಾಖಪಟ್ಟಣಂಕ್ಕೆ ಸೇರಿಸಿ ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಲಾಗಿದೆ. ಈ ನಿಟ್ಟಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳ ಲೋಕಸಭಾ ಸದಸ್ಯರುಗಳು ಒಟ್ಟಿನಲ್ಲಿ ಪ್ರಯತ್ನ ಮಾಡಬೇಕು. ದುಡಿಯಲು ಗೂಳೆ ಹೂಗುತ್ತಾರೆ. ಜನರ ಅನುಕೂಲಕ್ಕಾಗಿ ಕಲಬುರಗಿ ಯಿಂದ ಬೆಂಗಳೂರಿಗೆ ಕೂಲಿ ಎಕ್ಸ್‌ಪ್ರೆಸ್ ರೈಲು ಪ್ರಾರಂಭಿಸುವಂತೆ ಕೇಂದ್ರ ಸರಕಾರಕ್ಕೆ ಒತ್ತಾಯಿಸಿದ್ದಾರೆ.

{ ಪರಮೇಶ್ವರ್ } ಸಚಿವ

ಅಧಿಕಾರ ಹಂಚಿಕೆ ಬಗ್ಗೆ ಚರ್ಚೆಗಳು ನಡೆಯದಿದ್ದರೂ ಚರ್ಚೆಗಳು ನಡೆಯುತ್ತಿವೆ ಎಂದು ಬಿಂಬಿಸಲಾಗುತ್ತಿದೆ.ಅಂತಹ ಯಾವುದೇ ಬೆಳವಣಿಗೆಯಾಗಿಲ್ಲ. ಮಾಧ್ಯಮಗಳಲ್ಲಿ ಈ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಆದರೆ ಅಧಿಕಾರ ಹಂಚಿಕೆ ಸತ್ಯಕ್ಕೆ ದೂರವಾದ ಮಾತು.

ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಸಹಕರಿಸಿ | ಕೊಪ್ಪಳ ಎಸ್ಪಿ ಡಾ.ರಾಮ್ ಅರಸಿದ್ದಿ ಮನವಿ

ಸ್ಥಳೀಯರು ನಡೆದೇ ಜಾತ್ರೆಗೆ ಬನ್ನಿ

ಕೊಪ್ಪಳ: ಜ.15 ರಂದು ನಡೆಯುವ ಗವಿಸಿದ್ದೇಶ್ವರ ಜಾತ್ರೋತ್ಸವಕ್ಕೆ ಸ್ಥಳೀಯರು ನಡೆದುಕೊಂಡು ಬರುವ ಮೂಲಕ ಸಂಚಾರ ದಟ್ಟಣೆ ಕಡಿಮೆ ಮಾಡುವುದಕ್ಕೆ ಸಹಕರಿಸಬೇಕು ಎಂದು ಎಸ್ಪಿ ಡಾ.ರಾಮ್ ಎಲ್. ಅರಸಿದ್ದಿ ಮನವಿ ಮಾಡಿದರು.

ಕೊಪ್ಪಳದ ಎಸ್ಪಿ ಕಚೇರಿಯಲ್ಲಿ ಜಾತ್ರೋತ್ಸವದ ಹಿನ್ನೆಲೆ ಸುದ್ದಿಗೋಷ್ಠಿ ನಡೆಸಿ ಸೋಮವಾರ ಮಾತನಾಡಿದರು. ಜಿಲ್ಲೆಯ ವಿವಿಧ ಭಾಗ ಸೇರಿ ರಾಜ್ಯಾದ್ಯಂತ ಭಕ್ತರು ಶ್ರೀಮಠದ ಜಾತ್ರೆಗೆ ಬರುತ್ತಾರೆ. ಎಷ್ಟೇ ಮುಂಜಾಗ್ರತಾ ಕ್ರಮ ವಹಿಸಿದರೂ ಕೂಡ ಒಂದಷ್ಟು ಟ್ರಾಫಿಕ್ ಜಾಮ್ ಆಗುತ್ತದೆ. ಇದರಿಂದ ಕೊಪ್ಪಳ ನಗರ ಮತ್ತು ಕಡಿಮೆ ಅಂತರ ಇರುವವರು ನಡೆದುಕೊಂಡು ಅಥವಾ ಸಾರ್ವಜನಿಕ ಸಾರಿಗೆಯಲ್ಲಿ ಜಾತ್ರೆಗೆ ಬರುವ ಮೂಲಕ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕೈ ಜೋಡಿಸಿ ವಿನಂತಿಸಿದರು.

ಎಸ್ಪಿ ಕಚೇರಿಯಲ್ಲಿ ಜಾತ್ರೋತ್ಸವದ ಹಿನ್ನೆಲೆ ಸುದ್ದಿಗೋಷ್ಠಿಯಲ್ಲಿ ಎಸ್ಪಿ ಡಾ.ರಾಮ್ ಎಲ್. ಅರಸಿದ್ದಿ ಮಾತನಾಡಿದರು.

ಭಾರಿ ಬಂದೋಬಸ್

ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಜ. 15, 16 ಮತ್ತು 17ರಂದು ಮೂರು ದಿನಗಳ ಕಾಲ ಪೊಲೀಸ್ ಇಲಾಖೆಯ ಒಟ್ಟು 1,567 ಸಿಬ್ಬಂದಿ ನಿಯೋಜಿಸಲಾಗಿದೆ. ಈ ಪೈಕಿ ಒಟ್ಟು ಎಎಸ್ಪಿ-2, ಡಿವೈಎಸ್ಪಿ-09, ಪಿಐ-34, ಪಿಎಸ್ಐ-66, ಎಎಸ್ಐ-138, ಎಚ್‌ಸಿ, ಡಬ್ಲ್ಯೂಎಚ್‌ಸಿ-284, ಪಿಸಿ-423, ಡಬ್ಲ್ಯೂಪಿಸಿ-111, ಎಚ್‌ಜಿ-500 ಸಿಬ್ಬಂದಿ ಕಾರ್ಯನಿರ್ವಹಿಸುವರು. ಇದಕ್ಕಾಗಿ ಬಳ್ಳಾರಿ, ರಾಯಚೂರು, ವಿಜಯನಗರ ಹಾಗೂ ಗದಗ ಜಿಲ್ಲೆಯಿಂದ 895 ಸಿಬ್ಬಂದಿಯನ್ನು ನಿಯೋಜನೆ ಮಾಡಿಕೊಳ್ಳಲಿದೆ ಎಂದರು.

10 ವಾಚ್ ಟವರ್: ಜಾತ್ರಾ ಮಹೋತ್ಸವ ನಿಮಿತ್ತ ಪ್ರತಿವರ್ಷದಂತೆ ಈ ವರ್ಷವೂ ಅಗತ್ಯ ಪೊಲೀಸ್ ಬಂದೋಬಸ್ತ್ ಒದಗಿಸಲಾಗುತ್ತಿದೆ. ಅಪರಾಧ ಪ್ರಕರಣ ತಡೆಗೆ ಪೊಲೀಸ್ ಇಲಾಖೆ ವತಿಯಿಂದ ಈ ಬಾರಿ 10 ವಾಚ್ ಟವರ್ ನಿರ್ಮಿಸಲಾಗುತ್ತಿದೆ

ಜ.15 ರಂದು ಜರುಗುವ ಗವಿಸಿದ್ದೇಶ್ವರ ಮಹಾರಥೋತ್ಸವದಂದು ಗವಿಮಠದ ಜಾತ್ರಾ ಆವರಣ,



ಎಪಿಎಂಸಿ ಆವರಣ ಸೇರಿದಂತೆ ವಿವಿಧ ಕಡೆ ಹಾಕುವ 10 ವಾಚ್ ಟವರ್‌ಗಳ ಮೂಲಕ ಪ್ರತಿಯೊಬ್ಬರ ಚಲನ-ವಲನ ಗಮನಿಸಲಾಗುತ್ತದೆ. ಅಲ್ಲದೆ ವಾಚ್ ಟವರ್‌ಗಳ ಮೂಲಕ ವಿಡಿಯೋಗಳನ್ನು ಸಂಗ್ರಹಿಸಲಾಗುತ್ತದೆ. ಈ ರೀತಿಯಾಗಿ ಎಲ್ಲ ರೀತಿಯ ಕ್ರಮ ಕೈಗೊಳ್ಳುವ ಮೂಲಕ ಅಪರಾಧ ತಡೆಗೆ ಮುಂಜಾಗ್ರತಾ ಕ್ರಮ ವಹಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸ್ಕೈ ಸೆಂಟರ್: ಈ ಬಾರಿ ವಿಶೇಷವಾಗಿ ಸ್ಕೈಸೆಂಟರ್ ವ್ಯವಸ್ಥೆ ಮಾಡಲಾಗಿದೆ. ಪೊಲೀಸ್ ಇಲಾಖೆಯ ಡ್ರೋನ್ ಮೂಲಕ ವಾಚ್ ಟವರ್ ನಿಂದ ವಿಡಿಯೋ ಮಾಡಲಾಗುತ್ತಿದೆ. ಜತೆಗೆ ಜನರು ಸೇರುವ ಎಲ್ಲ ಕಡೆ ಸುಮಾರು 90ಕ್ಕೂ ಹೆಚ್ಚು ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಎಎಸ್ಪಿ ಹೇಮಂತಕುಮಾರ, ಡಿವೈಎಸ್ಪಿ ಮುತ್ತಣ್ಣ ಸವರಗೋಳ ಇದ್ದರು.

ವಾಹನ ಪಾರ್ಕಿಂಗ್‌ಗೆ ಏಕ ಮುಖ ಸಂಚಾರ

ಇದೇ ಮೊದಲ ಬಾರಿಗೆ ಪಾರ್ಕಿಂಗ್ ಜಾಗಕ್ಕೆ ಏಕ ಮುಖ ಸಂಚಾರ ವ್ಯವಸ್ಥೆ ಮಾಡಲಾಗಿದೆ. ಹೊಸಪೇಟೆ, ಗಂಗಾವತಿ ಮೂಲಕ ಜಾತ್ರೆಗೆ ಬರುವವರು ಆರ್ ಟಿಓ ಕಚೇರಿ ಮುಂಭಾಗದಿಂದ ಬಂದು ಗವಿಶ್ರೀ ನಗರದ ಹಿಂಭಾಗದಲ್ಲಿನ ಪಾರ್ಕಿಂಗ್ ಜಾಲದಲ್ಲಿ ವಾಹನ ನಿಲ್ಲಿಸಬೇಕು. ಹೋಗುವಾಗ ಗೋವನಕೊಪ್ಪ ಆಸ್ಪತ್ರೆ ಮುಂಭಾಗದ ರಸ್ತೆ ಮೂಲಕ ಎಗ್ಸಿಟ್ ಆಗಬೇಕು. ಇನ್ನು ಯಲಬುರ್ಗಾ ಹುಬ್ಬಳ್ಳಿ ಮಾರ್ಗದಿಂದ ಬರುವವರು ಬೈಪಾಸ್ ನಲ್ಲಿ ಬಂದು ಬಹಾದ್ದೂರ್ ಬಂಡಿ ರಸ್ತೆ ಮೂಲಕ ಗವಿಮಠದ ಹಿಂಭಾಗದ ಸ್ಮಶಾಮದ ಬಳಿಯ ಪಾರ್ಕಿಂಗ್ ಪ್ರದೇಶದಲ್ಲಿ ವಾಹನ ನಿಲ್ಲಿಸಬೇಕು. ಇನ್ನು ಕುಷ್ಟಗಿ ಆರ್ ಒಬಿ ಮೂಲಕ ಬರುವವರು ಗಂಜ್ ವೃತ್ತದಲ್ಲಿ ಎಡಕ್ಕೆ ತಿರುಗಿ ಮುಂದೆ ಯೂ ಟರ್ನ್ ಮಾಡಿಕೊಂಡು ಗವಿಶ್ರೀನಗರದ ಮೂರನೇ ಕ್ರಾಸ್ ಮೂಲಕ ಗವಿಶ್ರೀನಗರದಲ್ಲಿ ವಾಹನ್ ಪಾರ್ಕ ಮಾಡುವ ವ್ಯವಸ್ಥೆ ಮಾಡಲಾಗಿದೆ. ಈ ಮೂಲಕ ಸಾಧ್ಯವಾದಷ್ಟು ಸಂಚಾರ ದಟ್ಟಣೆ ಕಡಿಮೆ ಮಾಡಲು ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಉತ್ಸವ ಮೂರ್ತಿ, ಕಳಸ ಅದ್ದೂರಿಯ ಮೆರವಣಿಗೆ

ಶ್ರೀಗವಿಸಿದ್ಧೇಶ್ವರ ಮೂರ್ತಿ ಮತ್ತು ಕಳಸವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಸೋಮವಾರ ಮೆರವಣಿಗೆ ಮಾಡಲಾಯಿತು.

ಕೊಪ್ಪಳ: ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಸಾಂಪ್ರದಾಯಿಕ ಕಾರ್ಯಕ್ರಮ ಭಾಗವಾಗಿ ಶ್ರೀಗವಿಸಿದ್ದೇಶ್ವರ ಮೂರ್ತಿ ಮತ್ತು ಕಳಸವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಸೋಮವಾರ ಮೆರವಣಿಗೆ ಮಾಡಲಾಯಿತು. ಕಳಶ ಮತ್ತು ಉತ್ಸವ ಮೂರ್ತಿ ನಗರದ ಕೋಟೆ ಏರಿಯಾದ ಜಡೇಗೌಡರ ಮನೆಯಿಂದ ಗವಿಮಠದವರೆಗೆ ಸಾಗಿತು.

ಸಂಸ್ಥಾನಶ್ರೀ ಗವಿಮಠದ 11ನೇ ಪೀಠಾಧೀಶರಾಗಿದ್ದ ಜಗದ್ಗುರು ಗವಿಸಿದ್ದೇಶ್ವರ ಸ್ವಾಮೀಜಿಯವರು ಗವಿಮಠಕ್ಕೆ ಆಗಮಿಸುವ ಪೂರ್ವದಲ್ಲಿ ಕೊಪ್ಪಳದ ಜಡೇಗೌಡರ ಮನೆಯಲ್ಲಿ ಲಿಂಗಾನುಷ್ಠಾನ ನಿರತರಾಗಿದ್ದರು. ಶ್ರೀ ಗವಿಮಠಕ್ಕೆ ಬರುವ ಪೂರ್ವದಲ್ಲಿ ಗೌಡರ ಧರ್ಮಪತ್ನಿಗೆ ತಮ್ಮ ಶಿಖೆ(ಜಡೆ)ಯನ್ನೇ ತೆಗೆದುಕೊಟ್ಟಿದ್ದರು. ಈ ಹಿನ್ನೆಲೆ ಅಂದಿನಿಂದ ಆ ಮನೆತನಕ್ಕೆ ಜಡೇಗೌಡ್ರು ಎಂಬ ಹೆಸರು ಬಂದಿದೆ. ಸಂಪ್ರದಾಯದಂತೆ ಪೂಜೆ ಸಲ್ಲಿಸಿದ ನಂತರ ವಿವಿಧ ಜಾನಪದ ವಾದ್ಯಗಳ ಸಮೇತ ಪಲ್ಲಕ್ಕಿಯನ್ನು ಕೊಪ್ಪಳದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ನಗರದ ಗವಿಮಠಕ್ಕೆ ಕರೆತರಲಾಯಿತು. ಜಡೇಗೌಡರ ಮನೆಯಲ್ಲಿಯೇ ಪೂಜೆ ನೆರವೇರಿಸಿದ್ದಕ್ಕೆ ಗವಿಸಿದ್ಧೇಶ್ವರನನ್ನು ಪುನಃ ಆ ಮನೆಯಿಂದಲೇ ಆಮಂತ್ರಿಸುವ ಹಾಗೂ ಕರೆತರುವ ಸಂಪ್ರದಾಯವಿದ್ದು, ಅದನ್ನು ಪಾಲಿಸಲಾಯಿತು.

ನಗರದ ಕೋಟೆ ಏರಿಯಾದ ಜಡೇಗೌಡರ ಮನೆಯಿಂದ ಪ್ರಾರಂಭಗೊಂಡು ಕೋಟೆ ಮಠದಿಂದ ಪಲ್ಲಕ್ಕಿ ಹೊರಟು ಗಡಿಯಾರ ಕಂಬ ವೃತ್ತದಲ್ಲಿ ತಾಲೂಕಿನ ಮುದ್ದಾಬಳ್ಳಿಯಿಂದ ಬರುವ ಶ್ರೀಗವಿಸಿದ್ಧೇಶ್ವರ ಉತ್ಸವ ಮೂರ್ತಿಯೂ, ಹಲಗೇರಿ ಗ್ರಾಮದ ಸದ್ಭಕ್ತರಾದ ದಿ. ಶ್ರೀವೀರನಗೌಡರು ಪಾಟೀಲ ಮತ್ತು ಧರ್ಮಪತ್ನಿ ಗಿರಿಜಮ್ಮ ಪಾಟೀಲರ ಮನೆಯಿಂದ ಬರುವ ಕಳಸ ಹಾಗೂ ಮಂಗಳಾಪೂರದಿಂದ ಬರುವ ಶ್ರೀಗವಿಸಿದ್ಧೇಶ್ವರ ಉತ್ಸವ ಮೂರ್ತಿಯ ಮೆರವಣಿಗೆಯು ಅದ್ದೂರಿಯಾಗಿ ಜರುಗಿತು.

ಮೆರವಣಿಗೆಯು ನಗರದ ಜವಾಹರ್ ರಸ್ತೆಯಿಂದ ಆರಂಭವಾಗಿ ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ಕವಲೂರು ಓಣಿ, ಸಿದ್ದೇಶ್ವರ ವೃತ್ತದ ಮೂಲಕ ಮೆರವಣಿಗೆ ಗವಿಶ್ರೀ ನಗರದ 3ನೇ ಮುಖ್ಯರಸ್ತೆ ಮಾರ್ಗವಾಗಿ 3ನೇ ಅಡ್ಡರಸ್ತೆಯ ಮೂಲಕ ಗವಿಮಠ ತಲುಪಿತು.

ಕೊಪ್ಪಳದ ಅಜ್ಜನ ಜಾತ್ರೆಯ ಮಹಾ ದಾಸೋಹಕ್ಕೆ ರೊಟ್ಟಿಯ ಅಳಿಲು ಸೇವೆ

ಭಕ್ತಿ ಪಾರಮ್ಯ ಮೆರೆದ ಮಸ್ಕಿ ಭಕ್ತ ಗಣ

ಮಸ್ಕಿ: ದಕ್ಷಿಣ ಭಾರತದ ಕುಂಭಮೇಳ ಖ್ಯಾತಿಯ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಮಹಾಮಹಿಮೆ ಗವಿಸಿದ್ದೇಶ್ವರ ಮಹಾ ರಥೋತವ ನಡೆಯಲಿದೆ.

ಅಜ್ಜನ ಜಾತ್ರೆ, ರೊಟ್ಟಿಯ ಜಾತ್ರೆ ,ಹೋಳಿಗೆ, ಹೀಗೆ ನಾನಾ ಹೆಸರುಗಳಿಂದ ಕರೆಯಲಾಗುವ ಗವಿಸಿದ್ದೇಶ್ವರ ಜಾತ್ರೆಗೆ ಬರುವ ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗುತ್ತದೆ. ರೊಟ್ಟಿಯ ಊಟ ವಿಶೇಷವಾಗಿರುತ್ತದೆ. ಪಟ್ಟಣದ ಚೌಡೇಶ್ವರಿ ಭವನದಲ್ಲಿ ನೂರಾರು ಮಹಿಳೆಯರು ಸೇರಿದಂತೆ ತಾಲೂಕಿನ, ದಿನಸಮುದ್ರ, ಬಳಗಾನೂರ, ನಾಗರಬೆಂಚಿ, ಸೇರಿದಂತೆ ವಿವಿಧ ಹಳ್ಳಿಯ ಭಕ್ತರು ಒಂದು ತಿಂಗಳಿನಿಂದ ರೊಟ್ಟಿ ತಯಾರಿಸುವ ಕೆಲಸದಲ್ಲಿ ನಿರತರಾಗಿದ್ದಾರೆ.

ಸೂರ್ಯೋದಯಕ್ಕೂ ಮೊದಲು ಎದ್ದು ಮೈ ಹಣ್ಣಾಗುವಂತೆ ದಿನಪೂರ್ತಿ ದುಡಿದು ದಣಿಯುವ ರೈತಾಪಿ ವರ್ಗದ ಹಳ್ಳಿ ಜನರಿಗೆ ಅದಾಗಲೇ ಮಲಗುವ ಹೊತ್ತಾಗಿದ್ದರೂ, ಯಾರೂ ಮಲಗಿರಲಿಲ್ಲ. ಹೊತ್ತು ಏರುತ್ತಿದ್ದಂತೆ ಜೋಳದ ರೊಟ್ಟಿ ತಟ್ಟುವ ಸದ್ದು ಜೋರಾಗಿ ಕೇಳುತ್ತಿತ್ತು. ಕೆಂಡವಾಗಿದ್ದ ಕಟ್ಟಿಗೆಯ ಒಲೆಯ ಮುಂದೆ ಕುಳಿತಿದ್ದ ಮಹಿಳೆಯರಿಗೆ ಅದರ ಶಾಖ ತಟ್ಟಿದರೂ, ಅದರತ್ತ ಗಮನ ಕೊಡದೆ ರೊಟ್ಟಿ ತಟ್ಟುತ್ತಿದ್ದರು.

ತಮ್ಮ ಪಾಲಿನ ಕೊನೆಯ ರೊಟ್ಟಿ ಮಾಡಿ ಮುಗಿಸಿ ಕೈಗೆ ಅಂಟಿಕೊಂಡಿದ್ದ ಹಿಟ್ಟನ್ನು ನೀರಿನಿಂದ ತೊಳೆದುಕೊಳ್ಳುತ್ತಿದ್ದ ಮಸ್ಕಿ ಪಟ್ಟಣದ

ಶಾರದಮ್ಮಗೆ ಎಷ್ಟಾದರೂ ಹಿಟ್ಟು ಕೊಡಿ, ರೊಟ್ಟಿ ಮಾಡಿಕೊಡುತ್ತೇನೆ ಎನ್ನುವ ಅತ್ಯುತ್ಸಾಹ. ಒಂದು ರೊಟ್ಟಿ ಮಾಡಲು ಎಷ್ಟು ಹಣ

ಗವಿಸಿದ್ದೇಶ್ವರ ಜಾತ್ರೆಗೆ ಬರುವ ಭಕ್ತರಿಗೆ ದಾಸೋಹ ವ್ಯವಸ್ಥೆ ಹಾಗೂ ರೊಟ್ಟಿಯ ಊಟ ವಿಶೇಷವಾಗಿರುತ್ತದೆ.

ತೆಗೆದುಕೊಳ್ಳಿತ್ತೀರಿ ಎನ್ನುವ ಪ್ರಶ್ನೆಗೆ ನಯಾಪೈಸೆಯೂ ಇಲ್ಲ ಎನ್ನುವ ಜತೆಗೆ ಅಜ್ಜನ ಜಾತ್ರೆಗೆ ಸಣ್ಣ ಸೇವೆ ಎಂದು ತಮ್ಮ ಎದುರಿದ್ದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಫೋಟೊಕ್ಕೆ ನಮಸ್ಕರಿಸಿದರು.

ಹೀಗೆ ತಾಲೂಕಿನ ವಿವಿಧ ಹಳ್ಳಿಗಳಿಂದ ಗವಿಸಿದ್ದೇಶ್ವರ ಮಠದ ಭಕ್ತರು ಜೋಳದ ರೊಟ್ಟೆ, ಅಕ್ಕಿ, ಸೇರಿದಂತೆ ವಿವಿಧ ದವಸ ದಾನ್ಯಗಳನ್ನು ಕಳಿಸುವ ಮೂಲಕ ಗವಿಸಿದ್ದೇಶ್ವರ ಜಾತ್ರೆಗೆ ಮೂರು ವರ್ಷಗಳಿಂದ ತಮ್ಮ ಅಳಿಲು ಸೇವೆ ಸಲ್ಲುಸುವ ಮೂಲಕ ದಾಸೋಹದ ಯಶಸ್ವಿಗೆ ಸಹಕಾರ ನೀಡುತ್ತಿರುವುದು ಸ್ಪೂರ್ತಿದಾಯಕ ಮತ್ತು ಶ್ಲಾಘನೀಯ.

ಕೇಂದ್ರ, ರಾಜ್ಯ ಸರಕಾರಗಳ ಭೂ ನೀತಿ ಖಂಡನೆ

ರಾಯಚೂರು: ಕೇಂದ್ರ, ರಾಜ್ಯ ಸರಕಾರಗಳ ಭೂ ನೀತಿಗಳನ್ನು ಖಂಡಿಸಿ ಫೆ.10 ರಿಂದ ವಿಧಾನ ಸೌಧದೆದುರು ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದ್ದು, ಹತ್ತು ಸಾವಿರ ಕ್ಕೂ ಹೆಚ್ಚು ರೈತರು, ಕಾರ್ಮಿಕರು, ಭೂ ಹಕ್ಕುಗಳಿಂದ ವಂಚಿತರಾದವರು ಪಾಲ್ಗೊಳ್ಳಲಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಉಪಾಧ್ಯಕ್ಷ ಯು. ಬಸವರಾಜ ಹೇಳಿದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸರಕಾರಿ, ಅರಣ್ಯ ಇಲಾಖೆಯ ಭೂಮಿಯಲ್ಲಿ ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತ ಈಗ ಹಕ್ಕು ಪತ್ರಕ್ಕಾಗಿ ಆಗ್ರಹಿಸುತ್ತಿರುವ ರೈತರಿಗೆ ಭೂಮಿ ನೀಡಲು ಮೀನ ಮೇಷ ಎಣಿಸುತ್ತಿರುವ ಸರಕಾರಗಳು ಬಹುರಾಷ್ಟ್ರೀಯ ಕಂಪೆನಿಗಳಿಗೆ ಸಾವಿರಾರು ಎಕರೆ ಭೂಮಿಯನ್ನು ಕೊಡುವುದಕ್ಕೆ ಮುಂದಾಗಿರುವುದನ್ನ ಇದನ್ನು ನಾವು ವಿರೋಧಿಸುತ್ತೇವೆ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೊಡಲು ಉದ್ದೇಶಿಸಿರುವ ಭೂಮಿಯನ್ನು ಭೂಮಿ ಇಲ್ಲದವರಿಗೆ ನೀಡಬೇಕು. ಈಗಾಗಲೇ ಸಾಗುವಳಿ ಮಾಡುತ್ತಿರುವವರ ವಿಚಾರದಲ್ಲಿ ಅಕ್ರಮ- ಸಕ್ರಮ ಸಮಿತಿ ರಚಿಸಿ, ಸಭೆಗಳನ್ನು ಮಾಡಿ ಕಂದಾಯ ಇಲಾಖೆಯಿಂದ ಸರ್ವೆ ಮಾಡಿಸಿ, ಕಾನೂನಾತ್ಮಕವಾಗಿ ಭೂ ಹಂಚುವ ಕ್ರಿಯೆಗೆ ಚಾಲನೆ ನೀಡಬೇಕು. ಬಗರ ಹುಕುಂ ಸಾಗುವಳಿದಾರರಿಗೆ ಪಟ್ಟಾ ನೀಡಬೇಕು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯಉಪಾಧ್ಯಕ್ಷ ಯು. ಬಸವರಾಜ ಮಾತನಾಡಿದರು.

ಅದು ಅಲ್ಲದೆ ಸರಕಾರಿ ಯೋಜನಗೆಗಳಿಗೆ ಕೃಷಿಕರಿಂದ ಒತ್ತಾಯಪೂರ್ವಕವಾಗಿ ಭೂಮಿಯನ್ನು ಕಿತ್ತುಕೊಳ್ಳುವ ಬದಲು ಅವರನ್ನು ವಿಶ್ವಾಸಕ್ಕೆ ತೆಗೆದು ಅವರ ಆತಂಕವನ್ನು ದೂರ ಮಾಡಿ ಭೂಮಿ ಪಡೆದು ಅಭಿವೃದ್ಧಿ ಪೂರಕ ಕೆಲಸ ಮಾಡಬೇಕೆನ್ನುವುದು ನಮ್ಮ ಹಕ್ಕೊತ್ತಾಯ ಈ ವಿಚಾರಗಳನ್ನ ಇಟ್ಟುಕೊಂಡು ವಿಧಾನಸೌಧದ ಎದುರು ಫೆಬ್ರುವರಿ 10 ರಿಂದ ಅನಿರ್ಧಿಷ್ಟಾವಧಿ ಧರಣಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಕೆ.ಜಿ.ವಿರೇಶ, ನರಸಣ್ಣ ನಾಯಕ, ಕರಿಯಪ್ಪ ಹಚ್ಚೊಳ್ಳಿ ಉಪಸ್ಥಿತರಿದ್ದರು.

ಭೂ ಸುರಕ್ಷಾ ಯೋಜನೆಗೆ ಶಾಸಕ ಚಾಲನೆ

ಲಿಂಗಸುಗೂರು: ಹಳೆಯ ದುಸ್ಥಿಯಲ್ಲಿರುವ ಭೂ ದಾಖಲೆಗಳನ್ನು ಶಾಶ್ವತವಾಗಿ ಡಿಜಿ ದಾಖಲೇಗಳಾಗಿ ಪರಿರ್ತನೆ, ಹಳೆಯ ದಾಖಲೆಗಳ ಸಂರಕ್ಷಣೆ ಯೋಜನೆಯಾದ ಭೂ ಸುರಕ್ಷ ಯೋಜನೆಗೆ ಶಾಸಕ ಮಾನಪ್ಪ ವಜ್ಜಲ್ ಚಾಲನೆ ನೀಡಿದರು.

ಪಟ್ಟಣದ ಹಳೆ ತಹಶೀಲ್ ಕಾರ್ಯಲಯದ ಅಭಿಲೇಖಾಲಯದಲ್ಲಿ ಭೂ ಸುರಕ್ಷ ಯೋಜನೆಗೆ ಚಾಲನೆ ನೀಡಿದ ಅವರು ಹಳೆ ದಾಖಲೆಗಳನ್ನು ಪಡೆದುಕೊಳ್ಳಲು ಜನರಿಗೆ ಬಹಳ ತೊಂದರೆಯಾಗುತ್ತಿತ್ತು. ಜನರು ದಾಖಲೆಗಳಿಗಾಗಿ ಪರದಾಡುವುದನ್ನು ತಪ್ಪಿಸುವ ದಿಸೆಯಲ್ಲಿ ಭೂ ಸುರಕ್ಷ ಯೋಜನೆ ಅಡಿಯಲ್ಲಿ ಎಲ್ಲಾ ದಾಖಲೆಗಳನ್ನು ಡಿಜಿಟಲಿಕರಣ ಮಾಡಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಬಸವಣೆಪ್ಪ ಕಳಶೆಟ್ಟಿ, ತಹಸೀಲ್ದಾರ ಶಂಶಾಲಂ, ಗ್ರೇಡ್- 2 ತಹಸೀಲ್ದಾರ ಬಸವರಾಜ ಜಳಿಕಿಮಠ, ಜವೀದ ಇರ್ಫಾನ್



ಹಳೆಯ ದುಸ್ಥಿಯಲ್ಲಿರುವ ಭೂ ದಾಖಲೆಗಳನ್ನು ಶಾಶ್ವತವಾಗಿ ಡಿಜಿ ದಾಖಲೇಗಳಾಗಿ ಪರಿರ್ತನೆ, ಹಳೆಯ ದಾಖಲೆಗಳ ಸಂರಕ್ಷಣೆ ಯೋಜನೆಯಾದ ಭೂ ಸುರಕ್ಷ ಯೋಜನೆಗೆ ಶಾಸಕ ಮಾನಪ್ಪ ವಜ್ಜಲ್ ಚಾಲನೆ ನೀಡಿದರು.

ಮತ್ತು ಸಿಬ್ಬಂದಿ ವರ್ಗದವರು ಇದ್ದರು.

ಸಿಎಂ ಕುರ್ಚಿಗಾಗಿ ಕಾಂಗ್ರೆಸ್‌ನಲ್ಲಿ ಜಾತಿ ಲಾಬಿ

ರಾಯಚೂರು: ರಾಜ್ಯದ ಮುಖ್ಯಮಂತ್ರಿ ಹುದ್ದೆಗಾಗಿ ಜಾತಿ ಜಾತಿಗಳ ನಡುವೆ ಲಾಬಿ ಶುರುವಾಗಿದೆ. ಸಿದ್ದರಾಮಯ್ಯ ಪರ ಹಿಂದುಳಿದವರಿದ್ದರೆ, ಸಿಎಂ ಸ್ಥಾನದ ಆಕಾಂಕ್ಷಿ ಡಿ ಕೆ ಶಿವಕುಮಾರ್ ಪರ ಒಕ್ಕಲಿಗರಿದ್ದಾರೆ. ರಾಜ್ಯದ ಅಭಿವೃದ್ಧಿ ಮರೆತು ಮುಖ್ಯಮಂತ್ರಿ ಸ್ಥಾನದ ಪೈಪೋಟಿ ಜೋರಾಗಿದೆ ಎಂದು ಮಾಜಿ ಸಚಿವ ಕೆ ಎಸ್ ಈಶ್ವರಪ್ಪ ಮಾತನಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಾತ್ಮ ಗಾಂಧಿಜಿ ಬದುಕಿದ್ರೆ ನೇಣಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು.

ಬಣ ರಾಜಕೀಯ ಒಂದೆಡೆಯಾದರೆ, ಜಾತಿ ಆಧಾರದ ಮೇಲೆ ಸಿಎಂ ಕುರ್ಚಿ ಸ್ಪರ್ಧೆ ನಡೆದಿದೆ. ಇದು ಕಾಂಗ್ರೆಸ್ ಸಂಸ್ಕೃತಿನಾ, ಸ್ವಾತಂತ್ರ್ಯ ತಂದುಕೊಟ್ಟ ನಾಯಕರು ಎಂದು ಜಾತಿ ಬಗ್ಗೆ ಹೇಳಿಲ್ಲ. ಕಾಂಗ್ರೆಸ್ ನವರು ಹಿಂದು ಸಮಾಜ ಹೊಡೆದು ಮತ ಪಡೆಯಲು ಮುಂದಾದರು. ಈಗ ಸಿಎಂ ಸ್ಥಾನಕ್ಕೂ ಜಾತಿ ತರುತ್ತಿರುವುದು ಎಷ್ಟರಮಟ್ಟಿಗೆ ಸರಿ. ಬಿಜೆಪಿಯಲ್ಲೂ ಗುಂಪುಗಾರಿಕೆ ಇದೆ. ಹಿಂದುತ್ವದ ಮೇಲೆ ಬಿಜೆಪಿ ಸರಿಹೊಗುತ್ತೆ. ಆದರೆ ಕಾಂಗ್ರೆಸ್‌ನಲ್ಲಿ ಇದು ಯಾವಾಗ ಸರಿಯಾಗುತ್ತೆ ಎಂದು ಪ್ರಶ್ನಿಸಿದರು.

ಸಿಟಿ ರವಿ-ಹೆಬ್ಬಾಳ್ಕರ್ ಮಾತಿನ ಚಕಮಕಿ ಸಂಬಂಧ ದಾಖಲೆಗಳನ್ನ ನೋಡಿದ್ದೇವೆ. ಅಲ್ಲಿ ಸಿಟಿ ರವಿ ಯಾವುದೇ ಅವಾಚ್ಯ ಶಬ್ದ ಬಳಸಿಲ್ಲ ಅಂತ ರೂಲಿಂಗ್ ಕೊಟ್ಟ ಬಳಿಕವೂ, ಸರಕಾರ ಸಿಐಡಿಗೆ ಕೊಟ್ಟಿದೆ. ಅದರ ಕುರಿತು ರಾಜ್ಯ ಸರಕಾರಕ್ಕೆ ಸಭಾಪತಿ ಪತ್ರ ಬರೆದಿರೋದರ ಅರ್ಥ ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಬೆಲೆಯಿಲ್ಲ ಅನ್ನೋದು ಸ್ಪಷ್ಟವಾಗಿ ಗೊತ್ತಾಗುತ್ತಿದೆ ಎಂದರು.

ನೀವು ಸಂವಿಧಾನಕ್ಕೆ ಬೆಲೆ ಕೊಡೋ ರೀತಿನಾ. ಕೂಡಲೇ ಸರಕಾರ ಸಭಾಪತಿಗಳಲ್ಲಿ ಕ್ಷಮೆ ಕೇಳಿ, ಪೂರ್ಣ ತನಿಖೆ ಸಭಾಪತಿಗಳು ಮಾಡುವಂತೆ ಮಾಡಬೇಕಿದೆ. ತಪ್ಪಿತಸ್ಥರು

ಸುದ್ದಿಗಾರರೊಂದಿಗೆ ಮಾಜಿ ಸಚಿವ ಕೆ ಎಸ್ ಈಶ್ವರಪ್ಪ ಮಾತನಾಡಿದರು.

ಸಿಟಿ ರವಿ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಘಟನೆ ಕುರಿತು ಸಭಾಪತಿಗಳು ರಾಜ್ಯ ಸರಕಾರಕ್ಕೆ ಪತ್ರ ಬರೆದ ಪ್ರಕರಣಕ್ಕೆ ಪ್ರತಿಕ್ರಿಯಿಸಿದ ಈಶ್ವರಪ್ಪ ರಾಜ್ಯದ ಇತಿಹಾಸದಲ್ಲಿ ವಿಧಾನ ಸಭಾ, ವಿಧಾನ ಪರಿಷತ್ತಿನ ಸಭಾಪತಿಗಳು ರಾಜ್ಯ ಸರಕಾರಕ್ಕೆ ಪತ್ರ ಬರೆದಿರಲಿಲ್ಲ. ವಿಧಾನ ಪರಿಷತ್ ನಲ್ಲಿ ಸಂಪೂರ್ಣ ಅಧಿಕಾರ ಸಭಾಪತಿಗಳಿಗೆ ಇರುತ್ತದೆ.

- ಕೆ ಎಸ್ ಈಶ್ವರಪ್ಪ ,
ಮಾಜಿ ಡಿಸಿಎಂ

ಯಾರೇ ಇದ್ರೂ ಕ್ರಮಕೈಗೊಳ್ಳಿ. ಸರಕಾರ ಸಿಐಡಿ ತನಿಖೆ ಹಿಂಪಡೆದು ಸಭಾಪತಿಗಳ ಗೌರವ ಉಳಿಸಿಕೊಡಬೇಕು ಎಂದ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಜಿಲ್ಲಾದ್ಯಕ್ಷ ರಮಾನಂದ ಯಾದವ್, ಮಾಜಿ ಪ್ರದಾನ ಕಾರ್ಯದರ್ಶಿ ಶಶಿರಾಜ ಮಸ್ಕಿ ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

ಸಂಭ್ರಮದಿಂದ ಜರುಗಿದ ಉರುಸ್

ಮುದಗಲ್: ಪಟ್ಟಣದ ಸೈಯದ್ ಷಾ ಮಹಮ್ಮದ್ ನಬೀರಾ ಖಾದ್ರಿ ರಹೇಮತುಲ್ಲಾ ಅಲೈ ರವರ 278 ನೇಯ ಉರುಸ್ ಸಡಗರ ಸಂಭ್ರಮದಿಂದ ಜರಗಿತು. ಗಂಧದ ಮೆರವಣಿಗೆಯು ಇಬ್ರಾಹಿಂಪುರದಿಂದ ಪ್ರಾರಂಭವಾಗಿ ಪ್ರಮುಖ ಬೀದಿಗಳ ಮೂಲಕ ತೆರಳಿ ಹಜರತ್ ಷರೀಫ್ ದರ್ಗಾ ತಲುಪಿತು. ಗಂಧದ ಲೇಪನ ವನ್ನು ಸೈಯದ್ ಯಾಸೀನ್ ಖಾದ್ರಿ, ಸೈಯದ್ ಹಾಸೀಮ್ ಖಾದ್ರಿ (ಶಕೀಲ್ ಖಾದ್ರಿ),ಸೈಯದ್ ಹಜರತ್ ಖಾದ್ರಿ, ಸೈಯದ್ ಹಸೀಬ್ ಖಾದ್ರಿ, ಸೈಯದ್ ಗಯಾಜುದ್ದೀನ್ ಖಾದ್ರಿ ನಡೆಸಿಕೊಟ್ಟರು. ಖಾದ್ರಿಯಾ ಚಾರಿಟೇಬಲ್ ಹಾಗೂ ವೆಲ್ಫೇರ್ ಟ್ರಸ್ಟ ವತಿಯಿಂದ ಅನ್ನ ಸಂತರ್ಪಣೆ ನಡೆಯಿತು. ಮರುದಿನ ಉರುಸ್ ನ ದಿನದಂದು ರಾತ್ರಿ 8:00 ಗಂಟೆಗೆ ಸುಪ್ರಸಿದ್ಧ ಗುಲ್ಬರ್ಗದ ಮೊಹಮ್ಮದ್ ಅಕ್ಬರ್ ಖಾಸಿಂ ಬಂದೇನವಾಜಿ ರವರ ಖವ್ವಾಲಿ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. ಈ ಸಂದರ್ಭದಲ್ಲಿ ಸೈಯದ್ ಷಾ ಮುಜತಬಾ ಖಾದ್ರಿ, ಅಲ್ ಮೂಸವಿ(ಮದನಿ ಪಾಷ) ಹೈದ್ರಾಬಾದ್ ,ಸೈಯದ್ ಷಾ ಖಾಜಾ ಮೋಹಿನ್ ನುದ್ದೀನ್ ಖಾದ್ರಿ ನುರೆದರಿಯಾ ರಾಯಚೂರು, ಸೈಯದ್ ಷಾ ತಾಹಿರ್ ಪಾಷಾ ಖಾದ್ರಿ ಲವ್ಬಾಲಿ ಚಿಕ್ಕ ಜಂತಕಲ್ ಗಂಗಾವತಿ, ಸೈಯದ್ ಷಾ ಹುಸೇನ್ ಖಾದ್ರಿ ಲವ್ಬಾಲಿ ಚಿಕ್ಕ ಜಂತಕಲ್ ಗಂಗಾವತಿ, ಸೈಯದ್ ಷಾ ಯಕ್ಬಾಲ್ ಪಾಷಾ ಖಾದ್ರಿ ನುರೆದರಿಯಾ ರಾಯಚೂರು,ಮೊಹಮ್ಮದ್ ಅಶ್ರಫ್ ಅಲಿ ಗೊಹರ್ ರಾಯಚೂರು, ಮೊಹಮ್ಮದ್ ಅಬ್ದುಲ್ ಗಫರ್ ಜವ್ವಾದ ರಾಯಚೂರು,ಸೈಯದ್ ಇರ್ಫಾನ್ ಖಾದ್ರಿ ಸೇರಿದಂತೆ ಮುಂತಾದವರು ಇದ್ದರು.

ಕೊಪ್ಪಳ ಗವಿಸಿದ್ದೇಶ್ವರ ಜಾತ್ರೆಗೆ ದೇಣಿಗೆ

ಪಟ್ಟಣ ಸಮೀಪದ ಗುಡಿಹಾಳ ಗ್ರಾಮದ ನೂರಾರು ಯುವಕರು ಗ್ರಾಮದಲ್ಲಿ ಕೊಪ್ಪಳ ಗವಿಸಿದ್ದೇಶ್ವರ ಜಾತ್ರಾ, ಮಹೋತ್ಸವದ ಅನ್ನಸಂತರ್ಪಣೆ ಕಾರ್ಯಕ್ರಮಕ್ಕೆ ದೇಣಿಗೆ ಸಂಗ್ರಹಿಸಲಾಯಿತು.

ಮುದಗಲ್: ಪಟ್ಟಣ ಸಮೀಪದ ಗುಡಿಹಾಳ ಗ್ರಾಮದ ನೂರಾರು ಯುವಕರು ಗ್ರಾಮದಲ್ಲಿ ಕೊಪ್ಪಳ ಗವಿಸಿದ್ದೇಶ್ವರ ಜಾತ್ರಾ, ಮಹೋತ್ಸವದ ಅನ್ನಸಂತರ್ಪಣೆ ಕಾರ್ಯಕ್ರಮಕ್ಕೆ ದೇಣಿಗೆ ಸಂಗ್ರಹಿಸಿ, ಮೂರು ಟ್ರಾಕ್ಟರ್ ಮತ್ತು ಮಿನಿ ಲಾರಿಯಲ್ಲಿ ಕೊಪ್ಪಳಕ್ಕೆ ಕಳುಹಿಸಿದರು.

ದಾಸೋಹ ಕಾರ್ಯಕ್ಕೆ ಅಗತ್ಯ ವಸ್ತುಗಳನ್ನು ಕ್ರೋಢೀಕರಿಸಿ, ವಾಹನಗಳಲ್ಲಿ ತುಂಬಿ ಸಂಗ್ರಹಿಸಿದ ದೇಣಿಗೆಯನ್ನು ಕಳುಹಿಸಿಕೊಡಲಾಯಿತು. ಕಳೆದ ಹತ್ತಾರು ವರ್ಷಗಳಿಂದಲೂ ಭಕ್ತರು ನೀಡುವ ಅಕ್ಕಿ, ಜೋಳ, ಕಟ್ಟಿಗೆ, ಕಾಳು ಕಡಿ ಸೇರಿದಂತೆ ರೊಟ್ಟಿ ಗಳನ್ನು ವಾಹನದಲ್ಲಿ ತುಂಬಿ ಕಳುಹಿಸಿಲಾಯಿತು. ಇದಲ್ಲದೇ ಕೊಪ್ಪಳ ಗವಿಸಿದ್ದೇಶ್ವರ ಜಾತ್ರಾ, ಮಹೋತ್ಸವಕ್ಕೆ ಗುಡಿಹಾಳ ಗ್ರಾಮದ ನೂರಾರು ಯುವಕರು ಹಾಗೂ ಮಹಿಳೆಯರು ಸೇವೆಗೈಯಲು ಪ್ರತಿ ವರ್ಷ ತೆರಳುತ್ತೇವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಿವಕುಮಾರ್ ಚುಕನಟ್ಟಿ, ಬಸವರಾಜ, ಚನ್ನಬಸವ, ಶರಣಪ್ಪ ರಕ್ಕಸಗಿ, ಪ್ರವೀಣ ಪಾಟೀಲ್, ಅಯ್ಯಪ್ಪ ಇತರರಿದ್ದರು.

ನೀರಾವರಿಗೆ ಮೊದಲ ಆದ್ಯತೆ: ವಜ್ಜಲ್

ಮುದಗಲ್: ಪಟ್ಟಣದ ಸುತ್ತಮುತ್ತಲಿನ 35 ಗ್ರಾಮಗಳನ್ನು ನಂದವಾಡಿಗೆ ಏತ ನೀರಾವರಿ ಯೋಜನೆ ಸೇರಿಸುವ ಮೂಲಕ ನೀರಾವರಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಲಿಂಗಸುಗೂರು ಶಾಸಕ ಮಾನಪ್ಪ ವಜ್ಜಲ್ ಹೇಳಿದರು. ಪಟ್ಟಣ ಸಮೀಪದ ವಿವಿಧ ಗ್ರಾಮಗಳಲ್ಲಿ ಕಾಮಗಾರಿಗೆ ಭೂಮಿ ಪೂಜೆ ಮಾಡುವ ಮೂಲಕ ಚಾಲನೆ ನೀಡಿ ನಂತರ ಮಾತನಾಡಿದ ಅವರು, ಕೆರೆಗಳಿಗೆ ನೀರು ತುಂಬಿಸುವುದು ಹಾಗೂ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು. ಇದೆ ವೇಳೆ 2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿ ತೊಡಕಿ, ಛತ್ತರತಾಂಡ, ಗೊಲ್ಲರಹಟ್ಟಿ, ರಾಮೋಜಿ ನಾಯ್ಕ ತಾಂಡಾ, ಹೆಗ್ಗಾಪೂರು ತಾಂಡಾ ಮತ್ತು ಮುದಗಲ್ ಪಟ್ಟಣದ ವಾರ್ಡ್ ನಂಬರ್ 19-20ರಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣದ ಕಾಮಗಾರಿಗೆ ಶಾಸಕ ವಜ್ಜಲ್ ಭೂಮಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕ ಅಧ್ಯಕ್ಷ ಕರಿಯಪ್ಪ ಯಾದವ, ಜಿಲ್ಲಾ ಪ್ರದಾನ ಕಾರ್ಯದರ್ಶಿ ವೀರನಗೌಡ ಲೆಕ್ಕಿಹಾಳ,ಸಣ್ಣಸಿದ್ದಯ್ಯ ಮೇಗಳಪೇಟೆ, ನಾಗರಾಜ ತಳವಾರ, ನಾಗಲಾಪೂರು ಗ್ರಾಮ ಪಂಚಾಯತಿ ಅಧ್ಯಕ್ಷ ಮೇಘಪ್ಪ ರಾಠೋಡ, ಕೆ, ನಾಗಭೂಷಣ, ಆಪ್ತ ಸಹಾಯಕ ಫಕೀರಪ್ಪ ಕುರಿ, ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಆರಾಮ

ಉತ್ತರಾಯಣ ಹಿಗ್ಗುವದರ ಸಂಕೇತ. ಕೃಷಿಕನಿಗೆ ತನ್ನ ದುಡಿಮೆಯ ಫಲದ ಭಾಗ್ಯವನ್ನು ಮನೆತುಂಬಿಸಿಕೊಳ್ಳುವ ಹರುಷದ ಪರ್ವಕಾಲ. ಮಕರರಾಶಿಗೆ ಶನಿ ಒಡೆಯ ಅಂದು ಸೂರ್ಯ ತನ್ನ ಸುತನನ್ನು ಸಂಧಿಸುವ ದಿನ. ಪುರಾಣದ ಪ್ರಕಾರ ಪಿತೃಗಳ ಮುಕ್ತಿಗಾಗಿ ಭಗೀರಥ ಮಹಾರಾಜ ತಪಸ್ಸು ಮಾಡಿ ಗಂಗೆಯನ್ನು ಭುವಿಗೆ ಕರೆತಂದ ದಿನ ಈ ಸಂಕ್ರಮಣ ಕಾರಣ ಇದೊಂದು ಪುಣ್ಯಪರ್ವದಿನ.

ಮಕರ ಸಂಕ್ರಮಣ ಆರಂಭ ಉತ್ತರಾಯಣ

ಪುಷ್ಪಾ. ಮೋಹನ. ಮುದಕವಿ

ಭಾರತದ ಸಂಸ್ಕೃತಿ, ಧರ್ಮ, ವಿಜ್ಞಾನದ ಸಮ್ಮಿಲನದೊಂದಿಗೆ ಆಚರಿಸುವ ಪರ್ವ ಮಕರಸಂಕ್ರಮಣ. ಸಂತಸದ ಸುಗ್ಗಿಯ ಹಬ್ಬ ಸೂರ್ಯನ ಆರಾಧನೆ ಹಬ್ಬದ ವೈಶಿಷ್ಟ್ಯ. ಪವಿತ್ರ ತೀರ್ಥಸ್ನಾನಕ್ಕೆ ವಿಶೇಷ ಮಹತ್ವ. ಗಾಳಿಪಟ ಹಾರಿಸುವ ಸಂಪ್ರದಾಯ ವ್ಯಕ್ತಿಯ ಕೌಶಲ ಎತ್ತಿತೋರುವದರೊಂದಿಗೆ ಸ್ಪರ್ಧಾಮನೋಭಾವ ಮತ್ತು ಸೌಹಾರ್ದತೆಯನ್ನು ಬೆಳೆಸುವ ಸಂಕೇತ. ಹೊಸದಾಗಿ ಮನೆಗೆ ಬಂದ ಫಸಲಿನಿಂದ ಆರೋಗ್ಯಕರ ಖಾದ್ಯತಯಾರಿಸಿ ಭಗವಂತನಿಗೆ ಸಮರ್ಪಿಸಿ ನಾವು ಸೇವಿಸುವದು ಪ್ರಕೃತಿಗೆ ನಾವು ಸಲ್ಲಿಸುವ ಕೃತಜ್ಞತೆ. ಈಸಾರೆ ಪ್ರಯಾಗಾಜದಲ್ಲಿ ನಡೆಯುವ ಕುಂಭಮೇಳವೊಂದು ಸಂಕ್ರಾಂತಿಯ ವಿಶೇಷತೆ.

ಭೂಮಿ ಸೂರ್ಯನ ಸುತ್ತ ಬರುವ ಸಮಯ ಸಂವತ್ಸರ. ಇದನ್ನು ಎರಡು ಅಯನಗಳಾಗಿ ವಿಂಗಡಿಸಲಾಗಿದೆ. ಉತ್ತರಾಯಣ ಮತ್ತು ದಕ್ಷಿಣಾಯಣ. ಡಿಸೆಂಬರ್ 22ರಿಂದ ಜೂನ್ 21ರವರೆಗೆ ಉತ್ತರಾಭಿಮುಖ ಚಲನೆ ಇದು ಉತ್ತರಾಯಣ, ಜೂನ್ 21ರಿಂದ ಡಿಸೆಂಬರ್ 22ರವರೆಗೆ ದಕ್ಷಿಣಾಭಿಮುಖ ಚಲನೆ ಇದು ದಕ್ಷಿಣಾಯಣ. ಅಂತೆಯೇ 12 ರಾಶಿ, 12 ಮಾಸ ಡಿಸೆಂಬರ್ 22 ಮತ್ತು ಜೂನ್ 21 ಚಲನ ದಿಕ್ಕು ಪಲ್ಲಟವಾಗುವ ದಿನಗಳು. ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಸೂರ್ಯನ ಕ್ರಮಣವೇ ಸಂಕ್ರಾಂತಿ. 30 ಡಿಗ್ರಿಗೆ ರಾಶಿಯಂತೆ ಪ್ರತಿ ತಿಂಗಳೂ ಸೂರ್ಯನ ಒಂದು ಸಂಕ್ರಾಂತಿ. ವರ್ಷದಲ್ಲಿ ಹಗಲುರಾತ್ರಿಗಳು ಸಮನಾಗಿರುವ ದಿನಗಳು ಎರಡೇ. ಇವು ವಿಷುವತ್ಸಂಕ್ರಾಂತಿ ದಿನಗಳು. ಸೂರ್ಯೋದಯ, ಸೂರ್ಯಾಸ್ತ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಎಂಬುದಾದರೂ ದಿನವೂ ಉದಯ ಪೂರ್ವದ ಬಲಕ್ಕೆ ಅಂದರೆ ಉತ್ತರಕ್ಕೆ ಅಥವಾ ಎಡಕ್ಕೆ ಅಂದರೆ ದಕ್ಷಿಣಕ್ಕೆ ಆಗುತ್ತದೆ. ಚಳಿಗಾಲ(ಇರುಳಿನ ಪ್ರಮಾಣ)ಹೆಚ್ಚಾದಂತೆ ಸೂರ್ಯನ ಉದಯ ಪೂರ್ವದ ಎಡಕ್ಕೆ ಅಂದರೆ ದಕ್ಷಿಣಕ್ಕೆ ಗೋಚರಿಸುವದು ಕೊನೆಗೊಂದು ದಿನ ದಕ್ಷಿಣದ ತುತ್ತತುದಿಯನ್ನ ತಲುಪಿ ಅಚಲವೆಂಬಂತೆ ಕಂಡು ಮರುದಿನದಿಂದ ಮರಳಿ ಉದಯ ವಿರುದ್ಧ ದಿಕ್ಕಿನಲ್ಲಾಗುತ್ತಾ ಚಲಿಸುತ್ತದೆ. ಅಂದರೆ ಸೂರ್ಯ ಇನ್ನು ದಕ್ಷಿಣ ದಿಕ್ಕಿನಲ್ಲಿ ತನ್ನ ಚಲನೆಯನ್ನು ನಿಲ್ಲಿಸಿ ಉತ್ತರಕ್ಕೆ ಚಲಿಸಲು ಪ್ರಾರಂಭಿಸುತ್ತಾನೆ. ಈ ದಿನ ಉತ್ತರಾಯಣದ ದಿನ. ಈ ಚಲನೆಗೆ ಭೂಮಿಯ ಅಕ್ಷರೇಖೆ 22 1/2ಡಿಗ್ರಿ ವಾಲಿರುವದೇ ಕಾರಣ.

ವಿಧ ವಿಧದ ಸಂಕ್ರಾಂತಿ

ಭಾರತದಾದ್ಯಂತ ಈ ಹಬ್ಬವನ್ನು ವಿಧ ವಿಧ ರೀತಿಯಲ್ಲಿ ಆಚರಿಸಲಾಗುತ್ತದೆ. ದಕ್ಷಿಣ ಭಾರತೀಯರಿಗೆ ವಿಶೇಷ ಹಬ್ಬ. ಸುಗ್ಗಿಯ ಕಾಲ. ಸಮೃದ್ಧಿಯ ಸಂಕೇತ. ದೇವರಿಗೆ ಎಳ್ಳು ಬೆಲ್ಲದ ನಿವೇದನೆ. ದಕ್ಷಿಣ ಕರ್ನಾಟಕದಲ್ಲಿ ಎಳ್ಳು ಬೆಲ್ಲ ಬೀರುವ ಭರಾಟೆ. ಜೊತೆಗೆ ವಿವಿಧಾಕೃತಿಯ ಬಣ್ಣ ಬಣ್ಣದ ಸಕ್ಕರೆ ಅಚ್ಚು, ಹಣ್ಣು, ನೆಲಗಡಲೆ, ಎಲಚಿಹಣ್ಣು ಕಬ್ಬಿನ ತುಂಡುಗಳ ಜೋಡಣೆ .ಉತ್ತರ ಕರ್ನಾಟಕದವರು ಎಳ್ಳು ಬೆಲ್ಲ ತಿಂದು ಒಳ್ಳೊಳ್ಳೆ ಮಾತಾಡೋಣವನ್ನುತ್ತಾ ಎಳ್ಳು ಬೆಲ್ಲವನ್ನು ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳುವರು. ಹೊಸದಾಗಿ ಮದುವೆಯಾದ ಹೆಂಗಳೆಯರಿಗೆ ಇದರೊಂದಿಗೆ ಹಣ್ಣು ಬೀರುವ ವಿಶೇಷ ಸಂಭ್ರಮ. ಈಹಬ್ಬದವಧಿಯಲ್ಲಿ ಉತ್ತರ ಕರ್ನಾಟಕದ ಜನತೆಗೆ ಗಾಳಿಪಟ ಹಾರಿಸುವ ಸಡಗರ. ಅಲ್ಲದೇ ಕೃಷಿಕನಿಗೆ ಆಧಾರವಾದ ದನಕರುಗಳನ್ನು ಸಿಂಗರಿಸಿ ಮೆರವಣಿಗೆ ಮಾಡುವದು, ಕಿಚ್ಚು ಹಾಯಿಸುವದು ಗ್ರಾಮೀಣರ ಸಂಪ್ರದಾಯ. ಅವುಗಳಿಗೆ ದೃಷ್ಟಿ ತಾಕದಿರಲೆಂಬ ಹಾರೈಕೆ.

ಭಾಸ್ಕರ ಕಾಲ ಸ್ವರೂಪಿ

ಸೂರ್ಯ ಆತ್ಮ ಜಗತ್ ಸ್ಥುಪಶ್ಚ ಎಂದು ವರ್ಣಿಸಿದೆ ಋಗ್ವೇದ. ಹಗಲುರಾತ್ರಿಗಳೆಂಬ ತನ್ನ ಗತಪ್ರಭಾವದಿಂದ ಕಾಲವನ್ನು ನಿಯಂತ್ರಣಮಾಡುವದರಿಂದ ಭಾಸ್ಕರ ಕಾಲಸ್ವರೂಪಿ. ಸುವತಿ ಕರ್ಮಣಿ ಲೋಕಂ ಪ್ರೇರಯತಿ ಇತಿ ಸೂರ್ಯಃ, ಆತನೇ ಲೋಕದ ಕರ್ಮಗಳಿಗೆ ಪ್ರೇರಕ. ರೂಯತೇ ಇತಿ ರವಿಃ ಅಂದರೆ ಆತ ಲೋಕರಕ್ಷಕ. 'ಸವಿತಾ ಸರ್ವಸ್ಯ ಪಸವಿತಾ' ಸಮಸ್ತ ಜಗತ್ತಿಗೆ ಉತ್ಪತ್ತಿ ಸ್ಥಾನನು. ಜ್ಯೋತಿಷ್ಯದಲ್ಲಂತೂ ಸೂರ್ಯ ಸಾರ್ವಭೌಮ. ಆರೋಗ್ಯ ಭಾಸ್ಕರಾತ್ ಇಚ್ಛೇತ್ ಆರೋಗ್ಯ ಭಾಗ್ಯಕ್ಕಾಗಿ ಸೂರ್ಯನಾರಾಯಣನ ಉಪಾಸನೆ , ಆರಾಧನೆ.

ಉತ್ತರಾಯಣ ಹಿಗ್ಗುವದರ ಸಂಕೇತ. ಕೃಷಿಕನಿಗೆ ತನ್ನ ದುಡಿಮೆಯ ಫಲದ ಭಾಗ್ಯವನ್ನು ಮನೆತುಂಬಿಸಿಕೊಳ್ಳುವ ಹರುಷದ ಪರ್ವಕಾಲ. ಮಕರರಾಶಿಗೆ ಶನಿ ಒಡೆಯ ಅಂದು ಸೂರ್ಯ ತನ್ನ ಸುತನನ್ನು ಸಂಧಿಸುವ ದಿನ. ಪುರಾಣದ ಪ್ರಕಾರ ಪಿತೃಗಳ ಮುಕ್ತಿಗಾಗಿ ಭಗೀರಥ ಮಹಾರಾಜ ತಪಸ್ಸು ಮಾಡಿ ಗಂಗೆಯನ್ನು ಭುವಿಗೆ ಕರೆತಂದ ದಿನ ಈ ಸಂಕ್ರಮಣ ಕಾರಣ ಇದೊಂದು ಪುಣ್ಯಪರ್ವದಿನ.

ಕರ್ನಾಟಕದ ಹೊರತಾಗಿ ಇನ್ನಿತರ ರಾಜ್ಯಗಳಲ್ಲಿಯೂ ಬೇರೆ ಬೇರೆ ಹೆಸರಿನಿಂದ ಸಂಕ್ರಾಂತಿ ಹಬ್ಬದಾಚರಣೆಯುಂಟು. ತಮಿಳುನಾಡಿನಲ್ಲಿ ಪೊಂಗಲ್, ಮಕರವಿಳಕ್ಕು ಎಂಬುದು ಕೇರಳದ ಶಬರಿಮಲೈನಲ್ಲಿ ಮಕರ ಸಂಕ್ರಾಂತಿಯಂದು ಮಕರಜ್ಯೋತಿ ವೀಕ್ಷಿಸಲು ಸಹಸ್ರಾರು ಭಕ್ತಾದಿಗಳು ಸೇರುವರು. ಪಂಜಾಬ್, ಹರ್ಯಾಣಾಗಳಲ್ಲಿ ಲೋಹರಿ ಎಂತಲೂ, ಮಹಾರಾಷ್ಟ್ರದಲ್ಲಿ ಎಳ್ಳಿನ ಚಿಕ್ಕಿ ಇಲ್ಲವೆ ಉಂಡೆ ಮಾಡುತ್ತಾರೆ ತಿಳ್ ಗುಳ್ ಘ್ಯಾ ಆಣಿ ಗೋಡ್ ಗೋಡ್ ಬೋಲಾ ಎಂದು ಹೇಳುತ್ತಾ ಪರಸ್ಪರ ಎಳ್ಳು ಬೆಲ್ಲದ ವಿನಿಮಯ ಮಾಡಿಕೊಳ್ಳುವರು.

ಎಳ್ಳು ಬೆಲ್ಲ ಗಳ ಮೌಲ್ಯಯುತ ಗುಣಗಳು

ಸೂರ್ಯ ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಅಡಿಯಿಡುವ ಸಂದರ್ಭ, ಧನುರ್ ರಾಶಿಯಿಂದ ಮಕರರಾಶಿಗೆ ಪ್ರವೇಶಿಸುವ ಸಂಧಿಕಾಲ ಮೈಕೊರೆಯುವ ಚಳಿಗೆ ದೇಹದ ಉಷ್ಣತೆ ಹೊರಬಾರದೇ ಒಡಲಿನಲ್ಲಿ ಶೇಖರವಾಗುವದರಿಂದ ಜಠರಾಗ್ನಿ ಪ್ರಬಲವಾಗಿ ಹಸಿವು ಹೆಚ್ಚಾಗುವುದು. ಆದ ಕಾರಣ ಸ್ನಿಗ್ಧ, ಪುಷ್ಟಿದಾಯಕ, ಸತ್ವಭರಿತ ಅಂದರೆ ಎಳ್ಳು, ಶೇಂಗಾ,ಹಾಲು,ಗೋಧಿ, ಹೆಸರು, ಉದ್ದು,ಕಬ್ಬಿನರಸಗಳಂತಹ ಪದಾರ್ಥಗಳಿಂದ ತಯಾರಿಸಿದ ಖಾದ್ಯಗಳು ಹಾಗೂ ಸಿಹಿ ತಿಂಡಿಗಳು ಈ ಸಮಯಕ್ಕೆ ಸೂಕ್ತ. ಎಳ್ಳು ಹೋಳಿಗೆ, ಶೇಂಗಾ ಹೋಳಿಗೆ ಈಹಬ್ಬದವಿಶೇಷ ಭಕ್ಷ್ಯಗಳು.

ಭಾರತೀಯ ವೈದ್ಯ ಶಾಸ್ತ್ರದಲ್ಲಿ (ಆಯುರ್ವೇದ) ಆಚಾರ್ಯ ಚರಕರು ಎಣ್ಣೆಗಳಲ್ಲಿ ಎಳ್ಳೆಣ್ಣೆ ಅತಿ ಶ್ರೇಷ್ಠವೆಂದು ಧೃಡಪಡಿಸಿದ ಉಲ್ಲೇಖವಿದೆ. ಎಣ್ಣೆ ಎಂದರೆ ಎಳ್ಳಿನಿಂದ ತೆಗೆದ ಜಿಡ್ಡು(ಎಳ್ ನೆಯ್). ವೇದಕಾಲದಿಂದಲೂ ಧಾರ್ಮಿಕ ವಿಧಿ ವಿಧಾನಗಳಲ್ಲಿ ಎಳ್ಳಿಗೆ ಹೋಮಧಾನ್ಯವೆಂದೇ ಮಹತ್ವ ವಿತ್ತಿದ್ದಾರೆ.

ಔಷಧೀಯ ಆಗರವಾದ ಎಳ್ಳು ಈ ಸಮಯಕ್ಕೆ ಅತಿ ಸೂಕ್ತ. ಬೆಲ್ಲದಲ್ಲಿ ಕಬ್ಬಿಣಾಂಶ ಹೇರಳವಾಗಿದ್ದು ಹಿಮೋಗ್ಲೋಬಿನ್ ಹೆಚ್ಚಳಕ್ಕೆ ಸಹಕಾರಿ. ಸಿಹಿ ಸಂತೋಷದ ಪ್ರತೀಕ. ಇವೆರಡನ್ನು ಸಮನ್ವಯಗೊಳಿಸಿ ವಿನಿಮಯಿಸಿಕೊಳ್ಳುವದು ಪ್ರೀತಿ –ವಿಶ್ವಾಸ ಬೆಸೆಯುವ ದ್ಯೋತಕ. ಅಂದು ಮನೆಯ ಚಿಕ್ಕ ಮಕ್ಕಳಿಗೆ ಕುಸುರೆಳ್ಳಿನ ಆಭರಣಗಳನ್ನು ತೊಡಿಸಿ ಕಳ್ಳೇಪುರಿ, ಗಜ್ಜರಿ ತುಂಡುಗಳು, ಹಸಿರು ಕಡಲೆಕಾಯಿ ಕಬ್ಬಿನ ತುಂಡುಗಳ ಮಿಶ್ರಣದಿಂದ ಕರಿ ಎರೆದು ಆರತಿ ಎತ್ತಿ ದೃಷ್ಟಿ ತೆಗೆಯುವ ಸಂಪ್ರದಾಯವಿದೆ.

ಪೆಡಿಲ್ಲಿಯೇಸಿ ಸಸ್ಯ ಕುಟುಂಬಕ್ಕೆ ಸೇರಿದ ಎಳ್ಳಿನ ಸಸ್ಯ ಶಾಸ್ತ್ರೀಯ ಹೆಸರುಸಿಸಾನಮ್ ಇಂಡಿಕಮ್‌ಸಮತಲ ಪ್ರದೇಶದ ಬೆಳೆ ಬಿಳಿ ಅಥವಾ ಗುಲಾಬಿ ಹೂಗಳಿಂದ ಪುಟ್ಟ ಪುಟ್ಟ ಎಳ್ಳಿನ ಗಿಡಗಳಿಗೆ ವಿಶೇಷ ಆಕರ್ಷಣೆ. ಇದರಲ್ಲಿ ಕಪ್ಪು ಕಂದು ಬಿಳಿ ಬೀಜಗಳನ್ನು ಹೊಂದಿದ ಮೂರು ವಿಧಗಳಿವೆ. ಉತ್ತಮ ಗುಣಮಟ್ಟದ ಎಣ್ಣೆಗೆ ಹಾಗೂ ಔಷಧಿಗಳಲ್ಲಿ ಕಪ್ಪು ಎಳ್ಳನ್ನು ಉಪಯೋಗಿಸುತ್ತಾರೆ. ಬಿಳಿ ಎಳ್ಳಿ ಕ್ಯಾಲ್ಸಿಯಂ ಮತ್ತು ಕಂದು ಬೀಜಗಳು ಕಬ್ಬಿಣಾಂಶ ಭರಿತವಾಗಿವೆ.

ಸ್ತ್ರೀಯರ ಅನಿಯಮಿತ ಮಾಸಿಕ ತೊಂದರೆಗೆ ಎಳ್ಳು ರಾಮಬಾಣ. ಎಳ್ಳನ್ನು ಬೆಲ್ಲದೊಡನೆ ಸೇರಿಸಿ ಪುಡಿಮಾಡಿ ನೆಲ್ಲಿಕಾಯಿ ಗಾತ್ರದ ಉಂಡೆಗಳನ್ನು ಮಾಡಿಟ್ಟುಕೊಂಡು ಮಾಸಿಕ ಅವಧಿಗೆ 4–5ದಿನ ಮುಂಚಿತವಾಗಿ ದಿನಕ್ಕೆರಡರಂತೆ ಸೇವಿಸುತ್ತಾ ಕ್ರಮಬದ್ಧವಾಗಿ ನಾಲ್ಕೈದು ಅನುಸರಿಸಿದಲ್ಲಿ ನಿಯಮಿತವಾಗುವದು. ಬಿಸಿ ನೀರಿನಲ್ಲಿ ಒಂದೆರಡು ಗಂಟೆ ನೆನೆಸಿಟ್ಟ ಎಳ್ಳನ್ನು ಒಂದು ಬಟ್ಟಲು ಹಾಲಿನೊಂದಿಗೆ ರುಬ್ಬಿ ಬೆಲ್ಲ ಸೇರಿಸಿ ಸೇವಿಸುವುದು ರಕ್ತಹೀನತೆಗೆ ಉತ್ತಮ ಮದ್ದು.ಎಲೆಗಳ ರಸವನ್ನು ಶಾಂಪೂವಿನಂತೆ ಬಳಸಿದಲ್ಲಿ ಹೊಟ್ಟು ನಿವಾರಣೆಯಾಗುವದಲ್ಲದೇಕೂದಲು ಬಿಳಿಯಾಗುವದನ್ನು ತಡೆಯಬಹುದು. ಎಳ್ಳೆಣ್ಣೆ ಹುಣ್ಣು ಹಾಗೂ ಸುಟ್ಟ ಗಾಯ ಗಳಿಗೆ ಪರಿಣಾಮಕಾರಿ ಔಷಧಿ. ಅಡುಗೆಯಲ್ಲಿ, ಉಪ್ಪಿನ ಕಾಯಿ ಚಟ್ನಿಗಳು ಸೂಪ್ ಪೋರಿಜ್, ಬ್ರೆಡ್‌ಗಳ ತಯಾರಿಕೆ ಯಲ್ಲಿ ರುಚಿ ಹಾಗೂ ಸ್ವಾದ ಹೆಚ್ಚಿಸಲು ಎಳ್ಳನ್ನು ವಿಶೇಷವಾಗಿ ಬಳಸುವರು. ಸಾಸಿವೆಯಷ್ಟು ಪುಟ್ಟದಾಗಿರುವ ಎಳ್ಳಿನಲ್ಲಿ ಬ್ರಹ್ಮಾಂಡದಷ್ಟು ಔಷಧೀಯ ಭಂಡಾರವೇ ಅಡಗಿದೆ. ಇಂತಿರುವ ಎಳ್ಳನ್ನು ಸಂಪ್ರದಾಯದ ಚೌಕಟ್ಟಿನಲ್ಲಿ ಸೂಕ್ತ ಸಮಯದಲ್ಲಿ ಬಳಸುವ ಪದ್ಧತಿ ಉಪಯುಕ್ತವಲ್ಲವೇ! ಸಂಕ್ರಾಂತಿಯ ಈ ಸಂದರ್ಭದಲ್ಲಿ ಎಳ್ಳು ಬೆಲ್ಲ ಸೇವಿಸಿ ಉತ್ತಮ ಆರೋಗ್ಯ ಪಡೆಯೋಣ, ಒಳ್ಳೆಯ ಮಾತೂ ಆಡೋಣ.

ದೃಢಬುದ್ಧಿ

ನಮ್ಮ ಜೀವನದ ಸಾಮಾನ್ಯ ಸಂದರ್ಭಗಳಲ್ಲಿ ಸುದ್ದಿ, ತತ್ವಶಾಸ್ತ್ರ ಇತರರ ಅನುಭವ ನಂಬಿಕೆ ಹೀಗೆ ಯಾವುದೇ ವಿಷಯದ ಬಗ್ಗೆ ಭಿನ್ನಾಭಿಪ್ರಾಯಗಳನ್ನು ನಾವು ಕೇಳಿದಾಗ ನಮಗೆ ಗೊಂದಲ ಉಂಟಾಗುತ್ತದೆ. ಹೀಗೆ ಭಿನ್ನ ಅಭಿಪ್ರಾಯಗಳನ್ನು ಕೇಳಿದಾಗಲೂ ಕೂಡ ನಮ್ಮ ಬುದ್ಧಿ ದೃಢವಾಗಿದ್ದು ಸಮಾಧಿಸ್ಥಿತಿ ಸ್ಥಿರವಾಗಿದ್ದರೆ ನಾವು ಯೋಗವನ್ನು ತಲುಪುತ್ತೇವೆ ಎಂದು ಕೃಷ್ಣ ಹೇಳುತ್ತಾನೆ (2.53). ಇದಕ್ಕೆ ಅತ್ಯುತ್ತಮ ರೂಪಕವೆಂದರೆ ಗೋಚರವಾಗುವ ಮೇಲಿನ ಭಾಗ ಹೊಂದಿದ್ದು ಅಗೋಚರವಾದ ಕೆಳಗಿನ ಭಾಗ ಹಾಗೂ ಬೇರುಗಳಿರುವ ಒಂದು ಮರ ಗಾಳಿಯ ಬಲವನ್ನು ಅವಲಂಬಿಸಿ ಮರದ ಮೇಲ್ಭಾಗವು ಬೇರೆ ಬೇರೆ ರೀತಿಯಲ್ಲಿ ಅಲ್ಲಾಡುತ್ತಿರುತ್ತದೆ. ಆದರೆ ಬೇರುಗಳುಳ್ಳ ಭಾಗವು ಯಾವುದರಿಂದಲೂ ಅಲ್ಲಾಡುವುದಿಲ್ಲ. ಮರದ ಮೇಲಿನ ಭಾಗವು ಬಾಹ್ಯ ಬಲಗಳಿಂದಾಗಿ ಅಲ್ಲಾಡುತ್ತಿರುತ್ತದೆ. ಆದರೆ ಒಳಗಿನ ಭಾಗವು ಸಮಾಧಿಯಲ್ಲಿ ನಿಶ್ಚಲವಾಗಿರುತ್ತದೆ. ಹಾಗೂ ಮರಕ್ಕೆ ಸ್ಥಿರತೆಯನ್ನು ಪೋಷಕಾಂಶಗಳನ್ನು ನೀಡುತ್ತಾ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತದೆ. ಬಾಹ್ಯ ಭಾಗವು ಅಲ್ಲಾಡುತ್ತ ಒಳಗಿನ ಭಾಗವು ನಿಶ್ಚಲವಾಗಿರುವ ಸ್ಥಿತಿಯೇ ಯೋಗವಾಗಿರುತ್ತದೆ. ಜ್ಞಾನದ ಹಂತದಲ್ಲಿ ನಮ್ಮ ಅಲ್ಲಾಡುವ ಬುದ್ಧಿ ಸಹಜ ವಾಗಿ ಬಾಹ್ಯ ಪ್ರಚೋದನೆಗಳಿಂದಾಗಿರುತ್ತದೆ. (ಕಂಪನ) ಈ ಕಂಪನಗಳು ಹೊರಗಿನ ಜಗತ್ತಿಗೆ ಹೊರಹೊಮ್ಮಿದ ಸ್ವಭಾವ ಹಾಗೂ ತಕ್ಷಣದ ಪ್ರಕ್ರಿಯೆಗಳಾಗಿ ಕಾಣುತ್ತವೆ. ಇದು ವ್ಯಕ್ತಿಯ ಜೀವನವನ್ನು ದುಃಖಮಯವಾಗಿ ಮಾಡುತ್ತವೆ ಹಾಗೂ ಕುಟುಂಬದ ಸದಸ್ಯರನ್ನು ಮತ್ತು ಕಾರ್ಯ ಕ್ಷೇತ್ರದಲ್ಲಿದ್ದವರನ್ನು ತೊಂದರೆಗೆ ತಳ್ಳುತ್ತದೆ. ಕೆಲವು ಜನರು ಕಾಲಕ್ರಮೇಣ ಮುಂದಿನ ಹಂತಕ್ಕೆ ಹೋಗುತ್ತಾರೆ. ಯಾಕೆಂದರೆ ಅವರು ಜೀವ ನದ ಅನುಭವಗಳನ್ನು ಎದುರಿಸುತ್ತಾರೆ ಮತ್ತು ತಮ್ಮ ಮುಖವಾಡದ ಮುಖವನ್ನು ಪ್ರಸ್ತುತಪಡಿಸಲು ಹೊಯ್ದಾಟವನ್ನು ಹತ್ತಿಕ್ಕುತ್ತಾರೆ. ಇಂಥ ಪ್ರಸಂಗಗಳಲ್ಲಿ ಈ ಹೊಯ್ದಾ ಟಗಳು ಒಳಗೇ ಇರುತ್ತವೆ. ಆದರೆ ವ್ಯಕ್ತಿ ತನ್ನ ವೀರ ಹಾಗೂ ಸುಖಮಯ ಮುಖವನ್ನು ತೋರಿಸುತ್ತಾನೆ. ಆದರೆ ಇದು ಬಹುಕಾಲ ಉಳಿಯುವುದಿಲ್ಲ. ಈ ಶ್ಲೋಕದಲ್ಲಿ ಕೃಷ್ಣ ಸಮಾಧಿಯಲ್ಲಿ ನಿಶ್ಚಲತೆಯ ಅಂತಿಮ ಸ್ಥಿತಿಯ ಬಗ್ಗೆ ಮಾತನಾಡು ತ್ತಾನೆ. ಇಲ್ಲಿ ಹೊಯ್ದಾಟಗಳೇ ಇರುವುದಿಲ್ಲ ಅಂದರೆ ಈ ಬಾಹ್ಯ ಹೊಯ್ದಾಟಗಳು ಅನಿತ್ಯ, (ತಾತ್ಕಾಲಿಕ) ಮತ್ತು ಸಮಾಧಿಯಲ್ಲಿ ನಿಶ್ಚಲವಾಗಿರುವ ನಮ್ಮ ಅಂತರಾತ್ಮದೊಂದಿಗೆ ನಾವು ನಮ್ಮನ್ನು ಗುರುತಿಸಿಕೊಳ್ಳಬೇಕು.

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಸಂಡಿಗೆ ಮೆಣಸು

ಕಾಲ ಯಾವುದೇ ಇರಲಿ, ಊಟಕ್ಕೆ ಅನ್ನದೊಂದಿಗೆ ಸಾರು, ಹುಳಿ, ತೊವ್ವೆ, ತಂಬುಳಿ ಯಾವುದೇ ವ್ಯಂಜನವಿರಲಿ ತಟ್ಟೆಯ ತುದಿಯಲ್ಲಿ ನಾಲ್ಕು ಸಂಡಿಗೆ ಮೆಣಸಿದ್ದರೆ ವ್ಹಾವ್! ನಿಜಕ್ಕೂ ಅದು ವಿವಾಹ ಭೋಜನ. ಈ ಸಂಡಿಗೆ ಮೆಣಸಿನ ತಯಾರಿಕೆ ಅತಿ ಸುಲಭ. ಮಾರ್ಕೆಟಿನಲ್ಲಿ ದೊಡ್ಡ, ಉದ್ದ, ದಪ್ಪಗಿರುವ ಹಸಿ ಮೆಣಸಿನಕಾಯಿಗಳನ್ನು ಆರಿಸಿ ತಂದು ಅವುಗಳನ್ನು ಉದ್ದುದ್ದವಾಗಿ ಸೀಳಿ ಅದರೊಳಗೆ ಉಪ್ಪು, ಮೆಂತ್ಯಪುಡಿಯ ಮಿಶ್ರಣವನ್ನು ತುಂಬಬೇಕು. ಒಂದು ರಾತ್ರಿ ಇಟ್ಟು ಮರುದಿನ ಬೆಳಿಗ್ಗೆ ಎಳೆಯ ಬಿಸಿಲಲ್ಲಿ ಒಣಗಿಸಬೇಕು. ಎರಡು ದಿನ ಬಿಸಿಲಿನ ವೇಳೆ ಹೊರಗಿಟ್ಟು ನಂತರ ಡಬ್ಬಿಯಲ್ಲಿ ಸಂಗ್ರಹಿಸಿಡಬೇಕು. ಬೇಕಾದಾಗ ಎಣ್ಣೆಯಲ್ಲಿ ಕರಿದು ಊಟದೊಂದಿಗೆ ಚಪ್ಪರಿಸಬೇಕು.

ಗೋಧಿ ಚಕ್ಕುಲಿ: ಅಬ್ಬಾ! ವರ್ಷಕ್ಕಿಂತ ಈ ಬಾರಿ ಭಾರೀ ಛಳಿ! ಗಡಗಡ ನಡುಗುವಾಗ ಬಾಯಿಗೆ ಕೆಲಸ ಕೊಡಲು ಏನಾದರೂ ಕುರುಕಲು ತಿಂಡಿ ಬೇಕೆನಿಸುವುದು ಸಹಜ. ಗೋಧಿ ಚಕ್ಕುಲಿ ಮಾಡಿದರೆ ಹೇಗೆ?

ಬೇಕಾದ ಸಾಮಗ್ರಿಗಳು: ಗೋಧಿಹಿಟ್ಟು 1 ಲೋಟ, ಹುರಿಗಡಲೆ 50 ಗ್ರಾಂ, ಶೇಂಗಾಬೀಜ 50 ಗ್ರಾಂ, ಹಸಿಮೆಣಸು 4–6 , ಕರಿಬೇವು 10 ಎಸಳು, ಕಾರಪುಡಿ 1/2 ಚಮಚ, ಕೊತ್ತಂಬರಿ ಸೊಪ್ಪು– ಉಪ್ಪು– ಎಣ್ಣೆ, ಅವಶ್ಯವಿದ್ದಷ್ಟು.

ಮಾಡುವ ವಿಧಾನ: ಗೋಧಿಹಿಟ್ಟಿಗೆ ಉಪ್ಪು, ಕರಿಬೇವು, ಹೆಚ್ಚಿದ ಹಸಿಮೆಣಸು, ಕೊತ್ತಂಬರಿ ಸೊಪ್ಪು, ಕಾರಪುಡಿ, ಬೆರೆಸಿ.ಅದಕ್ಕೆ ಹುರಿದ ಶೇಂಗಾಬೀಜ, ಹುರಿಕಡಲೆ ಸೇರಿಸಿ.ನಂತರ ಚಪಾತಿ ಹಿಟ್ಟಿನಂತೆ ಚೆನ್ನಾಗಿ ನಾದಿರಿ. ಕೊಂಚ ಬೆಣ್ಣೆ ಸೇರಿಸಿದರೆ ಒಳ್ಳೆಯದು. ಈಗ ಒಲೆಯ ಮೇಲೆ ಎಣ್ಣೆ ಬಿಸಿಯಾಗಿಸಿ ಮಂದ ಉರಿಯಲ್ಲಿ ಕೆಂಪಾಗುವವರೆಗೆ ಕರಿಯಿರಿ.ಕೆಳಗಿಳಿಸಿ ಎಣ್ಣೆ ಪೂರ್ಣ ಬಸಿದ ನಂತರ ಸವಿಯಿರಿ.

–ಕೆ.ಲೀಲಾ ಶ್ರೀನಿವಾಸ್

ಪ | ದ | ಬಂ | ಧ



ಎಡದಿಂದ ಬಲಕ್ಕೆ

1. ಒಬ್ಬ ವ್ಯಕ್ತಿ ಅಥವಾ ಸಂಘದ ಪರವಾಗಿ ನೇಮಕವಾದವನು (4)
4. ಲಾಂಗೂಲದೊಂದಿಗೆ ಬಂದಿರುವ ಹುಡುಗ (3)
6. ಇದೊಂದು ಸರಿಯಾದ ನಮೂನೆ (3)
7. ಹಣವನ್ನು ಕೂಡಿಡುವ ಡಬ್ಬಿ (3)
8. ಏಳು ಅಧೋಲೋಕಗಳಲ್ಲಿ ಇದೊಂದು (3)
12. ಸಂಕೋಚ ಅಥವಾ ದಾಕ್ಷಿಣ್ಯ (4)
14. ಸೂರ್ಯನಿಗೆ ಮತ್ತೊಂದು ಹೆಸರು (4)
16. ಜಿಗಿತಕ್ಕೆ ಇನ್ನೊಂದು ಹೆಸರು (3)
19. ಮಗನಿಗೂ ಬಂದಿರುವ ಸಂಶಯ (3)
20. ದೇವಕುಸುಮ ಎಂದು ಕರೆಯಲ್ಪಡುವ ಸಂಬಾರ ಪದಾರ್ಥ (3)
21. ಒಳ್ಳೆಯ ನಗುವಿರುವವನು (3)
22. ಪರಿಣಯದ ದಿನ ಮುಖ್ಯವಾದ ಗಂಡು (4)

ಎಡದಿಂದ ಬಲಕ್ಕೆ

2. ತಿರುಗಾಡುತ್ತ ಬಂದಿರುವ ಭಿಕ್ಷುಕ (3)
3. ಸೊಕ್ಕಿಗೆ ಮತ್ತೊಂದು ಹೆಸರು (3)
4. ವಾದ್ಯವನ್ನು ನುಡಿಸು (3)
5. ಕೆಸರಿನಲ್ಲಿ ಅರಳುವ ಹೂವು (3)
7. ವಸ್ತುಗಳನ್ನು ಸಂಗ್ರಹಿಸಿಡುವ ಉಗ್ರಾಣ (3)
9. ಒಂದು ಬಗೆಯ ಲೋಹದಲ್ಲಿ ಮದುವೆಯ ಗಂಡೂ ಇದ್ದಾನೆ (3)
10. ಮರದ ತುಂಡು (3)
13. ಗುರಿ ಮುಟ್ಟದ ಜೂಜು (3)
15. ಸದ್ದಿನೊಂದಿಗೆ ಬಂದಿರುವ ಆನೆ (3)
16. ಲಪಟಾಯಿಸು (3)
17. ಮಾಡುವ ಕಾರ್ಯ (3)
18. ನಾಜಿಗಳು ಸೇರುವ ಸ್ಥಳ (3)
19. ದಾಸನಿಗೆ ಮತ್ತೊಂದು ಹೆಸರು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ತಪನ 5. ಮಾರಕ 7. ಅತ್ತಿಗೆ 9. ಪರೋಪ ಕಾರ 10. ಚರಟ 12. ಸಮಯ 14. ಚಾಕರಿ 17. ಅಮಲು 19. ಕಾಮಕಸ್ತೂರಿ 20. ರಲೆಪು 22. ಕೆಲಸ 24. ತಕ್ಷಣ

ಎಡದಿಂದ ಬಲಕ್ಕೆ: 1. ಚಾರ 3. ಪಶುಪತಿ 4. ಹತ್ತಿ 5. ಮಾರೀಚ 6. ಕಪಟ 7. ಅರಸ 8. ಗೆಳೆಯ 11. ರಜಕ 13. ಮಧ್ಯಮ 14. ಚಾಮರ 15. ರಿಕಾಪು 16. ಪಂಕಜಾಕ್ಷ 17. ಅರಿಕೆ 18. ಸವಾಲು 21. ಲೆಅ 23. ಲವ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕಣ್ಮನ ಸೆಳೆಯುವ ಕೃಷ್ಣನ ನಾಟಕ

ಪಿ.ಎಸ್.ಗುರುನಾಥ್

ನಿರಂತರ ಸ್ಕೂಲ್ ಆಫ್ ಡ್ಯಾನ್ಸ್ 2012ರಲ್ಲಿ ಪ್ರಾರಂಭವಾಗಿ ಬಹಳಷ್ಟು ಕಲಾವಿದರಿಗೆ ಭರತನಾಟ್ಯ ಹಾಗೂ ಕಥಕ್ ನೃತ್ಯ ಶಿಕ್ಷಣವನ್ನ ನೀಡುತ್ತಾ ಬರುತ್ತಿರುವಂತಹ ಬೆಂಗಳೂರಿನ ನೃತ್ಯ ಸಂಸ್ಥೆಗಳಲ್ಲಿ ಒಂದು. ಜನವರಿ 5 ರಂದು ಚೌಡಯ್ಯ ಮೆಮೋರಿ ಯಲ್ ಸಭಾಂಗಣದಲ್ಲಿ ಅದ್ದೂರಿಯಾಗಿ ನೃತ್ಯ ಸಂಭ್ರಮ ಕಾರ್ಯಕ್ರಮವನ್ನು ನಿರಂತರ ನೃತ್ಯ ಶಾಲೆಯ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅನನ್ಯ ಜಿ.ಎಂ.ಎಲ್ ಕಲ್ಚರಲ್ ಅಕಾಡೆಮಿಯ ಮ್ಯಾನೇಜಿಂಗ್ ಟ್ರಸ್ಟಿಗಳಾದಂತ ಡಾ. ರಾಘವೇಂದ್ರ, ಹೆಸರಾಂತ ನೃತ್ಯಗಾರ್ತಿಯಾದ ಕರ್ನಾಟಕ ಕಲಾ ಶ್ರೀ ಪ್ರಶಸ್ತಿ ವಿಜೇತೆ ಡಾ. ಸುಪರ್ಣ ವೆಂಕಟೇಶ್ ಹಾಗೂ ಅಂರಾರಾಷ್ಟ್ರೀಯ ನೃತ್ಯ ಉತ್ಸವಗಳ ಸಂಯೋಜಕರಾದ ಶ್ರೀಸಾಯಿ ವೆಂಕಟೇಶ್ ಭಾಗವಹಿಸಿದ್ದರು. ಅತಿಥಿಗಳು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. ನಿರಂತರ ನೃತ್ಯ ಶಾಲೆಯ ಸಂಸ್ಥಾಪಕರಾದ ಸೋಮಶೇಖರ್ ಚೂಡನಾಥ್ ಹಾಗೂ ಸೌಮ್ಯ ಸೋಮಶೇಖರ್‌ರವರ ಸಾರಥ್ಯದಲ್ಲಿ ತಯಾರಿಗೊಂಡಅತ ವಿದ್ಯಾರ್ಥಿಗಳು ಭರತನಾಟ್ಯ ಹಾಗೂ ಕಥಕ್ ನೃತ್ಯ ಪ್ರದರ್ಶನವನ್ನು ನೀಡುವ ಮುಖಾಂತರ ಎಲ್ಲರ ಮನಸೂರೆಗೊಂಡರು. ನಂತರ ಕೃಷ್ಣನ ಕುರಿತಾದ ನೃತ್ಯ ನಾಟಕ ಸಭಾಂಗಣದಲ್ಲಿ ಕಿಕ್ಕರೆದು ತುಂಬಿದಅತಹ ಕಲಾ ರಸಿಕರನ್ನು, ಕಲಾ ಪೋಷಕರನ್ನು ಮಂತ್ರಮುಗ್ಧಗೊಳಿಸಿತು. ಕಾರ್ಯಕ್ರಮದ ಕಡೆಯಲ್ಲಿ ಕೃಷ್ಣಂ ವಂದೇ ಜಗದ್ಗುರು ಎಂಬ ಕೂಗು ಮುಗಿಲು ಮುಟ್ಟಿತು. ಕಲೆಗಳಲ್ಲಿ ಸರ್ವೋ ತ್ತಮ ಕಲೆ ಎಂದರೆ ನಾಟ್ಯಕಲೆ ಎಂದು ಭರತಮುನಿ ಅವರ ನಾಟ್ಯ ಶಾಸ್ತದಲ್ಲಿ ಹೇಳಿರುವ ಹಾಗೆ ಸೋಮಶೇಖರ್ ಹಾಗೂ ಸೌಮ್ಯ ಸೋಮಶೇಖರ್ ಅವರು ನಿರಂತರ ವಾಗಿ ಅವರ ಕಲಾ ಸೇವೆಯೊಂದಿಗೆ ಯುವ ಪೀಳಿಗೆಯಲ್ಲಿ ನಮ್ಮ ಭಾರತದ ಸಂಸ್ಕತಿ ಕಲೆಯ ಪ್ರತೀಕವಾದ ಭರತನಾಟ್ಯ ಹಾಗೂ ಕಥಕ್ ನೃತ್ಯ ವಿದ್ಯಾರ್ಥಿಗಳನ್ನು ನಮ್ಮ ಸಮಾಜಕ್ಕೆ ನೀಡುತ್ತಿರುವಲ್ಲಿ ಯಶಸ್ವಿಯಾಗಿದ್ದಾರೆ. ನಾಟ್ಯ ಪ್ರವೀಣ ನಾಟ್ಯ ಮಯೂರಿ ಎಂಬ ಬಿರುದನ್ನ ಪಡೆದಿರುವ ಈ ದಂಪತಿಗಳು ಅತ್ಯಂತ ಸಣ್ಣ ವಯಸ್ಸಿನ ಕಲಾವಿದರಿಂದ ಹಿಡಿದು ಉದ್ಯೋಗದಲ್ಲಿರುವ ಮಹಿಳೆಯರು, ಗೃಹಿಣಿಯರು ಸೇರಿದಂತೆ ಅನೇಕ ವಿದ್ಯಾರ್ಥಿಗಳ ದೊಡ್ಡ ಬಳಗದೊಂದಿಗೆ ನೃತ್ಯ ಸಂಭ್ರಮ ಕಾರ್ಯಕ್ರಮದಲ್ಲಿ ಕಲಾ ಪೋಷಕರನ್ನು ರಂಜಿಸಿ ದರು. ಆಡು ಮುಟ್ಟದ ಸೊಪ್ಪಿಲ್ಲ ಅನ್ನುವ ಹಾಗೆ ಈ ದಂಪತಿಗಳು ಪ್ರದರ್ಶನ ನೀಡದ ವೇದಿಕೆ ಹಾಗೂ ಉತ್ಸವಗಳೇ ಇಲ್ಲ, ಮೈಸೂರು ದಸರಾ ಉತ್ಸವ ಹಂಪಿ ಉತ್ಸವ ಸೇರಿದಂತೆ ದೇಶ ವಿದೇಶಗಳಲ್ಲಿ ಕಾರ್ಯಕ್ರಮ ನೀಡುತ್ತಾ ನಮ್ಮ ನಾಡು ನುಡಿ ಸಂಸ್ಕೃಪತಿಯ ಪ್ರತೀಕವಾದ ಭರತನಾಟ್ಯಂ ಹಾಗೂ ಕಥಕ್ ಪ್ರದರ್ಶನದೊಂದಿಗೆ ಜನ ಮಾನಸದಲ್ಲಿ ರಾರಾಜಿಸುತ್ತಿದ್ದಾರೆ. 150ಕ್ಕೂ ಹೆಚ್ಚು ವಿದ್ಯಾರ್ಥಿಗಳ ನೃತ್ಯ ಪ್ರದರ್ಶನದ ಈ ಕಾರ್ಯಕ್ರಮ ಚೌಡಯ್ಯ ಮೆಮೋರಿಯಲ್ ಸಭಾಂಗಣದಲ್ಲಿ ಒಂದು ಮಾಯಾ ಲೋಕವನ್ನು ಸೃಷ್ಟಿ ಮಾಡಿತ್ತು. ಕಾರ್ಯಕ್ರಮದ ನಿರೂಪಣೆಯನ್ನು ದೂರದರ್ಶನದ ನಿರೂಪಕಿಯಾದ ಸವಿಪ್ರಕಾಶ್ ನಡೆಸಿಕೊಟ್ಟರು.

ಬಡವನ ಹಸಿವು ನೀಗಿಸದೆ, ದೇವರಿಗೆ ನೈವೇದ್ಯವಾಗದು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ವಯಸ್ಸಾದ ವ್ಯಕ್ತಿಯೊಬ್ಬರು ಶಿವಾಲಯದ ಹೊರಗೆ ಜ್ವರ ಮತ್ತು ಹಸಿವಿನಿಂದ ನಡುಗುತ್ತಾ ಕುಳಿತಿದ್ದರು. ಆಗ ಅಲ್ಲೊಬ್ಬ ಶ್ರೀಮಂತ ತನ್ನ ಪತ್ನಿಯೊಂದಿಗೆ ದುಬಾರಿ ಕಾರಿನಿಂದ ಇಳಿದನು. ಅವನ ಹಿಂದೆ ಅವನ ಸೇವಕರ ಸಾಲೇ ಇತ್ತು.

ಅವರ ಜೊತೆಗೆ ಬಂದಿದ್ದ ಸೇವಕರು ರಾಶಿ ರಾಶಿ ಹೂವು ಹಣ್ಣು ರೇಷ್ಮೆ ಸೀರೆ ವಸ್ತ್ರಗಳು ಇವುಗಳನ್ನು ತಟ್ಟೆಗಳಲ್ಲಿ ತಂದಿದ್ದರು.ಅರ್ಚಕನು ಅವರು ಬರುವುದನ್ನು ಕಂಡಾಗ, ಅವರನ್ನು ಸ್ವಾಗತಿಸಲು ಓಡಿ ಬಂದ. ಅರ್ಚಕ ಬನ್ನಿ ...ಸ್ವಾಮಿಎಂದ

ಶ್ರೀಮಂತನು ಸೇವಕರಿಗೆ ಒಳಗೆ ಹೋಗಿ ತಟ್ಟೆ ಇಡಲು ಹೇಳಿದ. – 'ನೀವೆಲ್ಲಾ ಹೊರಗಡೆ ಇರಿ. ನಾವು ಪೂಜೆ ಮುಗಿಸಿ ನೈವೇದ್ಯವನ್ನೆಲ್ಲ ಶಿವನಿಗೆ ಅರ್ಪಿಸುತ್ತೇವೆ'. ಹೊರಗೆ ಕುಳಿತಿದ್ದ ಮುದುಕ ಇದನ್ನೆಲ್ಲ ಗಮನಿಸುತ್ತಿದ್ದ. ಅವನು ಶ್ರೀಮಂತನಿಗೆ ಹೇಳಿದ 'ಸಾಹೇಬ್ರೆ..!, ನಾನು ಎರಡು ದಿನಗಳಿಂದ ಹಸಿದಿದ್ದೇನೆ. ದಯವಿಟ್ಟು ನನಗೆ ತಿನ್ನಲು ತಿಂಡಿ ಮತ್ತು ಹಣ್ಣುಗಳನ್ನು ಕೊಡಿ.'

ಶ್ರೀಮಂತ ಅವನ ಮಾತನ್ನು ನಿರ್ಲಕ್ಷಿಸಿದ. ಮುದುಕ ಮತ್ತೆ ಶ್ರೀಮಂತನ ಪತ್ನಿಗೂ ಸಹ 'ತಾಯಿ, ದಯವಿಟ್ಟು ನನಗೆ ಏನಾದರೂ ತಿನ್ನಲು ಕೊಡಿ, ಹಸಿವಿನಿಂದ ತಲೆ ಸುತ್ತುತ್ತಿದೆ..!' ಎಂದು ದೈನ್ಯದಿಂದ ಹೇಳಿದನು. ಅವನ ಬೇಡುವ ಪರಿ ಅವಳಿಗೆ ಕಿರಿಕಿರಿಯಾಗಿ ಅವನಿಗೆ ಹೇಳಿದಳು. 'ಅಜ್ಜ ಈ ಎಲ್ಲವನ್ನೂ ದೇವರಿಗೆ ಅರ್ಪಿಸಲು ತಂದಿದ್ದೇವೆ. ನಿನಗೆ ಕೊಡಲು ಸಾಧ್ಯವಿಲ್ಲ. ನಾವು ಇನ್ನೂ ದೇವಸ್ಥಾನವನ್ನು ಪ್ರವೇಶಿಸಿಲ್ಲ ನೀನು ನಮಗೆ ಅಡ್ಡಿಪಡಿಸುತ್ತಿರುವಿ'.

ಶ್ರೀಮಂತನು 'ಸುಮ್ಮನಿರದೇ ನಿನ್ನಿಂದಾಗಿ ನಮ್ಮ ಪೂಜೆಗೆ...' ಎಂದು ಕೈ ತಿರುಗಿಸಿ ಹೇಳುತ್ತಿದ್ದಂತೆ ಅವನ ಎರಡೂ ಕೈಗಳು ತಿರುಚಿಕೊಂಡವು. ಅವನಿಗೆ ಇದ್ದಕ್ಕಿದ್ದಂತೆ ಪಾರ್ಶ್ವವಾಯು ಬಡಿದಂತಾಯಿತು. ಅವನ ಕೈಗಳು ವಕ್ರವಾದವು, 'ಅಯ್ಯೋ ದೇವರೇ..! ನಾನು ಈಗ ಏನು ಮಾಡಲಿ..?' ಎಂದು ಶ್ರೀಮಂತದ ಪತ್ನಿ ಜೋರಾಗಿ ಅಳಲು ಪ್ರಾರಂಭಿಸಿದಳು.

ನಿನ್ನಿಂದಾಗಿ ನನ್ನ ಪರಿಸ್ಥಿತಿ ಹೀಗಾಗಿದೆ ಶಿವ ನಿನ್ನನ್ನು ಶಿಕ್ಷಿಸದೆ ಬಿಡುವುದಿಲ್ಲ' ಎಂದು ಮುದುಕನ ಮೇಲೆ ಕೂಗಾಡತೊಡಗಿದರು

ಓಡಿಬಂದ ಅರ್ಚಕರು ಕೈಗಳನ್ನು ಮುಗಿದು ಆ ಶ್ರೀಮಂತ ದಂಪತಿಗಳಿಗೆ ಹೇಳಿದರು 'ಕ್ಷಮಿಸಿ, ಆ ಭಿಕ್ಷೆ ಬೇಡುವ ಮುದುಕನ ಮೇಲೆ ದೇವರಿಗೆ ಕೋಪವಿಲ್ಲ. ಆದರೆ, ನಿಮ್ಮಿಬ್ಬರ ಮೇಲೆ ಖಂಡಿತ ಆಶೀವ ಕೋಪಗೊಂಡಿರುತ್ತಾನೆ'.

ಅವನ ಮಾತಿಗೆ ಆ ಶ್ರೀಮಂತನ ಪತ್ನಿಯು ಆಡುಭಾಷೆಯಲ್ಲಿ 'ನಾವೇನು ಮಾಡಿದ್ದೇವೆ ಅರ್ಚಕರೇ..!?' ಎನ್ನಲು ಅರ್ಚಕನು 'ನೀವು ಏನು ಮಾಡಿದ್ದೀರಿ.. ಇನ್ನು ನಿಮಗೆ ಅರ್ಥವಾಗಲಿಲ್ಲವೇ? ದೇವರಿಗೆ ಅರ್ಪಿಸಲು ನೀವು ದುಬಾರಿ ಉಡುಗೊರೆಗಳನ್ನು ತಂದಿದ್ದೀರಿ. ಆದರೆ, ದೇವರು ಪ್ರತಿಯೊಬ್ಬ ವ್ಯಕ್ತಿಯೊಳಗೆ ನೆಲೆಸಿದ್ದಾನೆ ಎಂದು ನೀವು ಭಾವಿಸಲಿಲ್ಲ. ಒಳಗಿರುವ ದೇವರ ವಿಗ್ರಹಕ್ಕೆ ನೈವೇದ್ಯ ಮಾಡಬೇಕೆನಿಸಿತು. ಆದರೆ ಇಲ್ಲಿ ದೇವರೇ ಆ ಮುದುಕನ ರೂಪದಲ್ಲಿ ನಿಮ್ಮಿಂದ ಪ್ರಸಾದ ಸ್ವೀಕರಿಸಲು ಬಂದಿದ್ದನು. ನೀವು ಸಂತೋಷದಿಂದ ಅವನಿಗೆ ತಿನ್ನಲು ಏನನ್ನಾದರೂ ಕೊಟ್ಟಿದ್ದರೆ, ನಿಮ್ಮ ಉಡುಗೊರೆಗಳು ತವಾಗಿಯೇ ದೇವರನ್ನು ತಲುಪುತ್ತಿದ್ದವು. ಬಡವನಿಗೆ ಅನ್ನ ನೀಡುವುದು ದೇವರಿಗೆ ಅನ್ನ ನೀಡಿದಂತಾಗುತ್ತದೆ. ನೀವು ಅವನನ್ನು ತಿರಸ್ಕರಿಸಿದರೆ, ದೇವರು ನಿಮ್ಮ ಉಡುಗೊರೆಯನ್ನು ಹೇಗೆ ಸ್ವೀಕರಿಸುತ್ತಾನೆ. ಭಿಕ್ಷೆ ಕೇಳುವ ಯಾರಿಗಾದರೂ ಏನನ್ನಾದರೂ ನೀಡಲು ಸಾಧ್ಯವಾಗದಿದ್ದರೆ, ಅವನನ್ನು ಅವಮಾನಿಸಬೇಡಿ. ಏಕೆಂದರೆ ಅವನು ತನ್ನ ಸ್ವಂತ ಇಚ್ಛೆಯಿಂದ ಬಡವನಾಗಿರುವುದಿಲ್ಲ.ಮೊದಲು ಆ ಮುದುಕನಲ್ಲಿ ಕ್ಷಮೆ ಕೇಳಿ, ದೇವರು ನಿಮ್ಮನ್ನು ಕ್ಷಮಿಸುತ್ತಾನೆ' ಎಂದ ಅರ್ಚಕ. ಅರ್ಚಕನ ಮಾತಿಗೆ ಶ್ರೀಮಂತ ದಂಪತಿಗಳು ಹೌಹಾರಿದರು. ಅವರಿಗೆ ತಮ್ಮ ತಪ್ಪಿನ ಅರಿವಾಯಿತು.

ಕೆಲವೊಮ್ಮೆ ನಾವು ಬಡವರಿಗೆ ದೀನ ದಲಿತರಿಗೆ ಸಹಾಯ ಮಾಡಲಾಗದಿದ್ದರೂ ಪರವಾಗಿಲ್ಲ, ಅವರನ್ನು ನಿಕೃಷ್ಟವಾಗಿ ನೋಡುವುದನ್ನು ಬಿಡಬೇಕು. ಯಾವ ಕರ್ಮದ ಫಲವೋ ಅವರು ಇಂಥಾ ಸ್ಥಿತಿಯಲ್ಲಿರುತ್ತಾರೆ. ಅವರನ್ನು ನಿಕೃಷ್ಟವಾಗಿ ನೋಡಿ ಆ ಕರ್ಮವನ್ನು ನಾವು ಅನುಭವಿಸುವಂತಹಾಗ ಬಾರದು. ಸಾಧ್ಯವಾದರೆ ಸಹಾಯ ಮಾಡಿ, ಇಲ್ಲವಾದರೆ ಅವರಿಗಾಗಿ ಪ್ರಾರ್ಥಿಸಿ.

ಸಮಾಚಾರ ಸಣ್ಣದಲ್ಲ

ದೇವದಾಸಿಯರ ಮರು ಗಣತಿ

ಕಂಪ್ಲಿ: ವಿಮುಕ್ತ ದೇವದಾಸಿಯರ ಮನೆಗೆ ತೆರಳಿ ಕುಟುಂಬದ ಮರುಗಣತಿ ನಡೆಸಬೇಕು ಎಂದು ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ತಾಲೂಕು ಅಧ್ಯಕ್ಷೆ ಎಚ್.ಹುಲಿಗೆಮ್ಮ ಹೇಳಿ ದರು. ತಹಸೀಲ್ದಾರ್ ಎಸ್.ಶಿವರಾಜ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. ರಾಜ್ಯ ಸರಕಾರ ವಿಮುಕ್ತ ದೇವ ದಾಸಿಯರ ಕುಟುಂಬದ ಮರುಗಣ ತಿಗೆ ಕ್ರಮ ಕೈಗೊಂಡಿರುವುದು ಸ್ವಾಗತಾರ್ಹ. ಫಲಾ ನುಭವಿಗಳ ಗಣತಿ ಆಗಬೇಕು. ಆದ್ದರಿಂದ ಅಂಗನ ವಾಡಿ ಕಾರ್ಯ ಕರ್ತೆಯರಿಗೆ ಗಣತಿಯ ತರಬೇತಿ ನೀಡಬೇಕು ಎಂದು ಒತ್ತಾಯಿಸಿದರು. ಈ ಬಾರಿಯ ಬಜೆಟ್‌ನಲ್ಲಿ ವಿಮುಕ್ತ ದೇವದಾಸಿಯರಿಗೆ 5 ಸಾವಿರ ರು. ಪಿಂಚಣಿ ನೀಡ ಬೇಕು. ಸಮೀಕ್ಷೆಗೆ ಒಳಪಟ್ಟ ಮಹಿಳೆಯರಿಗೂ ಸೌಲಭ್ಯ ಸಿಗಬೇಕು. ವಿಮುಕ್ತ ದೇವದಾಸಿಯರ ಮಕ್ಕಳಿಗೆ ಉ ದ್ಯೋಗ ಅಥವಾ 10 ಸಾವಿರ ರೂ. ನಿರುದ್ಯೋಗ ಭತ್ಯೆ ನೀಡಬೇಕು. ಮದುವೆಗೆ ಅರ್ಜಿ ಹಾಕಿದ ಆರು ತಿಂಗ ಳೊಳಗೆ ಹಣ ಒದಗಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲಾ ಕಾರ್ಯದರ್ಶಿ ಸ್ವಾಮಿ, ಪದಾಧಿಕಾರಿಗಳಾದ ಹುಲಿ ಗೆಮ್ಮ, ಮಾರಮ್ಮ, ಕುಮಾರಮ್ಮ, ಹೊನ್ನೂರಮ್ಮ, ಬರ್ಮಕ್ಕ, ಮಹಾಲಕ್ಷ್ಮೀ ಮಾಲಾಶ್ರೀ, ಚಂದ್ರಮ್ಮ, ಕಾಮಮ್ಮ, ಭೀಮಕ್ಕ, ಮಸ್ತಾನಮ್ಮ ಇತರರಿದ್ದರು.

ಮನೆಯಂಗಳದಲ್ಲಿ ರಂಗೋಲಿಗಳ ಚಿತ್ತಾರ

ಬಳ್ಳಾರಿ: ಸಂಕ್ರಾಂತಿ ಹಬ್ಬದ ಪ್ರಯುಕ್ತ ಬಳ್ಳಾರಿ ನಗರದಲ್ಲಿನ ವಿವಿಧ ಬಡಾವಣೆಗಳ ಮನೆಯಂಗ ಳದಲ್ಲಿ ಬಣ್ಣ ಬಣ್ಣದ ರಂಗೋಲಿಗಳ ಚಿತ್ತಾರ ಮೂಡಿತ್ತು.

ಸಂಕ್ರಾಂತಿ ಹಬ್ಬದ ಪ್ರಯುಕ್ತ ನಗರದ ಲ್ಲಿನ ಮಾರು ಕಟ್ಟೆಯಲ್ಲಿ ಹಬ್ಬದ ವಸ್ತುಗಳ ಖರೀ ದಿಯ ಭರಾಟೆ ಜೋರಾ ಗಿತ್ತು. ಹಬ್ಬಕ್ಕೆ ಹೊಸ ಉಡುಗೆ ತೊಟ್ಟು ಮಹಿಳೆ ಯರು, ಮಕ್ಕಳು ಸಂಭ್ರಮ ಮತ್ತು ಎಲ್ಲೆಡೆ ಸಡಗ ರದ ವಾತಾವರಣ ನಿರ್ಮಾಣವಾಗಿತ್ತು. ಸುಗ್ಗಿ ಹಬ್ಬ ಸಂಕ್ರಾಂತಿಯ ಮುನ್ನಾದಿನವಾದ ನಗರದಲ್ಲಿ ಕಂಡು ಬಂದ ದೃಶ್ಯ ವಿದು. ಕರ್ನಾಟಕ ಆಂಧ್ರದ ಗಡಿ ಭಾಗದ ಬಳ್ಳಾರಿ ಯಲ್ಲಿ ಆಂಧ್ರ ಪ್ರದೇಶ ಮತ್ತು ಕರ್ನಾಟಕ ಮಿಶ್ರ ಸಂಸ್ಕೃತಿ, ಆಚರಣೆಗಳ ಪ್ರಭಾವ ಬೀರಿದೆ. ಮನೆ ಮುಂದೆ ತರಹೇವಾರಿ ಬಣ್ಣಗಳನ್ನು ಬಳಸಿ ಹಾಕಿದ ಬಣ್ಣ ಬಣ್ಣದ ರಂಗೋಲಿಗಳು ನೋಡುಗರ ಗಮನ ಸೆಳೆಯಿತು.

ಸಕಲ ವಿಪ್ರರ ಸಮಾವೇಶ

ಬಳ್ಳಾರಿ: ನಗರದ ಸತ್ಯನಾರಾಯಣ ಪೇಟೆಯ ಶ್ರೀರಾಘವೇಂದ್ರ ಸ್ವಾಮಿ ಮಠದಲ್ಲಿ ಮಂತ್ರಾಲಯ ದಾಸಸಾಹಿತ್ಯ ರಾಜ್ಯ ಸಂಚಾಲಕ ಹಾಗೂ ವಿದ್ವಾನ್ ಸುಳಾದಿ ಹನುಮೇಶಾಚಾರ್ ಅವರ ನೇತೃತ್ವದಲ್ಲಿ ಸುಳಾದಿಗಳ ಅಭ್ಯಾಸ, ಸುಪ್ರಭಾತ ಚಿಂತನೆ, ಭಗವ ದ್ರೂಪಗಳ ಚಿಂತನೆ ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿತ್ತು. ಶ್ರೀರಾಘವೇಂದ್ರ ಸ್ವಾಮಿಗಳವರ ಭಕ್ತರಿಗೆ, ಮಂತ್ರಾಲಯ ದಾಸ ಸಾಹಿತ್ಯ ಪ್ರಾಜೆಕ್ಟ್ ಭಜನಮಂಡಳಿ ಸದಸ್ಯರಿಗೆ ಸುಳಾದಿ ಪಾರಾಯಣದ ತರಬೇತಿ ನೀಡ ಲಾಯಿತು. ಇದೇ ಸಂದರ್ಭದಲ್ಲಿ ಸಕಲ ವಿಪ್ರರ ಸಮಾವೇಶ ನಡೆಯಿತು. ಈ ಸಭೆಯಲ್ಲಿ ಶ್ರೀ ರಾಘ ವೇಂದ್ರ ಸ್ತೋತ್ರದ ಅಷ್ಟೋತ್ತರ ಕಾರ್ಯ ಕ್ರಮ ವನ್ನು ಬೃಹತ್ ಮಟ್ಟದಲ್ಲಿ ಮಾಡಲು ನಿರ್ಧ ರಿಸ ಲಾಯಿತು. ಸುಳಾದಿ ಹನುಮೇಶಾಚಾರ್ ಅವರು ನೆರೆದಿದ್ದ ಭಕ್ತರಿಗೆ ಮಾರ್ಗದರ್ಶನ ಮಾಡಿ ದರು. ಬಳ್ಳಾರಿ ವಿಪ್ರ ಬಾಂಧವರು ಸೇರಿ ಸಮಾ ಲೋಚನೆ ನಡೆಸಿ ಶ್ರೀ ರಾಘವೇಂದ್ರ ಸ್ತೋತ್ರದ ಬೃಹತ್ ಮಟ್ಟದ ಅಷ್ಟೋ ತ್ತರ ಕಾರ್ಯಕ್ರಮದ ಫೆ.16 ರಂದು ಮಾಡ ಬೇಕೆಂದು ನಿರ್ಧರಿಸಿದರು. ಈ ದಾಸಸಾಹಿತ್ಯ ಕಾರ್ಯ ಕ್ರಮ ಯಶಸ್ವಿಯಾಗಲು ಬಳ್ಳಾರಿಯ ಎಸ್.ಎನ್.ಪೇಟೆಯ ರಾಯರ ಮಠದ ವ್ಯವಸ್ಥಾಪಕ ಪ್ರಸನ್ನಾ ಚಾರ್ಯರು ಸಕಲ ವ್ಯವಸ್ಥೆ ಮಾಡಿದರು.

ಜ.27 ರಂದು ನಿಧಿ ಆಪ್ಕೆ ನಿಕಟ್

ಬಳ್ಳಾರಿ: ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮವನ್ನು ಜ.27 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗೆ ಸಂಡೂರು ತಾಲೂಕಿನ ತೋರಣಗಲ್ಲಿನ ಜತೆ ಎಸ್. ಡಬ್ಲ್ಯೂ ಎನರ್ಜಿ ಆಯೋಜಿಸಲಾಗಿದೆ ಎಂದು ಪ್ರಾದೇ ಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ತಿಳಿಸಿದ್ದಾರೆ. ಕಾರ್ಮಿ ಕರ, ಪಿಂಚಣಿದಾರರ ಮತ್ತು ಉದ್ಯೋಗ ದಾತ ರರ ಕುಂದುಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿ ಕೊಳ್ಳಬಹುದು. ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆ ಗಳ ಮಾಹಿತಿ ಕುರಿತು ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿದೆ. ಕಾರ್ಮಿಕರು, ಉದ್ಯೋಗ ದಾತರು ಜ.27 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

{ಬಸವನಗೌಡ ಪಾಟೀಲ್ ಯತ್ನಾಳ್} ಶಾಸಕ

ಪಂಚಮಸಾಲಿ ಸಮಾಜದ ಸಭೆಗೆ ಬಂದಾಗ ಸಮಾಜದ ಮಗಳಾಗಿ ಬಂದಿದ್ದೇನೆ ಎಂದಿದ್ದರು. ವಿಧಾನಸೌಧದಲ್ಲಿ ನಾನು ಮಂತ್ರಿಯಾಗಿ ಹೋಗಿದ್ದೆ ಎಂದಿದ್ದಾರೆ. ಅಲ್ಲದೇ, ಪಂಚಮಸಾಲಿ ಸಮುದಾಯದ ಮೇಲಿನ ಲಾಠಿ ಚಾರ್ಜ್‌ನಲ್ಲಿ ಡಿಕೆಶಿ ಹಸ್ತಕ್ಷೇಪವಿದೆ. ಸರಕಾರ ಪತನಕ್ಕೆ ಲಕ್ಷ್ಮೀ ಹೆಬ್ಬಾಳ್ಕರ್ ಕಾರಣವಾಗುತ್ತಾರೆ.

ಮಕ್ಕಳನ್ನು ದುಡಿಸಿಕೊಳ್ಳುವುದು ಕಾನೂನು ಬಾಹಿರ

ಅನಿರೀಕ್ಷಿತ ದಾಳಿ ನಡೆಸಿ, ಬಾಲ ಕಾರ್ಮಿಕರನ್ನು ರಕ್ಷಿಸುವ ಕಾರ್ಯ ಚುರುಕಾಗಲಿ: ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ

ಬಳ್ಳಾರಿ: ಜಿಲ್ಲೆಯಲ್ಲಿ ಬಾಲಕಾರ್ಮಿಕ ಅನಿಷ್ಠ ಪದ್ಧತಿ ನಿರ್ಮೂಲನೆ ಮಾಡಲು ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸಿ ಅನಿರೀಕ್ಷಿತ ದಾಳಿ ನಡೆಸಿ, ಬಾಲ ಕಾರ್ಮಿಕ ಮಕ್ಕಳನ್ನು ರಕ್ಷಿಸುವ ಕಾರ್ಯ ಚುರುಕಾಗಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಬಾಲಕಾರ್ಮಿಕ ಯೋಜನೆಯ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಕ್ಕಳನ್ನು ದುಡಿಸಿಕೊಳ್ಳುವುದು ಹಾಗೂ ಶಿಕ್ಷಣದಿಂದ ವಂಚಿತರನ್ನಾಗಿ ಮಾಡುವುದು ಅಪರಾಧ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಅನಿರೀಕ್ಷಿತ ದಾಳಿ ನಡೆಸಿ ಮಕ್ಕಳಿಗೆ ರಕ್ಷಣೆ ಒದಗಿಸಬೇಕು. ಮಕ್ಕಳನ್ನು ಕಾನೂನು ಬಾಹಿರವಾಗಿ ದುಡಿಸಿಕೊಳ್ಳುತ್ತಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಹೇಳಿದರು.

ಶಾಲೆಗಳಲ್ಲಿ ಮಕ್ಕಳು ಏಳು ದಿನ ಮೇಲ್ಪಟ್ಟು ಗೈರಾಗಿದ್ದರೆ ಶಾಲಾ ಮುಖ್ಯೋಪಾಧ್ಯಯರು, ಶಿಕ್ಷಕರು ಮನೆ ಭೇಟಿ ನಡೆಸಿ, ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಪ್ರಯತ್ನ ಮಾಡಬೇಕು ಎಂದು ಸೂಚಿಸಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಬಾಲಕಾರ್ಮಿಕ ಯೋಜನೆಯ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮಾತನಾಡಿದರು.

ಈಗಾಗಲೇ ಜಾರಿಯಲ್ಲಿರುವ ಜಿಲ್ಲಾ ಹಾಗೂ ತಾಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಕಾಲಕಾಲಕ್ಕೆ ಕಾರ್ಯಪಡೆ ಸಭೆಯನ್ನು ನಡೆಸಿ, ದಾಳಿಗಳನ್ನು ಕೈಗೊಂಡು ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರನ್ನು ರಕ್ಷಿಸುವ ಕಾರ್ಯ ಚುರುಕಾಗಬೇಕು. ಕೆಲಸಕ್ಕೆ ನೇಮಿಸಿಕೊಂಡ ಮಾಲೀಕರ ವಿರುದ್ಧ ಕ್ರಮಕ್ಕೈಗೊಳಬೇಕೆಂದು ತಿಳಿಸಿದರು.

ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಯೋಜನಾಧಿಕಾರಿ ಎ.ಮೌನೇಶ್ ಮಾತನಾಡಿ, ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಇಲ್ಲಿಯವರೆಗೆ 20 ಆಕಸ್ಮಿಕ ದಾಳಿಗಳನ್ನು ನಡೆಸಲಾಗಿದ್ದು, ಒಟ್ಟು 24 ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಮಕ್ಕಳನ್ನು ರಕ್ಷಣೆ ಮಾಡಿ, ದುಡಿಸಿಕೊಳ್ಳುತ್ತಿರುವ ಮಾಲೀಕರ ವಿರುದ್ಧ 19 ಪ್ರಕರಣ ದಾಖಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಹಲವು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಗೋಡೆ ಬರಹ, ಕರಪತ್ರ, ಆಟೋ ಪ್ರಚಾರ, ಕಾನೂನು ಅರಿವು ನೆರವು ಕಾರ್ಯಕ್ರಮ, ತರಬೇತಿ ಕಾರ್ಯಾಗಾರ, ಜಾಗೃತಿ ಸಭೆ ನಡೆಸಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಬಾಲ ಕಾರ್ಮಿಕ ಪದ್ಧತಿಗೆ ಸಂಪೂರ್ಣ ಕಡಿವಾಣ ಹಾಕಲು ಪೋಷಕರಿಗೆ, ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. ನಗರ ವ್ಯಾಪ್ತಿಯಲ್ಲಿಯೂ ಮಕ್ಕಳನ್ನು ದುಡಿಸಿಕೊಳ್ಳುತ್ತಿರುವ ಮಳಿಗೆ, ಸಂಸ್ಥೆಗಳ ಮೇಲೆ ಅನಿರೀಕ್ಷಿತ ದಾಳಿ ನಡೆಸಬೇಕು ಎಂದು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

> **ಹದಿನಾಲ್ಕು ವರ್ಷದೊಳಗಿನ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಮಕ್ಕಳ ಆರೋಗ್ಯ ಮತ್ತು ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಬೇಕು. ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸರ್ಕಾರದ ಜತೆಗೆ ಸರ್ಕಾರೇತರ ಸಂಸ್ಥೆಗಳು ಕೈಜೋಡಿಸಿದಾಗ ಮಾತ್ರ ಈ ಪದ್ಧತಿ ನಿರ್ಮೂಲನೆ ಮಾಡಲು ಸಾಧ್ಯವಾಗುತ್ತದೆ.**
> -ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಧಿಕಾರಿ

ವ್ಯವಹಾರಿಕ ಜ್ಞಾನ ಬೆಳೆಸುವ ಮಕ್ಕಳ ಸಂತೆ

ಸಂಡೂರು: ಮಕ್ಕಳಿಗೆ ಪಠ್ಯ ವಿಷಯಗಳ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಪುಸ್ತಕದ ಜ್ಞಾನದ ಜೊತೆಗೆ ವ್ಯವಹಾರಿಕ ಜ್ಞಾನವು ವೃದ್ಧಿಯಾಗುತ್ತದೆ ಎಂದು ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಕಾರ್ಯದರ್ಶಿ ಚಿದಂಬರ್ ಎಸ್.ನಾನಾವಟೆ ತಿಳಿಸಿದರು.

ಪಟ್ಟಣದ ಶ್ರೀಶೈಲೇಶ್ವರ ವಿದ್ಯಾಕೇಂದ್ರದಲ್ಲಿ ಒಂದನೇ ತರಗತಿಯಿಂದ ಎಂಟನೇ ತರಗತಿಯ ವರೆಗಿನ ಮಕ್ಕಳು ಹಮ್ಮಿಕೊಂಡಿದ್ದ ಆಹಾರ ಉತ್ಸವ ಮತ್ತು ಶೈಲಾ ಸಂತೆ ಕಾರ್ಯಕ್ರಮ ಉದ್ಘಾಟಿಸಿದರು.

ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರಿಂದ ಅವರಿಗೆ ವ್ಯವಹಾರಿಕ ಜ್ಞಾನದ ಜತೆಗೆ ಬದುಕುವ ಕಲೆಯನ್ನು ಕಲಿತಂತಾಗುತ್ತದೆ ಎಂದು ತಿಳಿಸಿದರು.

ಸಂಸ್ಥೆಯ ಗೌರವಾಧ್ಯಕ್ಷೆ ಲಕ್ಷ್ಮೀ ಎಸ್ ನಾನಾವಟೆ ಮಾತನಾಡಿ, ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು, ಮಕ್ಕಳು ಶಿಕ್ಷಣದ ಜೊತೆಗೆ ವ್ಯವಹಾರಿಕ ಜ್ಞಾನವನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ. ಆಹಾರ ಮೇಳದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ತಮ್ಮ ಪಾಲಕರೊಂದಿಗೆ ವಿವಿಧ ಬಗೆಯ ಪೌಷ್ಠಿಕಯುಕ್ತ ಆಹಾರವನ್ನು ತಯಾರಿಸಿರುವುದು ಸಂತೋಷದ ವಿಷಯ, ಪೌಷ್ಠಿಕ ಆಹಾರ ಸೇವನೆಯಿಂದ ದೈಹಿಕವಾಗಿ ಸದೃಢರಾಗಲು ಸಾಧ್ಯ ಎಂದು ಹೇಳಿದರು.

ಪಟ್ಟಣದ ಶ್ರೀಶೈಲೇಶ್ವರ ವಿದ್ಯಾಕೇಂದ್ರದಲ್ಲಿ ಒಂದನೇ ತರಗತಿಯಿಂದ ಎಂಟನೇ ತರಗತಿಯ ವರೆಗಿನ ಮಕ್ಕಳು ಹಮ್ಮಿಕೊಂಡಿದ್ದ ಆಹಾರ ಉತ್ಸವ ಮತ್ತು ಶೈಲಾ ಸಂತೆ ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಆಡಳಿತಾಧಿಕಾರಿ ಕುಮಾರ ಎಸ್.ನಾನಾವಟೆ ಮಾತನಾಡಿ, ನಮ್ಮ ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮದ ಯಶಸ್ಸಿನ ಹಿಂದೆ ನಮ್ಮ ಸಿಬ್ಬಂದಿಯವರ ಮತ್ತು ಪಾಲಕರ ಶ್ರಮ ಮುಖ್ಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ಹಬ್ಬದ ರೀತಿಯಲ್ಲಿ ಪಾಲ್ಗೊಳ್ಳುವುದರೊಂದಿಗೆ ಕಾರ್ಯಕ್ರಮಕ್ಕೆ ಮೆರಗನ್ನು ತಂದಿದ್ದಾರೆ ಎಂದು ತಿಳಿಸಿದರು.

ಸಿಬಿಎಸ್ಇ ಪ್ರಾಂಶುಪಾಲರಾದ ಸನಾವುಲ್ಲಾ ಎಂ.ಪಿ, ವಿಜ್ಞಾನ ವಿಭಾಗದ ನಾಗೇಂದ್ರ ಪ್ರಸಾದ್ ಮತ್ತು ಜಯಪ್ರಕಾಶ್, ವಾಣಿಜ್ಯ ವಿಭಾಗದ ಆನಂದ, ಸಿಬಿಎಸ್ಇ ಸಂಯೋಜಕರಾದ ರುಕ್ಮಿಣಿ, ಸುಜಾತ ಘೋರ್ಪಡೆ, ವಿನಾಯಕ ರಾವ್ ನಿಕ್ಕಮ್ ಮತ್ತು ಸಿಬ್ಬಂದಿ ಹಾಗೂ ಪಾಲಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

> **ನಮ್ಮ ಸಂಸ್ಥೆಯಲ್ಲಿ ಅಭ್ಯಾಸ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಅಭಿವೃದ್ಧಿ ಹೊಂದಬೇಕು. ಎನ್ನುವ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡು ಪಠ್ಯಗಳ ಜತೆಗೆ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಎಲ್ಲಾ ವಿದ್ಯಾರ್ಥಿಗಳು ಮತ್ತು ಪಾಲಕರು ಇದರಲ್ಲಿ ಪಾಲ್ಗೊಳ್ಳುವುದರಿಂದ ಶಾಲೆಯ ಜತೆಗೆ ಪಾಲಕರಿಗೆ ಅವಿನಾಭಾವ ಸಂಬಂಧ ಬೆಳೆಯುತ್ತದೆ.**
> -ಚಿದಂಬರ್ ಎಸ್.ನಾನಾವಟೆ,
> ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಕಾರ್ಯದರ್ಶಿ

ರೈತ ಸಂಘದ ತಾಲೂಕು ಸಮಿತಿ ಸಭೆ

ಸಂಡೂರು: ಕೇಂದ್ರ ಸರಕಾರ ಜಾರಿ ಮಾಡಲು ಹೊರಟಿರುವ ರೈತ ವಿರೋಧಿ ಕೃಷಿ ಕಾನೂನುಗಳನ್ನು ವಾಪಸ್ ಪಡೆಯಲು ಒತ್ತಾಯಿಸಿ ದೆಹಲಿ ಗಡಿಯಲ್ಲಿ ರೈತ ಜಗಜಿತ್ ಸಿಂಗ್ ಸೇರಿದಂತೆ ಹಲವು ರೈತರು ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದು, ದೇಶದ ರೈತರ ಕುರಿತಾಗಿ ಸುಪ್ರೀಂಕೋರ್ಟ್ ಮಧ್ಯಪ್ರವೇಶ ಮಾಡಬೇಕು ಎಂದು ಕೆಪಿಆರ್‌ಎಸ್‌ನ ಜಿಲ್ಲಾ ಅಧ್ಯಕ್ಷ ವಿ.ಎಸ್ ಶಿವಶಂಕರ್ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಹಮ್ಮಿಕೊಂಡಿದ್ದ ರೈತ ಸಂಘದ ತಾಲೂಕು ಸಮಿತಿ ಸಭೆಯಲ್ಲಿ ಮಾತನಾಡಿ, ರಾಜ್ಯದಲ್ಲಿ ಅರಣ್ಯ, ಬಗರ್ ಹುಕುಂ ಸಾಗುವಳಿ ರೈತರು ಅರ್ಜಿಸಲ್ಲಿಸಿದ್ದಾರೆ, ಸಂಡೂರು ತಾಲೂಕಿನ 26 ಪಂಚಾಯಿತಿಗಳಲ್ಲಿ ಅರ್ಜಿಗಳಿಗೆ ಒಂದು ಅರ್ಜಿಯೂ ಕೂಡ ವಿಲೇವಾರಿ ಮಾಡಿಲ್ಲ ಎಂದು ದೂರಿದರು.

ಅರಣ್ಯ ಭೂ ಸಾಗುವಳಿದಾರರಿಗೆ ಪಟ್ಟಾ ನೀಡಲು ಒತ್ತಾಯಿಸಿ ಫೆಬ್ರವರಿ 10 ರಂದು ತುಮಕೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ತೀರ್ಮಾನಿಸಿದೆ ಎಂದರು.

ಈ ಸಭೆಯಲ್ಲಿ ಕೆಪಿಆರ್‌ಎಸ್ ತಾಲೂಕು ಅಧ್ಯಕ್ಷ ಪಂಪನಗೌಡ, ಕಾರ್ಯದರ್ಶಿ ಖಲಂದರ್ ಬಾಷ, ಡಿವೈಎಫ್ಐ ಜಿಲ್ಲಾ ಉಪಾಧ್ಯಕ್ಷ ಎಸ್ ಕಾಲುಬಾ, ದೇ.ಮ.ವಿ.ಸಂಘದ ಜಿಲ್ಲಾ ಕಾರ್ಯದರ್ಶಿ ಎ. ಸ್ವಾಮಿ. ತಾಲೂಕು ಕಾರ್ಯದರ್ಶಿ ದುರುಗಮ್ಮ ತಾಳೂರು, ಉಬ್ಬಲಗಂಡಿ, ಮಾಳಾಪುರ ಇತರೆ ಗ್ರಾಮದ ರೈತರು ಉಪಸ್ಥಿತರಿದ್ದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ರೈತ ಸಂಘದ ತಾಲೂಕು ಸಮಿತಿ ಸಭೆಯಲ್ಲಿ ಕೆಪಿಆರ್‌ಎಸ್‌ನ ಜಿಲ್ಲಾ ಅಧ್ಯಕ್ಷ ವಿ.ಎಸ್ ಶಿವಶಂಕರ್ ಮಾತನಾಡಿದರು.

ಆಧ್ಯಾತ್ಮ ಆಶೀರ್ವಚನ ಕಾರ್ಯಕ್ರಮ

ಆಧ್ಯಾತ್ಮ ಆಶೀರ್ವಚನ ಕಾರ್ಯಕ್ರಮದಲ್ಲಿ ಶಿರಹಟ್ಟಿಯ ಫಕ್ಕೀರೇಶ್ವರ ಭಾವೈಕ್ಯತಾ ಸಂಸ್ಥಾನ ಪೀಠ ಫಕ್ಕೀರ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿದರು.

ಹೂವಿನಹಡಗಲಿ: ಮನುಷ್ಯ ಯಾಂತ್ರಿಕ ಜೀವನದ ಜಂಜಾಟದಲ್ಲಿ ಪರಿಸ್ಥಿತಿಯ ಕೈಗೊಂಬೆಯಾಗಿದ್ದಾನೆ. ಅತಿಯಾದ ದುರಾಸೆಯಿಂದ ಸಂಪತ್ತನ್ನು ಬೆನ್ನುಹತ್ತಿ ನೆಮ್ಮದಿಯ ಬದುಕನ್ನು ಕಳೆದುಕೊಳ್ಳುತ್ತಿದ್ದಾನೆ. ನೆಮ್ಮದಿ ಎನ್ನುವುದು ಹೊರಗಿನ ಸಂಪತ್ತಿನಲ್ಲಿ ಸಿಗುವುದಲ್ಲ, ಅದು ಸಿಗಬೇಕಾದರೆ ಆದ್ಯಾತ್ಮದಿಂದ ಮಾತ್ರ ಸಾಧ್ಯ ಎಂದು ಶಿರಹಟ್ಟಿಯ ಫಕ್ಕೀರೇಶ್ವರ ಭಾವೈಕ್ಯತಾ ಸಂಸ್ಥಾನ ಪೀಠ ಫಕ್ಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ಹೊಳಲು ಗ್ರಾಮದ ಸ್ವಾಮಿ ವಿವೇಕಾನಂದ ಯುವ ಗೆಳೆಯರ ಬಳಗ ಟ್ರಸ್ಟ್ ವತಿಯಿಂದ ಮೂರನೇ ವರ್ಷದ ಸ್ನೇಹ ಸಮ್ಮಿಲನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಆದ್ಯಾತ್ಮ ಆಶೀರ್ವಚನ ಕಾರ್ಯಕ್ರಮದ ಸಾನಿಧ್ಯದಲ್ಲಿ ಅವರು ಮಾತನಾಡಿದರು.

ಹೊರಗಿನ ಸಂಪತ್ತಿನಲ್ಲಿ ಸಂತೋಷವನ್ನು ಹುಡುಕದೆ ಶರಣರ, ಸಂತರ, ಆದರ್ಶಗಳನ್ನು ಪಾಲಿಸುವುದರಿಂದ ಹಾಗೂ ಪ್ರವಚನ ಕೇಳುವುದರಿಂದ ಬದುಕನ್ನು ಬದಲಿಸಿಕೊಳ್ಳಬಹುದು ಎಂದರು.

ಮನೆಯಲ್ಲಿ ಪೋಷಕರು ತಾವು ಕೂಡಾ ಸಂಸ್ಕಾರಯುತ ಬದಕನ್ನು ನಡೆಸಿ ಮನೆಯಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಉತ್ತಮ ಬದುಕನ್ನು ಕಟ್ಟಿಕೊಳ್ಳಿರಿ ಎಂದು ತಿಳಿಸಿದರು.

ಶ್ರೀಮಲ್ಲಿಕಾರ್ಜುನ ವಿರಕ್ತ ಮಠದ ಚನ್ನಬಸವ ದೇವರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮೊದಲು ಗ್ರಾಮದೆಲ್ಲಡೆ ಶ್ರೀಗಳ ಮೆರವಣಿಗೆ ನಡೆಯಿತು. ಶ್ರೀಮಲ್ಲಿಕಾರ್ಜುನ ವಿರಕ್ತ ಮಠದ ಅಕ್ಕನ ಬಳಗದ ಮಹಿಳೆಯರು ಭಾಗವಹಿಸಿದ್ದರು. ಟ್ರಸ್ಟ್‌ನ ಅಧ್ಯಕ್ಷ ಅಜಯ್ ಪೂಜಾರ ಸೇರಿದಂತೆ ಎಲ್ಲಾ ಸದಸ್ಯರು ಭಾಗಿಯಾಗಿದ್ದರು.

> **ಬದುಕಿನ ಬವಣೆಗೆ ಸಜ್ಜನರ ಮಾರ್ಗದರ್ಶನ ಬೇಕು, ಶಾಂತಿ ಸಂತಸದ ಬದುಕಿಗೆ ಗುರುವಿನ ಮಾರ್ಗದರ್ಶನ ಅವಶ್ಯ. ಅಜ್ಞಾನವನ್ನು ಕಳೆದು ಸುಜ್ಞಾನದ ಬೆಳಕನ್ನು ಚೆಲ್ಲುವ ಶಕ್ತಿ ಪ್ರವಚನಕ್ಕಿದೆ ಎಂದರಲ್ಲದೆ ಸಾಮಾಜಿಕ ಜಾಲತಾಣ ಹಾಗೂ ಆಧುನಿಕ ಜೀವನಶೈಲಿ ಬೆನ್ನುಹತ್ತಿ ಬಹಳಷ್ಟು ಯುವಕರು ಸಾಮಾಜಿಕ ಚಿಂತನೆಗಳಿಂದ ವಿಮುಖರಾಗಿರುವ ಇಂದಿನ ದಿನಮಾನಗಳಲ್ಲಿ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಮುಂದಿಟ್ಟುಕೊಂಡು ಯುವಕರು ಮುನ್ನಡೆಯಬೇಕು.**
> -ಫಕ್ಕೀರ ದಿಂಗಾಲೇಶ್ವರ ಸ್ವಾಮೀಜಿ

ಗೋ ಮಾತೆ ರಕ್ಷಣೆಯಲ್ಲಿ ಕಾಂಗ್ರೆಸ್ ಸರಕಾರ ವಿಫಲ

ಬಳ್ಳಾರಿ: ರಾಜ್ಯದ ಕೋಟ್ಯಾಂತರ ಜನರ ಭಾವನೆಗಳೊಂದಿಗೆ ಬೆರೆತಿರುವ ಗೋ ಮಾತೆಯನ್ನು ಸಂರಕ್ಷಣೆ ಮಾಡುವಲ್ಲಿ ರಾಜ್ಯ ಕಾಂಗ್ರೆಸ್ ಸರಕಾರವು ತನ್ನ ಅಸಡ್ಡೆ ತೋರಿಸುತ್ತಿದೆ ಎಂದು ರಾಜ್ಯ ರೈತ ಮೋರ್ಚಾದ ಜಿಲ್ಲಾಧ್ಯಕ್ಷರಾದ ಗುಣಪಾಲ್ ಐನಾಥ್ ರೆಡ್ಡಿ ಹೇಳಿದರು.

ನಗರದ ಬಿಜೆಪಿ ಕಚೇರಿಯ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಗೋವು ಆಧಾರಿತ ಕೃಷಿ ಒಂದು ಬಹು ಮುಖ್ಯವಾದ ವಿಚಾರ, ಗೋವುಗಳಿಗೆ ಮತ್ತು ಮನುಷ್ಯರಿಗೆ ಮತ್ತು ಪ್ರಕೃತಿಗೆ ಅವಿನಾಭಾವ ಸಂಬಂಧ. ಭಾರತೀಯ ಪರಂಪರೆಯಲ್ಲಿ ಗೋ ಮಾತೆಗೆ ತನ್ನದೆ ಆದ ಸ್ಥಾನವಿದೆ. ಈ ದೇಶದಲ್ಲಿ ಕೃಷಿ ಏನಾದರು ಉಳಿದಿದ್ದರೆ ಅದು ಗೋ ಮಾತೆಯ ಕಾಣಿಕೆ ಎಂದರು.

ಈ ವಿಫಲತೆಯು ರಾಜ್ಯ ಸರಕಾರದ ನಿಷ್ಕ್ರಿಯತೆಯನ್ನು ಎತ್ತಿ ತೋರಿಸುತ್ತದೆ. ಗೋ ಶಾಲೆಗಳನ್ನು ಮುಚ್ಚುವ ಮುಖಾಂತರ ಗೋ ಕಳ್ಳ ಸಾಗಣೆಯನ್ನು ಉತ್ತೇಜನ ನೀಡುವಂತೆ ಸರಕಾರ ನಡೆದುಕೊಳ್ಳುತ್ತಿದೆ. ರಾಜ್ಯ ರೈತ ಮೋರ್ಚಾವು ಸರಕಾರವನ್ನು ಒತ್ತಾಯಿಸುವುದೇನೆಂದರೆ ಗೋ ಶಾಲೆಗಳನ್ನು ಪುನರಾರಂಭಿಸಬೇಕು. ಗೋ ಶಾಲೆಗಳಿಗೆ ವಿಶೇಷ ಅನುದಾನವನ್ನು ನೀಡಬೇಕು. ಕೇಂದ್ರ ಪುರಸ್ಕೃತ ಗೋ ಆಧಾರಿತ ಯೋಜನೆಗಳನ್ನು ಶೀಘ್ರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು.

ಪ್ರತಿ ವರ್ಷ ಸರಕಾರದ ವತಿಯಿಂದ ಕೃಷಿ ಖರೀದಿ ಕೇಂದ್ರದಲ್ಲಿ 20 ಕ್ವಿಂಟಾಲ್ ಜೋಳವನ್ನು ಖರೀದಿಸಲಾಗುತ್ತಿದ್ದು, ಈ ವರ್ಷ 10 ಕ್ವಿಂಟಾಲ್‌ಗೆ ಕಡಿತಗೊಳಿಸಿದ್ದು, ಇದರಿಂದ ರೈತರು ತೀವ ತೊಂದರೆಯನ್ನು ಅನುಭವಿಸುವಂತಾಗಿದ್ದು, ಈ ಹಿಂದಿನಂತೆ 20 ಕ್ವಿಂಟಾಲ್ ಜೋಳ ಖರೀದಿಸಬೇಕು. ಜೋಳ ಮತ್ತು ತೊಗರಿ ಖರೀದಿ ಕೇಂದ್ರಗಳನ್ನು ಶೀಘ್ರವಾಗಿ ಪ್ರಾರಂಭಿಸಬೇಕು.

ಬಳ್ಳಾರಿ ಕೃಷಿ ಮಾರುಕಟ್ಟೆಯಲ್ಲಿ ಕುರಿ ಸಂತೆಯನ್ನು ಪ್ರಾರಂಭಿಸಬೇಕು. ಬಳ್ಳಾರಿ ಜಿಲ್ಲೆಯ ಜೀವನಾಡಿಯಾದ ತುಂಗಭದ್ರ ಜಲಾಶಯಕ್ಕೆ ಸಮಾನಂತರ ಜಲಾಶಯವನ್ನು ಪ್ರಾರಂಭಿಸಿ ನೀರಿನ ಸಂಗ್ರಹವನ್ನು ಹೆಚ್ಚಿಸಿ ರೈತರಿಗೆ ಅನುಕೂಲಕರವಾಗುವಂತೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಈ ಮೇಲ್ಕಂಡ ಅಂಶಗಳನ್ನು ರಾಜ್ಯ ಸರಕಾರ ಗಮನಿಸದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ರೂಪಿಸಲಾಗುವುದು.



ನಗರದ ಬಿಜೆಪಿ ಕಚೇರಿಯ ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಮೋರ್ಚಾದ ಜಿಲ್ಲಾಧ್ಯಕ್ಷ ಗುಣಪಾಲ್ ಐನಾಥ್ ರೆಡ್ಡಿ ಮಾತನಾಡಿದರು.

> **ರಾಜ್ಯದಲ್ಲಿ 1.10 ಕೋಟಿ ಜಾನುವಾರುಗಳಿದ್ದು, ಇವುಗಳ ಸಂರಕ್ಷಣೆಮಾಡಲು ಮತ್ತು ಹಾಲು ಉತ್ಪಾದಕರಿಗೆ ಉತ್ತೇಜನ ನೀಡಲು ಕೇಂದ್ರ ಸರಕಾರವು ಸಾಕಷ್ಟು ಕೇಂದ್ರ ಪುರಸ್ಕೃತ ಯೋಜನೆಗಳನ್ನು ರೂಪಿಸಿದೆ. ಈ ಕಾರ್ಯಕ್ರಮಗಳನ್ನು ಅನುಷ್ಠಾನಮಾಡುವುದು ರಾಜ್ಯ ಸರಕಾರದ ಕರ್ತವ್ಯ. ಈ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ರಾಜ್ಯ ಸರಕಾರ ವಿಫಲಗೊಂಡಿದೆ.**
> -ಗುಣಪಾಲ್ ಐನಾಥ್ ರೆಡ್ಡಿ,
> ರೈತ ಮೋರ್ಚಾದ ಜಿಲ್ಲಾಧ್ಯಕ್ಷ

ಮನೆಗಳಿಗೆ ಶೀಘ್ರ ಹಕ್ಕು ಪತ್ರ ವಿತರಿಸಿ

ಸಂಡೂರು: ಸಂಡೂರು ತಾಲೂಕಿನ ಹಳೇ ದರೋಜಿ ಗ್ರಾಮದ ಬುಡ್ಗ ಜಂಗಮ ನವ ಗ್ರಾಮದ ನಿವಾಸಿಗಳು ತಮ್ಮ ವಾಸದ ಮನೆಗಳಿಗೆ ಸರಕಾರವು ಶೀಘ್ರ ಹಕ್ಕು ಪತ್ರ ವಿತರಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಬಗ್ಗೆ ತಾಲೂಕು ಬುಡ್ಗ ಜಂಗಮ ನಿವಾಸಿಗಳು ಸ್ಥಳೀಯ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಷಡಾಕ್ಷರಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಬುಡ್ಗ ಜಂಗಮ ಸಮಾಜದ ಮುಖಂಡ ವಿ.ರಾಮುಡು ಮಾತನಾಡಿ, ಇಲ್ಲಿನ ಬಡ ಕುಟುಂಬಗಳು 25 ವರ್ಷಗಳಿಂದ ವಾಸ ಮಾಡುತ್ತಿದ್ದು, ಸ್ಥಳೀಯ ಗ್ರಾಮ ಪಂಚಾಯಿತಿಗೆ ಮನೆಗಳ ಗುತ್ತಿಗೆ ಕಟ್ಟುತ್ತಿದ್ದೇವೆ. ಆದರೆ ಗ್ರಾಮ ಪಂಚಾಯಿತಿಯವರು ನಮ್ಮ ವಾಸದ ಮನೆಗಳಿಗೆ ಹಕ್ಕು ಪತ್ರ ನೀಡುತ್ತಿಲ್ಲ ಕಾರಣವೇನೆಂಬುದು ತಿಳಿಯದಾಗಿದೆ. ಬಡಜನರ ಉಜ್ವಲ ಭವಿಷ್ಯಕ್ಕಾಗಿ ಸರಕಾರವು ಹಕ್ಕುಪತ್ರಗಳನ್ನು ಶೀಘ್ರವಾಗಿ ವಿತರಿಸಬೇಕು ಎಂದು ಒತ್ತಾಯಿಸಿದರು. ಮುಖಂಡರಾದ ಮಲ್ಲಿಕಾರ್ಜುನಪ್ಪ, ಮಂಜುನಾಥ, ಹುಸೇನಪ್ಪ, ದೊಡ್ಡ ಬಾಲಪ್ಪ ಆಶ್ವನಾಗರಾಜ ಬಸವರಾಜ ತಿಪ್ಪೇಶ್ ಉಪಸ್ಥಿತರಿದ್ದರು.

ವಿಜ್ಞಾನ ದೇಶದ ಬೆಳವಣಿಗೆಗೆ ಸಹಕಾರಿ

ಹೂವಿನಹಡಗಲಿ: ವಿಜ್ಞಾನ ತಂತ್ರಜ್ಞಾನ ದೇಶದ ಬೆಳವಣಿಗೆಗೆ ಪೂರಕ ಎಂದ ಯುವ ವಿಜ್ಞಾನಿ ಡಾ.ಪ್ರಮೋದ್ ಪಾಟೀಲ್ ಹೇಳಿದರು. ಪಟ್ಟಣದ ಸರಕಾರಿ ಅನುದಾನಿತ ತುಂಗಭದ್ರಾ ಪ್ರೌಢಶಾಲೆಯಲ್ಲಿ ದೇಶದ ಮೊದಲ ಶಿಕ್ಷಕಿ ಅಕ್ಷರದವ್ವ ಸಾವಿತ್ರಿ ಬಾಯಿ ಫುಲೆ ಜಯಂತಿ ಆಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಜ್ಞಾನ ತಂತ್ರಜ್ಞಾನ ಮುಂದೆ ಕುರಿತು ಮಾಹಿತಿ ನೀಡಿದರು. ವಿದ್ಯಾರ್ಥಿಗಳು ವಿಜ್ಞಾನವನ್ನು ಬಹಳ ಆಸಕ್ತಿಯಿಂದ ಕಲಿಯಬೇಕು ಎಂದು ಹೇಳಿದರು. ನ್ಯಾನೋ ತಂತ್ರಜ್ಞಾನದಲ್ಲಿ ಹೊಸ ಹೊಸ ಆವಿಷ್ಕಾರಗಳು ಸಂಶೋಧನೆಗಳು ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ವಿಪುಲವಾಗಿ ಜನರನ್ನು ತಲುಪುವ ನಿರೀಕ್ಷೆಯಿದೆ ಎಂದರು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ವ್ಯಾಪಕ ಬೆಳವಣಿಗೆ ಆಗುತ್ತಿವೆ. ರಕ್ಷಣೆ, ಶಿಕ್ಷಣ, ವೈದ್ಯಕೀಯ, ಕೃಷಿ, ನೀರಾವರಿ ಮೊದಲಾದ ರಂಗಗಳಲ್ಲಿ ವಿಜ್ಞಾನದ ಅನ್ವಯಗಳನ್ನು ಬಳಸಲಾಗುತ್ತದೆ ಎಂದರು. ನೆದರ್ಲೆಂಡ್‌ನ ಮಕ್ಕಳೊಂದಿಗೆ ಅನುಭವ ಹಂಚಿಕೊಂಡರು. ಸುರೇಶ ಅಂಗಡಿ ಅಧ್ಯಕ್ಷತೆವಹಿಸಿದ್ದರು. ದ್ವಾರಕೀಶ್ ರೆಡ್ಡಿ, ಗೀತಾ.ಪಿ.ಎಂ ಮಾತನಾಡಿದರು. ನೆದರ್ಲೆಂಡ್‌ನಲ್ಲಿ ಸಾಧನೆಗೈದ ಸಾಧಕ ವಿದ್ಯಾರ್ಥಿಗೆ ಶಾಲೆಯ ವತಿಯಿಂದ ಗೌರವಿಸಲಾಯಿತು. ಶಿಕ್ಷಕರಾದ ವೈ.ಜಯಮ್ಮ ಬಸಪ್ಪ.ಕೆ, ಆನಂದ್.ಜಿ, ಸ್ವಾಮಿನಾಥ ರಾಮಸ್ವಾಮಿ ಲಂಬಾಣಿ ಗಿಡ್ಡಾನಾಯ್ಕ್, ಪ್ರತಿಮಾ, ರೇಖಾ.ಎಸ್, ಸಂಗಮೇಶ ಸುಂಕದ, ಪ್ರಸಾದ್, ಸಂತೋಷ ಕುಮಾರ್ ಉಪಸ್ಥಿತರಿದ್ದರು.

ವಿವೇಕಾನಂದರ ತತ್ವಾದರ್ಶ ಜೀವಂತ

ಬಳ್ಳಾರಿ: ಆಧ್ಯಾತ್ಮಿಕ ಲೋಕದ ಮಹಾನ್ ಚೇತನ, ಭವ್ಯ ಭಾರತದ ಹೆಮ್ಮೆಯ ಪುತ್ರ, ಯುವಕರ ಪಾಲಿನ ಸ್ಫೂರ್ತಿಯ ಚಿಲುಮೆಯಾಗಿದ್ದು, ಸ್ವಾಮಿ ವಿವೇಕಾನಂದರ ತತ್ವಾದರ್ಶಗಳು ಎಂದೆಂದಿಗೂ ಜೀವಂತ ಎಂದು ಶ್ರೀಮೇಧಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ರಾಮ್ ಕಿರಣ್ ಹೇಳಿದರು.

ನೆಹರು ಯುವ ಕೇಂದ್ರ, ಬಳ್ಳಾರಿ, ಶ್ರೀಮೇಧಾ ಪದವಿ ಪೂರ್ವ ಕಾಲೇಜ್ ಹಾಗೂ ಚಿಗುರು ಕಲಾ ತಂಡ, ಇಬ್ರಾಹಿಂಪುರ ಇವರ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ 162ನೇ ಜಯಂತಿ ಅಂಗವಾಗಿ ನಗರದ ಕೋಟೆ ಪ್ರದೇಶದ ಶ್ರೀಮೇಧಾ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಯುವ ದಿನ ಕಾರ್ಯಕ್ರಮ ಉದ್ಘಾಟಿಸಿದರು.

ಸ್ವಾಮಿ ವಿವೇಕಾನಂದರು ಜೀವನ ಚರಿತ್ರೆ ಮತ್ತು ಅವರ ಸಾಧನೆ ಬಗ್ಗೆ ಯುವ ಸಮುದಾಯ ಅರಿತುಕೊಳ್ಳಬೇಕು. 'ಏಳಿ ಎದ್ದೇಳಿ' ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ದಿವ್ಯವಾಣಿಯ ಜ್ಞಾನ ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಸರಳಾದೇವಿ ಪ್ರಥಮ ದರ್ಜೆ ಕಾಲೇಜಿನ ನಾಟಕ ವಿಭಾಗದ ಅತಿಥಿ ಉಪನ್ಯಾಸಕರಾದ ನೇತಿ ರಘುರಾಮ್ ಅವರು ಮಾತನಾಡಿ, ಸ್ವಾಮಿ ವಿವೇಕಾನಂದರು ಒಬ್ಬ ವೀರ ಸನ್ಯಾಸಿ, ತತ್ವಜ್ಞಾನಿ, ಭಾರತ ದೇಶದಲ್ಲಿ ಭಾರತ ಸಂಸ್ಕೃತಿಯನ್ನು ದೇಶ ವಿದೇಶದಲ್ಲಿ ಪ್ರಚಾರ ಮಾಡಿದ ಏಕೈಕ ವ್ಯಕ್ತಿಯಾಗಿದ್ದರು ಎಂದು ಹೇಳಿದರು.



ಸ್ವಾಮಿ ವಿವೇಕಾನಂದರ 162ನೇ ಜಯಂತಿಗೆ ರಾಷ್ಟ್ರೀಯ ಯುವ ದಿನ ಕಾರ್ಯಕ್ರಮದಲ್ಲಿ ಶ್ರೀಮೇಧಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ರಾಮ್ ಕಿರಣ್ ಉದ್ಘಾಟಿಸಿದರು.

> **ವಿವೇಕಾನಂದ ಅವರ ಜೀವನ ಚರಿತ್ರೆ, ಸಾಧನೆ ಹಾಗು ಅವರು ನಡೆದು ಬಂದಂತಹ ದಾರಿ ಯುವ ಜನಾಂಗವು ಅರ್ಥೈಸಿಕೊಳ್ಳಬೇಕು.**
> -ನೇತಿ ರಘುರಾಮ್,
> ಅತಿಥಿ ಉಪನ್ಯಾಸಕ

ಕಾಲೇಜಿನ ಉಪಪ್ರಾಚಾರ್ಯರಾದ ವಿಜಯ ಭಾಸ್ಕರ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸಿದ್ದರು. ಇಬ್ರಾಹಿಂಪುರ ಚಿಗುರು ಕಲಾ ತಂಡದ ಹುಲುಗಪ್ಪ ಗಾಯನ ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದಲ್ಲಿ ಅಕ್ಷಯ ಕಲಾ ಟ್ರಸ್ಟ್‌ನ ಎಚ್.ಜಿ.ಸುಂಕಪ್ಪ, ನೆಹರು ಯುವ ಕೇಂದ್ರದ ಅಂಬರೀಶ್ ಸೇರಿದಂತೆ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಾಲಕ ನಾಪತ್ತೆ ಅಪಹರಣ ಶಂಕೆ

ಹೊಸಪೇಟೆ: ಹಿರೇಹಡಗಲಿ ತಾಲೂಕಿನ ದೊಡ್ಡತುಂಬಿನಕೇರಿ ತಾಂಡದ ನಿವಾಸಿ, ಮುರಾರ್ಜಿ ಶಾಲೆಯ ವಿದ್ಯಾರ್ಥಿ ಎಲ್.ವಿ.ಮಣಿಕಂಠ ಡಿ.27 ರಂದು ನಾಪತ್ತೆಯಾಗಿದ್ದಾನೆ ಎಂದು ತಂದೆ ವೆಂಕಟೇಶ್ ನಾಯ್ಕ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಸಿರಗುಪ್ಪ ತಾಲೂಕಿನ ಕೆಂಚನಗುಡ್ಡಿಯ ಮುರಾರ್ಜಿ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಬಾಲಕ ಶೈಕ್ಷಣಿಕ ಪ್ರವಾಸ ಮುಗಿಸಿಕೊಂಡು, ಡಿ.24 ರಂದು ಹಾಸ್ಟೆಲ್‌ನಿಂದ ಮನೆಗೆ ಬಂದು ಡಿ.27 ರಂದು ಬೆಳಿಗ್ಗೆ 8 ಗಂಟೆಗೆ ಹಾಸ್ಟೆಲ್‌ಗೆ ಹೋಗುತ್ತೇನೆಂದು ಲಗೇಜ್ ತೆಗೆದುಕೊಂಡು ಹೋದವನು, ಹಾಸ್ಟೆಲ್‌ಗೂ ಹೋಗದೇ ವಾಪಾಸ್ ಮನೆಗೆ ಬಾರದೆ ಕಾಣೆಯಾಗಿದ್ದಾನೆಂದು ತಂದೆ ದೂರಿನಲ್ಲಿ ದಾಖಲಿಸಿದ್ದಾರೆ. ಬಾಲಕ ಎತ್ತರ 5.1 ಅಡಿ, ಸಾಧಾರಣ ಮೈಕಟ್ಟು, ದುಂಡು ಮುಖ, ಎಣ್ಣೆಗೆಂಪು ಮೈಬಣ್ಣ ಇದ್ದು, ಈತನು ನೇರಳೆ ಬಣ್ಣದ ಅಂಗಿ, ಕ್ರೀಮ್ ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಲಂಬಾಣಿ, ಕನ್ನಡ, ಹಿಂದಿ ಭಾಷೆಯನ್ನು ಬಲ್ಲವನಾಗಿದ್ದು, ಬಾಲಕನ ಬಗ್ಗೆ ಸುಳಿವು ಸಿಕ್ಕಲ್ಲಿ ಕಂಟ್ರೋಲ್ ರೂಂ 08394-200202, 9480805700, ಹಿರೇಹಡಗಲಿ ಪೊಲೀಸ್ ಸಬ್‌ಇನ್ಸಪೆಕ್ಟರ್ -9480805781 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಶ್ರೇಯಸ್ ಅಯ್ಯರ್: ಪಂಜಾಬ್ ಕಿಂಗ್ಸ್ ನಾಯಕ

ದೆಹಲಿ: ಪಂಜಾಬ್ ಕಿಂಗ್ಸ್ ತಂಡ ನೂತನ ನಾಯಕನನ್ನು ಘೋಷಣೆ ಮಾಡಿದೆ. ಕಳೆದ ಆವೃತ್ತಿಯಲ್ಲಿ ಕೆ.ಕೆ.ಆರ್ ತಂಡವನ್ನು ಚಾಂಪಿಯನ್ ಮಾಡಿದ್ದ ಟೀಮ್ ಇಂಡಿಯಾದ ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ನಾಯಕನಾಗಿ ನೇಮಕಗೊಂಡಿದ್ದಾರೆ. ಶ್ರೇಯಸ್

ಅವರನ್ನು ಮೆಗಾ ಹರಾಜಿನಲ್ಲಿ 26.75 ಕೋಟಿ ರು.ಗೆ ಪಂಜಾಬ್ ?ಖರೀದಿಸಿತ್ತು. ಶ್ರೇಯಸ್ ಅಯ್ಯರ್ ಅವರ ನಾಯಕತ್ವದಲ್ಲಿ ಐಪಿಎಲ್ ಪ್ರಶಸ್ತಿ ಗೆದ್ದಿದ್ದಲ್ಲದೆ, ದೇಶೀಯ ಕ್ರಿಕೆಟ್‌ನಲ್ಲಿ ಮುಂಬೈ ನಾಯಕರಾಗಿ ರಣಜಿ ಟ್ರೋಫಿ, ಇರಾನಿ ಟ್ರೋಫಿ ಮತ್ತು ಸಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಪ್ರಶಸ್ತಿಗಳನ್ನು ಗೆದ್ದುಕೊಂಡಿದೆ. ನಾಯಕನಾಗಿ ನೇಮಕಗೊಂಡ ಬಳಿಕ ಪ್ರತಿಕ್ರಿಯಿಸಿದ ಅಯ್ಯರ್, ತಂಡದ ಕೋಚ್ ಪಾಂಟಿಂಗ್ ಜತೆಗೆ ಮತ್ತೊಮ್ಮೆ ಕಾರ್ಯನಿರ್ವಹಿಸುವುದನ್ನು ಎದುರು ನೋಡು ತ್ತಿರುವೆ, ತಂಡದ ಮ್ಯಾನೇಜ್‌ಮೆಂಟ್ ನನ್ನ ಮೇಲೆ ಇಟ್ಟ ನಂಬಿಕೆಗೆ ಋಣ ಸಂದಾಯ ಮಾಡುವ ಭರವಸೆ ಯಲ್ಲಿದ್ದೇನೆ ಎಂದು ಶ್ರೇಯಸ್ ಅಯ್ಯರ್ ಹೇಳಿದ್ದಾರೆ.

ಅನ್ವಯ್ ದ್ರಾವಿಡ್ ಶತಕ ವ್ಯರ್ಥ

ಅಹಮ್ಮದಾಬಾದ್: ವಿಜಯ್ ಮರ್ಚೆಂಟ್ ಟ್ರೋಫಿಯಲ್ಲಿ ಟೀಂ ಇಂಡಿಯಾದ ಮಾಜಿ ಆಟಗಾರ

ರಾಹುಲ್ ದ್ರಾವಿಡ್ ಅವರ ಕಿರಿಯ ಪುತ್ರ ಅನ್ವಯ್ ದ್ರಾವಿಡ್ ಅವರ ಅದ್ಭುತ ಫಾರ್ಮ್ ಮುಂದುವರೆದಿದೆ. ಈ ಟೂರ್ನಿಯಲ್ಲಿ ಕರ್ನಾಟಕ ತಂಡದ ಪರ ರನ್‌ಗಳ ಶಿಖರ ಕಟ್ಟಿರುವ ಅನ್ವಯ್, ಸೋಮವಾರ ಪಂಜಾಬ್ ವಿರುದ್ಧದ ಪಂದ್ಯದಲ್ಲೂ ಶತಕದ ಇನ್ನಿಂಗ್ಸ್ ಆಡಿದ್ದಾರೆ. ಅಹಮದಾಬಾದ್‌ನ ರೈಲ್ವೇ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಅನ್ವಯ್ 110 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದರು. ಈ ಇನ್ನಿಂಗ್ಸ್‌ನಲ್ಲಿ 234 ಎಸೆತಗಳನ್ನು ಎದುರಿಸಿದ ಅವರು 12 ಬೌಂಡರಿಗಳನ್ನು ಬಾರಿಸಿದರು.

ಅನ್ವಯ್ ಶತಕ ವ್ಯರ್ಥ: ಅನ್ವಯ್ ಶತಕ ಬಾರಿಸಿದರಾದರೂ ಕರ್ನಾಟಕ ತಂಡ ಸೆಮಿಫೈನಲ್ ತಲುಪಲು ಸಾಧ್ಯವಾಗಲಿಲ್ಲ. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ 9 ವಿಕೆಟ್‌ಗೆ 742 ರನ್ ಕಲೆಹಾಕಿತು. ಉತ್ತರ ವಾಗಿ ಕರ್ನಾಟಕ ತಂಡ 280 ರನ್ ಗಳಿಸಲಷ್ಟೇ ಶಕ್ತವಾಯಿತು. ಮೂರು ದಿನಗಳ ಪಂದ್ಯದಲ್ಲಿ ಮುನ್ನಡೆ ಪಡೆಯುವ ತಂಡ ಮುಂದಿನ ಸುತ್ತಿಗೆ ಅರ್ಹತೆ ಪಡೆಯುತ್ತಿತ್ತು. ಆ ಪ್ರಕಾರ ಪಂದ್ಯದಲ್ಲಿ ಮುನ್ನಡೆ ಪಡೆದುಕೊಂಡ ಪಂಜಾಬ್ ತಂಡ ಸೆಮಿಫೈನಲ್‌ಗೆ ಅರ್ಹತೆ ಪಡೆದುಕೊಂಡಿದೆ.

ಒಟ್ಟು ಎಂಟು ತಂಡಗಳು ಭಾಗಿ | ಭಾರತ–ಪಾಕ್ ತಂಡಗಳ ಪ್ರಕಟಣೆ ಬಾಕಿ

ಚಾಂಪಿಯನ್ಸ್ ಟ್ರೋಫಿ: 6 ತಂಡಗಳು ಪ್ರಕಟ

ದೆಹಲಿ: ಮಿನಿ ವಿಶ್ವಕಪ್ ಎಂದೇ ಕರೆಯಲ್ಪಡುವ ಐಸಿಸಿ ಚಾಂಪಿಯನ್ಸ್ ಟ್ರೋಫಿ–2025 ಆರಂಭಕ್ಕೆ ಕ್ರಿಕೆಟ್ ಪ್ರೇಮಿಗಳು ತುದಿಗಾಲಲ್ಲಿ ಕಾದು ಕುಳಿತಿದ್ದಾರೆ. ಈಗಾಗಲೇ ಟೂರ್ನಿಯಲ್ಲಿ ಪಾಲ್ಗೊಳ್ಳುವ 8 ತಂಡಗಳ ಪೈಕಿ 6 ತಂಡಗಳು ಪ್ರಕಟಗೊಂಡಿದೆ. ಹಾಲಿ ಚಾಂಪಿಯನ್ ಪಾಕಿಸ್ತಾನ ಮತ್ತು ಭಾರತ ನಡುವಿನ ಹೈವೋಲ್ಟೇಜ್ ಪಂದ್ಯವೂ ಈ ಕೂಟದ ಆಕರ್ಷಣೆಗಳಲ್ಲೊಂದು. ಇತ್ತಂಡಗಳ ಈ ಮುಖಾಮುಖಿ ಫೆ. 23ರಂದು ದುಬೈನಲ್ಲಿ ನಡೆಯಲಿದೆ. ಆದರೆ ಉಭಯ ದೇಶಗಳು ಇದುವರೆಗೂ ತಂಡವನ್ನು ಪ್ರಕಟಿಸಿಲ್ಲ. ಪ್ರಕಟಗೊಂಡ ಉಳಿದ 6 ತಂಡಗಳು ಹೀಗಿವೆ.

ದಕ್ಷಿಣ ಆಫ್ರಿಕಾ ತಂಡ: ಟೆಂಬಾ ಬವುಮಾ (ನಾಯಕ),



ಟೋನಿ ಡಿ ಜೋರ್ಜಿ, ಮಾರ್ಕೊ ಜಾನ್ಸೆನ್, ಹೆನ್ರಿಚ್ ಕ್ಲಾಸೆನ್, ಕೇಶವ್ ಮಹಾರಾಜ್, ಏಡೆನ್ ಮಾರ್ಕ್ರಾಮ್, ಡೇವಿಡ್ ಮಿಲ್ಲರ್, ವಿಯಾನ್ ಮುಲ್ಡರ್, ಲುಂಗಿ ಎನ್‌ಗಿಡಿ, ಅನ್ರಿಚ್ ನಾರ್ಜೆ, ಕಗಿಸೊ ರಬಾಡಾ, ರಯಾನ್ ರಿಕೆಲ್ಟನ್, ತಬ್ರೈಜ್ ಶಮ್ಸಿ, ಡುಸ್ಸೆನ್ ಸ್ಟಬ್ವಾನ್, ಟ್ರಿಸ್ಟಾನ್ ಸ್ಟಬ್ಸ್.

ಅಫ್ಘಾನಿಸ್ತಾನ ತಂಡ: ಹಶ್ಮತುಲ್ಲಾ ಶಾಹಿದಿ (ನಾಯಕ),



ಇಬ್ರಾಹಿಂ ಜದ್ರಾನ್, ರಹಮಾನುಲ್ಲಾ ಗುಬಾ ್ರಜ್, ಸೇದಿಕುಲ್ಲಾ ಅಟಲ್, ರಹಮತ್ ಷಾ, ಇಕ್ರಮ್ ಅಲಿಖಿಲ್, ಗುಲ್ಬದಿನ್ ನೈಬ್, ಅಜ್ಮತುಲ್ಲಾ ಒಮರ್ಜಾಯ್, ಮೊಹಮ್ಮದ್ ನಬಿ, ರಶೀದ್ ಖಾನ್, ಎಎಮ್ ಗಜನ್ಫರ್, ನೂರ್ ಅಹ್ಮದ್, ಫಜಲ್ಹಕ್ ಫಾರೂಕಿ, ಫರೀದ್ ಮಲಿಕ್, ನವೀದ್ ಜದ್ರಾನ್.

ಆಸ್ಟ್ರೇಲಿಯಾ ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಅಲೆಕ್ಸ್ ಕ್ಯಾರಿ, ನಾಥನ್ ಎಲ್ಲಿಸ್, ಆರನ್ ಹಾರ್ಡಿ, ಜೋಶ್



ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಮಾರ್ನಸ್ ಲ್ಯಾಬುಶೇನ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಮ್ಯಾಟ್ ಶಾರ್ಟ್, ಸ್ಟೀವನ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಮಾರ್ಕಸ್ ಸ್ಟೋನಿಸ್, ಆಡ್ಯಂ ಝುಂಪ.

ನ್ಯೂಜಿಲ್ಯಾಂಡ್: ಮಿಚೆಲ್ ಸ್ಯಾಂಟ್ನರ್ (ನಾಯಕ), ವಿಲ್

ಯಂಗ್, ಡೆವೊನ್ ಕಾನ್ವೆ, ರಾಚಿನ್ ರವೀಂದ್ರ, ಕೇನ್ ವಿಲಿಯಮ್ಸನ್, ಮಾರ್ಕ್ ಚಾಪ್ ಮನ್, ಡ್ಯಾರಿಲ್ ಮಿಚೆಲ್, ಟಾಮ್ ಲ್ಯಾಥಮ್, ಗ್ಲೆನ್ ಫಿಲಿಪ್ಸ್, ಮೈಕೆಲ್ ಬ್ರೇಸ್‌ವೆಲ್, ನಾಥನ್ ಸ್ಮಿತ್, ಮ್ಯಾಟ್ ಹೆನ್ರಿ, ಲಾಕಿ ಫರ್ಗುಸನ್, ಬೆನ್ ಸಿಯರ್ಸ್, ವಿಲ್ ಒ ರೂರ್ಕ್.

ಬಾಂಗ್ಲಾದೇಶ ತಂಡ: ನಜ್ಮುಲ್ ಹೊಸೈನ್ ಶಾಂಟೊ (ನಾಯಕ), ಮುಶ್ಫಿಕರ್ ರಹೀಮ್ (ವಿ.ಕೀ), ತೌಹಿದ್

ಹೃದಯ್, ಸೌಮ್ಯ ಸರ್ಕಾರ್, ತಂಝಿದ್ ಹಸನ್, ಮಹ್ಮುದುಲ್ಲಾ, ಜೇಕರ್ ಅಲಿ, ಮೆಹಿದಿ ಹಸನ್ ಮಿರಾಜ್, ರಿಶಾದ್ ಹೊಸೈನ್, ತಸ್ಕಿನ್ ಅಹ್ಮದ್, ಮುಸ್ತಫಿಜುರ್ ರಹಮಾನ್, ಪರ್ವೇಜ್ ಹೊಸೈನ್, ನಸುಮ್ ಅಹ್ಮದ್, ತಂಜಿಮ್ ಹಸನ್, ನಹಿದ್ ರಾಣಾ.

ಇಂಗ್ಲೆಂಡ್ ತಂಡ: ಜೋಸ್ ಬಟ್ಲರ್ (ನಾಯಕ), ಜೋಫ್ರಾ ಆರ್ಚರ್, ಗಸ್ ಅಟ್ಕಿನ್ಸನ್, ಜಾಕೋಬ್ ಬೆಥೆಲ್, ಹ್ಯಾರಿ ಬ್ರೂಕ್, ಬ್ರೈಡನ್ ಕಾರ್ಸೆ, ಬೆನ್ ಡಕೆಟ್, ಜೇಮೀ ಓವರ್ಟನ್,



ಜೇಮೀ ಸ್ಮಿತ್, ಲಿಯಾಮ್ ಲಿವಿಂಗ್ಸ್ಟೋನ್, ಆದಿಲ್ ರಶೀದ್, ಜೋ ರೂಟ್, ಸಾಕಿಬ್ ಮಹಮೂದ್, ಫಿಲ್ ಸಾಲ್ಟ್, ಮಾರ್ಕ್ ವುಡ್.

ಪಾಕಿಸ್ತಾನ ಬಲಿಷ್ಠವಾಗಿದೆ: ಮೊಹಮ್ಮದ್ ಅಮೀರ್

ಫೆಬ್ರವರಿ 23ರಂದು ದುಬೈ ಇಂಟರ್‌ನ್ಯಾಷನಲ್



ಸ್ಟೇಡಿಯಂನಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳು ಮುಖಾಮುಖಿ ಯಾಗಲಿವೆ. ಐಸಿಸಿ ವಿಶ್ವಕಪ್ ಟೂರ್ನಿಗಳಲ್ಲಿ ಭಾರತ ತಂಡ, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ ಪ್ರಾಬಲ್ಯ ಸಾಧಿಸಿದೆ. ಕೇವಲ ಒಂದು ಬಾರಿ ಮಾತ್ರ ಪಾಕಿಸ್ತಾನ ತಂಡ ಗೆಲುವು ಪಡೆದಿರುವುದು ಬಿಟ್ಟರೆ, ಇನ್ನುಳಿದ ಪಂದ್ಯಗಳಲ್ಲಿ ಸೋಲು ಅನುಭವಿಸಿದೆ. ಪಾಕ್ ತಂಡದ ಕುರಿತು ಮಾತನಾಡಿದ ಮಾಜಿ ಆಟಗಾರ ಮೊಹಮ್ಮದ್ ಅಮೀರ್, ಭಾರತ ಹಾಗೂ ಪಾಕಿಸ್ತಾನ ನಡುವಣ ಪಂದ್ಯದ ಬಗ್ಗೆ ಮಾತನಾಡಿದ್ದಾರೆ. ಇತ್ತೀಚಿನ ಪ್ರದರ್ಶನಗಳನ್ನು ಗಮನಿಸಿದರೆ, ಭಾರತಕ್ಕಿಂತ ಪಾಕಿಸ್ತಾನ ತಂಡ ಮೇಲುಗೈ ಸಾಧಿಸಿದೆ ಎಂದು ಹೇಳಿದ್ದಾರೆ. ಪಾಕಿಸ್ತಾನ ತಂಡ, ಆಸ್ಟ್ರೇಲಿಯಾ ತಂಡವನ್ನು ಅವರದ್ದೇ ನೆಲದಲ್ಲಿ ಸೋಲಿಸಿದೆ, ದಕ್ಷಿಣ ಆಫ್ರಿಕಾ ತಂಡವನ್ನು ಕೂಡ ಸೋಲಿಸಿದೆ. ವಿದೇಶಿ ನೆಲದಲ್ಲಿನ ಪಾಕಿಸ್ತಾನದ ಪ್ರದರ್ಶನದ ಅತ್ಯುತ್ತಮವಾಗಿದೆ. ಹಾಗಾಗಿ ಭಾರತ ತಂಡಕ್ಕಿಂತ ಪಾಕಿಸ್ತಾನ ತಂಡ ಮೇಲುಗೈ ಸಾಧಿಸಿದೆ ಎಂದು ಮೊಹಮ್ಮದ್ ಅಮೀರ್ ತಿಳಿಸಿದ್ದಾರೆ.

ಶೆಫಾಲಿ ವರ್ಮಾ ಶೈನಿಂಗ್

ದೆಹಲಿ: ಭಾರತ ಮಹಿಳಾ ಕ್ರಿಕೆಟ್ ತಂಡದಿಂದ ಹೊರಗುಳಿದಿರುವ ಸ್ಫೋಟಕ ಆರಂಭಿಕ ಆಟಗಾರ್ತಿ ಶೆಫಾಲಿ ವರ್ಮಾ ದೇಶೀ ಕ್ರಿಕೆಟ್‌ನಲ್ಲಿ ರನ್‌ಗಳ ಮಳೆ ಸುರಿಸುತ್ತಿದ್ದಾರೆ. ಪ್ರಸ್ತುತ

ನಡೆಯುತ್ತಿರುವ ಹಿರಿಯ ಮಹಿಳಾ ಏಕದಿನ ಚಾಲೆಂಜರ್ ಟ್ರೋಫಿಯಲ್ಲಿ ಶೆಫಾಲಿ ಸ್ಫೋಟಕ ಶತಕ ಸಿಡಿಸಿ ಮಿಂಚಿದ್ದಾರೆ. ಎ ತಂಡದ ಪರ ಆಡುತ್ತಿರುವ ಶೆಫಾಲಿ ಈ ಪಂದ್ಯದಲ್ಲಿ ಭರ್ಜರಿ ಶತಕ ಬಾರಿಸಿದ್ದರು. ಶೆಫಾಲಿ ಕೇವಲ 60 ಎಸೆತಗಳಲ್ಲಿ ತಮ್ಮ ಮೊದಲ ಶತಕದ ಬಾರಿಸಿದರು. ಇದು ಈ ಟೂರ್ನಿಯಲ್ಲಿ ಅವರ ಸತತ ನಾಲ್ಕನೇ ಅರ್ಧಶತಕ ಆಗಿದೆ. ಇದಕ್ಕೂ ಮುನ್ನ ಅವರು 2 ಪಂದ್ಯಗಳಲ್ಲಿ ಶತಕದ ಸನಿಹಕ್ಕೆ ಬಂದು ಔಟಾಗಿ ಶತಕ ವಂಚಿತರಾಗಿದ್ದರು. ಟೂರ್ನಿಯಲ್ಲಿ ಇದುವರೆಗೆ ಆಡಿದ ಎಲ್ಲಾ ನಾಲ್ಕು ಪಂದ್ಯಗಳಲ್ಲೂ ಶೆಫಾಲಿ ಅರ್ಧ ಶತಕ ಬಾರಿಸಿದ್ದಾರೆ. ಅಷ್ಟೇ ಅಲ್ಲ, ಏಕದಿನ ಪಂದ್ಯವಾದರೂ ಟಿ20 ಪಂದ್ಯ ಎಂಬಂತೆ ಬ್ಯಾಟ್ ಬೀಸುತ್ತಿದ್ದಾರೆ. ಮೊದಲ ಪಂದ್ಯದಲ್ಲಿ 65 ಎಸೆತಗಳಲ್ಲಿ 95 ರನ್ ಬಾರಿಸಿದ್ದ ಅವರು ಎರಡನೇ ಪಂದ್ಯದಲ್ಲಿ 71 ಎಸೆತಗಳಲ್ಲಿ 91 ರನ್ ಗಳಿಸಿದ್ದರು.

ಬಿಸಿಸಿಐ ಸಭೆ: ಹೊಸ ನಾಯಕತ್ವ ಪ್ರಸ್ತಾಪ

ಮುಂಬಯಿ: ಆಸ್ಟ್ರೇಲಿಯಾ ಪ್ರವಾಸದ ವೈಫಲ್ಯದ ಬಗ್ಗೆ ಬಿಸಿಸಿಐ ಅಧಿಕಾರಿಗಳು ಮುಂಬೈನಲ್ಲಿ ನಡೆಸಿದ್ದ ಪರಾಮರ್ಶೆಯ ಸಭೆಯಲ್ಲಿ ರೋಹಿತ್ ಶರ್ಮಾ

ಮತ್ತು ವಿರಾಟ್ ಕೊಹ್ಲಿ ಕ್ರಿಕೆಟ್ ಭವಿಷ್ಯದ ಕುರಿತು ಚರ್ಚಿಸಲಾಗಿದ್ದು, ಇದೇ ವೇಳೆ ರೋಹಿತ್ ಭವಿಷ್ಯದ ನಾಯಕನನ್ನು ಹುಡುಕುವಂತೆ ಬಿಸಿಸಿಐಗೆ ತಿಳಿಸಿದ್ದಾರೆ ಎಂದು ವರದಿಯಾಗಿದೆ.

ಎರಡು ಗಂಟೆಗೂ ಅಧಿಕ ಸಮಯದವರೆಗೆ ನಡೆದ ಸಭೆಯಲ್ಲಿ ಬಿಸಿಸಿಐನ ಉನ್ನತ ಅಧಿಕಾರಿಗಳು, ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ಮತ್ತು ಮುಖ್ಯ ಕೋಚ್ ಗೌತಮ್ ಗಂಭೀರ್ ಕೂಡ ಉಪಸ್ಥಿತರಿದ್ದರು. ಈ ವೇಳೆ ರೋಹಿತ್ ಮುಂದಿನ ಕೆಲವು ತಿಂಗಳುಗಳ ಕಾಲ ಭಾರತ ತಂಡದ ನಾಯಕತ್ವದಲ್ಲಿ ಮುಂದುವರಿಯುವ ಬಯಕೆಯನ್ನು ಮತ್ತು ಹೊಸ ನಾಯಕನ ಹುಡುಕಾಟವನ್ನು ಮುಂದುವರಿಸುವಂತೆ ಬಿಸಿಸಿಐಗೆ ಕೇಳಿಕೊಂಡಿದ್ದಾರೆ ಎನ್ನಲಾಗಿದೆ. ರೋಹಿತ್ ಮುಂದಿನ ಉತ್ತರಾಧಿಕಾರಿಯಾಗಿ ಸ್ಟಾರ್ ವೇಗಿ ಜಸ್ಪ್ರೀತ್ ಬುಮ್ರಾ ಹೆಸರನ್ನು ಪ್ರಸ್ತಾಪಿಸಿದ್ದರು, ಆದರೆ ಬುಮ್ರಾ ಆಯ್ಕೆಗೆ ಬಿಸಿಸಿಐ ಅಧಿಕಾರಿಗಳು ವಿರೋಧ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಕಾರ್ಯದೊತ್ತಡ ತಗ್ಗಿಸುವ ನೆಪ ನೀಡಿ ಭಾರತದ ಪ್ರಮುಖ ಕ್ರಿಕೆಟಿಗರು ಇತ್ತೀಚೆಗಿನ ವರ್ಷಗಳಲ್ಲಿ ಪದೇ ಪದೇ ಪ್ರಮುಖವಲ್ಲದ ಕೆಲ ಸರಣಿಗಳಿಂದ ಹೊರಗುಳಿಯುವುದು ಸಾಮಾನ್ಯವಾಗಿತ್ತು, ಆದರೆ ಇನ್ನು ಮುಂದೆ ಇಂತಹ ವಿಶ್ರಾಂತಿಗಳಿಗೆ ಅವಕಾಶ ನೀಡದಿರಲು ಬಿಸಿಸಿಐ ನಿರ್ಧರಿಸಿದೆ. ಇನ್ನು ಯಾವುದಾದರೂ ಸರಣಿಯಿಂದ ವಿಶ್ರಾಂತಿ ಬಯಸುವ ಆಟಗಾರ ಸೂಕ್ತ ವೈದ್ಯಕೀಯ ಕಾರಣವನ್ನು ನೀಡುವುದು ಅಗತ್ಯವಾಗಿರುತ್ತದೆ. ಇದರ ಹೊರತಾಗಿ ಬೇರಾವುದೇ ಕಾರಣಗಳಿಂದ ಸರಣಿಗಳಿನ್ನು ತಪ್ಪಿಸಿಕೊಳ್ಳುವಂತಿಲ್ಲ ಎಂದೂ ಸೂಚಿಸಿದೆ.

ವಿಶ್ವದಾಖಲೆಯತ್ತ ವಿದರ್ಭ ನಾಯಕ | ಕನ್ನಡಿಗ ಕರುಣ್ ನಾಯರ್ ಪರಾಕ್ರಮ

ಆರು ಇನ್ನಿಂಗ್ಸ್‌ಗಳಲ್ಲಿ ಐದು ಶತಕ, 664 ರನ್

ವಡೋದರಾ: ವಿದರ್ಭ ತಂಡದ ನಾಯಕನಾಗಿ ವಿಜಯ್ ಹಜಾರೆ ಟ್ರೋಫಿ ಪಂದ್ಯಾವಳಿಯಲ್ಲಿ ಬ್ಯಾಟಿಂಗ್ ಮಾಡಿರುವ 6 ಇನ್ನಿಂಗ್ಸ್‌ಗಳಲ್ಲಿ ಕನ್ನಡಿಗ ಕರುಣ್ ನಾಯರ್ 664 ರನ್ ಗಳಿಸಿದ್ದಾರೆ. ಇದರಲ್ಲಿ 5 ಶತಕಗಳಿರುವುದು ವಿಶೇಷ. ಕರುಣ್ ನಾಯರ್‌ರ ಮತ್ತೊಂದು ವಿಶೇಷವೆಂದರೆ ಈ 6 ಇನ್ನಿಂಗ್ಸ್‌ಗಳಲ್ಲಿ ಒಮ್ಮೆ ಮಾತ್ರ ವಿಕೆಟ್ ಒಪ್ಪಿಸಿದ್ದು, 5 ಇನ್ನಿಂಗ್ಸ್‌ಗಳಲ್ಲಿ ಅಜೇಯರಾಗಿ ಉಳಿದವರು.

ಸಲದ ವಿಜಯ್ ಹಜಾರೆ ಟ್ರೋಫಿಯಲ್ಲಿ ತಮ್ಮ ಅಬ್ಬರದ ಪ್ರದರ್ಶನ ಮುಂದುವರಿಸಿದ್ದಾರೆ. ಈ ಆವೃತ್ತಿಯಲ್ಲಿ ವಿದರ್ಭ ತಂಡವನ್ನು ಮುನ್ನಡೆಸುತ್ತಿರುವ ಕರುಣ್ ನಾಯರ್ ನಾಯಕತ್ವದ ಜೊತೆಗೆ ಬ್ಯಾಟಿಂಗ್‌ನಲ್ಲಿ ಹೊಸ ದಾಖಲೆಯನ್ನೇ ಸೃಷ್ಟಿಸಿದ್ದಾರೆ. ಇಡೀ ಟೂರ್ನಿಯಲ್ಲಿ ಯಾವುದೇ ತಂಡ ಅಥವಾ ಬೌಲರ್ ಎಷ್ಟೇ ಉತ್ತಮವಾಗಿದ್ದರೂ ಕರುಣ್ ನಾಯರ್ ಬ್ಯಾಟಿಂಗ್ ಕೌಶಲ್ಯದ ಮುಂದೆ ತಲೆ ಬಾಗಿ ಬೌಂಡರಿ, ಸಿಕ್ಸರ್ ಬಾರಿಸುವ ಮೂಲಕ ಎಲ್ಲರನ್ನೂ ನಡುಗಿಸುತ್ತಿದ್ದಾರೆ. ಬ್ಯಾಟಿಂಗ್ ಜೊತೆಗೆ ತಮ್ಮ ನಾಯಕತ್ವದಲ್ಲಿ ವಿದರ್ಭ ತಂಡವನ್ನು ಸೆಮಿಫೈನಲ್ ತಲುಪಿಸಿದ್ದಾರೆ. ಭಾನುವಾರ ನಡೆದ ರಾಜಸ್ಥಾನ ವಿರುದ್ಧದ ಪಂದ್ಯದಲ್ಲಿ ಕರುಣ್ ನಾಯರ್ 82 ಎಸೆತಗಳಲ್ಲಿ 13 ಬೌಂಡರಿ ಹಾಗೂ 5 ಸಿಕ್ಸರ್‌ಗಳ ನೆರವಿನಿಂದ ಅಜೇಯ 122 ರನ್ ಗಳಿಸಿದ್ದರು.

2024–25ರ ವಿಜಯ್ ಹಜಾರೆ ಟ್ರೋಫಿಯಲ್ಲಿ ಕರುಣ್ ನಾಯರ್ 112, 44, 163, 111, 112 ಹಾಗೂ 122 ರನ್ ಸಿಡಿಸಿದ್ದಾರೆ. ಇದು ಕರುಣ್ ನಾಯರ್ ಅವರ ಕೊನೆಯ ಆರು ಇನ್ನಿಂಗ್ಸ್‌ಗಳಲ್ಲಿ ಗಳಿಸಿದ ಸ್ಕೋರ್‌ಗಳು. ಯುಪಿ ವಿರುದ್ಧ 112 ರನ್ ಗಳಿಸಿ ಔಟ್ ಆಗಿದ್ದರು. ಉಳಿದೆಲ್ಲಾ ಇನ್ನಿಂಗ್ಸ್‌ಗಳಲ್ಲಿ ಅಜೇಯರಾಗಿ ಉಳಿದಿದ್ದಾರೆ. ಈ ಋತುವಿನಲ್ಲಿ 5 ಶತಕಗಳನ್ನು ಗಳಿಸಿರುವ ಕರಣ್ ನಾಯರ್ ಒಂದೇ ಸೀಸನ್‌ನಲ್ಲಿ ಹೆಚ್ಚು ಶತಕ ಸಿಡಿಸಿದ ಬ್ಯಾಟ್ಸ್‌ಮನ್ ಎಂಬ ದಾಖಲೆಯನ್ನು ಎನ್. ಜಗದೀಸನ್ ಜೊತೆ ಹಂಚಿಕೊಂಡಿದ್ದಾರೆ. ಜಗದೀಶನ್ ಕೂಡ 2022–23ರಲ್ಲಿ ಐದು ಶತಕ ಸಿಡಿಸಿದ್ದರು. ಕರುಣ್ ನಾಯರ್‌ಗೆ ಇನ್ನು 2 ಪಂದ್ಯಗಳನ್ನು ಆಡುವ ಅವಕಾಶವಿದೆ, ಆ ಎರಡರಲ್ಲಿ ಶತಕ ಸಿಡಿಸಿದ್ದರೆ ವಿಶ್ವದಾಖಲೆ ಅವರ ಪಾಲಾಗಲಿದೆ.

ಪ್ರಸ್ತುತ ಆವೃತ್ತಿಯಲ್ಲಿ ಕರುಣ್ ನಾಯರ್ 6 ಇನ್ನಿಂಗ್ಸ್‌ಗಳಿಂದ 664ರ ಸರಾಸರಿಯಲ್ಲಿ 664 ರನ್ ಗಳಿಸಿದ್ದಾರೆ. ಇದರಲ್ಲಿ 5 ಶತಕಗಳಿವೆ. 80 ಬೌಂಡರಿ, 11 ಸಿಕ್ಸರ್ ಸಿಡಿಸಿದ್ದಾರೆ. ವಿಶೇಷವೆಂದರೆ ಅತಿ ಹೆಚ್ಚು ರನ್ ಗಳಿಸಿರುವ ಪಟ್ಟಿಯಲ್ಲಿ ಮೊದಲೆರಡು ಸ್ಥಾನದಲ್ಲಿ ಕನ್ನಡಿಗರೇ ಇದ್ದಾರೆ. ಕರ್ನಾಟಕ ತಂಡವನ್ನು ಮುನ್ನಡೆಸುತ್ತಿರುವ ಮಯಾಂಕ್ ಅಗರ್ವಾಲ್ 8 ಪಂದ್ಯಗಳಿಂದ 619 ರನ್ ಗಳಿಸಿದ್ದಾರೆ. ಇವರು 4 ಶತಕ 1 ಅರ್ಧಶತಕ ಸಿಡಿಸಿದ್ದಾರೆ.

ಐಪಿಎಲ್ ಟೂರ್ನಿಯಲ್ಲಿ ಬಿಕರಿಯಾಗದೆ ಉಳಿದ ಕರುಣ್ ನಾಯರ್ ಇದೀಗ ಬಿಸಿಸಿಐ ಆಯ್ಕೆಗಾರರ ಮೇಲೆ ಒತ್ತಡ ಹೆಚ್ಚಿಸುತ್ತಿದ್ದಾರೆ. ದೇಶೀಯ ಕ್ರಿಕೆಟ್‌ನಲ್ಲಿ ಅವರ ಅಬ್ಬರದ ಆಟ ಹೀಗೆ ಮುಂದುವರಿದರೆ ಭಾರತ ತಂಡಕ್ಕೆ ಆಯ್ಕೆ ಮಾಡಬೇಕಾದ ಒತ್ತಡ ಏರಲಿದೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಶುಭಮನ್ ಗಿಲ್ ಅವರಂತಹ ಸ್ಟಾರ್‌ಗಳು ವಿಫಲವಾಗಿ ರುವುದರಿಂದ ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯಲ್ಲಿ ನಾಯರ್ ಅವರನ್ನು ಆಡಿಸುವ ಬೇಡಿಕೆ ಕೂಡ ಹೆಚ್ಚುತ್ತಿದೆ. ಕರುಣ್ ನಾಯರ್ 2016ರಲ್ಲಿ ಟೀಂ ಇಂಡಿಯಾ ಪರ ಆಡಿದ್ದು, ಆರು ಟೆಸ್ಟ್ ಪಂದ್ಯಗಳಲ್ಲಿ 374 ರನ್ ಗಳಿಸಿದ್ದರು. ಆಗಲೂ ಇದೇ ರೀತಿಯ ಪ್ರದರ್ಶನ ತೋರಿ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದ ನಾಯರ್ ಇಂಗ್ಲೆಂಡ್ ವಿರುದ್ಧದ ತ್ರಿಶತಕ ಸಿಡಿಸಿದ್ದರು. ಭಾರತೀಯ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ತ್ರಿಶತಕ ಸಾಧನೆ ಮಾಡಿದ 2ನೇ ಬ್ಯಾಟರ್ ಎಂಬ ಹೆಗ್ಗಳಿಕೆ ಅವರ ಹೆಸರಿನಲ್ಲಿದೆ.

ವಿಟಾಕೀಸ್

ಕಾರಿನಲ್ಲ ಪಾರು ಸಂಚಾರ

ಬಿಗ್ ಬಾಸ್ ಖ್ಯಾತಿಯ ದೀಪಿಕಾ ದಾಸ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಪಾರುಪಾರ್ವತಿ ತೆರೆಗೆ ಸಿದ್ಧವಾಗಿದ್ದು ಇದೇ 31 ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಪೂನಂ ಸಿರ್ ನಾಯಕ್ ಹಾಗೂ ಫವಾಜ್ ಅಶ್ರಫ್ ಕೂಡ ಸಿನಿಮಾದ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈಗ ಪಾರುಪಾರ್ವತಿ ಚಿತ್ರದ ನಾಲ್ಕನೇ ಪ್ರಮುಖ ಪಾತ್ರಧಾರಿಯನ್ನು

> ನಮ್ಮ ಚಿತ್ರದಲ್ಲಿ ಪ್ರವಾಸ ಮಾತ್ರವಲ್ಲ, ಕುಟುಂಬ ಸಮೇತ ಕುಳಿತು ನೋಡಬಹುದಾಗ ಅಂಶಗಳು ಬೆರೆತಿವೆ. ಕಾರು ಚಿತ್ರದ ಪ್ರಮುಖ ಹೈಲೈಟ್ ಈ ಕಾರಿನ ಜತೆಗೆ ಕರ್ನಾಟಕದಿಂದ ಉತ್ತರಾಖಂಡದವರೆಗೂ ಎಂಟು ರಾಜ್ಯಗಳನ್ನು ಸಂಚರಿಸಿದ ಅನುಭವ ಎಂದಿಗೂ ಮರೆಯಲು ಸಾಧ್ಯವಿಲ್ಲ.
> –ದೀಪಿಕಾ ದಾಸ್ ನಟಿ

ಚಿತ್ರತಂಡ ಪರಿಚಯಿಸಿದೆ. ಅದು ಬೇರಾರು ಅಲ್ಲ, ಅದೊಂದು ಕಾರು. ಹೌದು, ಇದೊಂದು ಟ್ರಾವೆಲ್ ಅಡ್ವೆಂಚರ್ ಡ್ರಾಮಾ ಜಾನರ್‌ನ ಚಿತ್ರವಾಗಿದ್ದು, ಕಾರು ಕೂಡ ಮುಖ್ಯ ಪಾತ್ರವಹಿಸಿದೆ.

ಮೂರು ಪ್ರಮುಖ ಪಾತ್ರಗಳ ಸುತ್ತ ನಮ್ಮ ಚಿತ್ರ ಸಾಗುತ್ತದೆ. ದೀಪಿಕಾ ದಾಸ್, ಪೂನಂ ಸಿರ್ ನಾಯಕ್ ಹಾಗೂ ಫವಾಜ್ ಅಶ್ರಫ್ ಮೂವರು ಮುಖ್ಯ ಪಾತ್ರಧಾರಿಗಳು. ಇವರೊಂದಿಗೆ ಕಾರು ಕೂಡ ಪ್ರಮುಖ ಪಾತ್ರವಾಗಿದೆ. ಈ ಕಾರು ಪ್ರಚಾರದ

ಸಲುವಾಗಿ ಕರ್ನಾಟಕದಾದ್ಯಂತ ಸಂಚರಿಸಲಿದೆ ಎಂದು ನಿರ್ದೇಶಕ ರೋಹಿತ್ ಕೀರ್ತಿ ಹೇಳಿದರು. ಪಿ.ಬಿ.ಪ್ರೇಮನಾಥ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಮಾಸಾಂತ್ಯಕ್ಕೆ ಬರಲಿದ್ದಾನೆ ಗಣ

ಈ ವರ್ಷ ನಟ ಪ್ರಜ್ವಲ್ ದೇವರಾಜ್ ಅಭಿನಯದ ಸಾಲು ಸಾಲು ಸಿನಿಮಾಗಳು ತೆರೆಗೆ ಬರಲಿವೆ. ಅದರಲ್ಲಿ ಬಹುನಿರೀಕ್ಷಿತ ಗಣ ಚಿತ್ರ ಕೂಡ ಒಂದಾಗಿದೆ. ಈ ತಿಂಗಳ ಅಂತ್ಯಕ್ಕೆ ಚಿತ್ರ ರಿಲೀಸ್ ಆಗಲಿದೆ. ಗಣದಲ್ಲಿ ಲವ್ ಸ್ಟೋರಿಯ ಜತೆಗೆ ಆ್ಯಕ್ಷನ್ ಅಂಶವೂ ಬೆರೆತಿದೆ. ವಿಭಿನ್ನ ಕಂಟೆಂಟ್ ಹೊಂದಿರುವ ಈ ಚಿತ್ರ, ಈಗಾಗಲೇ ಟೀಸರ್ ಹಾಗೂ ಹಾಡುಗಳ ಮೂಲಕ ಸಿನಿಪ್ರಿಯರ ಮನಗೆದ್ದಿದೆ. ಹರಿಪ್ರಸಾದ್ ಜಕ್ಕ ಕಥೆ, ಚಿತ್ರಕಥೆ ಬರೆಯುವ ಜತೆಗೆ ಗಣನಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಪ್ರಜ್ವಲ್ ದೇವರಾಜ್‌ಗೆ ಜತೆಯಾಗಿ ಯಶಾ ಶಿವಕುಮಾರ್ ನಟಿಸಿದ್ದಾರೆ. ಉಳಿದಂತೆ ವೇದಿಕಾ ಕುಮಾರ್, ಕೃಷಿ ತಾಪಂಡ, ವಿಶಾಲ್ ಹೆಗಡೆ, ರವಿ ಕಾಳೆ, ಸಂಪತ್ ರಾಜ್, ಶಿವರಾಜ್

ಕೆ.ಆರ್ ಪೇಟೆ, ರಮೇಶ್ ಭಟ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಗಣ ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗಿದ್ದು, ಚೆರಿ ಕ್ರಿಯೇಷನ್ಸ್ ಲಾಂಛನದಲ್ಲಿ ಪಾರ್ಥು ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಜೈ ಆನಂದ್ ಛಾಯಾಗ್ರಹಣ, ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಹರೀಶ್ ಕೊಮ್ಮೆ ಸಂಕಲನ,ಎ.ಸತೀಶ್ ಕಲಾ ನಿರ್ದೇಶನ ಈ ಸಿನಿಮಾಕ್ಕಿದೆ.

ಕಾಡು ಮಲ್ಲೇಶ್ವರನ ಸನ್ನಿಧಿಯಲ್ಲಿ ದೈಜಿ

ರಮೇಶ್ ಅರವಿಂದ್ ನಾಯಕರಾಗಿ ನಟಿಸುತ್ತಿರುವ ದೈಜಿ ಚಿತ್ರದ ಮುಹೂರ್ತ ಸಮಾರಂಭ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ನೆರವೇರಿತು. ಇದು ರಮೇಶ್ ಅವರು ನಟಿಸುತ್ತಿರುವ ನೂರಾ ಆರನೇ ಸಿನಿಮಾವಾಗಿದೆ. ಶಿವಾಜಿಗೆ ಜತೆಯಾಗಿದ್ದ ರಾಧಿಕಾ ನಾರಾಯಣ್ ಈ ಚಿತ್ರದಲ್ಲಿಯೂ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಈ ಹಿಂದೆ ಶಿವಾಜಿ ಸುರತ್ಕಲ್ ಸರಣಿಯ ಸಿನಿಮಾಗಳನ್ನು ನಿರ್ದೇಶಿಸಿದ್ದ ಆಕಾಶ್ ಶ್ರೀವತ್ಸ, ದೈಜಿ ಚಿತ್ರಕ್ಕೂ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ರವಿ ಕಶ್ಯಪ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದು, ಶ್ರೀಶಕುದುವಳ್ಳಿ ಛಾಯಾಗ್ರಹಣದ

ಜವಾಬ್ದಾರಿ ಹೊತ್ತಿದ್ದಾರೆ. ದೈಜಿ ಹಾರರ್ ಜತೆಗೆ, ಥ್ರಿಲ್ಲರ್ ಕಥೆಯನ್ನು ಒಳಗೊಂಡಿದ್ದು, ರಮೇಶ್ ಅವರು ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ವಿಭಿನ್ನವಾಗಿ ಮಿಂಚಲಿದ್ದಾರೆ. ಈ ಚಿತ್ರದ ಶೂಟಿಂಗ್ ವಿದೇಶದಲ್ಲಿ ನಡೆಸಲು ಚಿತ್ರತಂಡ ಪ್ಲಾನ್ ಮಾಡಿದೆ.

ದಿಲ್‌ದಾರ್‌ನಲ್ಲಿ ಕೀರ್ತಿಕೃಷ್ಣ

ಶ್ರೇಯಸ್ ಮಂಜು ನಾಯಕನಾಗಿ ನಟಿಸುತ್ತಿರುವ ದಿಲ್‌ದಾರ್ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ಮಧು ಗೌಡ ಗಂಗೂರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚಿತ್ರ ಇದಾಗಿದ್ದು, ಅದ್ಭುತ ಕಥೆಯನ್ನು ಒಳಗೊಂಡಿದೆ. ದಿಲ್‌ದಾರ್‌ನಲ್ಲಿ ಶ್ರೇಯಸ್‌ಗೆ ಜತೆಯಾಗಿ ಯಾರು ಬಣ್ಣಹಚ್ಚಲಿದ್ದಾರೆ ಎಂಬ ಕುತೂಹಲವಿತ್ತು. ಚಿತ್ರತಂಡ ಈಗ ನಾಯಕಿಯನ್ನು ಪರಿಚಯಿಸಿದೆ. ನಟಿ ಕೀರ್ತಿ ಕೃಷ್ಣ, ಶ್ರೇಯಸ್ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ಕೀರ್ತಿ, ನಟ ಶರಣ್ ಅವರ ಸಹೋದರಿ ಉಷಾ ಕೃಷ್ಣ ಅವರ ಮಗಳು. ಕೀರ್ತಿ ಈ ಚಿತ್ರದಲ್ಲಿ ಮುಗ್ಧ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ.

ದಿಲ್‌ದಾರ್ ನವಿರಾದ ಪ್ರೇಮಕಥೆಯ ಸಿನಿಮಾವಾಗಿದ್ದು, ಹೊಸತರದ ಕಥೆ ಇಲ್ಲಿದೆಯಂತೆ. ನಿರ್ದೇಶಕ ಮಧುಗೌಡ ಎಲ್ಲರಿಗೂ ಕನೆಕ್ಟ್ ಆಗುವ, ಬಿಡದೆ

ಕಾಡುವ ಕಥೆಯನ್ನು ಹೆಣೆದಿದು ತೆರೆಗೆ ತರುತ್ತಿದ್ದಾರೆ. ಅಂದುಕೊಂಡಂತೆ ಚಿತ್ರೀಕರಣ ಮುಗಿಸಿಕೊಂಡಿರುವ ಚಿತ್ರತಂಡ ಒಂದು ಹಾಡಿನ ಶೂಟಿಂಗ್ ಮಾತ್ರ ಬಾಕಿ ಉಳಿಸಿಕೊಂಡಿದೆ. ಇದು ಚಿತ್ರದ ಪ್ರಮುಖ ಹಾಡಾಗಿದ್ದು, ಅರ್ಜುನ್ ಜನ್ಯ ಸಂಗೀತದಲ್ಲಿ ಮೂಡಿಬಂದಿದೆ. ಹಾಗಾಗಿ ಈ ಗೀತೆಯನ್ನು ಅದ್ದೂರಿಯಾಗಿ, ವಿಶೇಷವಾಗಿ ಸೆರೆ ಹಿಡಿಯಲು ನಿರ್ದೇಶಕರು ಸಿದ್ಧತೆ ನಡೆಸಿದ್ದಾರೆ.

ಯುಗಾದಿಯ ಹೊತ್ತಿಗೆ ಚಿತ್ರ ತೆರೆಗೆ ಬರಲಿದೆ. ದಿಲ್‌ದಾರ್ ಮೂಲಕ ಕೀರ್ತಿ ಚಂದನವನಕ್ಕೆ ಪರಿಚಿತರಾಗಲಿದ್ದಾರೆ. ಸಾಧು ಕೋಕಿಲಾ, ಚಂದ್ರಪ್ರಭ, ಕಾರ್ತಿಕ್, ಚಿಲ್ಲರ್ ಮಂಜು ಮುಂತಾದವರು ತಾರಾಗಣದಲ್ಲಿದ್ದಾರೆ. ಕೆಜಿಎಫ್ ಖ್ಯಾತಿಯ ಆಂಡ್ರೋ ಅವಿನಾಶ್, ಭಜರಂಗಿ ಲೋಕಿ, ಅರ್ಪಿತ್ ಖಳ ನಟರಾಗಿ ಅಬ್ಬರಿಸಿದ್ದಾರೆ. ಹಾಗಾಗಿ ಈ ಚಿತ್ರದಲ್ಲಿ ಭರ್ಜರಿ ಆ್ಯಕ್ಷನ್ ದೃಶ್ಯಗಳನ್ನು ನಿರೀಕ್ಷಿಸಬಹುದಾಗಿದೆ.

ನಾಗಬಂಧಂ ರುದ್ರನ ವಿರಾಟ ರೂಪ

ಪ್ಯಾನ್ ಇಂಡಿಯಾ ಸಿನಿಮಾವಾಗಿ ಮೂಡಿಬರುತ್ತಿರುವ ನಾಗಬಂಧಂ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಈಗ ಈ ಚಿತ್ರದ ರುದ್ರನ ಪಾತ್ರ ಅನಾವರಣವಾಗಿದೆ. ನಟ ರಾಣ ದಗ್ಗುಬಾಟಿ ಫಸ್ಟ್ ಲುಕ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸದ್ಯ ಬಿಡುಗಡೆ ಆಗಿರುವ ನಾಗಬಂಧಂ ಸಿನಿಮಾದ ಫಸ್ಟ್ ಲುಕ್ ಅಕ್ಷರಶಃ ಕುತೂಹಲಭರಿತವಾಗಿದೆ. ವಿರಾಟ್ ಕರ್ಣ, ರುದ್ರನ ಪಾತ್ರದಲ್ಲಿ ಉಗ್ರರೂಪ ತಾಳಿದ್ದಾರೆ. ಮೊಸಳೆಯ ಬಾಯಿಯನ್ನು ಸೀಳಿ, ರುದ್ರನ ಪೌರುಷ ಅನಾವರಣವಾಗಿದೆ. ಗುಂಗುರು ಕೂದಲು, ಕುರುಚಲು ಗಡ್ಡ, ಹುರಿಗಟ್ಟಿದ ಮೈಕಟ್ಟಿನಲ್ಲಿ ರುದ್ರ ಪಾತ್ರಧಾರಿ ವಿರಾಟ್ ಕರ್ಣ ಖಡಕ್ ಆಗಿ ಮಿಂಚಿದ್ದಾರೆ.

ನಾಗಬಂಧಂ ಭಾರತದ ಪ್ರಾಚೀನ ವಿಷ್ಣು ದೇವಾಲಯಗಳ ಗುಪ್ತ ರಹಸ್ಯಗಳ ಸುತ್ತ ಸಾಗಲಿದೆ. ಪದ್ಮನಾಭಸ್ವಾಮಿ ಮತ್ತು ಪುರಿ ಜಗನ್ನಾಥ ದೇವಾಲಯಗಳಲ್ಲಿ ಪತ್ತೆಯಾದ ನಿಧಿಯ ಕಾಲ್ಪನಿಕ ಕಥೆ ಇದಾಗಿದ್ದು, ನಾಗಬಂಧಂ ಭಾರತದಲ್ಲಿನ ನೂರಾ ಎಂಟು ವಿಷ್ಣು

ದೇವಾಲಯಗಳ ಸುತ್ತಲಿನ ರಹಸ್ಯವನ್ನು ಸಿನಿಮಾ ಮೂಲಕ ತೆರೆದಿಡಲಿದೆಯಂತೆ. ಅಭಿಷೇಕ್ ನಾಮಾ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅಭಿಷೇಕ್ ಪಿಕ್ಚರ್ಸ್ ಹಾಗೂ ಎನ್‌ಐಕೆ ಸ್ಟುಡಿಯೊಸ್ ಬ್ಯಾನರ್‌ನಲ್ಲಿ ಕಿಶೋರ್ ಅನ್ನಪುರೆಡ್ಡಿ ಮತ್ತು ತಾರಕ್ ಸಿನಿಮಾಸ್ ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ.

ನಭಾ ನಟೇಶ್ ಮತ್ತು ಐಶ್ವರ್ಯಾ ಮೆನನ್ ನಾಯಕಿಯರಾಗಿ ನಟಿಸಿದ್ದಾರೆ. ಜಗಪತಿ ಬಾಬು, ಜಯಪ್ರಕಾಶ್, ಮುರಳಿ ಶರ್ಮಾ, ಅವಿನಾಶ್ ಚಿತ್ರದ ತಾರಾಗಣದಲ್ಲಿದ್ದಾರೆ. ಎಸ್.ಸೌಂದರ್ ರಾಜನ್ ಛಾಯಾಗ್ರಹಣ, ಅಭೆ ಸಂಗೀತ ನಿರ್ದೇಶನ, ಕಲ್ಯಾಣ್ ಚಕ್ರವರ್ತಿ ಸಂಭಾಷಣೆ ಈ ಚಿತ್ರಕ್ಕಿದೆ.